ಸೈಯದ್ ಮೌದೂದಿ ಉತ್ತರಿಸುತ್ತಾರೆ

ಅನುವಾದಕರು

ಇಬ್ರಾಹೀಮ್ ಸಈದ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಮೌ| ಸೈಯದ್ ಅಬುಲ್ ಆಲಾ ಮೌದೂದಿ(ರ) ಇಪ್ಪತ್ತನೇ ಶತಮಾನದ ಓರ್ವ ಶ್ರೇಷ್ಠ ವಿದ್ವಾಂಸ, ಭಾರತೀಯ ಉಪಭೂಖಂಡದಲ್ಲಿ ಇಸ್ಲಾಮೀ ಆಂದೋಲನದ ಸಂಸ್ಥಾಪಕ. ತಮ್ಮ ಅಮೂಲ್ಯ ಇಸ್ಲಾಮೀ ಆಂದೋಲದ ಸಂಸ್ಥಾಪಕ. ತಮ್ಮ ಅಮೂಲ್ಯ ಇಸ್ಲಾಮೀ ಸೇವೆಗಾಗಿ ಅವರು ಜಾಗತಿಕ ಶಾಫೆನಲ್ ಪ್ರಶಸ್ತಿಯನ್ನು ಪಡೆದಿದ್ದರು. ಅಂತರಾಷ್ಟ್ರೀಯ ಇಸ್ಲಾಮೀ ವಿದ್ವಾಂಸರ ವೇದಿಕೆಯಾದ 'ರಾಬಿತತುಲ್ ಆಲಮುಲ್ ಇಸ್ಲಾಮೀ'ಯ ಸ್ಥಾಪಕ ಸದಸ್ಯರಾದ ಮೌ|ಮೌದೂದಿಯವರು ಜಗದ್ವಿಖ್ಯಾತ ಕುರ್‌ಆನ್ ವ್ಯಾಖ್ಯಾನ ಗ್ರಂಥವಾದ ತಫ್ಹೀಮುಲ್ ಕುರ್‌ಆನ್ ಸಹಿತ ಸುಮಾರು 200 ಗ್ರಂಥಗಳನ್ನೂ ಹಲವಾರು ಹೊತ್ತಗೆಗಳನ್ನೂ ರಚಿಸಿರುವರು.

ಜಗತ್ತಿನಾದ್ಯಂತ ಇಸ್ಲಾಮ್‌ನ ಜ್ಞಾನ ದಾಹಿಗಳು ತಮಗೆ ಎದುರಾದ ಪ್ರಶ್ನೆ, ಸಮಸ್ಯೆ, ಸಂಶಯ ಮತ್ತು ಗೊಂದಲಗಳ್ನು ನಿವಾರಿಸುವ ಸಲುವಾಗಿ ಸೈಯದ್ ಮೌದೂದಿಯವರಿಗೆ ಪತ್ರಗಳನ್ನು ಬರೆಯುತ್ತಿದ್ದರು. ಅಂತಹ ಪತ್ರಗಳಿಗೆ ಮೌಲಾನಾ ಅವರು ಕುರ್‌ಆನ್ ಮತ್ತುಹದೀಸ್‌ಗಳ ಬೆಳಕಿನಲ್ಲಿ ಸಮರ್ಪಕ ಉತ್ತರಗಳನ್ನು ನೀಡುತ್ತಿದ್ದರು.

ಜೀವನದ ವಿವಿಧ ರಂಗಗಳಿಗೆ ಸಂಬಂಧಿಸಿದ ಈ ಪ್ರಶ್ನೆಗಳಿಗೆ ಮೌಲಾನಾ ಮೌದೂದಿಯವರು ನೀಡಿದ ಉತ್ತರಗಳು "ರಸಾಇಲ್ ವ ಮಸಾ ಇಲ್" ಎಂಬ ಹೆಸರಲ್ಲಿ ಉರ್ದು ಭಾಷೆಯಲ್ಲಿ 65 ಸಂಪುಟಗಳಲ್ಲಿ ಪ್ರಕಟಗೊಂಡಿದೆ.

ಕನ್ನಡ ಇಸ್ಲಾಮೀ ಜನಮಾನಸವನ್ನು ಮುಂದಿಟ್ಟುಕೊಂಡು ಅವುಗಳಿಂದ ಆಯ್ದ ಅತ್ಯಂತ ಪ್ರಮುಖ ಪ್ರಶ್ನೋತ್ತರಗಳನ್ನು ಕನ್ನಡೀಕರಿಸಿ ವಾಚಕರ ಮುಂದಿಡುತ್ತಿದ್ದೇವೆ. ಜ್ಞಾನದಾಹಿಗಳಿಗೆ ತಮ್ಮ ಸಮಸ್ಯೆಗಳ ನಿವಾರಣೆಗೆ ಇದು ದಾರಿ ದೀಪವಾಗಲೆಂದು ಹಾರೈಸುತ್ತೇವೆ.

ಉರ್ದು ಮೂಲದ ನೂರಾರು ಪ್ರಶ್ನೋತ್ತರಗಳಿಂದ 65 ಪ್ರಶ್ನೋತ್ತರಗಳನ್ನು ಆಯ್ದು ಇಬ್ರಾಹೀಮ್ ಸಈದ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕ. ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಈ ಕೃತಿ ಇಸ್ಲಾಮಿನ ಬಗ್ಗೆ ತಮ್ಮ ಸಂಶಯಗಳನ್ನು ನಿವಾರಿಸಿಕೊಳ್ಳಲು ಒಂದು ಉಪಯುಕ್ತ ಕೃತಿಯಾಗುವುದೆಂದು ನಿರೀಕ್ಷಿಸುತ್ತೇವೆ.

- *ಪ್ರಕಾಶಕರು.*

ಅನುಕ್ರಮಣಿಕೆ

1

ಅರಬಿ ಭಾಷೆಯ ಕುರ್‌ಆನ್

● *'ವಮಾ ಅರ್‌ಸಲ್ನಾ ಮಿರ್ರಸೂಲಿನ್ ಇಲ್ಲಾ ಬಿ ಲಿಸಾನಿ ಕೌಮಿಹೀ ಲಿಯುಬಯ್ಯಿನ ಲಹುಮ್" ಎಂಬ ಸೂರಃ ಇಬ್ರಾಹೀಮ್‌ನ ಆಯತನ್ನು ಓದಿದಾಗ 'ನಮ್ಮ ಮತ್ತು ನಮ್ಮ ಪೂರ್ವಜರ ಭಾಷೆ ಅರಬಿ ಅಲ್ಲದಿರುವಾಗ ಅರಬಿ ಭಾಷೆಯಲ್ಲಿರುವ ಕುರ್‌ಆನ್‌ನ ಮೇಲೆ ನಾವೇಕೆ ವಿಶ್ವಾಸವಿರಿಸಬೇಕು? ನಾವು ಪ್ರವಾದಿ ಮುಹಮ್ಮದ್(ಸ) ಅವರನ್ನು ಏಕೆ ಅನುಸರಿಸಬೇಕು?' ಎಂಬ ಯೋಚನೆ ಮೂಡುತ್ತದೆ.*

○ ಪ್ರತಿಯೊಂದು ಜನಾಂಗವು ಅದರ ಭಾಷೆಯಲ್ಲಿ ಬಂದ ಸಂದೇಶದ ಮೇಲೆ ವಿಶ್ವಾಸವಿರಿಸಿದರೆ ಸಾಕು ಎಂಬುದೇ ಪ್ರಾಯಶಃ ನಿಮ್ಮ ಉದ್ದೇಶವಾಗಿರಬೇಕು. ನಿಮ್ಮ ಅಭಿಪ್ರಾಯ ಪ್ರಕಾರ ಬೇರಾವ ಭಾಷೆಯಲ್ಲಿ ಅಲ್ಲಾಹನ ಕಡೆಯಿಂದ ಬಂದ ಸಂದೇಶವು ಸತ್ಯವಾಗಿದ್ದರೂ ಅನುವಾದ, ವ್ಯಾಖ್ಯಾನ, ವಿವರಣೆ ಮತ್ತು ವ್ಯಾವಹಾರಿಕ ಮಾದರಿಗಳ ಮೂಲಕ ನಿಮಗೆ ತಲುಪಿದರೂ ಅದನ್ನು ಅನುಸರಿಸಬೇಕಾಗಿಲ್ಲ. ಏಕೆಂದರೆ ಅದನ್ನು ನಮ್ಮದೇ ಆದ ಭಾಷೆಯಲ್ಲಿ ಕಳುಹಿಸಲಾಗಿಲ್ಲ. ಇದುವೇ ನಿಮ್ಮ ಉದ್ದೇಶವಾಗಿದ್ದರೆ ಇದೊಂದು ತಪ್ಪು ಕಲ್ಪನೆಯಾಗಿದೆ. ಅದು ಪ್ರಸ್ತುತ ಆಯತ್‌ನ ತಾತ್ಪರ್ಯವನ್ನು ಸರಿಯಾಗಿ ಗ್ರಹಿಸದ ಕಾರಣ ಉಂಟಾಗಿದೆ. ಅಲ್ಲಾಹನು ಒಂದು ಜನಾಂಗಕ್ಕೆ ಅಥವಾ ಇಡೀ ಲೋಕಕ್ಕೆ ಸರ್ವ ಪ್ರವಾದಿಯನ್ನು ಕಳುಹಿಸಿದಾಗ ಅವರು ತಮ್ಮ ಪ್ರಥಮ ಸಂಬೋಧಿತರನ್ನು - ಅವರು ತಮ್ಮ ಸಂದೇಶವನ್ನು ಚೆನ್ನಾಗಿ ತಿಳಿಯುವಂತಾಗಲು - ಅವರ ಭಾಷೆಯಲ್ಲೇ ಸಂಬೋಧಿಸಿದ್ದಾರೆ. ಅನ್ಯಥಾ ಅವರು 'ಝುಬಾನೆ ಯಾರೆ ಮನ್ ತುರ್ಕಿ ವಮನ್ ತುರ್ಕಿನಮಿೂ ದಾನಮ್' (ನನ್ನ ಮಿತ್ರನ ಭಾಷೆಯು ತುರ್ಕಿಯಾಗಿದೆ. ತುರ್ಕಿ ನನಗೆ ತಿಳಿದಿಲ್ಲ) ಎಂಬ ನೆಪ ಒಡ್ಡುತ್ತಿದ್ದರು. ಪ್ರತಿಯೊಂದು ಜನಾಂಗಕ್ಕೆ ಪ್ರತ್ಯೇಕ ಪ್ರವಾದಿ ಬರಲೇಬೇಕು ಮತ್ತು ಆ ಪ್ರವಾದಿ ಜನಾಂಗವನ್ನು ಅದರ ಭಾಷೆಯಲ್ಲೇ ಸಂಬೋಧಿಸಬೇಕು ಎಂಬುದು ಇದರ ಅರ್ಥವಲ್ಲ. ಒಂದು ಜನಾಂಗದ ಸತ್ಯವಿಶ್ವಾಸಿಗಳು ಇನ್ನೊಂದು ಜನಾಂಗಕ್ಕೆ ಅದರ ಭಾಷೆಯಲ್ಲಿ ಮತ್ತು ಅದಕ್ಕೆ ಅರ್ಥವಾಗುವ ರೀತಿಯಲ್ಲಿ ಅಲ್ಲಾಹನ ಶಿಕ್ಷಣವನ್ನು ತಲುಪಿಸಿದರೂ 'ಅಲ್ಲಾಹನ ಗ್ರಂಥವನ್ನು ಪ್ರವಾದಿಯು ನಮ್ಮ ಭಾಷೆಯಲ್ಲಿ ತಂದಿಲ್ಲ' ಎಂಬ ಕಾರಣಕ್ಕಾಗಿ ಅದನ್ನು ತಿರಸ್ಕರಿಸಬಹುದಾಗಿದೆ. ಈ ಮಾತನ್ನು ಪ್ರಸ್ತುತ ಆಯತ್‌ನಲ್ಲಿ ಹೇಳಿಯೂ ಇಲ್ಲ, ಅದರಿಂದ ಈ ರೀತಿ ಭಾವಿಸಲು ಆಸ್ಪದವೂ ಇಲ್ಲ. ತನ್ನ ಭಾಷೆಯಲ್ಲಿ ಸ್ಪಷ್ಟ ರೂಪದಲ್ಲಿ ಬಂದ ಪವಿತ್ರ ಕುರ್‌ಆನ್‌ನ ಶಿಕ್ಷಣದ ಮೇಲೆ ವಿಶ್ವಾಸವಿರಿಸದೆ ಇರಲು ಯಾವುದೇ ಕಾರಣವಿಲ್ಲ. *(ತರ್ಜುಮಾನುಲ್ ಕುರ್‌ಆನ್, ಜುಲೈ-ಅಕ್ಟೋಬರ್ 1944)*

2

ಪ್ರವಾದಿಗಳ ಪಾಪಮುಕ್ತತೆ

● *ಪ್ರವಾದಿಗಳು ಪಾಪಮುಕ್ತರು ಎಂಬುದು ಸರ್ವಸಮ್ಮತ ವಿಷಯ. ಆದರೆ ಆದಮ್(ಅ) ಅವರು ದೋಷ ಎಸಗಿದರು ಮತ್ತು ಅಲ್ಲಾಹನ ಆಜ್ಞೋಲ್ಲಂಘನೆ ಮಾಡಿದರೆಂದು ಪವಿತ್ರ ಕುರ್‌ಆನ್‌ನ ಪದಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಉದಾ: "ಲಾ ತಕ್ರಬಾ ಹಾದಿಹಿಶ್ಶಜರತ ಫತಕೂನಾ ಮಿನಝ್ಝಾಲಿಮೀನ್." (ನೀವಿಬ್ಬರು ಆ ಮರದ ಬಳಿ ಸುಳಿಯದಿರಿ, ಅನ್ಯಥಾ ಅಕ್ರಮಿಗಳೆಂದು ಪರಿಗಣಿಸಲ್ಪಡುವಿರಿ). ಈ ಬಗ್ಗೆ ನಿಮ್ಮ ಸಂಶೋಧನೆ ಏನು ತಿಳಿಸುತ್ತದೆ?*

○ ಪ್ರವಾದಿಗಳು ಮಅ್‌ಸೂಮ್ (ಪಾಪಮುಕ್ತರು) ಎಂಬುದರ ತಾತ್ಪರ್ಯ ಮಲಕ್‌ಗಳಂತೆ ಅವರಿಂದಲೂ ತಪ್ಪು ಮಾಡುವ ಸಾಮರ್ಥ್ಯವನ್ನೇ ಕಸಿದುಕೊಳ್ಳಲಾಗಿದೆಯೆಂದಲ್ಲ. ಅದರ ತಾತ್ಪರ್ಯವೇನೆಂದರೆ ಪ್ರವಾದಿಗಳು ಎಂದೂ ಬೇಕು ಬೇಕೆಂದೇ ಅವಿಧೇಯತೆ ತೋರುವುದಿಲ್ಲ. ಒಂದು ವೇಳೆ ಅವರಿಂದ ಏನಾದರೂ ತಪ್ಪಾಗಿ ಬಿಟ್ಟರೆ ಅಲ್ಲಾಹನು ಅವರನ್ನು ಆ ತಪ್ಪಿನಲ್ಲೇ ಇರಲು ಬಿಡುವುದಿಲ್ಲ.

ಇನ್ನೊಂದು ವಿಷಯವೂ ಗಮನಾರ್ಹವಾಗಿದೆ. ಹ. ಆದಮ್(ಅ) ಅವರಿಂದ ಆಜ್ಞೋಲ್ಲಂಘನೆಯಾದುದು ಪ್ರವಾದಿತ್ವ ಪ್ರಾಪ್ತಿಗಿಂತ ಮುಂಚೆಯಾಗಿತ್ತು. ಪ್ರವಾದಿತ್ವಕ್ಕೆ ಮುಂಚೆ ಯಾವ ಪ್ರವಾದಿಗೂ ಪ್ರವಾದಿತ್ವ ಲಭಿಸಿದ ನಂತರ ಸಿಗುವ 'ಇಸ್‌ಮತ್' (ಪಾಪಮುಕ್ತತೆ) ಲಭಿಸುವುದಿಲ್ಲ. ಪ್ರವಾದಿಯಾಗುವುದಕ್ಕಿಂತ ಮುಂಚೆ ಮೂಸಾ(ಅ) ಅವರಿಂದಲೂ ಒಂದು ದೊಡ್ಡ ತಪ್ಪು ಆಗಿತ್ತು. ಅವರು ಒಬ್ಬ ವ್ಯಕ್ತಿಯನ್ನು ಕೊಂದಿದ್ದರು. ಫಿರ್‌ಔನನು ಅವರನ್ನು ಆ ಕೃತ್ಯದ ಬಗ್ಗೆ ಆಕ್ಷೇಪಿಸಿದಾಗ ಅವರು ತುಂಬಿದ ದರಬಾರಿನಲ್ಲಿ ಈ ರೀತಿ ಹೇಳಿದ್ದರು, "ಫ ಅಲ್ತುಹಾ ಇದಂವ ಮಿನದ್ದಾಲ್ಲೀನ್." (ಅಶ್ಶುಅರಾ) ಅರ್ಥಾತ್ ಈ ಕೃತ್ಯ ನನ್ನಿಂದಾದುದು ನನಗೆ ಸನ್ಮಾರ್ಗದರ್ಶನ ಲಭಿಸುವುದಕ್ಕೆ ಮುಂಚೆಯಾಗಿತ್ತು.

ಒಟ್ಟಿನಲ್ಲಿ ಹೇಳುವುದಾದರೆ ಪ್ರವಾದಿಯ ಪಾಪಮುಕ್ತತೆಯು ಮಲಕ್‌ಗಳ (ದೇವಚರರ) ಮುಕ್ತತೆಯಂತಲ್ಲ. ಅವರಿಗೆ ತಪ್ಪು, ಪ್ರಮಾದ ಮತ್ತು ಪಾಪಕೃತ್ಯ ಎಸಗುವ ಸಾಮರ್ಥ್ಯವೇ ಇಲ್ಲ. ಆದರೆ ಪ್ರವಾದಿಯನ್ನು ಆ ಅತ್ಯಂತ ಹೊಣೆಗಾರಿಕೆಯ ಪದವಿಗೆ ಏರಿಸಿದ ಬಳಿಕ ಅಲ್ಲಾಹನು ಅವರನ್ನು ತನ್ನ ವಿಶೇಷ ಮೇಲ್ನೋಟ ಮತ್ತು ರಕ್ಷಣೆಯಲ್ಲಿಟ್ಟಿರುತ್ತಾನೆ. ಅವರನ್ನು ತಪ್ಪುಗಳಿಂದ ರಕ್ಷಿಸುತ್ತಾನೆ. ಏನಾದರೂ ಸಣ್ಣ ಪುಟ್ಟ ಪ್ರಮಾದಗಳು ಅವರಿಂದಾಗಿ ಬಿಟ್ಟರೆ ವಹ್ಯ್ (ದಿವ್ಯವಾಣಿ)ಯ ಮೂಲಕ ಕೂಡಲೇ ಅದನ್ನು ತಿದ್ದುತ್ತಾನೆ. ಅನ್ಯಥಾ ಅದು ಒಂದು ಇಡೀ ಸಮುದಾಯದ ಪಥಭ್ರಷ್ಟತೆಗೆ ಕಾರಣವಾಗುತ್ತದೆ. *(ತರ್ಜುಮಾನುಲ್ ಕುರ್‌ಆನ್, ಜುಲೈ-ಅಕ್ಟೋಬರ್ 1944)*

3

ಪ್ರವಾದಿತ್ವದ ಅಂತ್ಯ

● ನನ್ನ ಒಬ್ಬ ಮಿತ್ರರಿದ್ದಾರೆ. ಅವರು ನನ್ನಲ್ಲಿ ಸಂವಾದ ಮಾಡುತ್ತಿರುತ್ತಾರೆ. ದುರದೃಷ್ಟವಶಾತ್ ಅವರ ಒಬ್ಬ ಕಾದಿಯಾನಿ ಸಂಬಂಧಿಕರು, ಅವರನ್ನು ತಮ್ಮ ಜಮಾಅತ್‌ನ ಕಡೆಗೆ ಆಹ್ವಾನಿಸುತ್ತಿರುತ್ತಾರೆ. ಆದರೆ ನನ್ನ ಮಿತ್ರರಿಗೆ ಅವರ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಲಿಕ್ಕಾಗುವುದಿಲ್ಲ. ಅವರು ನನ್ನಲ್ಲಿ ಹೇಳಿದರು. ನನಗೂ ಉತ್ತರಿಸಲಾಗಲಿಲ್ಲ. ನಾನು ಒಬ್ಬ ವಿದ್ವಾಂಸರಲ್ಲಿ ಅದರ ಉತ್ತರ ಕೇಳಿದೆ. ಆದರೆ ಅವರ ಉತ್ತರದಿಂದ ನನಗೂ ತೃಪ್ತಿಯಾಗಲಿಲ್ಲ. ಆದ್ದರಿಂದ ಈಗ ನಿಮ್ಮಲ್ಲಿ ಕೇಳುತ್ತಿದ್ದೇನೆ.

ಸಮಸ್ಯೆ ಏನೆಂದರೆ ಕಾದಿಯಾನಿಗಳು 'ಖಾತಮ್' ಎಂಬ ಪದದ ಅರ್ಥ ಉನ್ನತಿಯನ್ನು ಅಲ್ಲಗಳೆಯುವುದು ಆಗಿದೆಯೇ ಹೊರತು ವರ್ಗವನ್ನೇ ಅಲ್ಲಗಳೆಯುವುದಲ್ಲ. 'ಖಾತಮ್' ಎಂಬ ಪದವು ವರ್ಗವನ್ನೇ ಅಲ್ಲಗಳೆಯಲಿಕ್ಕಾಗಿ ಎಲ್ಲಿಯೂ ಬಳಕೆಯಾಗಿಲ್ಲವೆಂದು ಅವರು ಹೇಳುತ್ತಾರೆ. ಒಂದು ವೇಳೆ ಬಳಕೆಯಾಗಿದ್ದರೆ ಉದಾಹರಣೆ ಕೊಡಿರಿ. ಯಾರಾದರೂ ಅರಬಿ ನಿಘಂಟಿನಲ್ಲಿ 'ಖಾತಮ್'ನ ಅರ್ಥ ವರ್ಗವನ್ನು ಅಲ್ಲಗಳೆಯುವುದು ಎಂದು ತೋರಿಸಿಕೊಟ್ಟರೆ ಅವರಿಗೆ ಬಹುಮಾನ ಕೊಡುವುದಾಗಿ ಅವರು ಪಂಥಾಹ್ವಾನ ನೀಡುತ್ತಾರೆ. ಉನ್ನತಿಯನ್ನು ಅಲ್ಲಗಳೆಯುವುದರ ಉದಾಹರಣೆಯನ್ನು ಅವರು ಹೀಗೆ ನೀಡುತ್ತಾರೆ: ಯಾರನ್ನಾದರೂ 'ಖಾತಮುಲ್ ಔಲಿಯಾ' ಎನ್ನುವುದರ ಅರ್ಥ ಅವನಲ್ಲಿ 'ವಿಲಾಯತ್' ಪರಿಸಮಾಪ್ತಿಯಾಯಿತು ಎಂದಲ್ಲ. ವಾಸ್ತವದಲ್ಲಿ ಅದರ ಅರ್ಥ 'ವಿಲಾಯತ್'ನ ಉನ್ನತಿ ಅವರಲ್ಲಿ ಕೊನೆಗೊಂಡಿತು ಎಂದಾಗಿದೆ. ಇಕ್ಬಾಲರ ಈ ಪಂಕ್ತಿಯನ್ನು ಅವರು ಉದಾಹರಣೆಯಾಗಿ ಮುಂದಿಡುತ್ತಾರೆ.

"ಆಖಿರಿ ಶಾಯಿರ್ ಜಹಾನಾಬಾದ್ ಕಾ ಖಾಮೋಷ್ ಹೈ"

ಇದರ ಅರ್ಥ- ಜಹಾನಾಬಾದ್‌ನಲ್ಲಿ ಅವರ ನಂತರ ಇನ್ನಾವ ಕವಿಯೂ ಹುಟ್ಟಲಿಲ್ಲವೆಂದಲ್ಲ, ಬದಲಾಗಿ ಅವರು ಜಹಾನಾಬಾದ್‌ನ ಕೊನೆಯ ಉನ್ನತ ಮಟ್ಟದ ಕವಿಯಾಗಿದ್ದರು ಎಂದಾಗಿದೆ. ಇದೇ ನಿಯಮದಂತೆ ಅವರು 'ಖಾತಮುನ್ನಬಿಯ್ಯೀನ್' ಎಂಬುದರ ಅರ್ಥ ಮುಹಮ್ಮದ್(ಸ) ಅವರಲ್ಲಿ ಪ್ರವಾದಿತ್ವದ ಔನ್ನತ್ಯಗಳು ಸಮಾಪ್ತಗೊಂಡವು ಎಂದಾಗಿದೆಯೇ ಹೊರತು ಪ್ರವಾದಿತ್ವವೇ ಕೊನೆಗೊಂಡಿತೆಂದಲ್ಲ ಎನ್ನುತ್ತಾರೆ.

○ ಪವಿತ್ರ ಕುರ್‌ಆನ್‌ನ ಯಾವುದಾದರೂ ಆಯತ್‌ನ ಕುರಿತು ಏನಾದರೂ ಪ್ರಶ್ನೆ ಎದ್ದರೆ ಮೊಟ್ಟ ಮೊದಲು ಕುರ್‌ಆನ್‌ನಿಂದಲೇ ಅದರ ಅರ್ಥವನ್ನು ತಿಳಿಯುವ ಪ್ರಯತ್ನ ಮಾಡಬೇಕು. ಅನಂತರ ಯಾವುದಾದರೂ ಪ್ರಾಮಾಣಿಕ ಹದೀಸ್ ಅದನ್ನು ಸಮರ್ಥಿಸುತ್ತದೆಯೆ ಎಂದು ನೋಡಬೇಕು. ಎರಡೂ ಕಡೆಯಿಂದ ಉತ್ತರ ಸಿಗದಿದ್ದರೆ (ಹಾಗೆ ಆಗುವುದು ಬಹು ಕಡಿಮೆ) ಬೇರಾವುದಾದರೂ ಮೂಲವನ್ನು ಶೋಧಿಸಬಹುದು.

'ಖತಮುನ್ನುಬುವ್ವತ್'ನ ಪ್ರಸ್ತಾಪವು ಸೂರಃ ಅಹ್‌ಝಾಬ್‌ನಲ್ಲಿ ಬಂದಿದೆ. ಅರೇಬಿಯಾದಲ್ಲಿ ದತ್ತು ಪುತ್ರನಿಗೆ ನೈಜ ಪುತ್ರನ ಸ್ಥಾನಮಾನ ನೀಡಲಾಗಿತ್ತು. ಆತನಿಗೆ ನೈಜ ಪುತ್ರನಂತೆ ವಾರೀಸುಹಕ್ಕು ನೀಡಲಾಗಿತ್ತು. ದತ್ತುತಂದೆಯ ಪತ್ನಿ ಮತ್ತು ಪುತ್ರಿಯರೊಂದಿಗೆ ತಾಯಿ-ಮಗ ಹಾಗೂ ಸೋದರಿ-ಸೋದರರ ಮಧ್ಯೆ ಇರುವಂತಹ ಮುಕ್ತ ಸಂಪರ್ಕವನ್ನು ಆತನು ಇರಿಸುತ್ತಿದ್ದನು. ದತ್ತು ಪುತ್ರನಾದ ಬಳಿಕ ಆತನನ್ನು ದತ್ತು ಸ್ವೀಕರಿಸಿದ ತಂದೆ ತಾಯಿಯರ ಮೇಲೆ ನೈಜ ಪುತ್ರನಿಂದ ಉಂಟಾಗುವ ಸಂಬಂಧ ನಿಷೇಧಗಳೆಲ್ಲವೂ ಉಂಟಾಗುತ್ತಿತ್ತು. ಅಲ್ಲಾಹನು ಈ ಸಂಪ್ರದಾಯವನ್ನು ಮುರಿಯ ಬಯಸಿದ್ದನು. ಆತನು ಮೊದಲು "ಒಬ್ಬನನ್ನು ಪುತ್ರನೆಂದು ಸಾರಿದ ಮಾತ್ರಕ್ಕೆ ಅವನು ನೈಜ ಪುತ್ರನಾಗಿ ಬಿಡುವುದಿಲ್ಲ." (ಅಹ್‌ಝಾಬ್ : 4-5) ಎಂದು ಆದೇಶಿಸಿದನು. ಆದರೆ ಶತಮಾನಗಳಿಂದ ಹೃದಯದಲ್ಲಿ ಬೇರೂರಿದ್ದ ಸಂಪ್ರದಾಯದಿಂದಾಗಿ ಯಾವ ಸಂಬಂಧಗಳನ್ನು ನಿಷಿದ್ಧವೆಂದು ಪರಿಗಣಿಸಲಾಗಿತ್ತೋ ಅದು ಸುಲಭದಲ್ಲಿ ಹೋಗುವಂತಿರಲಿಲ್ಲ. ಆದ್ದರಿಂದ ಈ ಪದ್ಧತಿಯನ್ನು ಕಾರ್ಯತಃ ಮುರಿಯುವುದು ಅಗತ್ಯವಾಗಿತ್ತು. ಆಕಸ್ಮಿಕವೆಂಬಂತೆ ಅದೇ ಕಾಲದಲ್ಲಿ ಒಂದು ಘಟನೆ ನಡೆಯಿತು. ಹ. ಮುಹಮ್ಮದ್(ಸ) ಅವರ ದತ್ತು ಪುತ್ರರಾದ ಹ. ಝೈದ್(ರ) ತಮ್ಮ ಪತ್ನಿ ಹ. ಝೈನಬ್(ರ) ಅವರಿಗೆ ತಲಾಕ್ ನೀಡಿದರು. ಈ ಅಜ್ಞಾನದ ಸಂಪ್ರದಾಯವನ್ನು ಮುರಿಯಲು ಇದು ಸೂಕ್ತ ಸಂದರ್ಭವಾಗಿದೆ ಎಂದು ಪ್ರವಾದಿ(ಸ) ಭಾವಿಸಿದರು. ಪ್ರವಾದಿ(ಸ) ಸ್ವಯಂ ತಮ್ಮ ದತ್ತು ಪುತ್ರರಾದ ಹ. ಝೈದ್‌ರ(ರ) ವಿಚ್ಛೇದಿತ ಪತ್ನಿಯೊಂದಿಗೆ ವಿವಾಹ ಮಾಡದಿದ್ದರೆ ದತ್ತು ಪುತ್ರನನ್ನು ನೈಜ ಪುತ್ರನಂತೆ ಪರಿಗಣಿಸುವ ಅಜ್ಞಾನದ ಕಲ್ಪನೆ ಅಳಿಯಲಾರದು ಎಂದು ಅವರು ಭಾವಿಸಿದ್ದರು. ಆದರೆ ಮದೀನಾದ ಮುನಾಫಿಕ್‌ಗಳು (ಕಪಟವಿಶ್ವಾಸಿಗಳು), ಪರಿಸರದ ಯಹೂದಿಗಳು ಮತ್ತು ಮಕ್ಕಾದ ಬಹುದೇವಾರಾಧಕರು ಈ ಕಾರ್ಯದ ವಿರುದ್ಧ ಒಂದು ಮಹಾ ಕೋಲಾಹಲವನ್ನೆ ಎಬ್ಬಿಸಬಹುದೆಂಬ ಆಶಂಕೆ ಅವರಿಗಿತ್ತು. ಪ್ರವಾದಿ(ಸ) ಮತ್ತು ಇಸ್ಲಾಮನ್ನು ಅಪಕೀರ್ತಿ ಮಾಡಿ ನಿಂದಿಸಲು ಎಲ್ಲ ರೀತಿಯ ಪ್ರಯತ್ನಗಳನ್ನು ನಡೆಸುವರು ಎಂಬ ಭಾವನೆಯು ಅವರಲ್ಲಿತ್ತು. ಆದ್ದರಿಂದ ಈ ಕಾರ್ಯಕ್ಕೆ ಮುಂದಡಿಯಿಡಲು ಅವರು ಅಳುಕುತ್ತಿದ್ದರು. ಕಟ್ಟಕಡೆಗೆ ಅಲ್ಲಾಹನ ಆದೇಶ ಬಂತು. ಪ್ರವಾದಿ(ಸ) ಹ. ಝೈನಬ್‌ರನ್ನು(ರ) ವಿವಾಹವಾದರು. ನಿರೀಕ್ಷೆಯಂತೆ ಆಕ್ಷೇಪ, ಆರೋಪ ಮತ್ತು ವದಂತಿಗಳ ಒಂದು ಬಿರುಗಾಳಿಯೇ ಎದ್ದಿತು.

ುಸ್ಲಿಮ್ ಜನಸಾಮಾನ್ಯರ ಮನಸ್ಸಿನಲ್ಲೂ ತರತರದ ಆಶಂಕೆಗಳು ಹುಟ್ಟತೊಡಗಿದುವು. ಈ ಆಕ್ಷೇಪ ಮತ್ತು ಆಶಂಕೆಗಳನ್ನು ದೂರೀಕರಿಸಲಿಕ್ಕಾಗಿಯೇ ಸೂರಃ ಅಹ್‌ಝಾಬ್‌ನ ುದನೆಯ ಪಾರಾದ 27 ರಿಂದ 40ರ ವರೆಗಿನ ಆಯತ್‌ಗಳು ಅವತೀರ್ಣಗೊಂಡುವು.

ಈ ಸೂಕ್ತಗಳಲ್ಲಿ ಈ ವಿವಾಹವು ಅಲ್ಲಾಹನ ಆದೇಶದ ಮೇರೆಗೆ ಆಗಿದೆ ಮತ್ತು ುದು ಸತ್ಯವಿಶ್ವಾಸಿಗಳಿಗೆ ತಮ್ಮ ದತ್ತುಪುತ್ರರ ವಿಧವೆ ಮತ್ತು ವಿಚ್ಛೇದಿತ ಪತ್ನಿಯರನ್ನು ವಾಹವಾಗುವುದು ಆಕ್ಷೇಪಾರ್ಹವಲ್ಲ ಎಂದು ತೋರಿಸಲಿಕ್ಕೆ ಆಗಿದೆ ಎಂದು ತಿಳಿಸಲಾಯಿತು. ಲ್ಲಾಹನ ಆದೇಶವನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಯಾರ ಭಯದಿಂದಲೂ ಂದೇಟು ಹಾಕುವುದು ಓರ್ವ ಪ್ರವಾದಿಯ ಮಟ್ಟಿಗೆ ಭೂಷಣವಲ್ಲವೆಂದು ತಿಳಿಸಲಾಗಿದೆ. ಈ ಚರ್ಚೆಯನ್ನು ಈ ಕೆಳಗಿನ ಪದಗಳಲ್ಲಿ ಮುಕ್ತಾಯಗೊಳಿಸಲಾಗಿದೆ:

"ಮುಹಮ್ಮದ್‌ರು(ಸ) ನಿಮ್ಮ ಪುರುಷರ ಪೈಕಿ ಯಾರ ತಂದೆಯೂ ಅಲ್ಲ. ಅವರು ಲ್ಲಾಹನ ಸಂದೇಶವಾಹಕರು ಮತ್ತು 'ಖಾತಮುನ್ನಬಿಯ್ಯೀನ್' (ಪ್ರವಾದಿಗಳ ಪರಿಸಮಾಪ್ತಿ) ಗಿರುವರು."

ಈ ಸಂದರ್ಭದಲ್ಲಿ ಬಂದಿರುವ ಈ ಮಾತು ಆಕ್ಷೇಪಕರಿಗೆ ಉತ್ತರವಾಗಿ ಮೂರು ್ರಾವೆಗಳನ್ನು ಮುಂದಿಡುತ್ತದೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಮೊದಲನೆಯದಾಗಿ ಈ ವಿವಾಹವು ಒಂದು ಆಕ್ಷೇಪಾರ್ಹ ವಿಷಯವಲ್ಲ. ಏಕೆಂದರೆ ಯಾರ ವಿಚ್ಛೇದಿತ ಪತ್ನಿಯೊಂದಿಗೆ ವಿವಾಹ ಮಾಡಲಾಗಿದೆಯೋ ಅವರು ಮುಹಮ್ಮದರ(ಸ) ೖಜ ಪುತ್ರರಲ್ಲ ಮತ್ತು ಮುಹಮ್ಮದ್‌ರು(ಸ) ಅವರ ನೈಜ ತಂದೆಯೂ ಅಲ್ಲ.

ಎರಡನೆಯದಾಗಿ ಈ ವಿವಾಹವು ಕೇವಲ ಧರ್ಮಸಮ್ಮತ ಮಾತ್ರವಾಗಿರದೆ ುಹಮ್ಮದ್(ಸ) ಅವರ ಪಾಲಿಗೆ ಈ ಧರ್ಮಸಮ್ಮತ ಕಾರ್ಯವನ್ನು ಮಾಡುವುದು ಗತ್ಯವಾಗಿತ್ತು. ಏಕೆಂದರೆ ಅವರು ಅಲ್ಲಾಹನ ಪ್ರವಾದಿಯಾಗಿರುವರು. ಪ್ರವಾದಿಯು ಲ್ಲಾಹನ ನಿಯಮವನ್ನು ಕಾರ್ಯರೂಪದಲ್ಲಿ ತರಬೇಕಾದುದು ಅನಿವಾರ್ಯ. ಯಾವ ಷಯಗಳನ್ನು ಅನಾವಶ್ಯಕ ಸಂಪ್ರದಾಯದ ರೂಪದಲ್ಲಿ ನಿಷಿದ್ಧಗೊಳಿಸಲಾಗಿದೆಯೋ ಆ ಷೇಧವನ್ನು ಮುರಿಯಬೇಕಾದುದು ಅವರಿಗೆ ಅತ್ಯಗತ್ಯವಾಗಿತ್ತು.

ಮೂರನೆಯದಾಗಿ ಮುಹಮ್ಮದ್(ಸ) ಕೇವಲ ಪ್ರವಾದಿಯಾಗಿರದೆ ಅಂತಿಮ ್ರವಾದಿಯಾಗಿದ್ದರು. ಆದ್ದರಿಂದ ಈ ಕೆಲಸ ಮಾಡುವುದು ಅವರ ಪಾಲಿಗೆ ಇನ್ನಷ್ಟು ಗತ್ಯವಾಗಿತ್ತು. ಈಗ ಇವರ ಮೂಲಕ ಈ ಅಜ್ಞಾನದ ಸಂಪ್ರದಾಯವನ್ನು ಮುರಿಯದೆ ೋದರೆ ಪ್ರಳಯಕಾಲದ ತನಕ ಅದು ಕೊನೆಗೊಳ್ಳಲಾರದು. ಅವರ ನಂತರ ಯಾವ ್ರವಾದಿಯೂ ಬರಲಿಕ್ಕಿಲ್ಲ. ಆದ್ದರಿಂದ ಅವರು ಬಿಟ್ಟುಹೋದ ಕೊರತೆಯನ್ನು ಯಾರೂ ಂದು ತುಂಬಲಾರರು. ಆದ್ದರಿಂದ ಈ ಕೆಲಸವು ಧರ್ಮಸಮ್ಮತವಾದರೂ ಅದನ್ನು ಾಡಲೇಬೇಕೆಂಬ ಅನಿವಾರ್ಯತೆ ಏನಿತ್ತು ಎಂದು ನೀವು ಹೇಳುವಂತಿಲ್ಲ.

ಈಗ ನೀವೇ ಯೋಚಿಸಿ ನೋಡಿ. ಈ ವಿವರಣೆಯಲ್ಲಿ ಬಂದಿರುವ 'ಖತಮ್'ನ ನೈಜ ಅರ್ಥವೇನು? ಅದನ್ನು ಇಲ್ಲಿ ಉನ್ನತಿಯನ್ನು ಅಲ್ಲಗಳೆಯುವ ಅರ್ಥದಲ್ಲಿ ತೆಗೆದುಕೊಂಡರೆ ಈ ಪದವು ಈ ಸಂದರ್ಭದಲ್ಲಿ ತೀರಾ ಅರ್ಥಹೀನವೆನಿಸುತ್ತದೆ. ಸಂದರ್ಭ ಮತ್ತು ಸನ್ನಿವೇಶವು ಇಲ್ಲಿ ಆ ಪದವನ್ನು ಸ್ಪಷ್ಟವಾಗಿ 'ಸಮಾಪ್ತಿ'ಯ ಅರ್ಥದಲ್ಲಿ ತೆಗೆಯಬೇಕೆಂದೇ ಬಯಸುತ್ತದೆ.

ಆ ಬಳಿಕ ಹದೀಸ್‌ಗಳನ್ನು ನೋಡಿರಿ- ಪ್ರವಾದಿ(ಸ) ಸ್ವಯಂ 'ಖತಮುನ್ನುಬುವ್ವತ್' ಅನ್ನು ಈ ರೀತಿ ವ್ಯಾಖ್ಯಾನಿಸಿರುವರು: "ನನ್ನ ಮತ್ತು ಇತರ ಪ್ರವಾದಿಗಳ ಉಪಮೆಯು ಒಂದು ಅರಮನೆಯಂತಿದೆ. ಅದರ ಕಟ್ಟಡವನ್ನು ಬಹಳ ಸುಂದರವಾಗಿ ನಿರ್ಮಿಸಲಾಗಿತ್ತು. ಆದರೆ ಅದರಲ್ಲಿ ಒಂದು ಇಟ್ಟಿಗೆಯ ಸ್ಥಳವು ಖಾಲಿಯಿತ್ತು. ಈಗ ನಾನು ಬಂದು ಆ ಸ್ಥಳವನ್ನು ಭರ್ತಿ ಮಾಡಿರುವೆನು ಮತ್ತು ಕಟ್ಟಡವು ಈಗ ಪೂರ್ಣಗೊಂಡಿದೆ." ಇದು ಬುಖಾರಿ ಮತ್ತು ಮುಸ್ಲಿಮ್‌ಗಳ ಸರ್ವಸಮ್ಮತ ಹದೀಸ್. ಇದು 'ಮಿಷ್ಕಾತ್'ನ 'ಫಝಾಯಿಲ್ ಸಯ್ಯಿದಿಲ್ ಮುರ್ಸಲೀನ್'ನಲ್ಲಿ ನಮಗೆ ಸಿಗುತ್ತದೆ. ಈ ವ್ಯಾಖ್ಯಾನದ ಪ್ರಕಾರ ಪ್ರವಾದಿತ್ವದ ಕಟ್ಟಡವು ಪೂರ್ಣಗೊಂಡಿದೆ. ಕೊನೆಯ ಇಟ್ಟಿಗೆಯ ಜಾಗವೂ ಭರ್ತಿಯಾಗಿದೆ. ಇನ್ನು ಹೊಸ ಇಟ್ಟಿಗೆ ಬಂದರೆ ಅದನ್ನು ಜೋಡಿಸುವುದೆಲ್ಲಿ? ಕಟ್ಟಡದ ಒಳಗೋ ಹೊರಗೋ?

ಇನ್ನು ನಾವು ನಿಘಂಟಿನಲ್ಲಿ ಪರಿಶೀಲಿಸೋಣ. ಅರಬಿ ಭಾಷೆಯ ಯಾವುದೇ ಅಧಿಕೃತ ಪದಕೋಶವನ್ನು ತೆಗೆದು 'ಖತಮ್' ಎಂಬ ಪದದ ಅರ್ಥ ನೋಡಿರಿ. ನಾನು ಮೇಲೆ ಕುರ್‌ಆನ್ ಮತ್ತು ಹದೀಸ್‌ನ ಬೆಳಕಿನಲ್ಲಿ ಸೂಚಿಸಿದ ವಿಶದೀಕರಣವನ್ನು ಅರಬಿ ಭಾಷೆಯೂ ಸಮರ್ಥಿಸುತ್ತದೆಯೆಂದು ನಿಮಗೆ ತಿಳಿದು ಬರುವುದು. 'ಖತಮ್'ನ' ಮೂಲ ಅರ್ಥ ಮುದ್ರೆಯೊತ್ತುವುದು, ಮುಚ್ಚುವುದು ಮತ್ತು ಯಾವುದಾದರೂ ವಸ್ತುವಿನ ಪರಂಪರೆಯನ್ನು ನಿಲ್ಲಿಸುವುದು ಎಂದಾಗಿದೆ. 'ಖತಮಲ್ ಇನಾಅ' ಎಂದರೆ ಪಾತ್ರೆಯ ಬಾಯಿ ಮುಚ್ಚಲಾಯಿತು ಎಂದಾಗಿದೆ. 'ಖತಮುಲ್ ಅಮಲ' ಎಂದರೆ ಕೆಲಸ ಪೂರ್ಣಗೊಳಿಸಿ ಅದರಿಂದ ಮುಕ್ತವಾದ ಎಂದಾಗಿದೆ. 'ಖತಮುಲ್ ಕಿತಾಬ' ಎಂದರೆ ಪತ್ರವನ್ನು ಪೂರ್ಣಗೊಳಿಸಿ ಅದಕ್ಕೆ ಮುದ್ರೆಯೊತ್ತಿದ ಎಂದಾಗುತ್ತದೆ. ಪವಿತ್ರ ಕುರ್‌ಆನ್‌ನಲ್ಲಿಯೂ ಸತ್ಯನಿಷೇಧಿಗಳ ಕುರಿತು 'ಖತಮಲ್ಲಾಹುಅಲಾ ಕುಲೂಬಿಹಿಮ್' ಅಲ್ಲಾಹನು ಅವರ ಹೃದಯಗಳ ಮೇಲೆ ಮುದ್ರೆಯೊತ್ತಿದನು ಎಂದು ಹೇಳಲಾಗಿದೆ. ಅರ್ಥಾತ್: ಅವರ ಹೃದಯಗಳು ಸತ್ಯಸ್ವೀಕಾರಕ್ಕೆ ಮುಚ್ಚಲ್ಪಟ್ಟಿವೆ. ಸತ್ಯವಿಶ್ವಾಸವು ಅವುಗಳೊಳಗೆ ಪ್ರವೇಶಿಸುವಂತೆಯೇ ಇಲ್ಲ. ಸತ್ಯನಿಷೇಧವು ಅವುಗಳಿಂದ ಹೊರಬರುವಂತೆಯೂ ಇಲ್ಲ. ಒಟ್ಟಿನಲ್ಲಿ ಹ. ಮುಹಮ್ಮದ್(ಸ) ಅವರನ್ನು 'ಖಾತಮುನ್ನಬಿಯ್ಯೀನ್' ಎಂದು ಹೇಳಿರುವುದರ ತಾತ್ಪರ್ಯವೇನೆಂದರೆ ಅಲ್ಲಾಹನು ಪ್ರವಾದಿಗಳ ಪರಂಪರೆಯನ್ನು ಪೂರ್ಣಗೊಳಿಸಿ ಹ. ಮುಹಮ್ಮದ್‌ರನ್ನು(ಸ) ಅದರ ಮೇಲೆ ಮುದ್ರೆಯಾಗಿ ಇಟ್ಟಿರುವರು. ಇನ್ನು ಈ ಪರಂಪರೆಗೆ ಯಾವುದೇ ಹೊಸ ಪ್ರವಾದಿಯು ಪ್ರವೇಶಿಸುವಂತಿಲ್ಲ.

(ನ್ಯೂ ಸೆಂಟ್ರಲ್ ಜೈಲ್, ಮುಲ್ತಾನ್ 16-4-1950

4

ಪ್ರವಾದಿಗಳ ಅದೃಶ್ಯ ಜ್ಞಾನ

- *ಒಬ್ಬ ಧಾರ್ಮಿಕ ವಿದ್ವಾಂಸರು ತಮ್ಮ ಗ್ರಂಥದಲ್ಲಿ ಹೀಗೆ ಬರೆದಿರುವರು: "ಅಲ್ಲಾಹನು ಸಂದೇಶವಾಹಕರ ಮೂಲಕ ಜನರಿಗೆ ತಲುಪಿಸಲು ಬಯಸುವ ವಿಷಯಗಳನ್ನು ಮಾತ್ರ ಅವರಿಗೆ ಅದೃಶ್ಯ ಲೋಕದಿಂದ ತಿಳಿಸಲಾಗುತ್ತದೆ" ಅವರು ತಮ್ಮ ವಾದದ ಸಮರ್ಥನೆಗೆ ಈ ಆಯತನ್ನು ಮುಂದಿಡುತ್ತಾರೆ:*

  "ಅವನು ಅದೃಶ್ಯ ಜ್ಞಾನಿಯಾಗಿದ್ದಾನೆ. ತನ್ನ ಅದೃಶ್ಯ ಜ್ಞಾನವನ್ನು ಅವನು ಯಾರಿಗೂ ತಿಳಿಯ ಪಡಿಸುವುದಿಲ್ಲ. (ಅದೃಶ್ಯ ಜ್ಞಾನವನ್ನು ನೀಡಲಿಕ್ಕಾಗಿ) ತಾನು ಮೆಚ್ಚಿಕೊಂಡ ತನ್ನ ಸಂದೇಶವಾಹಕನ ಹೊರತು. ಆಗ ಅವನ (ಸಂದೇಶವಾಹಕನ) ಮುಂದೆಯೂ ಹಿಂದೆಯೂ ಕಾವಲುಗಾರರನ್ನು ನೇಮಿಸಿ ಬಿಡುತ್ತಾನೆ. ಅವರು ತಮ್ಮ ಪ್ರಭುವಿನ ಸಂದೇಶಗಳನ್ನು ತಲುಪಿಸಿರುವರೆಂಬುದನ್ನು ಅವನು ತಿಳಿಯಲಿಕ್ಕಾಗಿ.

  (ಪವಿತ್ರ ಕುರ್‌ಆನ್ 72:26-28)

  ಗ್ರಂಥಕರ್ತರ ಈ ಮಾತಿನಿಂದ ತಿಳಿದು ಬರುವುದೇನೆಂದರೆ ಜನರಿಗೆ ತಲುಪಿಸಲಿಕ್ಕಿರುವಷ್ಟು ಅದೃಶ್ಯ ಜ್ಞಾನವನ್ನು ಮಾತ್ರ ಪ್ರವಾದಿಗಳಿಗೆ ನೀಡಲಾಗುತ್ತದೆ. ಅದಕ್ಕಿಂತ ಹೆಚ್ಚಿನ ಯಾವ ವಿಷಯವನ್ನೂ ಅವರಿಗೆ ತಿಳಿಸಲಾಗುತ್ತಿರಲಿಲ್ಲ. ಈ ಮಾತು ಸರಿಯೇ? ಅವರು ತಮ್ಮ ವಾದದ ಸಮರ್ಥನೆಗೆ ಬಳಸಿರುವ ಆಯತ್ ಈ ಬಗ್ಗೆ ನಿರ್ಣಾಯಕವೇ?

○ ಗ್ರಂಥಕರ್ತರು ವಾಸ್ತವದಲ್ಲಿ ಜನಸಾಮಾನ್ಯರಲ್ಲಿರುವ ತಪ್ಪು ಕಲ್ಪನೆಯನ್ನು ಖಂಡಿಸಿದ್ದಾರೆ. "ಪ್ರವಾದಿಯು ಎಲ್ಲ ಭೂತ-ಭವಿಷ್ಯತ್‌ಗಳನ್ನು ತಿಳಿದವರಾಗಿದ್ದಾರೆ. ಅಲ್ಲಾಹನು ಅವರಿಗೆ ಪೂರ್ಣ ಅದೃಶ್ಯ ಜ್ಞಾನವನ್ನು ನೀಡಿದ್ದಾನೆ. ಎಷ್ಟರವರೆಗೆಂದರೆ ಅಲ್ಲಾಹನಿಗೆ ತಿಳಿದದ್ದೆಲ್ಲವನ್ನೂ ಆತನ ಪ್ರವಾದಿಯೂ ತಿಳಿದಿದ್ದಾರೆ" ಎಂಬುದು ಜನಸಾಮಾನ್ಯರ ಕಲ್ಪನೆಯಾಗಿದೆ. ಈ ವಿಶ್ವಾಸವು ಮಿಥ್ಯೆಯಾಗಿದೆಯೆಂಬುದು ಸ್ಪಷ್ಟ. ಅದರ ಖಂಡನೆಯ ಮಟ್ಟಿಗೆ ಗ್ರಂಥಕರ್ತರ ಮಾತು ಸರಿಯಾಗಿದೆ. ಆದರೆ ಜನರಿಗೆ ತಲುಪಿಸಲಿರುವಷ್ಟು ಅದೃಶ್ಯ ಜ್ಞಾನವನ್ನು ಮಾತ್ರ ಅವರಿಗೆ ನೀಡಲಾಗಿತ್ತು ಎಂಬುದು ಸರಿಯಲ್ಲ. ಈ ಮಾತು ಕುರ್‌ಆನ್ ಮತ್ತು ಹದೀಸ್‌ಗಳ ವಿವರಣೆಗೆ ವಿರುದ್ಧವಾಗಿದೆ. ಗ್ರಂಥಕರ್ತರು ತಮ್ಮ ವಾದದ ಸಮರ್ಥನೆಗೆ ಉದ್ಧರಿಸಿರುವ ಈ ಆಯತ್‌ನಿಂದಲೂ ಈ ಮಾತು ವ್ಯಕ್ತವಾಗುವುದಿಲ್ಲ. ಪವಿತ್ರ ಕುರ್‌ಆನ್‌ನಲ್ಲಿ ಹ.ಯಾಕೂಬ್(ಅ) ಅವರ ಕುರಿತು ಈ ರೀತಿ ಹೇಳಲಾಗಿದೆ: "ಅವರು ತಮ್ಮ ಪುತ್ರರಿಗೆ ಹೀಗೆ ಹೇಳಿದರು:

ನಾನು ಅಲ್ಲಾಹನ ಕಡೆಯಿಂದ ನಿಮಗೆ ತಿಳಿಯದ ವಿಷಯಗಳನ್ನು ತಿಳಿದವನಾಗಿದ್ದೇನೆ."

(ಸೂರಃ ಯೂಸುಫ್ : 11)

ಇದಲ್ಲದೆ ಪವಿತ್ರ ಕುರ್‌ಆನ್‌ನಲ್ಲಿ ಅನೇಕ ಕಡೆಗಳಿಂದ ತಿಳಿದು ಬರುವಂತೆ ಜನಾಂಗಗಳಿಗೆ ಯಾತನೆಯನ್ನು ಎರಗಿಸುವ ಮುಂಚೆ ಅವರ ಪ್ರವಾದಿಗಳಿಗೆ ಅದರ ಸುದ್ದಿ ಮುಟ್ಟಿಸಲಾಗಿತ್ತು. ಆದರೆ ಅವರು ಯಾತನೆಯ ಸಮಯ ಮತ್ತು ಅದರ ವಿವರವಾದ ರೂಪವನ್ನು ತಮ್ಮ ಜನರಿಗೆ ತಿಳಿಸಿರಲಿಲ್ಲ. ಹ. ನೂಹ್(ಅ) ಅವರಿಗೆ ಯಾತನೆಯ ಸುದ್ದಿ ಎಷ್ಟು ಮೊದಲು ತಿಳಿಸಲಾಗಿತ್ತೆಂದರೆ ಅವರು ಚಂಡಮಾರುತ ಬರುವುದಕ್ಕಿಂತ ಮುಂಚೆಯೇ ಹಡಗನ್ನು ಸಿದ್ಧಗೊಳಿಸಿದ್ದರು. ಆದರೆ ನಿಮ್ಮ ಮೇಲೆ ಜಲ ಪ್ರಳಯ ಬರಲಿಕ್ಕಿದೆಯೆಂದು ಅವರು ತಮ್ಮ ಜನತೆಗೆ ತಿಳಿಸಿರಲಿಲ್ಲ.

ಮಾತ್ರವಲ್ಲ ಹದೀಸ್‌ನಿಂದ ತಿಳಿದು ಬರುವಂತೆ ಪ್ರವಾದಿ ಮುಹಮ್ಮದ್(ಸ) ಅವರಿಗೆ ಅವರ ಸಮುದಾಯಕ್ಕೆ ತಿಳಿಸದ ಅನೇಕ ಅದೃಶ್ಯ ಘಟನೆಗಳ ಕುರಿತು ತಿಳಿಸಲಾಗಿತ್ತು. ಒಮ್ಮೆ ಖುತ್‌ಬಾ (ಪ್ರವಚನ) ನೀಡುತ್ತಾ ಪ್ರವಾದಿ(ಸ) ಈ ರೀತಿ ಹೇಳಿದರು:

"ಮುಹಮ್ಮದರ ಜನಾಂಗವೇ! ಅಲ್ಲಾಹನಾಣೆ. ನನಗೆ ತಿಳಿದ ವಿಷಯ ನಿಮಗೆ ತಿಳಿದಿದ್ದರೆ ನೀವು ಕಡಿಮೆ ನಗುತ್ತಿದ್ದಿರಿ ಮತ್ತು ಹೆಚ್ಚು ಅಳುತ್ತಿದ್ದಿರಿ." (ಬುಖಾರಿ)

ಇನ್ನೊಂದು ಸಂದರ್ಭದಲ್ಲಿ ಪ್ರವಾದಿ(ಸ) ಹೀಗೆ ಹೇಳಿದರು:

"ನಾನು ನಿಮ್ಮನ್ನು ಮುಂದಿನಿಂದ ನೋಡುವಂತೆಯೇ ಹಿಂದಿನಿಂದಲೂ ನೋಡುತ್ತೇನೆ." (ಬುಖಾರಿ)

ಒಟ್ಟಿನಲ್ಲಿ ಅನೇಕ ಆಯತ್ ಮತ್ತು ಹದೀಸ್‌ಗಳಿಂದ ತಿಳಿದು ಬರುವಂತೆ ಪ್ರವಾದಿಗಳಿಗೆ ನೀಡಲಾಗಿದ್ದ ಅದೃಶ್ಯ ಜ್ಞಾನವು ಅವರ ಮೂಲಕ ಜನರಿಗೆ ತಲುಪಿದುದಕ್ಕಿಂತ ಬಹಳ ಹೆಚ್ಚಿತ್ತು. ಹಾಗೆಯೇ ಆಗಬೇಕೆಂದು ಬುದ್ಧಿಯೂ ಬಯಸುತ್ತದೆ. ಏಕೆಂದರೆ ಜನರಿಗೆ ವಿಶ್ವಾಸ-ಶ್ರದ್ಧೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ತಿಳಿಸಿದರೆ ಸಾಕು. ಆದರೆ ಪ್ರವಾದಿಗಳಿಗೆ ಅದರ ಹೊರತು ಇನ್ನೂ ಅನೇಕ ವಿಷಯಗಳು ತಿಳಿದಿರಬೇಕು. ಅವು ಅವರ ಪ್ರವಾದಿತ್ವದ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಸಹಕಾರಿಯಾಗುತ್ತವೆ. ರಾಷ್ಟ್ರದ ಧೋರಣೆ ಮತ್ತು ಅದರ ರಹಸ್ಯಗಳು ಒಂದು ಮಿತಿಯೊಳಗೆ ಮಂತ್ರಿಗಳಿಗೆ ಮತ್ತು ರಾಜ್ಯಪಾಲರಿಗೆ ತಿಳಿದಿರಬೇಕಾದುದು ಅಗತ್ಯ. ಸಾರ್ವಜನಿಕರಿಗೆ ಈ ಧೋರಣೆ ಮತ್ತು ರಹಸ್ಯಗಳು ತಿಳಿದರೆ ಪ್ರಯೋಜನಕ್ಕಿಂತಲೂ ಹೆಚ್ಚು ಹಾನಿಯಾಗುವ ಸಂಭವವಿದೆ. ಅದೇ ರೀತಿ ಅಲ್ಲಾಹನ 'ಮಲಕೂತ್' (ಸಾಮ್ರಾಜ್ಯ)ನಲ್ಲಿಯೂ ಅನೇಕ ರಹಸ್ಯಗಳಿವೆ. ಅದನ್ನು ಅಲ್ಲಾಹನ ವಿಶಿಷ್ಟ ಪ್ರತಿನಿಧಿಗಳು ಮತ್ತು ಅವನ ಪ್ರವಾದಿಗಳು ತಿಳಿದಿದ್ದಾರೆ. ಆದರೆ ಜನಸಾಮಾನ್ಯರು ಅದರ ಬಗ್ಗೆ ಏನೇನೂ ತಿಳುವಳಿಕೆಯನ್ನು ಹೊಂದಿಲ್ಲ. ಈ ಅದೃಶ್ಯ ಜ್ಞಾನವು ಪ್ರವಾದಿಗಳಿಗೆ ಅವರ ಕರ್ತವ್ಯ ನಿರ್ವಹಣೆಯಲ್ಲಿ ನೆರವಾಗುತ್ತವೆ. ಆದರೆ ಜನಸಾಮಾನ್ಯರಿಗೆ ಆ ಜ್ಞಾನದ ಅಗತ್ಯವೂ ಇರುವುದಿಲ್ಲ. ಅದನ್ನು ಅವರು ವಹಿಸಲು ಶಕ್ತರಲ್ಲ.

(ತರ್ಜುಮಾನುಲ್ ಕುರ್‌ಆನ್, ಆಗಸ್ಟ್ 1934)

5

ಕುರ್‌ಆನ್, ಹದೀಸ್ ಮತ್ತು ವೈಜ್ಞಾನಿಕ ಸತ್ಯಗಳು

● *ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ವಿವರಿಸಲಾಗಿರುವ ಅನೇಕ ವಿಷಯಗಳನ್ನು ಆಧುನಿಕ ಸಂಶೋಧನೆಗಳು ಅಲ್ಲಗಳೆಯುತ್ತವೆ. ಇಂತಹ ಸಂದರ್ಭದಲ್ಲಿ ನಾವು ಕುರ್‌ಆನ್, ಹದೀಸ್‌ಗಳನ್ನು ನಂಬಬೇಕೇ ಅಥವಾ ವೈಜ್ಞಾನಿಕ ಸಂಶೋಧನೆಗಳನ್ನು ನಂಬಬೇಕೇ? ಉದಾ:*

1. ಮಾನವ ಕುಲವು ಆದಮ್(ಅ) ಅವರಿಂದ ಆರಂಭವಾಯಿತೆಂದು ಕುರ್‌ಆನ್ ಹೇಳುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಆಧುನಿಕ ವಿಜ್ಞಾನಿಗಳು ಮನುಷ್ಯರು ಪ್ರಾಣಿಗಳ ವಂಶಕ್ಕೇ ಸೇರಿದವರಾಗಿದ್ದು ಮಂಗಗಳು ಮತ್ತು ಕಾಡುಮನುಷ್ಯರಿಂದ ಅಭಿವೃದ್ಧಿ ಹೊಂದುತ್ತಾ ಮನುಷ್ಯರಾದರು ಎನ್ನುತ್ತಾರೆ.

2. ಸೂರ್ಯನು ಚಲಿಸುತ್ತಿರುವನೆಂದು ಕುರ್‌ಆನ್ ಹೇಳುತ್ತದೆ. ಆದರೆ ವಿಜ್ಞಾನದ ಪ್ರಕಾರ ಸೂರ್ಯನು ಚಲಿಸುವುದಿಲ್ಲ.

3. ಇದೇ ರೀತಿ ಮೋಡಗಳಿಂದ ಉಂಟಾಗುವ ಸಿಡಿಲು ಮತ್ತು ಮಿಂಚು ಮೋಡಗಳನ್ನು ಅಟ್ಟುತ್ತಿರುವ ದೇವಚರರ ಕೊರಡೆಯ ಶಬ್ದ ಮತ್ತು ಮಿನುಗು ಆಗಿದೆ ಎಂಬುದು ಇಸ್ಲಾಮ್‌ನ ನಿಲುವು. ಆದರೆ ಆಧುನಿಕ ವಿಜ್ಞಾನದ ಪ್ರಕಾರ ಸಿಡಿಲು ಮತ್ತು ಮಿಂಚು ಮೋಡಗಳ ಘರ್ಷಣೆಯಿಂದ ಉಂಟಾಗುತ್ತದೆ.

4. 'ಕಾನಾ ದಜ್ಜಾಲ್' (ಒಕ್ಕಣ್ಣ ದಜ್ಜಾಲ)ನ ಕುರಿತು ಆತ ಇಲ್ಲಿಯೇ ಬಂಧಿತನಾಗಿದ್ದಾನೆಂಬುದು ಜನಜನಿತವಿದೆ. ಅದು ಯಾವ ಸ್ಥಳ? ಇಂದು ಮನುಷ್ಯನು ಭೂಮಿಯ ಮೂಲೆ ಮೂಲೆಗಳನ್ನೂ ಜಾಲಾಡಿದ್ದಾನೆ. ಆದರೂ ಆತನ ಪತ್ತೆಯಾಗಿಲ್ಲವೇಕೆ?

○ ಪವಿತ್ರ ಕುರ್‌ಆನ್‌ಗೆ ವಿರುದ್ಧವಾದ ಯಾವುದಾದರೂ ವಾಸ್ತವಿಕತೆಯನ್ನು ಕಂಡು ಹಿಡಿಯಲಾಗಿದೆ ಎಂಬುದಕ್ಕೆ ಒಂದಾದರೂ ನಿದರ್ಶನವು ನನ್ನ 25 ವರ್ಷಗಳ ಸಂಶೋಧನೆ ಮತ್ತು ಅಧ್ಯಯನದ ವೇಳೆ ನನಗೆ ಸಿಗಲಿಲ್ಲ. ಆದರೆ ವಿಜ್ಞಾನಿ ಮತ್ತು ತತ್ವಜ್ಞಾನಿಗಳು ತಮ್ಮ ಊಹೆಯಿಂದ ರಚಿಸಿದ ಸಿದ್ಧಾಂತಗಳ ಪೈಕಿ ಅನೇಕ ಸಿದ್ಧಾಂತಗಳು ಪವಿತ್ರ ಕುರ್‌ಆನ್‌ನ ವಚನಗಳಿಗೆ ವಿರುದ್ಧವಾಗಿವೆ. ಈ ರೀತಿಯ ಊಹನಾತ್ಮಕ ಸಿದ್ಧಾಂತಗಳ ಚರಿತ್ರೆಯನ್ನು ಅವಲೋಕಿಸಿದರೆ, ಒಮ್ಮೆ ಯಾವ ಸಿದ್ಧಾಂತವನ್ನು ವಾಸ್ತವಿಕತೆಯೆಂದು ಪರಿಗಣಿಸಿ ಸ್ವೀಕರಿಸಲಾಗಿತ್ತೋ ಅದುವೇ ಇನ್ನೊಮ್ಮೆ ಸುಳ್ಳೆಂದು ಸಾಬೀತಾಗಿ ಮನುಷ್ಯನು ಅದರ ಸ್ಥಾನದಲ್ಲಿ ಬೇರೆಯದನ್ನು ವಾಸ್ತವಿಕತೆಯೆಂದು ಅಂಗೀಕರಿಸಿದುದಕ್ಕೆ ಅನೇಕ ನಿದರ್ಶನಗಳು ನಮಗೆ

ಸಿಗುತ್ತವೆ. ಪವಿತ್ರ ಕುರ್‌ಆನ್‌ನ ವಚನಗಳಿಗೆ ವಿರುದ್ಧವಾಗಿವೆಯೆಂದು ಕಂಡು ಬಂದ ಕೂಡಲೆ ಕುರ್‌ಆನನ್ನು ಬಿಟ್ಟು ಅವುಗಳನ್ನು ಸ್ವೀಕರಿಸಬೇಕಾದಂತಹ ಮಹತ್ವವನ್ನು ನಾವು ಇಂತಹ ಅಸ್ಥಿರ ಸಿದ್ಧಾಂತಗಳಿಗೆ ನೀಡಲು ಸಿದ್ಧರಿಲ್ಲ. ಯಾವುದಾದರೂ ದೃಢಪಟ್ಟ ವಸ್ತುಸ್ಥಿತಿ ಅರ್ಥಾತ ಅನುಭವ ಮತ್ತು ವೀಕ್ಷಣೆಯಿಂದ ಸಾಬೀತಾದ ಯಾವುದಾದರೂ ವಿಷಯವು ಪವಿತ್ರ ಕುರ್‌ಆನ್‌ ಯಾವುದೇ ವಚನವನ್ನು ಸುಳ್ಳಾಗಿಸಿದಾಗ ಮಾತ್ರ ನಮ್ಮ ವಿಶ್ವಾಸವು ಚಂಚಲವಾಗಬಹುದು ಆದರೆ ಇಂದಿನ ತನಕ ಅಂತಹ ಯಾವುದೇ ವಿಷಯವೂ ನನ್ನ ಗಮನಕ್ಕೆ ಬಂದಿಲ್ಲ.

ಇನ್ನು ನೀವು ಉದಾಹರಣೆಯಾಗಿ ಮುಂದಿಟ್ಟಿರುವ ವಿಷಯಗಳ ಕುರಿತು ಒಂದೊಂದಾಗಿ ವಿವರಿಸುವೆನು:

1. ಡಾರ್ವಿನನ ವಿಕಾಸವಾದವು ಕೇವಲ ಒಂದು ಸಿದ್ಧಾಂತವಾಗಿದೆ. ಅದು ಒಂದು ದೃಢೀಕೃತ ವಾಸ್ತವಿಕತೆಯಲ್ಲ. ಈ ಸಿದ್ಧಾಂತವನ್ನು ನಂಬಿರುವ ಅನೇಕ ಮಂದಿ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿದ್ದಾರೆ. ಆ ಪೈಕಿ ಯಾರನ್ನಾದರೂ ಡಾರ್ವಿನನದ್ದು ಒಂದು ಸಿದ್ಧಾಂತ (Theory) ಆಗಿದೆಯೇ ಅಥವಾ ಒಂದು ವಸ್ತುಸ್ಥಿತಿ (Fact) ಆಗಿದೆಯೇ ಎಂದು ವಿಚಾರಿಸಿ ನೋಡಿ. ಅವರಲ್ಲಿ ಯಾರಾದರೂ ಅದನ್ನು ಒಂದು ವಾಸ್ತವಿಕತೆಯೆಂದರೆ ಅವರ ಹೆಸರು ವಿಳಾಸವನ್ನು ಸ್ವಲ್ಪ ನನಗೂ ತಿಳಿಸಿ.

2. ನಿಮ್ಮಲ್ಲಿ ಖಗೋಳಶಾಸ್ತ್ರ (Astronomy) ತಿಳಿದವರಿಗೆ ಕೊರತೆಯಿಲ್ಲ. ಸೂರ್ಯನು ನಿಜಕ್ಕೂ ನಿಶ್ಚಲವಾಗಿದ್ದಾನೆಯೇ ಎಂದು ಸ್ವಲ್ಪ ಅವರಲ್ಲಿ ವಿಚಾರಿಸಿ ನೋಡಿ. ಅಂತಹ ವ್ಯಕ್ತಿ ಸಿಕ್ಕಿದರೆ ಅವರ ಹೆಸರು ಸಾರಸ್ವತ ಲೋಕಕ್ಕೆ ತಿಳಿಯಬೇಕು. ಬಹುಶಃ ನೀವು ಈಗಲೂ 19ನೇ ಶತಮಾನದ ವಿಜ್ಞಾನವನ್ನು ವಿಜ್ಞಾನವೆಂದು ಬಗೆದಿರಬೇಕು. 19ನೇ ಶತಮಾನದ ಸೂರ್ಯನು ನಿಶ್ಚಲವಾಗಿದ್ದನು. ಆದರೆ ಆಧುನಿಕ ವಿಜ್ಞಾನದ ಸೂರ್ಯನು ಅತ್ಯಂತ ವೇಗವಾಗಿ ಚಲಿಸುತ್ತಿದ್ದಾನೆ.

3. ಮೋಡಗಳ ಮಿಂಚು ಮತ್ತು ಸಿಡಿಲು ವಿದ್ಯುತ್‌ನ ಬದಲು ದೇವಚರ ಚಾಟಿಯೇಟು ಬಾರಿಸುತ್ತವೆಯೆಂದು ಹೇಳುವ ಪವಿತ್ರ ಕುರ್‌ಆನ್‌ನ ಯಾವುದೇ ಆಯತ್ ನನ್ನ ಗಮನಕ್ಕೆ ಬಂದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಪವಿತ್ರ ಕುರ್‌ಆನ್‌ನಲ್ಲಿ ವಿವರಿಸಲಾಗಿರುವ ಮಳೆಯ ಪದ್ಧತಿಯು (Process)ಆಧುನಿಕ ವಿಜ್ಞಾನದ ಸಂಶೋಧನೆಗಳಿಗೆ ಅನುರೂಪವಾಗಿದೆ. ಅದು ಎಷ್ಟು ಹೊಸದಾಗಿದೆಯೆಂದರೆ (Up to date) ಕಳೆದ ಶತಮಾನದ ಮಧ್ಯ ಭಾಗದವರೆಗೆ ಮಳೆಯ ಕುರಿತು ಮನುಷ್ಯನಿಗಿದ್ದ ತಿಳುವಳಿಕೆಯಿಂದಾಗಿ ಆ ಸೂಕ್ತಗಳ ವ್ಯಾಖ್ಯಾನ ಮಾಡುವಲ್ಲಿ ಕೆಲವರಿಗೆ ಬಹಳ ತೊಡಕುಂಟಾಗುತ್ತಿತ್ತು.

4. 'ಕಾನಾ ದಜ್ಜಾಲ್' ಇತ್ಯಾದಿಗಳು ಕಟ್ಟುಕಥೆಗಳಾಗಿವೆ. ಅದಕ್ಕೆ ಶರೀಅತ್‌ನಲ್ಲಿ ಯಾವುದೇ ಸ್ಥಾನಮಾನವಿಲ್ಲ. ಅವುಗಳನ್ನು ಹುಡುಕುವ ಅಗತ್ಯವೂ ನಮಗಿಲ್ಲ. ಜನರಲ್ಲಿ ಪ್ರಚಲಿತವಾಗಿರುವ ಇಂತಹ ವಿಷಯಗಳ ಹೊಣೆ ಇಸ್ಲಾಮಿನ ಮೇಲಿಲ್ಲ. ಅವುಗಳ ಪೈಕಿ ಯಾವುದಾದರೂ ವಿಷಯ ಸುಳ್ಳೆಂದು ಸಾಬೀತಾದರೆ ಅದರಿಂದ ಇಸ್ಲಾಮ್‌ಗೆ ಏನೂ ನಷ್ಟವಿಲ್ಲ. *(ತರ್ಜುಮಾನುಲ್ ಕುರ್‌ಆನ್, ಸೆಪ್ಟೆಂಬರ್, ಅಕ್ಟೋಬರ್ 1945)*

6

ದಜ್ಜಾಲ್‌ನ ಕುರಿತ ಹದೀಸ್‌ಗಳು

ತರ್ಜುಮಾನುಲ್ ಕುರ್‌ಆನ್‌ನಲ್ಲಿ ಒಬ್ಬರು ಈ ರೀತಿ ಪ್ರಶ್ನಿಸಿದ್ದರು: "ಕಾನಾ ದಜ್ಜಾಲ್ (ಒಕ್ಕಣ್ಣ ದಜ್ಜಾಲ್)ನ ಕುರಿತು ಆತ ಎಲ್ಲಿಯೋ ಬಂಧಿತನಾಗಿದ್ದಾನೆಂಬುದು ಜನಜನಿತವಿದೆ. ಅದು ಯಾವ ಸ್ಥಳ? ಇಂದು ಮನುಷ್ಯನು ಭೂಮಿಯ ಮೂಲೆ ಮೂಲೆಗಳನ್ನೂ ಜಾಲಾಡಿಸಿದ್ದಾರೆ. ಆದರೂ ಆತನ ಪತ್ತೆಯಾಗಿಲ್ಲವೇಕೆ?" ಇದಕ್ಕೆ ತಾವು ಈ ರೀತಿ ಉತ್ತರಿಸಿದ್ದೀರಿ: "ಕಾನಾ ದಜ್ಜಾಲ್" ಇತ್ಯಾದಿಗಳು ಕಟ್ಟು ಕಥೆಗಳಾಗಿವೆ. ಅದಕ್ಕೆ ಶರೀಅತ್‌ನಲ್ಲಿ ಯಾವುದೇ ಸ್ಥಾನಮಾನವಿಲ್ಲ. ಆದರೆ ನನಗೆ ತಿಳಿದಿರುವಂತೆ ಕನಿಷ್ಠ ಮೂವತ್ತು ಹದೀಸ್ ವರದಿಗಳಲ್ಲಿ ದಜ್ಜಾಲ್‌ನ ಪ್ರಸ್ತಾಪವಿದೆ. ಅದನ್ನು ಬುಖಾರಿ, ಮುಸ್ಲಿಮ್, ಅಬೂ ದಾವೂದ್, ತಿರ್ಮಿದಿ, ಶರಹುಸ್ಸುನ್ನ:, ಬೈಹಕಿಗಳಲ್ಲಿ ನೋಡಬಹುದಾಗಿದೆ. ಹಾಗಿರುವಾಗ ತಮ್ಮ ಉತ್ತರಕ್ಕೆ ಆಧಾರವೇನು?

○ ನಾನು ಕಟ್ಟು ಕಥೆ ಎಂದಿರುವುದು 'ದಜ್ಜಾಲ್' ಎಲ್ಲಿಯೋ? ಬಂಧಿತನಾಗಿದ್ದಾನೆಂಬ ಲ್ಪನೆಯನ್ನು ಮಾತ್ರ. ಉಳಿದಂತೆ 'ಅದ್ದಜ್ಜಾಲ್' ಎಂಬ ದೊಡ್ಡ ಕ್ಷೋಭೆ ಸೃಷ್ಟಿಸುವವನು ತ್ಯಕ್ಷವಾಗುವ ವಿಷಯದ ಬಗ್ಗೆ ಅನೇಕ ಹದೀಸ್‌ಗಳಲ್ಲಿ ಉಲ್ಲೇಖವಿದೆ. ನಾನು ಅದನ್ನು ಪ್ಪುತ್ತೇನೆ ಮತ್ತು ನನ್ನ ಎಲ್ಲ ನಮಾಝ್‌ಗಳಲ್ಲೂ ಇತರ ಕ್ಷೋಭೆಗಳಿಂದ ಅಲ್ಲಾಹನ ಭಯ ಯಾಚಿಸುವಂತೆ 'ಅಊದು ಬಿಕ ಮಿನ್ ಫಿತ್ನತಿಲ್ ಮಸೀಹಿದ್ದಜ್ಜಾಲ್' ಮಸೀಹುದ್ದಜ್ಜಾಲ್‌ನ ಕ್ಷೋಭೆಯಿಂದ ನಾನು ನಿನ್ನ ಅಭಯ ಯಾಚಿಸುತ್ತೇನೆ) ಎಂಬ ್ರಾರ್ಥನೆಯನ್ನೂ ಮಾಡುತ್ತೇನೆ.

ದಜ್ಜಾಲ್‌ನ ಕುರಿತು ಪ್ರವಾದಿವರ್ಯರಿಂದ(ಸ) ವರದಿಯಾಗಿರುವ ಹದೀಸ್‌ಗಳನ್ನು ವಲೋಕಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ. ಒಬ್ಬ ದೊಡ್ಡ ದಜ್ಜಾಲ್ ತ್ಯಕ್ಷವಾಗಲಿದ್ದಾನೆ. ಅವನ ಗುಣ-ವಿಶೇಷತೆಗಳು ಹೀಗಿವೆ ಎಂಬಷ್ಟರ ಮಟ್ಟಿಗೆ ಮಾತ್ರ ವಾದಿವರ್ಯರಿಗೆ(ಸ) ಅಲ್ಲಾಹನಿಂದ ಜ್ಞಾನ ದೊರೆತಿತ್ತು. ಆದರೆ ಆತ ಯಾವಾಗ ತ್ಯಕ್ಷಗೊಳ್ಳುವನು. ಎಲ್ಲಿ ಪ್ರತ್ಯಕ್ಷಗೊಳ್ಳುವನು. ಅವನು ಪ್ರವಾದಿವರ್ಯರ(ಸ) ಕಾಲದಲ್ಲೇ ಟ್ಟಿರುವನೇ ಅಥವಾ ಪ್ರವಾದಿವರ್ಯರ(ಸ) ನಂತರ ದೀರ್ಘ ಕಾಲದ ಬಳಿಕ ಹುಟ್ಟುವನೇ ಂಬ ಬಗ್ಗೆ ಅವರಿಗೆ ತಿಳಿಸಲಾಗಿರಲಿಲ್ಲ.

ಈ ಬಗ್ಗೆ ಪ್ರವಾದಿವರ್ಯರಿಂದ(ಸ) ವರದಿಯಾಗಿರುವ ವಿಭಿನ್ನ ವಿಷಯಗಳು

ಅವರ(ಸ) ಗುಮಾನಿಗಳಾಗಿದ್ದುವು. ಅವುಗಳ ಬಗ್ಗೆ ಪ್ರವಾದಿವರ್ಯರಿಗೆ(ಸ) ಸಂಶಯವಿತ್ತು. ಒಮ್ಮೆ ದಜ್ಜಾಲ್ 'ಖುರಾಸಾನ್'ನಿಂದ ಪ್ರತ್ಯಕ್ಷವಾಗುವನೆಂದು ಪ್ರವಾದಿ(ಸ) ಹೇಳಿ ಇನ್ನೊಮ್ಮೆ 'ಅಸ್‌ಫಹಾನ್'ನಲ್ಲೆಂದೂ ಮತ್ತೊಮ್ಮೆ ಸಿರಿಯಾ ಮತ್ತು ಇರಾಕ್‌ಗಳ ಮ ಇರುವ ಪ್ರದೇಶದಲ್ಲಿ ಪ್ರತ್ಯಕ್ಷಗೊಳ್ಳುವನೆಂದೂ ಹೇಳಿರುವರು. ಒಮ್ಮೆ ಸುಮಾರು ಅಥವಾ 3ನೇ ಹಿಜರಿಯಲ್ಲಿ ಮದೀನಾದಲ್ಲಿ ಹುಟ್ಟಿದ ಓರ್ವ ಯಹೂದಿ ಬಾಲಕ 'ಇ ಸಯ್ಯಾದ್'ನ ಕುರಿತು ಆತನೇ ದಜ್ಜಾಲ್ ಆಗಿರಬೇಕೆಂಬ ಸಂಶಯವನ್ನು ವ್ಯಕ್ತಪಡಿಸಿದ್ದ 9ನೇ ಹಿಜರಿಯಲ್ಲಿ ತಮೀಮ್ ದಾರೀ ಎಂಬ ಕ್ರೈಸ್ತ ಪಾದ್ರಿ ಬಂದು ಇಸ್ಲಾಮ್ ಸ್ವೀಕರಿ ಪ್ರವಾದಿ(ಸ) ಅವರಿಗೆ ಒಂದು ವೃತ್ತಾಂತವನ್ನು ತಿಳಿಸಿದರು. ಒಮ್ಮೆ ಅವರು ಸಮುದ್ರದ (ಹೆಚ್ಚಿನಂಶ ರೋಮನ್ ಅಥವಾ ಅರಬಿ ಸಮುದ್ರ) ಯಾತ್ರೆ ಮಾಡುತ್ತಾ ಒಂದು ನಿರ್ಜ ದ್ವೀಪಕ್ಕೆ ತಲಪಿದರು. ಅಲ್ಲಿ ಒಬ್ಬ ವಿಚಿತ್ರ ವ್ಯಕ್ತಿಯನ್ನು ಅವರು ಭೇಟಿಯಾದರು. ವ್ಯಕ್ತಿ ತಾನು ದಜ್ಜಾಲ್ ಆಗಿದ್ದೇನೆಂದು ಅವರಿಗೆ ತಿಳಿಸಿದ. ಆಗ ಪ್ರವಾದಿ(ಸ) ಅ ಹೇಳಿಕೆಯನ್ನು ಅಲ್ಲಗಳೆಯಲಿಲ್ಲ. ಆದರೆ ಆ ಬಗ್ಗೆ ತಮ್ಮ ಸಂಶಯವನ್ನು ವ್ಯಕ್ತಪಡಿಸು ಆತ ರೋಮ್ ಸಮುದ್ರ ಅಥವಾ ಅರಬೀ ಸಮುದ್ರದಲ್ಲಿ ಪ್ರತ್ಯಕ್ಷನಾಗಲಾರ. ಬದಲ ಪೂರ್ವದಿಂದ ಪ್ರತ್ಯಕ್ಷನಾಗುವನೆಂದು ನಾನು ಭಾವಿಸುತ್ತೇನೆ ಎಂದಿರುವ ವರದಿಯೂ ಇ

ಪ್ರವಾದಿ ಮುಹಮ್ಮದ್(ಸ) ಅವರು ಈ ಮಾತುಗಳನ್ನು 'ವಹೀಯ ಜ್ಞಾ ಆಧಾರದಲ್ಲಿ ಹೇಳಿರಲಿಲ್ಲ. ಬದಲಾಗಿ ತಮ್ಮ ಗುಮಾನಿಯ ಆಧಾರದಲ್ಲಿ ಹೇಳಿದ್ದ ಎಂಬುದು ಅವರ ಈ ಅನುಮಾನದಿಂದಲೇ ವ್ಯಕ್ತವಾಗುತ್ತದೆ. ಪ್ರವಾದಿವರ್ಯರ ಗುಮಾನಿ ಸರಿಯಾಗದೆ ಇದ್ದರೆ ಅದರಿಂದ ಅವರ ಪ್ರವಾದಿತ್ವಕ್ಕೆ ಯಾವುದೇ ಕುಂದುಂಟಾಗುವುದಿ ಅದರ ಮೇಲೆ ವಿಶ್ವಾಸವಿಡುವುದನ್ನೂ ಕಡ್ಡಾಯಗೊಳಿಸಲಾಗಿಲ್ಲ. ಮುಂದಿನ ಘಟನೆಗಳಿ ಪ್ರವಾದಿವರ್ಯರು(ಸ) ಗುಮಾನಿಯ ಆಧಾರದಲ್ಲಿ ಹೇಳಿದ ಈ ಮಾತುಗ ಅಲ್ಲಗಳೆಯಲ್ಪಟ್ಟಿರುವಾಗ ಅವುಗಳನ್ನು 'ಅಕಾಇದ್' (ವಿಶ್ವಾಸವಿಡಬೇಕಾದ ವಿಷಯಗಳು)ನ ಸೇರಿಸುವುದಕ್ಕೆ ಪಟ್ಟು ಹಿಡಿಯಲು ಯಾವ ಕಾರಣವೂ ಇಲ್ಲ. 'ಇಬ್ನು ಸಯ್ಯಾದ್'ನ ಬ ಆತನೇ ದಜ್ಜಾಲ್ ಆಗಿರಬಹುದೆಂದು ಪ್ರವಾದಿ(ಸ) ಅವರಿಗೆ ಸಂಶಯವಾಯಿತು. ಉಮರ್(ರ) ಅವರಂತೂ ಆತನೇ ದಜ್ಜಾಲ್ ಆಗಿರುವನೆಂದು ಆಣೆಯಿಟ್ಟು ಹೇಳಿದ್ದ ಆದರೆ ಅನಂತರ ಆತ ಮುಸ್ಲಿಮನಾಗಿ ಮಕ್ಕಾ-ಮದೀನಾಗಳಲ್ಲಿ ವಾಸವಾದ. ಮುಸ್ಲಿಮನಾಗಿ ನಿಧನ ಹೊಂದಿದ ಮತ್ತು ಮುಸ್ಲಿಮರು ಅವನ ಜನಾಝ ನಮಾಝ್ ನಿರ್ವಹಿಸಿದ ಹಾಗಿರುವಾಗ ಇಂದಿಗೂ ಆ ಇಬ್ನು ಸಯ್ಯಾದ್‌ನ ಕುರಿತು ಆತ ದಜ್ಜಾಲ್ ಆಗಿರಬಹುದೆಂ

ಮಮಾನಿಸಲು ಕಾರಣವಾದರೂ ಏನಿದೆ. ತಮೀಮ್ ದಾರೀಯವರ ಹೇಳಿಕೆಯನ್ನು
ವಾದಿ(ಸ) ಆಗ ಸರಿಯೆಂದೇ ಪರಿಗಣಿಸಿದ್ದರು. ಆದರೆ ತಮೀಮ್ ದಾರಿಯವರು
ಂಧಿಸಲ್ಪಟ್ಟ ಸ್ಥಿತಿಯಲ್ಲಿ ಕಂಡ ಆ ವ್ಯಕ್ತಿಯು ಹದಿಮೂರುವರೆ ಶತಮಾನಗಳವರೆಗೆ
ತ್ಯಕ್ಷವಾಗದಿರುವುದರಿಂದ ಅವರು ಆತನನ್ನು ಕುರಿತು ನೀಡಿದ ಹೇಳಿಕೆ ಸರಿಯಲ್ಲವೆಂಬುದನ್ನು
ಬೀತುಗೊಳಿಸುವುದಿಲ್ಲವೇ? ದಜ್ಜಾಲ್ ತಮ್ಮ ಕಾಲದಲ್ಲೇ ಪ್ರತ್ಯಕ್ಷಗೊಳ್ಳಬಹುದೆಂದು
ವಾದಿವರ್ಯರಿಗೆ(ಸ) ಆಶಂಕೆ ಇತ್ತು ಅಥವಾ ಅವರ ಕಾಲಾನಂತರ ಶೀಘ್ರವೇ ಗೋಚರಿಸ
ಹುದೆಂಬ ಅನುಮಾನವಿತ್ತು. ಹದಿಮೂರುವರೆ ಶತಮಾನಗಳ ಇತಿಹಾಸವು
ವಾದಿವರ್ಯರ(ಸ) ಆ ಆಶಂಕೆಯು ಸರಿಯಾಗಿರಲಿಲ್ಲವೆಂದು ಸಾಬೀತುಗೊಳಿಸುವುದಿಲ್ಲವೇ?
ಗ ಆ ವಿಷಯಗಳನ್ನು ಇಸ್ಲಾಮೀ ಅಕೀದಃ (ವಿಶ್ವಾಸ)ದ ರೂಪದಲ್ಲಿ ಉಲ್ಲೇಖಿಸುವುದು
ಸ್ಲಾಮಿನ ಸರಿಯಾದ ಪ್ರಾತಿನಿಧ್ಯವಾಗಲಿ ಹದೀಸ್‌ನ ಸರಿಯಾದ ವ್ಯಾಖ್ಯಾನವಾಗಲಿ ಅಲ್ಲ.
ನು ಈಗಾಗಲೇ ಹೇಳಿರುವಂತೆ ಇಂತಹ ವಿಷಯಗಳಲ್ಲಿ ಪ್ರವಾದಿವರ್ಯರ(ಸ) ಅನುಮಾನವು
ಯಾಗದಿದ್ದರೆ ಅದರಿಂದ ಪ್ರವಾದಿಗಳ ದೋಷ ಮುಕ್ತತೆಗೇನೂ ಚ್ಯುತಿ ಬರುವುದಿಲ್ಲ.
ಂತಹ ವಿಷಯಗಳ ಮೇಲೆ ವಿಶ್ವಾಸವಿರಿಸಬೇಕೆಂದು ಶರೀಅತ್ ನಮಗೆ ಆದೇಶಿಸುವುದೂ
ಲ್ಲ. ಈ ಮೂಲಭೂತ ವಾಸ್ತವಿಕತೆಯನ್ನು ತೋಟದ ಬೆಳೆಯ ಕುರಿತು ಒಂದು
ದೀಸ್‌ನಲ್ಲಿ ಪ್ರವಾದಿವರ್ಯರೇ(ಸ) ಸ್ಪಷ್ಟಪಡಿಸಿದ್ದಾರೆ.

(ತರ್ಜುಮಾನುಲ್ ಕುರ್‌ಆನ್-ಫೆಬ್ರವರಿ1946)

7

ಲಂಚ ಮತ್ತು ಅನಿವಾರ್ಯತೆ

- *(1) ಅನಿವಾರ್ಯ ಪರಿಸ್ಥಿತಿಯೆಂದರೇನು? ಪರಿಸ್ಥಿತಿ ಮತ್ತು ಸನ್ನಿವೇಶಕ್ಕೆ ಅನುಗುಣವಾ ಅನಿವಾರ್ಯತೆಯ ವಿವಿಧ ಶ್ರೇಣಿಗಳಿವೆಯೇ?*

  (2) ಪ್ರಸಕ್ತ ಪರಿಸ್ಥಿತಿ ಮತ್ತು ಪ್ರಸಕ್ತ ಸನ್ನಿವೇಶದಲ್ಲಿ ಮುಸ್ಲಿಮರಿಗೆ ಯಾವುದಾದ ರೀತಿಯಲ್ಲಿ ಲಂಚವು ಧರ್ಮ ಸಮ್ಮತವಾಗುತ್ತದೆಯೇ?

  ಈ ಪ್ರಶ್ನೆಗೆ ಉತ್ತರ ನೀಡುತ್ತಾ ಲಂಚದ ಒಂದು ಸಮಗ್ರ ನಿರ್ವಚನವನ್ನು ನೀಡಿ ಅದರಿಂದ ಎಂತಹ ವ್ಯವಹಾರಗಳು ಲಂಚದ ಅರ್ಥ ವ್ಯಾಪ್ತಿಯಲ್ಲಿ ಬರುತ್ತದೆಂ ತಿಳಿಯಲು ಅನುಕೂಲವಾಗುವುದು.

○ ಒಬ್ಬ ವ್ಯಕ್ತಿಗೆ ಶರೀಅತ್ ನಿಗದಿ ಪಡಿಸಿದ ಮೇರೆಗಳ ಪೈಕಿ ಯಾವುದಾದರೊಂ ಮೇರೆಯಲ್ಲಿ ಸ್ಥಿರವಾಗಿರುವುದರಿಂದ ಸಹಿಸಲಸಾಧ್ಯವಾದ ನಷ್ಟ ಅಥವಾ ಸಂಕಷ್ಟ ಉಂಟಾದ ಅದನ್ನು ಅನಿವಾರ್ಯತೆ ಎನ್ನಲಾಗುತ್ತದೆ. ಈ ವಿಷಯದಲ್ಲಿ ವ್ಯಕ್ತಿ - ವ್ಯಕ್ತಿಗಳ ಸಹಿಷ್ಣು ಶಕ್ತಿಯ ಮಧ್ಯೆ ವ್ಯತ್ಯಾಸವಿದೆ. ಅದೇ ರೀತಿ ಪರಿಸ್ಥಿತಿ ಮತ್ತು ಸನ್ನಿವೇಶದ ದೃಷ್ಟಿಯಿಂದಲ ಬಹಳಷ್ಟು ವ್ಯತ್ಯಾಸವಿರಬಹುದು. ಆದ್ದರಿಂದ ಯಾರಿಗೆ ಯಾವ ಸಂದರ್ಭ ಮತ ಸನ್ನಿವೇಶದಲ್ಲಿ ಅನಿವಾರ್ಯತೆಯಿದೆ ಎಂಬುದನ್ನು ನಿರ್ಧರಿಸುವುದು ಆ ಸ್ಥಿತಿಯಲ್ಲಿರು ವ್ಯಕ್ತಿಯ ತೀರ್ಮಾನಕ್ಕೆ ಬಿಟ್ಟದ್ದಾಗಿದೆ. ಸ್ವತಃ ಅವನು ಅಲ್ಲಾಹನನ್ನು ಭಯ ಪಡುತ ಪರಲೋಕದ ವಿಚಾರಣೆಯ ಪ್ರಜ್ಞೆ ಇರಿಸಿಕೊಂಡು ಈ ತೀರ್ಮಾನ ಮಾಡಬೇಕು.

ಪ್ರಸಕ್ತ ಪರಿಸ್ಥಿತಿಯಲ್ಲಾಗಲೀ ಅಥವಾ ಇನ್ನಾವುದೇ ಪರಿಸ್ಥಿತಿಯಲ್ಲಾಗಲೀ ಲಂ ತೆಗೆದು ಕೊಳ್ಳುವುದು ನಿಷಿದ್ಧವೇ ಆಗಿದೆ. ಆದರೆ ಲಂಚ ಕೊಡುವ ವಿಷಯ ಅನಿವಾಯ ಪರಿಸ್ಥಿತಿಯಲ್ಲಿ ಧರ್ಮಸಮ್ಮತವಾಗಬಹುದು. ಒಬ್ಬ ವ್ಯಕ್ತಿಗೆ ಒಬ್ಬ ಅಕ್ರಮಿಯಿಂದ ತ ಧರ್ಮಬದ್ಧ ಹಕ್ಕು ಸಿಗದೇ ಇದ್ದರೆ ಮತ್ತು ಆ ಹಕ್ಕನ್ನು ಬಿಟ್ಟು ಬಿಡುವುದು ಅವನ ಪಾಲಿ ಸಹಿಸಲಸಾಧ್ಯವಾದ ನಷ್ಟವನ್ನುಂಟು ಮಾಡುವುದಿದ್ದರೆ ಹಾಗೂ ದೂರು ನೀಡಿ ತನ್ನ ಹಕ್ಕನ ಗಳಿಸಿಕೊಳ್ಳಲು ಸಾಧ್ಯವಾಗುವಂತಹ ಓರ್ವ ಸಮರ್ಥ ಅಧಿಕಾರಿಯೂ ಇಲ್ಲದಿದ್ದರೆ ಮಾ ಈ ಅನಿವಾರ್ಯತೆ ಉಂಟಾಗುತ್ತದೆ.

ಲಂಚದ ನಿರ್ವಚನವೇನೆಂದರೆ- 'ಒಬ್ಬನು ಯಾವುದಾದರೂ ಸೇವೆಗೆ ಸಂಬಳ ತೆಯುತ್ತಿದ್ದು ಅದೇ ಸೇವೆಯ ಬಗ್ಗೆ ಯಾರ ಸೇವೆಗಾಗಿ ಅವನು ನಿಯುಕ್ತನಾಗಿರುವನೋ ವರಿಂದ ಯಾವುದೇ ರೀತಿಯ ಪ್ರಯೋಜನ ಪಡೆಯುವುದು. ಅವರು ಆತನಿಗೆ ಸಂತೋಷ ಯೋಜನ ಉಂಟು ಮಾಡಿದರೂ ಅನಿವಾರ್ಯವಾಗಿ ಉಂಟುಮಾಡಿದರೂ ಸರಿಯೇ. ಧಿಕಾರಿಗಳು ಮತ್ತು ಸರಕಾರಿ ನೌಕರರು ತಮಗೆ ಸಿಗುವ ಪಾರಿತೋಷಕಗಳನ್ನು ಲಂಚದ ್ಯಾಪ್ತಿಯಿಂದ ಹೊರಗಿಡುವ ಪ್ರಯತ್ನ ಮಾಡುತ್ತಾರೆ. ಅದು ತಪ್ಪು. ಆ ಅಧಿಕಾರ ಅಥವಾ ಕರಿಯಲ್ಲಿ ಅವನು ಇಲ್ಲದಿರುತ್ತಿದ್ದರೆ ಅವನಿಗೆ ಸಿಗಲಾರದ ಯಾವುದೇ ಪಾರಿತೋಷಕವು ವನಿಗೆ ನಿಷಿದ್ಧವಾಗಿದೆ. ಕೇವಲ ವೈಯಕ್ತಿಕ ಸಂಬಂಧದ ಆಧಾರದಲ್ಲಿ ಏನಾದರೂ ರಿತೋಷಕ ಲಭಿಸಿದರೆ ಮತ್ತು ಅವನು ಯಾವುದೇ ಹುದ್ದೆಯಲ್ಲಿ ಇದ್ದರೂ ಇಲ್ಲದಿದ್ದರೂ ದು ಸಿಗಬಹುದಾಗಿದ್ದರೆ ಅಂತಹ ಪಾರಿತೋಷಕ ಖಂಡಿತ ಲಂಚದ ಅರ್ಥ ವ್ಯಾಪ್ತಿಯಲ್ಲಿ ರುವುದಿಲ್ಲ. *(ತರ್ಜುಮಾನುಲ್ ಕುರ್‌ಆನ್ ಜುಲೈ 1952)*

8

ಲಂಚ, ವಂಚನೆಗಳನ್ನು ಧರ್ಮ ಬದ್ಧಗೊಳಿಸುವ ನೆಪ

- *ಸರಕಾರಿ ನೌಕರರಿಗೆ ವ್ಯಾಪಾರಿಗಳು ಯಾವುದೇ ಅಪೇಕ್ಷೆ, ಒತ್ತಾಯ, ಬಲಾತ್ಕಾರಗಳಿಲ್ಲ ಕೊಡುವ ಕಾಣಿಕೆ-ಉಡುಗೊರೆಗಳನ್ನು ಆ ನೌಕರರು ಸಾಮಾನ್ಯವಾ ಧರ್ಮಸಮ್ಮತವೆಂದು ಬಗೆಯುತ್ತಾರೆ. ಅದು ಲಂಚದ ಅರ್ಥ ವ್ಯಾಪ್ತಿಯೀ ಬರುವುದಿಲ್ಲವೆಂದು ಅವರು ಹೇಳುತ್ತಾರೆ. ಆದ್ದರಿಂದ ಇದು ಧರ್ಮ ಸಮ್ಮತ ಆಗಿದೆ ಎಂಬುದು ಅವರ ಭಾವನೆ. ಇದೇ ರೀತಿ ಈ ಸರಕಾರಿ ನೌಕರರ ವಶದಲ್ಲಿರು ಸರಕಾರಿ ಸೊತ್ತು-ಸಂಪತ್ತುಗಳನ್ನು ತಮ್ಮ ವೈಯಕ್ತಿಕ ಅಗತ್ಯಗಳಿಗೆ ಬಳಸುವುದನ ಅವರು ಸಮರ್ಥಿಸುತ್ತಾರೆ. ನಾನು ನನ್ನ ಪರಿಚಿತರ ಬಳಗದಲ್ಲಿರುವ ಇಂತಹ ಜನರಿ ಬುದ್ಧಿವಾದ ಹೇಳಲು ಪ್ರಯತ್ನಿಸುತ್ತೇನೆ ಆದರೆ ನನ್ನ ಮಾತಿನಿಂದ ಅವರಿಗೆ ತೃಪ್ತಿ ಯಾಗುವುದಿಲ್ಲ.*

○ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಇನ್ನೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸೊತ್ತಿ ಒಡೆತನ ವರ್ಗಾವಣೆಯಾಗುವ ಧರ್ಮ ಸಮ್ಮತ ರೂಪಗಳು ಕೇವಲ ನಾಲ್ಕು ಆಗಿವೆ.

(1) ಮನಃಪೂರ್ವಕವಾಗಿ ನೀಡುವ ಉಡುಗೊರೆ.

(2) ಪರಸ್ಪರ ಸಂತೃಪ್ತಿಯೊಂದಿಗೆ ನಡೆಸುವ ಕ್ರಯ-ವಿಕ್ರಯ.

(3) ಯಾವುದೇ ಸೇವೆಗೆ ನೀಡುವ ಪ್ರತಿಫಲ

(4) ಕಾನೂನಿನ ಪ್ರಕಾರ ಒಬ್ಬನಿಂದ ಇನ್ನೊಬ್ಬನಿಗೆ ಸಿಗುವ ವಾರಸು ಹಕ್ಕು.

ಇವುಗಳ ಹೊರತು ಒಡೆತನ ವರ್ಗಾವಣೆಯ ಇತರ ಎಲ್ಲ ವಿಧಾನಗಳು ನಿಷಿದ್ಧವಾಗಿವೆ ಓರ್ವ ಸರಕಾರಿ ಅಧಿಕಾರಿ ಅಥವಾ ನೌಕರನು ಜನರಿಂದ ಪಡೆಯುವ ಹಣ ಅಥವಾ ಅವನ ಅವನಲ್ಲಿ ಸಾರ್ವಜನಿಕ ಕಾರ್ಯಗಳಿಗಾಗಿ ವಹಿಸಿಕೊಡಲಾಗಿರುವ ಸಾರ್ವಜನಿಕ ಸೊತ್ತಿನಿಂ ಪಡೆಯುವ ಉಪಯೋಗದ ನೈಜ ನೆಲೆ ಏನೆಂಬುದನ್ನು ನೋಡ ಬೇಕಾಗಿದೆ. ಅದು ಕ್ರಯ - ವಿಕ್ರಯ ಅಥವಾ ವಾರಸು ಹಕ್ಕಿನ ಅರ್ಥವ್ಯಾಪ್ತಿಯಲ್ಲಿ ಖಂಡಿತ ಬರುವುದಿಲ್ಲ. ಇನ್ನು ಅದು ಉಡುಗೊರೆಯಾಗಿದೆಯೇ ಎಂಬ ಪ್ರಶ್ನೆ. ಇದನ್ನು ನಿರ್ಧರಿಸಲು ಒಂದು ಪ್ರಶ್ನೆಯ ಉತ್ತರ ಸಾಕು. ಆ ಸರಕಾರಿ ನೌಕರ ಅಥವಾ ಅಧಿಕಾರಿಗೆ ಆತ ಆ ಹುದ್ದೆಯಲ್ಲಿಲ್ಲದಿದ್ದರೂ ಅಥವಾ ಅದರಿಂದ ನಿವೃತ್ತಿ ಹೊಂದಿದ್ದರೂ ಆ ಉಡುಗೊರೆ ಆತನಿಗೆ ಸಿಗುತ್ತಿತ್ತೇ? ಉತ್ತ ಇಲ್ಲವೆಂದಾದರೆ ಅದು ಉಡುಗೊರೆ ಖಂಡಿತ ಅಲ್ಲ. ಏಕೆಂದರೆ ಅದು ಬಂದುದ

ಯಾವುದೇ ವೈಯಕ್ತಿಕ ಸಂಬಂಧ, ಪ್ರೀತಿ ಅಥವಾ ಸಹಾನುಭೂತಿಯಿಂದಾಗಿ ಅಲ್ಲ, ದಲಾಗಿ ಅದು ಆ ಹುದ್ದೆಯ ಕಾರಣದಿಂದಾಗಿ ಬಂದಿದೆ. ಹಾಗಾದರೆ ಇದು ಓರ್ವ ೌಕರನು ತನ್ನ ಹುದ್ದೆಯ ಕಾರಣದಿಂದಾಗಿ ಮಾಡುವ ಸೇವೆಗೆ ಸಿಗುವ ಪ್ರತಿಫಲವೇ? ಾಸ್ತವದಲ್ಲಿ ಇದು ಪ್ರತಿಫಲವೂ ಅಲ್ಲವೆಂಬುದು ವ್ಯಕ್ತ. ಅವನ ಪ್ರತಿಫಲವು ಸಂಬಳ ುತ್ತು ಭತ್ತೆಗಳ ರೂಪದಲ್ಲಿ ಅವನಿಗೆ ಸಿಗುವಂತಹುದ್ದಾಗಿದೆ. ಅದರ ಹೊರತಾಗಿ ಓರ್ವ ರಕಾರಿ ನೌಕರನಿಗೆ ತನ್ನ ಕರ್ತವ್ಯ ನಿರ್ವಹಣೆಗಾಗಿ ಸಿಗುವುದೆಲ್ಲವೂ ವಂಚನೆಯಾಗಿದೆ. ವನು ಸಾರ್ವಜನಿಕ ಸೊತ್ತಿನಲ್ಲಿ ನಡೆಸುವ ವಂಚನೆ, ಅಥವಾ ಅದು ಅಕ್ರಮ ಸೇವೆಯ ಂಭಾವನೆಯಾಗಿದೆ. ಆ ಸೇವೆಯನ್ನು ಅವನು ಸರಕಾರಿ ನೌಕರಿಯ ನಿಯಮವನ್ನು ುಲ್ಲಂಘಿಸಿ ಮಾಡುತ್ತಾನೆ ಅಥವಾ ಅದು ಅವನ ಕ್ರಮ ಬದ್ಧವಾದ ಸೇವೆಯ ಅಕ್ರಮ ಂಭಾವನೆಯಾಗಿದೆ. ಏಕೆಂದರೆ ಸೇವಾ ನಿಯಮದಂತೆ ಅವನು ಮಾಡುವ ಸೇವೆಗೆ ಅವನು ರಕಾರದಿಂದ ಸಂಬಳ ಪಡೆದಿರುತ್ತಾನೆ. ಅದರ ಮೇಲೆ ಇತರರಿಂದ ಪ್ರತಿಫಲ ಪಡೆಯುವುದು ್ಪಷ್ಟವಾಗಿ ಧರ್ಮ ನಿಷಿದ್ಧವಾಗಿದೆ.

ಇದೊಂದು ವೈಚಾರಿಕ ಚರ್ಚೆಯಾಯಿತು. ಈಗ ಈ ಕುರಿತು ಶರೀಅತ್ ನಿಯಮಗಳು ೇನು ಹೇಳುತ್ತವೆಂಬುದನ್ನು ನೋಡೋಣ:

ಅಬೂ ಹುಮೈದ್ ಸಾಇದಿ(ರ) ವರದಿ ಮಾಡಿರುತ್ತಾರೆ- ಪ್ರವಾದಿ(ಸ) ಹೇಳಿದರು: ಸರಕಾರಿ ನೌಕರರು ಸ್ವೀಕರಿಸುವ ಉಡುಗೊರೆಯು ವಂಚನೆಯಾಗಿದೆ."

(ಮುಸ್ನದ್ ಅಹ್ಮದ್)

ಅಬೂ ಹುಮೈದ್ ಸಾಇದಿ(ರ) ವರದಿ ಮಾಡಿರುತ್ತಾರೆ- ಇಬ್ನು ಉಥೈನಾ ಎಂಬ ಓರ್ವ ವ್ಯಕ್ತಿಯನ್ನು ಪ್ರವಾದಿ(ಸ) ಅಝ್ದ್ ಎಂಬ ಗೋತ್ರಕ್ಕೆ ಕಂದಾಯ ವಸೂಲಿಗಾಗಿ ೇಮಿಸಿ ಕಳುಹಿಸಿದರು. ಅವರು ಅಲ್ಲಿಂದ ಸರಕಾರಿ ಸೊತ್ತಿನೊಂದಿಗೆ ಹಿಂದಿರುಗಿ, ಅದನ್ನು ಸರಕಾರಿ ಬೊಕ್ಕಸಕ್ಕೆ ಸೇರಿಸುವಾಗ "ಇದು ಸರಕಾರಿ ಸೊತ್ತು ಮತ್ತು ಇದು ನನಗೆ ಉಡುಗೊರೆಯಾಗಿ ನೀಡಲ್ಪಟ್ಟದ್ದು" ಎನ್ನುತ್ತಾರೆ. ಆಗ ಪ್ರವಾದಿ(ಸ) ಒಂದು ಪ್ರವಚನ ನೀಡಿದರು. ಅದರಲ್ಲಿ ಅಲ್ಲಾಹನಿಗೆ ಸ್ತುತಿ-ಸ್ತೋತ್ರಗಳನ್ನು ಸಲ್ಲಿಸಿದ ಬಳಿಕ ಈ ರೀತಿ ಹೇಳಿದರು: "ಅಲ್ಲಾಹನು ನನಗೆ ನೀಡಿರುವ ಆಡಳಿತದ ಕಾರ್ಯದಲ್ಲಿ ನಾನು ನಿಮ್ಮಲ್ಲಿ ಒಬ್ಬನನ್ನು ಕಂದಾಯ ವಸೂಲಿಗಾಗಿ ರವಾನಿಸುತ್ತೇನೆ. ಅವನು ಬಂದು ಹೇಳುತ್ತಾನೆ 'ಇದು ಸರಕಾರಿ ಸೊತ್ತು ಮತ್ತು ಇದು ನನಗೆ ಉಡುಗೊರೆಯಾಗಿ ನೀಡಲ್ಪಡಟ್ಟದ್ದು.' ಜನರು ಅವನಿಗೆ ಉಡುಗೊರೆ ನೀಡುವುದು ಸತ್ಯವೆಂದಾದರೆ ಅವನು ತನ್ನ ತಂದೆ-ತಾಯಿಯ ಮನೆಯಲ್ಲಿ ಏಕೆ ಕುಳಿತಿರಲಿಲ್ಲ. ಅವನಿಗೆ ಅವನ ಉಡುಗೊರೆ ಅಲ್ಲಿಗೇ ತಲುಪುತ್ತಿರಲಿಲ್ಲವೇ?

(ಬುಖಾರಿ, ಮುಸ್ಲಿಮ್, ಅಬೂ ದಾವೂದ್)

ಬುರೈದಾ(ರ) ಅವರಿಂದ ವರದಿಯಾಗಿದೆ- ಪ್ರವಾದಿ(ಸ) ಹೇಳಿದರು: "ಒಬ್ಬನ ನಾವು ಸಂಬಳ ಕೊಟ್ಟು ಒಂದು ಸರಕಾರಿ ಸೇವೆಯಲ್ಲಿ ನೇಮಿಸಿದ ನಂತರ ಅವನು ಸಂಬಳದ ಹೊರತಾಗಿ ಏನನ್ನಾದರೂ ಪಡೆದರೆ ಅದು ವಂಚನೆಯಾಗಿದೆ."*(ಅಬೂ ದಾವೂ*

ರವೀಫಲ್‌ಬಿನ್ ಸಾಬಿತ್ ಅನ್ಸಾರಿ(ರ) ಅವರಿಂದ ವರದಿಯಾಗಿದೆ- ಪ್ರವಾದಿ(ಹೇಳಿದರು- "ಯಾರು ಅಲ್ಲಾಹನ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸ ವಿರಿಸುತ್ತಾನೆ ಅವನು ಸಾರ್ವಜನಿಕ ಸೊತ್ತಿನಿಂದ ಒಂದು ಜಾನುವಾರನ್ನು ವಾಹನಕ್ಕಾಗಿ ಪಡೆದು ಅ ನಿರುಪಯುಕ್ತವಾದಾಗ ಅದನ್ನು ಸರಕಾರಿ ದೊಡ್ಡಿಯಲ್ಲಿ ಸೇರಿಸದಿರಲಿ. ಮತ್ತು ಯಾ ಅಲ್ಲಾಹನ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸ ವಿರಿಸುತ್ತಾನೋ ಅವನು ಸಾರ್ವಜ ಸೊತ್ತಿನಿಂದ ಒಂದು ಉಡುಪನ್ನು ಪಡೆದು ಅದು ಹಳತಾದಾಗ ಅದನ್ನು ಸರಕಾರಿ ಬೊಕ್ಕಸ ಮರಳಿಸದಿರಲಿ." *(ಅಬೂ ದಾವೂ*

ಅಬ್ದುಲ್ಲಾ ಬಿನ್ ಉಮರ್(ರ) ಅವರಿಂದ ವರದಿಯಾಗಿದೆ- ಅಲ್ಲಾಹ ಸಂದೇಶವಾಹಕರು ಲಂಚ ಕೊಡುವವನನ್ನೂ ಲಂಚ ಪಡೆಯುವವನನ್ನೂ ಶಪಿಸಿರುವರ *(ಅಬೂ ದಾವೂ*

ಅದೀಬಿನ್ ಉಮ್ಮೈರ ಅಲ್‌ಕಿಂದಿ(ರ) ಅವರಿಂದ ವರದಿಯಾಗಿದೆ- ಪ್ರವಾದಿ(ಹೇಳಿದರು- "ಜನರೇ! ಒಬ್ಬನು ನಮ್ಮ ಸರಕಾರದ ಯಾವುದೇ ಸೇವೆಯಲ್ಲಿ ನೇಮಕಗೊಂಡಿ ಅವನು ಒಂದು ನೂಲು ಅಥವಾ ಅದಕ್ಕಿಂತಲೂ ಕ್ಷುಲ್ಲಕವಾದ ವಸ್ತುವನ್ನು ನಮಗೆ ಅರ್ಪ ಉಪಯೋಗಿಸಿದರೆ ಅದು ವಂಚನೆಯಾಗಿದೆ. ಅದರ ಭಾರವನ್ನು ಹೊತ್ತು ಅವನು ಅಂತಿ ದಿನವಂದು ಹಾಜರಾಗುವನು." *(ಅಬೂ ದಾವೂದ*

ಈ ವಿಷಯದಲ್ಲಿರುವ ಪ್ರವಾದಿ ವಚನಗಳಿವು. ಇವುಗಳ ತಾತ್ಪರ್ಯ ಸ್ಪಷ್ಟವಿ ಅದಕ್ಕೆ ಯಾವುದೇ ವಿವರಣೆಯ ಅಗತ್ಯವಿಲ್ಲ. ತಮ್ಮ ನಿಷಿದ್ಧ ಸಂಪಾದನೆಗಾಗಿ ನೆಪಗಳನ ಮುಂದೊಡ್ಡುವವರು ಮತ್ತು ತಮ್ಮ ವಾಕ್ಚಾತುರ್ಯದಿಂದ ಹರಾಮನ್ನು ಹಲಾ ಗೊಳಿಸುವವರಿಗೆ ನೀವು ಹೇಳಿಬಿಡಿ- ನೀವು ಹರಾಮ್ ತಿನ್ನುವುದಾದರೆ ಕನಿಷ್ಠ ಪಕ್ಷ ಅದನ ಹರಾಮ್ ಎಂದಾದರೂ ಒಪ್ಪಿಕೊಳ್ಳಿ. ಹಾಗಾದರೆ ಎಂದಾದರೂ ಅಲ್ಲಾಹನು ನಿಮ ಅದರಿಂದ ದೂರವಾಗುವ ಸೌಭಾಗ್ಯ ಒದಗಿಸುವನು. ಹರಾಮನ್ನು ಹಲಾಲ್ ಮಾ ತಿನ್ನುತ್ತಿದ್ದರೆ ನಿಮ್ಮ ಆತ್ಮಸಾಕ್ಷಿ ಸತ್ತು ಹೋದೀತು. ಅನಂತರ ಅದನ್ನು ತೊರೆಯು ಬಯಕೆಯೇ ನಿಮ್ಮ ಮನಸ್ಸಿನಲ್ಲಿ ಉಂಟಾಗಲಿಕ್ಕಿಲ್ಲ. ವಾಸ್ತವಿಕತೆಯು ನೀ ಮಾರ್ಪಡಿಸುವುದರಿಂದ ಮಾರ್ಪಡುವುದಿಲ್ಲ. ಹರಾಮ್ ಎಂದೆಂದಿಗೂ ಹರಾಮ್ ಆಗಿ ನೀವು ಅದನ್ನು ಹಲಾಲ್‌ಗೊಳಿಸಲು ಎಷ್ಟು ಶ್ರಮಿಸಿದರೂ ಸರಿಯೆ. ಇದು ನಿಮ ಅಲ್ಲಾಹನ ಮುಂದೆ ವಿಚಾರಣೆಗೆ ನಿಂತಾಗ ಮನವರಿಕೆಯಾಗುವುದು.

ಅಲ್ಲಾಹ್, ಪರಲೋಕ, ವಿಚಾರಣೆ, ಶಿಕ್ಷೆ-ಪುರಸ್ಕಾರ ಇತ್ಯಾದಿಗಳೆಲ್ಲವೂ ನಿಮ್ಮ ೞಟ್ಟಿಗೆ ಕೇವಲ ಕಟ್ಟು ಕಥೆಯಾಗಿದ್ದರೆ ಹರಾಮ್-ಹಲಾಲ್‌ನ ಚರ್ಚೆಯೇ ನಿರರ್ಥಕ. ಃನುವಾರುಗಳಂತೆ ಯಾವ ಹೊಲದಲ್ಲಿ ಹಸಿರು ಹುಲ್ಲು ಕಾಣಿಸುತ್ತದೋ ಅದಕ್ಕೆ ನುಗ್ಗಿರಿ. ಷಿದ್ಧ-ಧರ್ಮಬದ್ಧ ಎಂಬ ಚರ್ಚೆಯಿಲ್ಲದೆಯೇ ಅದನ್ನು ಯಥೇಷ್ಟ ತಿನ್ನಿರಿ. ಆದರೆ ನಿಮಗೆ ಲ್ಲಾಹನ ಮೇಲೆ ವಿಶ್ವಾಸವಿದ್ದರೆ, ಅವನ ಮುಂದೆ ವಿಚಾರಣೆಗೊಳಗಾಗಲಿದೆಯೆಂಬ ಂಬಿಕೆಯಿದ್ದರೆ ನೀವು ಯಾರಿಗಾಗಿ ಈ ರೀತಿಯ ನಿಷಿದ್ಧ ಸಂಪಾದನೆ ಮಾಡುತ್ತಿರುವಿರಿ ಂಬುದನ್ನು ಯೋಚಿಸಿ ನೋಡಿ. ನಿಮ್ಮ ದೇಹದ ಪೋಷಣೆಗಾಗಿಯೇ? ಆದರೆ ಈ ದೇಹವು ಮ್ಮ ಈ ಸೇವೆಗಾಗಿ ನಿಮಗೆ ಋಣಿ ಯಾಗಿರಲಾರದು. ಬದಲಾಗಿ ನಿಮ್ಮ ವಿರುದ್ಧ ಲ್ಲಾಹನಲ್ಲಿ ದಾವೆ ಹೂಡುವುದು-ನೀನು ನಮ್ಮನ್ನು ಎಂತಹ ಅಕ್ರಮಿಯ ವಶಕ್ಕೆ ಪ್ಪಿಸಿದೆ? ಅವನು ನನ್ನನ್ನು ನಿಷಿದ್ಧ ಸಂಪಾದನೆ ತಿನ್ನಿಸಿ ಪೋಷಿಸುತ್ತಿದ್ದನು. ನೀವು ಅದನ್ನು ಮ್ಮ ಮಡದಿ-ಮಕ್ಕಳಿಗಾಗಿ ಮಾಡುತ್ತಿರುವಿರಾ? ಆದರೆ ಅವರೂ ಅಂತಿಮ ದಿನದಂದು ಮ್ಮ ಶತ್ರುಗಳಾಗುವರು. ಈ ಅಕ್ರಮಿಯು ತಾನೂ ಕೆಟ್ಟ ಮತ್ತು ನಮ್ಮನ್ನೂ ಕೆಡಿಸಿದ ಂದು ನಿಮ್ಮ ಮೇಲೆ ಆರೋಪ ಹೊರಿಸುವರು. ಈ ರೀತಿ ನೀವು ನಿಮ್ಮನ್ನು ಅಲ್ಲಾಹನ ಕ್ಷೆಯ ಅಪಾಯಕ್ಕೆ ಯಾಕೆ ಸಿಲುಕಿಸುತ್ತೀರಿ? ನಿಮ್ಮ ಈ ಅಕ್ರಮ ಸೇವೆಗಾಗಿ ಯಾರು ಮಗೆ ಋಣಿಯಾಗಿರುವರು? ಈ ಅನ್ಯಾಯಕ್ಕೆ ಪ್ರತಿಫಲ ದೊರೆತೀತೆಂದು ಯಾರಿಂದ ೀಕ್ಷಿಸುತ್ತೀರಿ? ನೀವು ಯಾವ ಇಸ್ಲಾಮೇತರ ಸರಕಾರದ ಒಂದು ಭಾಗವೆಂಬಂತೆ ಕೆಲಸ ಾಡುತ್ತಿರುವಿರೋ ಅದು ಸ್ವಯಂ ಹೊಲಸಾಗಿದೆ. ಅದು ಹಂದಿಯ ದೇಹ ರಚನೆಯಂತಿದೆ. ನರ ನರನಾಡಿಗಳಲ್ಲಿ ಹರಾಮ್ ಸೇರಿಕೊಂಡಿದೆ. ಅದರ ಸೇವಕರಾಗಿ ನೀವು ಮೊದಲೇ ಾಡ್ಡ ಪಾಪ ಕಾರ್ಯ ಮಾಡುತ್ತಿರುವಿರಿ. ಇನ್ನು ವಂಚನೆ, ಲಂಚ ಮತ್ತು ಅಕ್ರಮ ಾನಗಳನ್ನು ಬಳಸಿ ನಿಮ್ಮನ್ನು ಇನ್ನಷ್ಟು ಅಪಾಯಕ್ಕೆ ಯಾಕೆ ಸಿಲುಕಿಸುತ್ತೀರಿ? ಮರಣ ರಲಿಕ್ಕೇ ಇಲ್ಲವೇ? ಅಥವಾ ಬಂದ ನಂತರ ಅಲ್ಲಾಹನ ಹಿಡಿತದಿಂದ ತಪ್ಪಿಸಿಕೊಳ್ಳಲು ವು ಯಾವುದಾದರೂ ಆಶ್ರಯಧಾಮವನ್ನು ಕಂಡು ಹುಡುಕಿರುವಿರಾ?

(ತರ್ಜುಮಾನುಲ್ ಕುರ್‌ಆನ್ ಸೆಪ್ಟೆಂಬರ್ - ಅಕ್ಟೋಬರ್-1943)

⑨

ನಿಷಿದ್ಧ ಸಂಪಾದನೆ ಮಾಡುವವನೊಂದಿಗೆ ಆರ್ಥಿಕ ಸಂಬಂಧದ ಮೇರೆಗಳು

● *1. ಪಾಲುದಾರಿಕೆಯ ವ್ಯಾಪಾರದಲ್ಲಿ ಸಜ್ಜನರು ಮತ್ತು ದುಷ್ಟರು ಜತೆಗಿದ್ದ ದುಷ್ಟರು ಶರಾಬು ವ್ಯಾಪಾರ, ಬಡ್ಡಿಕೋರತನ ಇತ್ಯಾದಿಗಳಲ್ಲಿ ಶಾಮೀಲಾಗಿದ್ದ ಅಂತಹ ವ್ಯಾಪಾರದಲ್ಲಿ ಪಾಲ್ಗೊಳ್ಳಬಹುದೇ?*

2. ನಿಷಿದ್ಧ ಸಂಪಾದನೆ ಮಾಡುವವನಿಂದ ಸಾಲ ಪಡೆದು ವ್ಯಾಪಾರ ಮಾಡಬಹುದ

3. ನಿಷಿದ್ಧ ಸಂಪಾದನೆ ಮಾಡುವವನ ಬಳಿ ನೌಕರನಾಗುವುದು ಅಥವಾ ಅ ಮನೆಯಲ್ಲಿ ತಿನ್ನುವುದು ಧರ್ಮಸಮ್ಮತವೇ?

○ 1. ವ್ಯಾಪಾರವು ಧರ್ಮಸಮ್ಮತವಾಗಿದ್ದು ಧರ್ಮಸಮ್ಮತ ರೀತಿಯಲ್ಲೇ ಅದ ಮಾಡುವುದಾದರೆ ಅದರಲ್ಲಿ ಓರ್ವ ಧರ್ಮನಿಷ್ಠ ವ್ಯಕ್ತಿಯ ಪಾಲ್ಗೊಳ್ಳುವಿಕೆಯು - ಅ ಇತರ ಪಾಲುದಾರರು ನಿಷಿದ್ಧ ಮಾರ್ಗದಿಂದ ಸಂಪಾದಿಸಿರುವವರು ಎಂಬ ಕಾರಣ ನಿಷಿದ್ಧವೆನಿಸಲಾರದು. ನಿಮ್ಮ ಬಂಡವಾಳವು ಧರ್ಮಸಮ್ಮತವಾಗಿದ್ದರೆ ಹಾಗೂ ಧರ್ಮಸಮ ರೀತಿಯಲ್ಲೇ ವ್ಯಾಪಾರ ಮಾಡಲಾಗುತ್ತಿದ್ದರೆ ನಿಮ್ಮ ಬಂಡವಾಳಕ್ಕೆ ನಿಮಗೆ ಸಿಗುವ ಲಾಭ ನಿಮ್ಮ ಪಾಲಿಗೆ ಧರ್ಮಸಮ್ಮತವೆನಿಸುವುದು.

2. ನಿಷಿದ್ಧ ಸಂಪಾದನೆ ಮಾಡುವವನಿಂದ ಸಾಲ ಪಡೆದು ಕೆಲಸ ಮಾಡುವುದರ ಆಕ್ಷೇಪಾರ್ಹವಾದುದೇನೂ ಇಲ್ಲ. ಅವನ ಬಳಿ ಇರುವ ಹಣವು ನಿಷಿದ್ಧ ಸಂಪಾದನೆಯಿ ಬಂದುದಾಗಿದ್ದರೂ ಅದು ನಿಮಗೆ ಧರ್ಮಸಮ್ಮತ ಮಾರ್ಗದಿಂದಲೇ ತಲುಪುತ್ತದೆ.

3. ನಿಷಿದ್ಧ ಸಂಪಾದನೆ ಮಾಡುವವರಲ್ಲಿ ಎರಡು ವಿಧಗಳಿವೆ. ಒಂದನೆಯ ಅಶ್ಲೀಲ ಸಂಪಾದನೆಯ ಅರ್ಥವ್ಯಾಪ್ತಿಯಲ್ಲಿ ಬರುವಂತಹದ್ದು. ಉದಾ: ವೇಶ್ಯಾವಾಟಿಕೆ ದಂಧೆ. ಅವನ ಬಳಿ ನೌಕರಿ ಮಾಡುವುದಂತಿರಲಿ. ಅವನ ಬಳಿ ಸುಳಿಯುವುದು ಕೂ ಧರ್ಮಸಮ್ಮತವಲ್ಲ. ಎರಡನೆಯ ವಿಧದ ನಿಷಿದ್ಧ ಸಂಪಾದನೆ ಮಾಡುವವನ ಸಂಪಾದನೆ ನಿಷಿದ್ಧವಾಗಿದ್ದರೂ ಅದು ಅಶ್ಲೀಲತೆಯ ಅರ್ಥವ್ಯಾಪ್ತಿಯಲ್ಲಿ ಬರುವುದಿಲ್ಲ. ಉ

ಕೀಲರು ಅಥವಾ ಬಡ್ಡಿಯ ಮೂಲದಿಂದ ಸಂಪಾದಿಸುವವರು. ಅಂಥವನ ಬಳಿ ನೌಕರಿ ಾಡುವಾಗ ನೌಕರನಿಗೂ ನಿಷಿದ್ಧ ಕೆಲಸ ಮಾಡಬೇಕಾಗಿ ಬಂದರೆ ಅದು ನಿಷಿದ್ಧವಾಗಿದೆ. ುದಾ: ಬಡ್ಡಿಕೋರನಿಗೆ ಬಡ್ಡಿಯ ಹಣವನ್ನು ತಂದುಕೊಡುವ ಕೆಲಸ, ವಕೀಲರಲ್ಲಿ ುಮಾಸ್ತನ ಕೆಲಸ. ಆದರೆ ಅವರ ಬಳಿ ಧರ್ಮಸಮ್ಮತವಾದ ನೌಕರಿ ಮಾಡಬಹುದಾಗಿದೆ. ುದಾ: ಅವರಿಗೆ ಊಟ ತಯಾರಿಸಿ ಕೊಡುವ ಕೆಲಸ, ಡ್ರೈವರ್‌ನ ಕೆಲಸ, ಮನೆ ನಿರ್ಮಾಣದ ೂಲಿ ಕೆಲಸ. ಇನ್ನು ಅವನ ಆತಿಥ್ಯದ ವಿಷಯ: ಅವನ ಬಳಿ ತಿನ್ನದೆ ಇರುವುದೇ ಉತ್ತಮ.

(ತರ್ಜುಮಾನುಲ್ ಖುರ್‌ಆನ್, ಜನವರಿ 1944)

10

ತಂದೆ-ತಾಯಿಗಳ ಸಂಶಯಾಸ್ಪದ ಸೊತ್ತು ಮತ್ತು ಸಂಪಾದನೆಯ ಉಪಯೋಗ

● *ನಾನು ಸ್ವಲ್ಪ ಸಮಯದಿಂದ ಜಮಾಅತೆ ಇಸ್ಲಾಮಿಯ ಸದಸ್ಯತ್ವ ಸಿದ್ಧಗೊಳ್ಳುತ್ತಿರುವೆನು. ಆದರೆ ನಿಷಿದ್ಧ ಜೀವನೋಪಾಯದಿಂದ ನನ್ನನ್ನು ರಕ್ಷಿಸು ಮತ್ತು ಅಪ್ಪಟ ಧರ್ಮಸಮ್ಮತ ವಿಧಾನಗಳಿಂದ ನನ್ನ ಜೀವನೋಪಾಯವ ಗಳಿಸುವಲ್ಲಿ ಈ ತನಕ ಯಶಸ್ವಿಯಾಗಿಲ್ಲ. ಜಮೀನ್ದಾರಿಕೆಯು ನಮ್ಮ ಕುಲಕಸುಬಾ ಅನೇಕ ಕಾಲದಿಂದ ನಮ್ಮ ಜಮೀನುಗಳು ಶರೀಅತ್ ವಿಧಿಯಂತೆ ವಾರಸುದಾರ ಪಾಲಾಗಿಲ್ಲ. ಶರೀಅತ್‌ಗೆ ಅನುಗುಣವಾದ ಅದರಲ್ಲಿರುವ ಹಕ್ಕುಗಳ ತೀರಿಸಲಾಗಿಲ್ಲ. ನಾನು ಅನಿವಾರ್ಯವಾಗಿ ತಂದೆ-ತಾಯಿಗಳಿಂದ ನನ್ನ ಖರ್ಚಿಗೆ ಪಡೆಯುತ್ತಿದ್ದೇನೆ. ಅದನ್ನು ಪಡೆಯುವುದು ಮತ್ತು ಉಪಯೋಗಿಸುವ ಧರ್ಮಸಮ್ಮತವೇ? ಮುಂದೆ ನನಗೆ ಅವರಿಂದ ಸಿಗಬಹುದಾದ ಆಸ್ತಿಯ ಪಾ ಪಡಕೊಳ್ಳಬಹುದೇ?*

○ ಇಸ್ಲಾಮೇತರ ಆರ್ಥಿಕ ವ್ಯವಸ್ಥೆಯಿಂದ ಹುಟ್ಟಿ ಒಬ್ಬರಿಂದೊಬ್ಬ ಇಸ್ಲಾಮೇತರ ವಿಧಾನಗಳಿಂದ ವರ್ಗವಾಗುತ್ತಲಿದ್ದ ಅಜ್ಞಾನ ಕಾಲದ ಎಲ್ಲ ಸೊತ್ತು ತಾತ್ವಿಕ ನೆಲೆಯಲ್ಲಿ ಸಂಶಯಾಸ್ಪದ ಮತ್ತು ತಪ್ಪಾಗಿರುತ್ತದೆ. ಆದರೆ ಮುಸ್ಲಿಮರಿಗೆ ಅ ಪೂರ್ವಜರಿಂದ ವಾರಸಿನಲ್ಲಿ ಸಿಗುವ ಇಂತಹ ಸೊತ್ತನ್ನು ತೊರೆಯಲು ಆಜ್ಞಾಪಿಸಲಾಗಿ ಅಂತೆಯೇ ಯಾರದಾದರೂ ಸೊತ್ತನ್ನು ತೆಗೆದುಕೊಳ್ಳುವಾಗ ಅದರ ಮೂಲವ ಶೋಧಿಸಬೇಕೆಂದೂ ಅವರಿಗೆ ಆಜ್ಞಾಪಿಸಲಾಗಿಲ್ಲ. ಅವರಿಗೆ ಆಜ್ಞಾಪಿಸಲಾಗಿರುವುದು ಕೇ ಇಷ್ಟೇ. ನೀವು ಇಸ್ಲಾಮನ್ನು ನಿಮ್ಮ ಜೀವನ ನಿಯಮವಾಗಿ ಸ್ವೀಕರಿಸಿದಂದಿನಿಂದ ಯ ಸೊತ್ತೂ ಧರ್ಮನಿಷಿದ್ಧ ಮಾರ್ಗದಿಂದ ನಿಮ್ಮ ಬಳಿಗೆ ಬರಬಾರದು. ಅಂತೆಯೇ ನಿ ಮಾರ್ಗದಲ್ಲಿ ಅದು ವ್ಯಯವಾಗಬಾರದು. ಇನ್ನು ಮುಂದೆ ನೀವು ಅದ ಧರ್ಮಸಮ್ಮತವಾಗಿಯೇ ವ್ಯವಹರಿಸಬೇಕು. ಇನ್ನು ಉಳಿದುರುವುದು ಹಿಂದಿನ ಹಕ್ಕುದ ವಿಷಯ. ಒಂದು ವೇಳೆ ಅವರು ಜೀವಂತವಿದ್ದರೆ ಹಾಗೂ ಅವರ ಪಾಲು ಕೂಡಾ ನಿಶ್ಚಿತ ತಿಳಿದಿದ್ದರೆ ಅವರ ಹಕ್ಕನ್ನು ಅವರಿಗೆ ಸಂದಾಯ ಮಾಡಬೇಕು. ಅನ್ಯಥಾ ಅಂತಹ ಸೊತ್ತ ನಿಮ್ಮ ವಶದಲ್ಲಿರಿಸಿಕೊಂಡು ಮುಂದೆ ಅದರಲ್ಲಿ ಯಾರ ಹಕ್ಕು ಉಂಟಾಗುತ್ತದೋ ಅ ಅದನ್ನು ಕೊಡಬೇಕು. *(ತರ್ಜುಮಾನುಲ್ ಕುರ್‌ಆನ್ : ಜನವರಿ- 1*

11

ಇಸ್ಲಾಮೇತರ ವ್ಯವಸ್ಥೆಯಲ್ಲಿ ಬಡ್ಡಿಯ ವಿಧಿ

ಒಂದು ವಿಶ್ವವಿದ್ಯಾಲಯದಲ್ಲಿ ಧರ್ಮಶಾಸ್ತ್ರದ ಪ್ರೊಫೆಸರ್ ಆಗಿರುವ ಓರ್ವ ಧರ್ಮಿಷ್ಠ ವ್ಯಕ್ತಿಯು ತಮ್ಮ ಒಂದು ಲೇಖನದಲ್ಲಿ ಹೀಗೆ ಬರೆದಿರುವರು:

"ಸರಕಾರಕ್ಕೆ ತೆರಿಗೆ ಅಥವಾ ಕಂದಾಯ ನೀಡುವ ವ್ಯಾಪಾರಿಗಳು ಮತ್ತು ಜಮೀನ್ದಾರರು ಅಂಚೆ ಕಛೇರಿ ಅಥವಾ ಇಂಪೀರಿಯಲ್ ಬ್ಯಾಂಕ್[1] ನಲ್ಲಿ ಠೇವಣಿಯಿಟ್ಟು ಸರಕಾರದಿಂದ ಬಡ್ಡಿ ಪಡೆಯುವುದಾದರೆ ಆ ತೆರಿಗೆ ಅಥವಾ ಕಂದಾಯದಷ್ಟು ಬಡ್ಡಿ ಪಡೆಯುವುದು ಧರ್ಮ ಸಮ್ಮತವಾಗಿದೆ."

ಇನ್ನೊಬ್ಬ ಪ್ರಖ್ಯಾತ ಧಾರ್ಮಿಕ ವಿದ್ವಾಂಸರು ಅದಕ್ಕಿಂತಲೂ ಒಂದು ಹೆಜ್ಜೆ ಮುಂದುವರಿದು ಈ ರೀತಿ ಹೇಳಿರುವರು:

'ಹರಬೀ'[2]ಯ ಸೊತ್ತು ಧರ್ಮಸಮ್ಮತವಲ್ಲವೆಂದಾದರೆ ಅದನ್ನು ಯಾರಾದರೂ ಕುರ್‌ಆನ್, ಹದೀಸ್, ಇಜ್ಮಾಅ್[3], ಕಿಯಾಸ್[4] - ಒಟ್ಟಿನಲ್ಲಿ ಯಾವುದೇ 'ಶರಈ' (ಧರ್ಮಶಾಸ್ತ್ರೀಯ) ಪ್ರಮಾಣದಿಂದ ಸಾಬೀತುಗೊಳಿಸಲಿ. ಧಾರ್ಮಿಕ ವಿದ್ವಾಂಸರು ಈ ಅಮೂಲ್ಯ ದೃಷ್ಟಿಕೋನದ ಕುರಿತು ಶಾಂತಚಿತ್ತರಾಗಿ ವಿಚಾರ ಮಾಡಲಿಲ್ಲ. ಕಳೆದ ಒಂದೂವರೆ ಶತಮಾನದಿಂದ ಮುಸ್ಲಿಮರು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ್ದಾರೆ. ಅವರಿಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ದೇಶದ ಒಂದು ವರ್ಗವು ಬಡ್ಡಿ ಪಡೆಯುತ್ತಲೂ ಇನ್ನೊಂದು ವರ್ಗ ಬಡ್ಡಿ ಕೊಡುತ್ತಲೂ ಇತ್ತು. ಇದರಿಂದ ದೇಶದಲ್ಲಿ ಉಂಟಾಗಿರುವ ಆರ್ಥಿಕ ಅಸಮಾನತೆಯ ಹೊಣೆ ಇಸ್ಲಾಮ್‌ನ ಮೇಲಿಲ್ಲ. ಬದಲಾಗಿ ಅದು ಹೆಚ್ಚಿನಂಶ ವಿದ್ವಾಂಸರ ಮೇಲಿದೆ. ಏಕೆಂದರೆ ಅವರ ಆರ್ಥಿಕ ವ್ಯವಸ್ಥೆಯಲ್ಲಿ ಈ ಪರಿಸ್ಥಿತಿಯ ಪರಿಹಾರೋಪಾಯವಿತ್ತು. ಆದರೆ ಅವರು ಅದರ ಒಂದು ಅಂಶವನ್ನು ಸ್ವೀಕರಿಸಿ ಇನ್ನೊಂದಂಶವನ್ನು ತೊರೆದರು."

ಮಾನ್ಯ ಉಲಮಾಗಳ ಈ ಚರ್ಚೆಯಿಂದಾಗಿ ಬಡ್ಡಿಯಿಂದ ದೂರ ಉಳಿಯುವ ಯಾವ ನೀತಿಯನ್ನು ನಾವು ಈ ತನಕ ಅನುಸರಿಸುತ್ತಾ ಬಂದಿದ್ದೇವೋ ಅದು ಸರಿಯೋ

---

1. ಅಂದಿನ ಸರಕಾರೀ ಬ್ಯಾಂಕ್
2. ಇಸ್ಲಾಮೀ ರಾಷ್ಟ್ರದೊಂದಿಗೆ ಯುದ್ಧ ನಿರತ ಮುಸ್ಲಿಮೇತರ ರಾಷ್ಟ್ರ
3. ಸಮುದಾಯದ ಒಮ್ಮತಾಭಿಪ್ರಾಯ
4. ವಿದ್ವಾಂಸರ ಸಂಶೋಧನೆಯಿಂದ ದೃಢವಾದ ವಿಷಯ.

ತಪ್ಪೋ ಎಂಬ ಗೊಂದಲದಲ್ಲಿ ಬಿದ್ದಿದ್ದೇವೆ. ಒಂದೆಡೆ ನಾವು ಪರಲೋ ಪ್ರತಿಫಲದ ನಿರೀಕ್ಷೆಯಲ್ಲಿ ಇಹಲೋಕದಲ್ಲಿ ನಷ್ಟ ಅನುಭವಿಸುತ್ತಿದ್ದೇವೆ. ಇನ್ನೊಂ ಪರಲೋಕಕ್ಕೆ ತಲುಪಿದಾಗ ನೀವು ಬಡ್ಡಿಯನ್ನು ತೊರೆದುದು ಇಸ್ಲಾಮ್‌ನ ಯಾವ ವಿಧಿಯ ಪ್ರಕಾರ ಅಲ್ಲ. ಆದ್ದರಿಂದ ಅದಕ್ಕಾಗಿ ನಿಮಗೆ ಇಲ್ಲಿ ಏನೂ ಪ್ರತಿಫಲ ಸಿ ಎಂಬ ಉತ್ತರ ಸಿಕ್ಕಿದರೆ ನಮ್ಮ ಸ್ಥಿತಿ ಬಹಳ ವಿಚಿತ್ರವಾಗುವುದಲ್ಲವೇ?

○ ಬಡ್ಡಿಯು ನಿಷಿದ್ಧವಾಗಿದೆ ಎಂಬುದು ಪವಿತ್ರ ಕುರ್‌ಆನ್ ಮತ್ತು ಸುನ್ನತ ವಿಧಿಗಳಿಂದ ಸ್ಪಷ್ಟವಾಗಿ ಸಾಬೀತಾಗುತ್ತದೆ. ಫಿಕ್ಹ್‌ನ (ಕರ್ಮಶಾಸ್ತ್ರ) ಯಾವುದೇ ಪಾರಿಭಾ ಚರ್ಚೆಯು ಆ ವಿಧಿಯನ್ನು ಅಲ್ಲಗಳೆಯಲಾರದು. ಆದ್ದರಿಂದ ವಿದ್ವಾಂಸರ ಈ ಹೇಳಿಕೆ ಹೊರತಾಗಿಯೂ ನಿಮಗೆ ಪರಲೋಕದ ಪ್ರತಿಫಲವು ಸಿಗದೆ ಇರಲಾರದು. ಆ ಬಗ್ಗೆ ನಿ ನಿಶ್ಚಿಂತರಾಗಿರಿ.

ಕಾನೂನಿನ ಗೊಂದಲಮಯ ಚರ್ಚೆಗಳನ್ನು ಬದಿಗೊತ್ತಿ ಓರ್ವ ಸಾಮಾನ್ಯ ಮುಸ್ಲಿ ದೃಷ್ಟಿಕೋನದೊಂದಿಗೆ ವಿಷಯವನ್ನು ನೋಡಿರಿ. ಆಗ ಒಂದು ವಿಷಯ ನಮಗೆ ಸ್ಪಷ್ಟವ ತಿಳಿಯುತ್ತದೆ. ಮುಸ್ಲಿಮ್ ಎಂಬ ನೆಲೆಯಲ್ಲಿ ನಮ್ಮ ಕೆಲಸ ಅಲ್ಲಾಹನ ಗ್ರಂಥ ಮ ಪ್ರವಾದಿಚರ್ಯೆಗಳಲ್ಲಿ ಸತ್ಯವೆಂದು ಸಾರಲಾಗಿರುವ ಧರ್ಮ, ನೀತಿ, ನಾಗರಿಕತೆ ಮ ಸಂಸ್ಕೃತಿಯ ತತ್ವಗಳ ಧ್ವಜವಾಹಕರಾಗುವುದಾಗಿದೆ. ಅದೇ ರೀತಿ ಕುರ್‌ಆನ್ ಮ ಸುನ್ನತ್ ಮಿಥ್ಯವೆಂದು ಸಾರಿರುವ ಸಿದ್ಧಾಂತಗಳು ಮತ್ತು ಪದ್ಧತಿಗಳನ್ನು ಜಗತ್ತಿನಿ ಅಳಿಸಲು ಪ್ರಯತ್ನಿಸುವುದು ನಮ್ಮ ಹೊಣೆಯಾಗಿದೆ. ಮಿಥ್ಯ ಸಿದ್ಧಾಂತಗಳು ಜಾರಿಯಲ್ಲಿರ ಪ್ರದೇಶಗಳಲ್ಲಿ ಆ ಮಿಥ್ಯ ಪದ್ಧತಿಗಳನ್ನು ಅನುಸರಿಸುವುದಲ್ಲ. ಬದಲಾಗಿ ಅಲ್ಲಿದ್ದುಕೊಂ ಕುರ್‌ಆನ್‌ನ ಜೀವನ ವ್ಯವಸ್ಥೆಯನ್ನು ಪ್ರಚಾರ ಪಡಿಸುವುದಾಗಿದೆ. ಮಿಥ್ಯ ವ್ಯವಸ್ಥೆಯ ಅಳಿಸಿ ಇಸ್ಲಾಮಿ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಯತ್ನಿಸುವುದಾಗಿದೆ. ನಾವೇ ಬಡ್ಡಿ ತಿ ತೊಡಗಿದರೆ ಮುಸ್ಲಿಮೇತರರು ಬಡ್ಡಿ ತಿನ್ನುವುದರ ವಿರುದ್ಧ ನಾವು ಸ್ವರವೆಬ್ಬಿಸುವುದಾದ ಹೇಗೆ? ಅವರು ನಮ್ಮ ಸೊತ್ತನ್ನು ಅನ್ಯಾಯವಾಗಿ ಕಬಳಿಸಿದರೆ ಅಥವಾ ಇಸ್ಲಾಮೇ ಸರಕಾರ ನಮ್ಮ ಸೊತ್ತಿನ ಮೇಲೆ ಹಕ್ಕಿಲ್ಲದೆ (ಅಂದರೆ ಅಲ್ಲಾಹನ ಆದೇಶದ ಬಲವಿಲ್ಲ ಯಾವುದಾದರೂ ತೆರಿಗೆ ವಿಧಿಸಿದರೆ ನಾವು ಕೂಡಾ ಆ ಹಣವನ್ನು ಹಿಂದೆ ಪಡೆಯಲು ಅಕ್ರ ಮಾರ್ಗವನ್ನು ಅನುಸರಿಸುವುದು ಮತ್ತು ನಮ್ಮ ಹಕ್ಕನ್ನು ಮರಳಿ ಪಡೆಯಲಿಕ್ಕಾಗಿ ನಿಷಿ ಸಂಪಾದನೆಯ ಮಾರ್ಗ ಹಿಡಿಯುವುದು ನಮಗೆ ಧರ್ಮಸಮ್ಮತವೇ? ಇದರಿ ಬಡ್ಡಿಕೋರತನದೊಂದಿಗೆ ಮದ್ಯ ಮಾರಾಟ, ಸಂಗೀತೋಪಕರಣ ತಯಾರಿಕೆ, ವೇಶ್ಯಾವಾ ನೃತ್ಯ-ಗಾನಗಳ ವ್ಯಾಪಾರ, ಮೂರ್ತಿ ರಚನೆ, ಜೂಜಾಟ ಇತ್ಯಾದಿ ಎಲ್ಲ ನಿಷಿದ್ಧ ಕಾರ್ಯ

ಗಿಲು ತೆರೆದಂತಾಗುವುದು. ಅನಂತರ ನಮ್ಮ ಮತ್ತು ಸತ್ಯನಿಷೇಧಿಗಳ ಮಧ್ಯೆ ಯಾವ ತ್ಯಾಸ ಉಳಿಯುತ್ತದೆ? ನಾವು 'ದಾರುಲ್ ಕುಫ್ರ'ನ್ನು 'ದಾರುಲ್ ಇಸ್ಲಾಮ್' ಆಗಿ ಂವರ್ತಿಸಲು ಪ್ರಯತ್ನಿಸಲು ನಮ್ಮಲ್ಲಿ ಯಾವ ನೈತಿಕ ಆಧಾರವಿದೆ?

ನಿಜವಾಗಿ ಇಸ್ಲಾಮೇತರ ಸಂವಿಧಾನದ ಪ್ರಕಾರ ನೀವು ಈ ಎಲ್ಲ ಕೆಲಸಗಳನ್ನು ಾಡಬಹುದು. ಆದರೆ ಇಸ್ಲಾಮ್‌ನ ಪ್ರಕಾರ ಈ ಎಲ್ಲ ಕಾರ್ಯಗಳು ನಿಮ್ಮ ಪಾಲಿಗೆ ಿದ್ಧವಾಗಿವೆ. ನೀವು ಇಸ್ಲಾಮ್‌ನ ಅನುಯಾಯಿಯಾಗಿದ್ದರೆ ನಿಮಗೆ ಇಸ್ಲಾಮೇತರ ವಸ್ಥೆಯಲ್ಲಿರುವ ಸಡಿಲು ಧೋರಣೆಯಿಂದ ಪ್ರಯೋಜನ ಪಡೆಯುವ ಅಧಿಕಾರವಿಲ್ಲ. ಂದು ವೇಳೆ ನೀವು ಒಂದೆಡೆ ಲೋಕವನ್ನು ಇಸ್ಲಾಮ್‌ನ ಕಡೆಗೆ ಕರೆಯುತ್ತಾ ಇನ್ನೊಂದೆಡೆ ಲ್ಪ ಲಾಭ ಗಳಿಸಲಿಕ್ಕಾಗಿ ಅಥವಾ ಸ್ವಲ್ಪ ನಷ್ಟದಿಂದ ದೂರವಿರಲಿಕ್ಕಾಗಿ ದಾರುಲ್ ಕುಫ್ರ್ ಡುವಂತಹ ಹರಾಮ್ ಸಂಪಾದನೆಯ ಈ ಅನುಮತಿಗಳಿಂದ ಪ್ರಯೋಜನ ಪಡೆದರೆ ಂರಿನ ಅತ್ಯುನ್ನತ ವಿದ್ವಾಂಸರು ನಿಮಗೆ ಅದರ ಅನುಮತಿಯ ಫತ್ವಾ ನೀಡಿದರೂ ಜನರು ಮ್ಮ ಧರ್ಮಪ್ರಚಾರ ಕಾರ್ಯದಿಂದ ಪ್ರಭಾವಿತರಾಗುವಷ್ಟು ಖಂಡಿತ ಮೂರ್ಖರಲ್ಲ.

ವಾಸ್ತವದಲ್ಲಿ ಮಿಥ್ಯವ್ಯವಸ್ಥೆಯಡಿ ಜೀವನ ಸಾಗಿಸುತ್ತಾ ಮುಸ್ಲಿಮರಿಗೆ ಬರುವ ಂಕಷ್ಟ ಅಥವಾ ನಷ್ಟವನ್ನು ನಿವಾರಿಸಲು ಮಿಥ್ಯ ವ್ಯವಸ್ಥೆಯಡಿಯಲ್ಲೇ ಯಾವುದಾದರೂ ರ್ಮಶಾಸ್ತ್ರೀಯ ಮಾಧ್ಯಮಗಳನ್ನು ಸೃಷ್ಟಿಸುವ ಈ ವಿಚಾರಧಾರೆಯನ್ನು ಇಸ್ಲಾಮಿೂ ರ್ಮಶಾಸ್ತ್ರದಲ್ಲಿ ಬಳಸಲೇ ಬಾರದು. ಈ ವಿಚಾರಧಾರೆಯು ಮುಸ್ಲಿಮರನ್ನು ಪರಿವರ್ತಿಸುವ ದಲು ಇಸ್ಲಾಮನ್ನು ಪರಿವರ್ತಿಸುತ್ತದೆ. ಧರ್ಮದ ಉತ್ಥಾನ ಮಾಡುವ ಬದಲಾಗಿ ೀನಾಚಾರಗಳ ದ್ವಾರವನ್ನು ತೆರೆಯುತ್ತದೆ. ಇದು ಇಸ್ಲಾಮಿೂ ಜೀವನ ವ್ಯವಸ್ಥೆಗೆ ಅತ್ಯಂತ ಾರಕವಾಗಿದೆ. ಆದರೆ ಕುಫ್ರ್‌ನ ಮೇಲುಗೈ ಇರುವಾಗ ಇಂತಹುದೇ ಫತ್ವಾ (ಧಾರ್ಮಿಕ ತಿ)ಗಳು ಬರುತ್ತಿರುವುದು ಖೇದಕರವಾಗಿದೆ. ಈ ವಿಧಾನದಿಂದ ಮುಸ್ಲಿಮರಿಗೆ ಕುಫ್ರ್‌ನ ವಸ್ಥೆಯಲ್ಲಿ ನಿಶ್ಚಿಂತವಾಗಿ ಜೀವನ ಸಾಗಿಸುವ ಅಭ್ಯಾಸ ಮಾಡಿಸಲಾಗಿದೆ. ಇದು ್ಯಧರ್ಮದ ಇಂಗಿತಕ್ಕೆ ವಿರುದ್ಧವಾಗಿದೆ. ಎಷ್ಟೇ ದೊಡ್ಡ ವಿದ್ವಾಂಸರು ಇದನ್ನು ತಿಪಾದಿಸಿದರೂ ನಾವು ಇಂತಹ ವಿಚಾರಧಾರೆಯನ್ನು ಖಂಡಿತ ಸಹಿಸಲಾರೆವು. ಮಿಥ್ಯ ವಸ್ಥೆಯಲ್ಲಿ ಮುಸ್ಲಿಮರಿಗೆ ಕಷ್ಟ-ನಷ್ಟಗಳಲ್ಲದೆ ಇನ್ನೇನು ತಾನೇ ಸಿಕ್ಕೀತು? ಈ ಕಷ್ಟ ನಷ್ಟಗಳ ಫಲವಾಗಿ ಮುಸ್ಲಿಮರು ಈ ವ್ಯವಸ್ಥೆಯನ್ನು ಬದಲಿಸಲು ಪ್ರಯತ್ನಿಸಬೇಕೇ ಂರತು ಕುಫ್ರ್‌ನ ನೆರಳಲ್ಲಿ ನೆಮ್ಮದಿಯ ಜೀವನ ಸಾಗಿಸಲು ಶರೀಅತನ್ನು ತಮಗೆ ುಕೂಲಕರವಾಗಿ ಮಾಡಬಾರದು. *(ತರ್ಜುಮಾನುಲ್ ಕುರ್‌ಆನ್, ಆಗಸ್ಟ್ 1946)*

12

ಅಲ್ಕೋಹಾಲ್‌ಯುಕ್ತ ಔಷಧಿಯ ಬಳಕೆ

● *ಈ ಕಾಲದಲ್ಲಿ ಇಂಗ್ಲಿಷ್ ಮದ್ದು ಹೆಚ್ಚು ಬಳಕೆಯಲ್ಲಿದೆ. ಅದರ ಎಲ್ಲ ದ್ರವರೂಪ ಮದ್ದಿನಲ್ಲಿ ಆಲ್ಕೋಹಾಲ್ (ಮದ್ಯಸಾರ) ಇರುತ್ತದೆ. ನಾನಂತೂ ಅದನ ಬಳಸುವುದಿಲ್ಲ. ಆದರೆ ಒಂದು ವಿಷಯ. ಕುರ್‌ಆನ್‌ನಲ್ಲಿ ಮದ್ಯಪಾನ ನಿಷೇಧ ಕುರಿತಿರುವ ಆದೇಶದಲ್ಲಿ ಮದ್ಯ ಎಂದರೆ 'ಮತ್ತು ಬರಿಸುವ ವಸ್ತು' ಎಂದಾದ ಮದ್ದಿನಲ್ಲಿರುವ ಆಲ್ಕೋಹಾಲ್ ತೀರಾ ನಗಣ್ಯವಾಗಿದೆ. ಅದು 'ಮತ್ತು' ಬರಿಸುವುದಿಲ್ ಅದನ್ನು ಆ ಉದ್ದೇಶಕ್ಕಾಗಿ ಯಾರೂ ಸೇವಿಸುವುದೂ ಇಲ್ಲ. ಈ ತಂತ್ರದಿಂ ಯಾರೂ ಅದನ್ನು ಧರ್ಮಸಮ್ಮತಗೊಳಿಸಲು ಪ್ರಯತ್ನಿಸುವುದೂ ಇಲ್ಲ. ಅಷ ಸೂಕ್ಷ್ಮವಾಗಿ ನೋಡಿದರೆ ಬ್ರೆಡ್‌ನಲ್ಲಿ ಸ್ವಲ್ಪ ಆಲ್ಕೋಹಾಲ್ ಇರುತ್ತದೆ. ಬಾಟ್ಲಿಯ ಬರುವ ಶರಬತ್ತುಗಳಲ್ಲಿಯೂ ಸ್ವಲ್ಪ ಆಲ್ಕೋಹಾಲ್ ಇರುತ್ತದೆ. ಹಳೆಯ ದ್ರಾ ಗಳಲ್ಲೂ ಆಲ್ಕೋಹಾಲ್ ಉಂಟಾಗುತ್ತದೆ. ಈ ವಿಧಗಳಲ್ಲಿ ಅದು ನಿಷಿ ವಾಗುವುದಿಲ್ಲವೆಂದಾದರೆ ಔಷಧಿಗಳಲ್ಲಿರುವ ಆಲ್ಕೋಹಾಲ್‌ನ ಬಗ್ಗೆ ವಿಶಿಷ್ಟ ಆಕ್ಷೇಪ ನಿಘಂಟುವಿನ ಅರ್ಥದ ಪ್ರಕಾರ 'ಖಮ್ರ್' ಎಂದರೆ ದ್ರಾಕ್ಷೆಯ ಮದ್ಯ ಎಂ ತೆಗೆದುಕೊಂಡರೆ ಆಲ್ಕೋಹಾಲ್ ದ್ರಾಕ್ಷೆಯ ಮದ್ಯವಲ್ಲ. ಆದ್ದರಿಂದ ಇಂಗ್ಲಿಷ ಮದ್ದುಗಳು ನಿಷಿದ್ಧವಾಗಬಾರದು. ಇಂತಹ ಔಷಧಿಗಳು ಇಲ್ಲದಾಗ ನಮ್ಮ ಪಂಡಿತ ಬರೆದಿಟ್ಟಿರುವ ಧಾರ್ಮಿಕ ವಿಧಿಗಳನ್ನು ಇಂದಿನ ವಿಭಿನ್ನ ಪರಿಸ್ಥಿತಿಗಳ ಅನ್ವಯಗೊಳಿಸಿದರೆ ಬಹಳ ತೊಂದರೆಯಾಗುತ್ತದೆ. ಇಂದು ಯೂನಾನಿ ಔಷಧಿಗ ಕೂಡಾ ಅಪ್ಪಟ ರೂಪದಲ್ಲಿ ಸಿಗುವುದು ಕಷ್ಟ. ಈ ಎಲ್ಲ ಪರಿಸ್ಥಿತಿಗಳನ್ನು ಮುಂದಿ ತಮ್ಮ ಅಭಿಪ್ರಾಯವನ್ನು ತಿಳಿಸಿ.*

○ 'ಖಮ್ರ್' ಎಂದರೆ ದ್ರಾಕ್ಷೆಯ ಮದ್ಯ ಎಂಬುದು ನಿಜ. ಆದರೆ ಅದರ ಉದ್ದೇ ಎಲ್ಲ 'ಮತ್ತು' ಬರಿಸುವ ವಸ್ತುವಾಗಿದೆ. 'ಖಮ್ರ್'ನ ವ್ಯಾಖ್ಯಾನವನ್ನು ಹೀಗೆ ಮಾಡಲಾಗಿ "ಬುದ್ಧಿಯನ್ನು ಮರೆಸುವ ಪ್ರತಿಯೊಂದು ವಸ್ತು 'ಖಮ್ರ್' ಆಗಿದೆ." ಯಾವುದರ ದೊ ಪ್ರಮಾಣವು 'ಮತ್ತು' ಬರಿಸುತ್ತದೋ ಅದರ ಸಣ್ಣ ಪ್ರಮಾಣವೂ ಹರಾಮ್ (ನಿಷಿದ್ಧ) ಆಗಿ ಎಂಬುದು ಶರೀಅತ್‌ನ ಒಂದು ನಿಯಮವಾಗಿದೆ. ಈ ಸಣ್ಣ ಪ್ರಮಾಣವನ್ನು ನಿಷೇಧಿಸಿರುವು

ಅದು 'ಮತ್ತು' ಬರಿಸುತ್ತದೆಂದಲ್ಲ. ಹರಾಮ್ (ನಿಷಿದ್ಧ) ವಸ್ತುವಿನ ಬಗೆಗೆ ಮನಸ್ಸಿನಲ್ಲಿರುವ ಅಡೆ-ತಡೆ ದೂರವಾಗುತ್ತದೆ ಅಥವಾ ಕನಿಷ್ಠ ಪಕ್ಷ ಅದು ಬಲಹೀನಗೊಳ್ಳುತ್ತದೆ ಎಂಬುದೇ ಇದರ ಕಾರಣ.

ಎಲ್ಲ ರೀತಿಯ ಮದ್ಯಗಳಲ್ಲಿ ನಿಜವಾಗಿ 'ಮತ್ತು' ಬರಿಸುವ ವಸ್ತು ಇದೇ 'ಆಲ್ಕೋಹಾಲ್' ಆಗಿದೆ. ಆದುದರಿಂದ ಅದರ ಬಳಕೆಯು ಯಾವುದೇ ರೀತಿಯಲ್ಲೂ ಧರ್ಮಸಮ್ಮತವಾಗಲಾರದು. ಮುಸ್ಲಿಮರಲ್ಲಿ ವೈದ್ಯಕೀಯ ಶಾಸ್ತ್ರದ ಪ್ರಗತಿಯು ಒಂದು ದೀರ್ಘ ಕಾಲದಿಂದ ನಿಂತಿದೆ. ಹರಾಮ್-ಹಲಾಲ್‌ನ ವ್ಯತ್ಯಾಸವೇ ಇಲ್ಲದವರ ಕೈಗಳಲ್ಲಿಯೇ ಆ ವಿದ್ಯೆಯ ಪ್ರಗತಿಯಿದೆ. ಅವರು ಉತ್ತಮ ಔಷಧಿಗಳ ಪೈಕಿ ಹೆಚ್ಚಿನವುಗಳಲ್ಲಿ ಆಲ್ಕೋಹಾಲ್ ಅನ್ನು ಧಾರಾಳವಾಗಿ ಬಳಸಿದ್ದಾರೆ. ಆದ್ದರಿಂದ ಇಂದು ಜನರಿಗೆ ಅನಿವಾರ್ಯತೆಯ ಪರಿಸ್ಥಿತಿ ಬಂದೊದಗಿದೆ. ಒಂದು ಕಾಲದವರೆಗೆ ಕಂಡು ಹಿಡಿಯಲ್ಪಟ್ಟ ಮದ್ದುಗಳನ್ನು ಮಾತ್ರ ಬಳಸಬೇಕೆಂದು ಶರೀಅತ್ ಬಯಸುವುದಿಲ್ಲ. ಆ ಕಾಲದ ನಂತರ ಕಂಡು ಹಿಡಿಯಲ್ಪಟ್ಟ ಮದ್ದು ಎಷ್ಟೇ ಉತ್ತಮವಾಗಿದ್ದರೂ ಅವುಗಳನ್ನು ತೊರೆದು ನಿಮ್ಮ ಆರೋಗ್ಯವನ್ನು ಅಪಾಯದಲ್ಲಿ ಸಿಲುಕಿಸಬೇಕೆಂದು ಅದು ಅಪೇಕ್ಷಿಸುವುದಿಲ್ಲ. ಆದ್ದರಿಂದ ಅನಿವಾರ್ಯ ಪರಿಸ್ಥಿತಿಯಲ್ಲಿ ಆ ಔಷಧಿಗಳಲ್ಲಿ ಹರಾಮ್‌ನ ಅಂಶ ಇದ್ದಾಗ್ಯೂ ಅವುಗಳನ್ನು ಬಳಸಬಹುದು. ಆದರೆ ಮುಸ್ಲಿಮರು ಒಟ್ಟಾಗಿ ವೈದ್ಯಕೀಯ ಮತ್ತು ಔಷಧಿ ತಯಾರಿಕೆಯ ಪ್ರಗತಿಯನ್ನು ಇಸ್ಲಾಮ್‌ಗೆ ಅನುಗುಣವಾಗಿ ಮಾಡಲು ಪ್ರಯತ್ನಿಸುವ ತನಕ ಅವರು ಸಾಮೂಹಿಕವಾಗಿ ತಪ್ಪಿತಸ್ಥರಾಗುವರು.

ವೈದ್ಯಕೀಯ ಮತ್ತು ಔಷಧಿ ತಯಾರಿಯ ವಿಜ್ಞಾನವನ್ನು ಪ್ರಗತಿ ಪಡಿಸುವ ಎಲ್ಲ ಕಾರ್ಯವೂ ಇಸ್ಲಾಮಿನ ನೈತಿಕ ಮೇರೆಯೊಳಗಿರಬೇಕು. ಸಂಘಟಿತ ಪ್ರಯತ್ನದಿಂದ ಈ ಕಾರ್ಯ ಸಾಧಿತವಾಗುವ ತನಕ ಜನರು ಅನಿವಾರ್ಯತೆಯ ನೆಪದಿಂದ ಕ್ಷಮೆ ಗಳಿಸಬಹುದು. ಆದರೆ ಸಮುದಾಯದ ಮೇಲೆ ನಿರಂತರ ಪಾಪದ ಹೊರೆ ಬೀಳುತ್ತಿರುವುದು. ಸಾಮೂಹಿಕ ಪಾಪಗಳ ವೈಶಿಷ್ಟ್ಯವೇ ಇದಾಗಿದೆ. ಅದರಿಂದಾಗಿ ವ್ಯಕ್ತಿಗಳಿಗೆ ಅನಿವಾರ್ಯ ಪರಿಸ್ಥಿತಿ ಉಂಟಾಗುತ್ತದೆ. ಆದರೆ ಸಮುದಾಯವು ತಪ್ಪಿತಸ್ಥವೆಂದು ಪರಿಗಣಿಸಲ್ಪಡುತ್ತದೆ.

(ತರ್ಜುಮಾನುಲ್ ಕುರ್‌ಆನ್ : ಜೂನ್ 1946)

(13)

ತಕ್‌ಲೀದ್‌ನ ವಾಸ್ತವಿಕತೆ

- *ನಾಲ್ಕು ಮಂದಿ ಇಮಾಮರ ತಕ್‌ಲೀದ್‌ನ ಕುರಿತು ನಿಮ್ಮ ನಿಲುವೇನು? ತಕ್‌ಲೀದನ್ನು ನೀವು ಧರ್ಮಸಮ್ಮತವೆಂದು ಪರಿಗಣಿಸುತ್ತೀರೋ ಇಲ್ಲವೋ? ಪರಿಗಣಿಸುವುದಾದರೂ ಯಾವ ಮೇರೆಯ ತನಕ?*

○ ನನ್ನ ಅಭಿಪ್ರಾಯವೇನೆಂದರೆ ಓರ್ವ ವಿದ್ವಾಂಸನಾದ ವ್ಯಕ್ತಿಯು ನೇರವಾಗಿ ಕುರ್‌ಆನ್ ಮತ್ತು ಸುನ್ನತ್‌ನಿಂದ ಸರಿಯಾದ ವಿಧಿಯನ್ನು ತಿಳಿಯುವ ಪ್ರಯತ್ನ ಮಾಡಬೇಕು. ಈ ರೀತಿಯ ಸಂಶೋಧನೆಯಲ್ಲಿ ಹಿಂಗಾಮಿಗಳಾದ ಪಂಡಿತರ ಪರಿಣತ ಅಭಿಪ್ರಾಯಗಳನ್ನೂ ಪರಿಗಣಿಸಬೇಕು. ಭಿನ್ನಾಭಿಪ್ರಾಯವಿರುವ ವಿಷಯಗಳಲ್ಲಿ ಎಲ್ಲ ರೀತಿಯ ಪಕ್ಷಪಾತದಿಂದ ಮುಕ್ತವಾಗಿ ಮುಕ್ತ ಮನಸ್ಸಿನಿಂದ ಸಂಶೋಧನೆ ನಡೆಸಬೇಕು. ಇಮಾಮ್‌ಗಳ ಪೈಕಿ ಯಾರ ಅಭಿಪ್ರಾಯವು ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಗೆ ಹೆಚ್ಚು ಅನುಗುಣವಾಗಿದೆಯೆಂದು ನೋಡಬೇಕು. ಅನಂತರ ಯಾವುದು ಸತ್ಯವೆಂದು ಮನವರಿಕೆಯಾಗುತ್ತದೋ ಅದನ್ನೇ ಅನುಸರಿಸಬೇಕು.

ನಾನು ಅಹ್ಲುಲ್ ಹದೀಸ್‌ನವರ ಕ್ರಮವನ್ನು ಅದರ ಎಲ್ಲ ವಿವರಣೆಗಳೊಂದಿಗೆ ಸರಿಯೆಂದು ಪರಿಗಣಿಸುವುದಿಲ್ಲ. ಅಂತೆಯೇ ನಾನು ಹನಫೀ ಮತ್ತು ಶಾಫಿಈ ಮದ್‌ಹಬ್‌ಗಳ ಬಂಧನದಲ್ಲೂ ಇಲ್ಲ. ಆದರೆ ಜಮಾಅತೆ ಇಸ್ಲಾಮಿಯಲ್ಲಿ ಸೇರುವವರ ಕರ್ಮಶಾಸ್ತ್ರ ಕ್ರಮವು ನನ್ನಂತೆಯೇ ಆಗಬೇಕೆಂದೇನಿಲ್ಲ. ಅವರು ಗುಂಪುಗಾರಿಕೆಯ ಪಕ್ಷಪಾತದಿಂದ ದೂರವಿದ್ದು, ಸತ್ಯವು ತಮ್ಮ ಗುಂಪಿಗೆ ಮಾತ್ರ ಸೀಮಿತವೆಂದು ಬಗೆಯದೆ ಇದ್ದರೆ ಅವರು ಜಮಾಅತ್‌ನಲ್ಲಿರುತ್ತಾ ತಮ್ಮ ಸಂತೃಪ್ತಿಯ ಮೇರೆಗೆ ಹನಫೀ, ಶಾಫಿಈ, ಅಹ್ಲುಲ್ ಹದೀಸ್ ಅಥವಾ ಇನ್ನಾವುದೇ ಕರ್ಮಶಾಸ್ತ್ರ ಕ್ರಮವನ್ನು ಅನುಸರಿಸಲು ಸ್ವತಂತ್ರರಾಗಿದ್ದಾರೆ.

- *ನಾಲ್ಕು ಮಂದಿ ಇಮಾಮರ ತಕ್‌ಲೀದನ್ನು ಅಹ್ಲುಲ್ ಹದೀಸ್‌ನವರು ಹರಾಮ್ (ನಿಷಿದ್ಧ) ಮತ್ತು ಶಿರ್ಕ್ (ದೇವಸಹಭಾಗಿತ್ವ) ಆಗಿದೆಯೆಂದು ಹೇಳುತ್ತಾರೆ. ಇದು ಸರಿಯೇ? ತಕ್‌ಲೀದ್ ಮಾಡುವವರು ಅಹ್ಲುಲ್ ಹದೀಸ್‌ಗಳಲ್ಲವೇ? ತಕ್‌ಲೀದ್‌ನ ವಾಸ್ತವಿಕತೆಯೇನು? ಅದು ಅಗತ್ಯವೇ?*

○ ನಿಜವಾಗಿ ಇಸ್ಲಾಮ್‌ನಲ್ಲಿ ಪ್ರವಾದಿ(ಸ) ಅವರ ಹೊರತು ಇನ್ನಾರದೇ ತಕ್‌ಲೀದ್ (ಅನುಸರಣೆ) ಇಲ್ಲ. ಪ್ರವಾದಿವರ್ಯರು(ಸ) ಕೂಡಾ ಅಲ್ಲಾಹನ ಆಜ್ಞೆ ಮತ್ತು

ಅನುಮತಿಯ ಮೇರೆಗೆ ಮಾತ್ರ ಆದೇಶಿಸುತ್ತಾರೆ ಮತ್ತು ಆಚರಿಸುತ್ತಾರೆ ಎಂಬ ಕಾರಣಕ್ಕಾಗಿ ಮಾತ್ರ ಅವರ ತಕ್‌ಲೀದ್ (ಅನುಸರಣೆ) ಮಾಡಲಾಗುತ್ತದೆ. ಅನ್ಯಥಾ ಅನುಸರಣೆಗೆ ಯೋಗ್ಯನಾದವನು ಅಲ್ಲಾಹ್ ಮಾತ್ರವಾಗಿದ್ದಾನೆ.

ಇಮಾಮ್‌ಗಳ ಅನುಸರಣೆಯ ವಾಸ್ತವಿಕತೆ ಏನೆಂದರೆ ಅವರು ಅಲ್ಲಾಹನ ಮತ್ತು ಪ್ರವಾದಿಯ ಆದೇಶಗಳ ಬಗೆಗೆ ಸಂಶೋಧನೆ ನಡೆಸಿದವರು. ಮುಸ್ಲಿಮರು ತಮ್ಮ ಇಬಾದತ್ (ಆರಾಧನೆ) ಮತ್ತು ವ್ಯವಹಾರಗಳಲ್ಲಿ ಯಾವ ಕ್ರಮವನ್ನು ಅನುಸರಿಸಬೇಕೆಂಬುದನ್ನು ಅವರು ಪವಿತ್ರ ಕುರ್‌ಆನ್ ಮತ್ತು ಸುನ್ನತ್‌ನಿಂದ ತಿಳಿದುಕೊಂಡಿದ್ದಾರೆ. ಶರೀಅತ್‌ನ ಮೂಲಭೂತ ತತ್ವಗಳಿಂದ ಅವರು ಅದರ ಆಂಶಿಕ ವಿಧಿಗಳನ್ನು ಪಡೆದರು. ಆದ್ದರಿಂದ ಅವರು ನಿಜವಾಗಿ ಅನುಸರಿಸಲ್ಪಡುವುದಲ್ಲ. ಅವರು ವಿದ್ಯೆ ಇಲ್ಲದವರಿಗೆ ವಿದ್ಯೆಯ ಒಂದು ಅಧಿಕೃತ ಮತ್ತು ನಂಬಲರ್ಹ ಮಾಧ್ಯಮ ಮಾತ್ರವಾಗಿದ್ದಾರೆ. ಯಾರು ಸ್ವಯಂ ಅಲ್ಲಾಹನ ಆದೇಶಗಳನ್ನು ಮತ್ತು ಪ್ರವಾದಿ ಚರ್ಯೆಯನ್ನು ಗಹನವಾಗಿ ಕಲಿತಿಲ್ಲವೋ, ಯಾರು ಧರ್ಮದ ವಿಧಿಗಳನ್ನು ಕಂಡು ಹಿಡಿಯುವ ಸಾಮರ್ಥ್ಯ ಹೊಂದಿಲ್ಲವೋ ಅವರ ಮಟ್ಟಿಗೆ ವಿದ್ವಾಂಸರು ಮತ್ತು ಇಮಾಮ್‌ಗಳ ಪೈಕಿ ಯಾರ ಮೇಲೆ ಅವರಿಗೆ ಭರವಸೆಯಿದೆಯೋ ಅವರು ತೋರಿಸಿದ ಕ್ರಮವನ್ನು ಅನುಸರಿಸುವುದಲ್ಲದೆ ಅನ್ಯ ದಾರಿಯಿಲ್ಲ. ಯಾರಾದರೂ ಈ ನೆಲೆಯಲ್ಲಿ ಅವರನ್ನು ಅನುಸರಿಸಿದರೆ ಅದನ್ನು ಆಕ್ಷೇಪಿಸಲು ಯಾವ ಕಾರಣವೂ ಇಲ್ಲ. ಆದರೆ ಯಾರಾದರೂ ಅವರನ್ನೇ ಸ್ವಯಂ ಅನುಸರಣೆಗೆ ಯೋಗ್ಯರೆಂದು ಬಗೆದರೆ ಅಥವಾ ಆ ರೀತಿ ಅವರ ಅನುಸರಣೆ ಮಾಡಿದರೆ ಅದು ಆಕ್ಷೇಪಾರ್ಹವಾಗುತ್ತದೆ. ನಿಜವಾದ ಅನುಸರಣೆಗೆ ಯೋಗ್ಯನಾದವನನ್ನು ಯಾವ ರೀತಿ ಅನುಸರಿಸಲಾಗುತ್ತದೋ ಆ ರೀತಿ ಅವರನ್ನು ಅನುಸರಿಸಿದರೆ ಅಂದರೆ ಇಮಾಮ್‌ಗಳ ಪೈಕಿ ಯಾರಾದರೂ ನಿಶ್ಚಯಿಸಿದ ಕ್ರಮವನ್ನು ತೊರೆದರೆ ಧರ್ಮವನ್ನೇ ತೊರೆದಂತೆ ಎಂದು ಭಾವಿಸುವುದು ಮತ್ತು ಯಾವುದಾದರೂ ಒಂದು ವಿಷಯವು ಒಂದು ಆಯತ್ ಅಥವಾ ಪ್ರಾಮಾಣಿಕ ಹದೀಸ್‌ಗೆ ವಿರುದ್ಧವಾಗಿದೆ ಎಂದು ಸ್ಪಷ್ಟವಾದ ಬಳಿಕವೂ ಆ ಇಮಾಮರನ್ನೇ ಅನುಸರಿಸುವೆನೆಂದು ಪಟ್ಟು ಹಿಡಿಯುವುದು ಖಂಡಿತ ಶಿರ್ಕ್ ಆದೀತು.

(ತರ್ಜುಮಾನುಲ್ ಕುರ್‌ಆನ್ ಜುಲೈ-ಅಕ್ಟೋಬರ್ 1944)

(14)

ಹನಫೀ ಮದ್‌ಹಬ್ ಮತ್ತು ಹದೀಸ್

● *ಕೆಲವು ಕರ್ಮಗಳ ವಿಷಯದಲ್ಲಿ ಇಮಾಮ್ ಅಬೂಹನೀಫಾರ(ರ) ಹೇಳಿಕೆಗಳು ಸಹೀಹ್ ಹದೀಸ್‌ಗಳಿಗೆ ವಿರುದ್ಧವಾಗಿ ಕಾಣುತ್ತದೆ. ಉದಾ: ಇಮಾಮರ ಹಿಂದೆ ಸೂರಃ ಫಾತಿಹಾ ಪಠಿಸುವುದು, ನಮಾಝ್‌ನಲ್ಲಿ ರಫಅಯದೈನ್ (ಅರ್ಥಾತ್ ಕೈಯೆತ್ತುವುದು). ಜೋರಾಗಿ ಆಮೀನ್ ಹೇಳುವುದು ಮತ್ತು ಜುಮಾ ನಮಾಝ್‌ಗೆ ನಗರವಾಗಬೇಕೆಂಬ ಶರ್ತ ಇತ್ಯಾದಿ ವಿಷಯಗಳು. ಈ ಎಲ್ಲ ವಿಷಯಗಳಲ್ಲಿ ಇಮಾಮ್‌ರ (ಅಬೂಹನೀಫಾರ) ಹೇಳಿಕೆಗಳು ಕುರ್‌ಆನ್ ಮತ್ತು ಹದೀಸ್‌ಗಳಿಂದ ಪಡೆದವುಗಳೇ? ಹಾಗಿದ್ದರೆ ಆ ಹದೀಸ್‌ಗಳು ಯಾವುವು? ಮುಹದ್ದಿಸ್ (ಹದೀಸ್ ವಿದ್ವಾಂಸರು)ಗಳು ಅವುಗಳನ್ನು ಸಹೀಹ್ (ಸರಿಯಾದುದು) ಎಂದು ಪರಿಗಣಿಸುವರೇ?*

○ ಇಮಾಮ್ ಅಬೂಹನೀಫಾ, ಇಮಾಮ್ ಶಾಫಿಈ ಮತ್ತು ಇಮಾಮ್ ಮಾಲಿಕ್(ರ) ಅವರ ಮದ್‌ಹಬ್ (ಕರ್ಮಶಾಸ್ತ್ರ)ಗಳ ಅನೇಕ ವಿಧಿಗಳು ಹದೀಸ್‌ಗಳಿಗೆ ವಿರುದ್ಧವಾಗಿದೆಯೆಂದು ಅಹ್ಲೆ ಹದೀಸ್‌ನವರು ಆಕ್ಷೇಪಿಸಿದ್ದಾರೆ. ಅದಕ್ಕೆ ಆ ಇಮಾಮರುಗಳ ಅನುಯಾಯಿಗಳು ಉತ್ತರವನ್ನೂ ನೀಡಿದ್ದಾರೆ. ಒಬ್ಬನು ಸ್ವಯಂ ಧರ್ಮಜ್ಞಾನಿಯಾಗಿದ್ದು ಧರ್ಮವಿಧಿಗಳನ್ನು ಕಂಡು ಹಿಡಿಯುವ ಸಾಮರ್ಥ್ಯವನ್ನು ಹೊಂದಿದ್ದರೆ ಅವನು ಉಭಯತರರ ನಡುವೆ ವ್ಯತ್ಯಾಸಗಳನ್ನು ಗಮನಿಸಬಲ್ಲನು. ಹದೀಸ್‌ಗೆ ಅನುಗುಣವಾಗಿರುವುದನ್ನು ಅಳವಡಿಸಿಕೊಳ್ಳಲು ಮತ್ತು ಅದಕ್ಕೆ ವಿರುದ್ಧವಾಗಿರುವುದನ್ನು ಬಿಟ್ಟು ಬಿಡಲು ಅವನಿಗೆ ಅಧಿಕಾರವಿದೆ. ಆದರೆ ಈ ವಿಧಿಗಳ ವಿಷಯದಲ್ಲಿ ತರ್ಕ-ವಿತರ್ಕಗಳಲ್ಲಿ ತೊಡಗಿರುವ ಸಾಮಾನ್ಯ ಅಹ್ಲೆ ಹದೀಸ್‌ನವರ ಸ್ಥಿತಿಯು ಸಾಮಾನ್ಯ ಹನಫೀಗಳಿಗಿಂತ ಉತ್ತಮವಾಗಿದೆಯೆಂದು ಹೇಳುವಂತಿಲ್ಲ. ಹನಫೀಗಳು ತಕ್‌ಲೀದ್ ಮಾಡುವಂತೆಯೇ ಅವರೂ ತಕ್‌ಲೀದ್ ಮಾಡುತ್ತಾರೆ. ಅವರು ತಮ್ಮ ಉಲೆಮಾಗಳ ಮೇಲೆ ಭರವಸೆಯಿಡುತ್ತಾರೆ. ಹನಫೀಗಳು ತಮ್ಮ ಉಲೆಮಾಗಳನ್ನು ನಂಬುತ್ತಾರೆ. ಅವರಲ್ಲಿ ಸ್ವಯಂ ಸಂಶೋಧನಾ ಸಾಮರ್ಥ್ಯವಿಲ್ಲ. ಧರ್ಮವಿಧಿಗಳನ್ನು ಸಂಶೋಧಿಸಿ ತಿಳಿದುಕೊಳ್ಳುವಷ್ಟು ಹದೀಸ್‌ನ ಜ್ಞಾನವನ್ನಾಗಲೀ ತತ್ವಗಳನ್ನು ಗ್ರಹಿಸಿಕೊಳ್ಳುವಷ್ಟು ವಿವೇಕವಾಗಲೀ ಅವರಿಗೆ ಇಲ್ಲ. ಇಮಾಮ್‌ನ ಹಿಂದೆ ಸೂರಃ ಫಾತಿಹಾ ಓದುವುದು, ಕೈಯೆತ್ತುವುದು ಅಥವಾ 'ಆಮೀನ್'

ಜೋರಾಗಿ ಹೇಳುವುದು ಇವೆಲ್ಲ ಹದೀಸ್‌ನಿಂದ ಸಿದ್ಧಪಟ್ಟ ವಿಷಯಗಳಾಗಿವೆ. ಅದರ ವಿರುದ್ಧವಾದುದು ಹದೀಸ್‌ನಿಂದ ಸಾಬೀತಾಗಿಲ್ಲ ಎಂಬ ಅವರ ಹೇಳಿಕೆಗಳು ತಕ್‌ಲೀದ್ (ಅನುಕರಣೆ) ಆಧಾರದಲ್ಲಿಯೇ ಹೊರತು ಇಜ್ತಿಹಾದ್‌ನ (ಸಂಶೋಧನೆ) ಆಧಾರದಲ್ಲಿ ಇಲ್ಲ. ಆದುದರಿಂದ ಅವುಗಳಿಗೆ ಮೌನವೇ ಸೂಕ್ತ ಉತ್ತರ. ಆದರೆ ಧರ್ಮದ ಜ್ಞಾನವಿರುವವರು ಈ ಸಮಸ್ಯೆಗಳ ಕುರಿತು ಏನಾದರೂ ಹೇಳಬಹುದು.

ಇಮಾಮ್‌ನ ಹಿಂದೆ ಸೂರಃ ಫಾತಿಹಾ ಓದುವುದರ ಕುರಿತು ನಾನು ಅಧ್ಯಯನ ನಡೆಸಿದ ಪ್ರಕಾರ ಸರಿಯಾದ ವಿಧಾನವೇನೆಂದರೆ ಇಮಾಮ್ ಜೋರಾಗಿ ಓದುವಾಗ ಮುಕ್ತದೀ ಸುಮ್ಮನಿರಬೇಕು. ಇಮಾಮ್ ಮೌನವಾಗಿ ಓದುವಾಗ ಮುಕ್ತದೀ ಕೂಡಾ ಫಾತಿಹಾ ಓದಬೇಕು. ಈ ರೀತಿ ಮಾಡುವುದರಿಂದ ಯಾವುದೇ ಕುರ್‌ಆನ್‌ನ ಆಜ್ಞೆ ಮತ್ತು ಯಾವುದೇ ಹದೀಸ್‌ಗೆ ವಿರುದ್ಧವಾಯಿತೆಂಬ ಆಶಂಕೆ ಇರುವುದಿಲ್ಲ. ಎಲ್ಲ ವಿಧದ ಆಧಾರಗಳನ್ನು ನೋಡಿ ಈ ಮಧ್ಯಮ ಮಾರ್ಗವನ್ನು ಅವಲಂಬಿಸಬಹುದಾಗಿದೆ. ಇಮಾಮ್ ಮಾಲಿಕ್(ರ) ಮತ್ತು ಇಮಾಮ್ ಅಹ್ಮದ್ ಕೂಡಾ ಇದನ್ನೇ ಅಂಗೀಕರಿಸಿದ್ದಾರೆ. ಆದರೆ ಒಬ್ಬನು ಇಮಾಮ್‌ನ ಹಿಂದೆ ಎಂದೂ ಫಾತಿಹಾ ಓದುವುದಿಲ್ಲ ಅಥವಾ ಯಾವಾಗಲೂ ಓದುತ್ತಾನೆ ಎಂದಾದರೆ ಅಂಥವನ ನಮಾಝ್ ಆಗುವುದಿಲ್ಲವೆಂದು ನಾವು ಹೇಳುವಂತಿಲ್ಲ. ಏಕೆಂದರೆ ಎರಡೂ ವಿಧಾನಗಳಿಗೆ ಬಲವಾದ ಆಧಾರಗಳಿವೆ. ಅವನು ಬೇಕು ಬೇಕೆಂದೇ ಆಜ್ಞೋಲ್ಲಂಘನೆ ಮಾಡುವುದಿಲ್ಲ. ಬದಲಾಗಿ ಅವನ ಅಭಿಪ್ರಾಯ ಪ್ರಕಾರ ಆಧಾರದಿಂದ ಸಾಬೀತಾದ ಆಜ್ಞೆ ಪ್ರಕಾರವೇ ಅವನು ವರ್ತಿಸುತ್ತಾನೆ. ಆದುದರಿಂದ ಶರೀಅತ್‌ನ (ಧರ್ಮಶಾಸ್ತ್ರ) ಆಜ್ಞೆಯನ್ನು ಬೇಕೆಂತಲೇ ಉಲ್ಲಂಘಿಸುವವನ ಮೇಲೆ ಹೊರಿಸುವಂತಹ ಆರೋಪವನ್ನು ಇವನ ಮೇಲೆ ಹೊರಿಸಲಾಗದು.

ಇನ್ನು ಕೈಯೆತ್ತುವುದಕ್ಕೆ ಮತ್ತು 'ಆಮೀನ್' ಜೋರಾಗಿ ಪಠಿಸುವುದಕ್ಕೆ ಪರವಾದ ಮತ್ತು ವಿರುದ್ಧವಾದ ಆಧಾರಗಳು ನನಗೆ ಸಮಾನವಾಗಿ ಗೋಚರಿಸುತ್ತವೆ. ಆದುದರಿಂದ ಅವುಗಳನ್ನು ಮಾಡುವವನು ಹದೀಸ್‌ಗೆ ವಿರುದ್ಧವಾಗಿ ನಡೆಯುವುದಿಲ್ಲ ಮತ್ತು ಅವುಗಳನ್ನು ಮಾಡದವನನ್ನೂ ಹದೀಸ್ ವಿರೋಧಿಯೆಂದು ಆರೋಪಿಸುವಂತಿಲ್ಲ. ಶರೀಅತ್‌ವಾಹಕ ಹಝ್ರತ್ ಪ್ರವಾದಿ(ಸ) ಅವರು ವಿವಿಧ ಸಮಯಗಳಲ್ಲಿ ವಿವಿಧ ರೀತಿಯಲ್ಲಿ ಮಾಡಿ ತೋರಿಸಿದ್ದಾರೆಂದು ನಾನು ಭಾವಿಸುತ್ತೇನೆ. ಅದೇ ರೀತಿಯಲ್ಲಿ ಸಹಾಬಿಗಳು ಕೂಡಾ ಮಾಡಿದ್ದಾರೆ. ಈಗ ಒಬ್ಬನು ಯಾವುದೇ ವಿಧಾನವನ್ನು ಅನುಸರಿಸಿದರೂ ಅವನು ಶರೀಅತ್ ಪಾಲಕನಾಗುತ್ತಾನೆ. ಅವನನ್ನು ಅನ್ಯನೆಂದು ಭಾವಿಸಿ ತಿರಸ್ಕಾರದಿಂದ ನೋಡಲು ಕಾರಣವೇ

ಇಲ್ಲ ಅಥವಾ ಅವನನ್ನು ನಾವು ಮೆಚ್ಚುವಂತಹ ವಿಧಾನದೆಡೆಗೆ ಬಲವಂತವಾಗಿ ಎಳೆದ ತರುವುದೂ ಸೂಕ್ತವಲ್ಲ. ಕೈಯೆತ್ತುವ ಅಥವಾ ಎತ್ತದಿರುವ, 'ಆಮೀನ್' ಜೋರಾಗಿ ಹೇಳು ಅಥವಾ ಹೇಳದಿರುವ ವಿಷಯಗಳು ಒಂದನ್ನು ಮಾಡಲೇಬೇಕು, ಇನ್ನೊಂದನ್ ಮಾಡಲೇಬಾರದು ಎಂದು ಹೇಳಿಕೊಳ್ಳುವಂತಹ ದೊಡ್ಡ ಮಹತ್ವದ ವಿಷಯವೇನೂ ಅಲ್ಲ

ಜುಮಾ ನಮಾಝ್‌ಗೆ ನಗರವಾಗಬೇಕೆನ್ನುವ ಸಾಮಾನ್ಯ ಹನಫೀ ಉಲೆಮಾಗಳೊಂದಿ ನನಗೆ ಭಿನ್ನಾಭಿಪ್ರಾಯವಿದೆ. ನನ್ನ ಅಧ್ಯಯನ ಪ್ರಕಾರ ಈ ವಿಷಯದಲ್ಲಿ ನಂತರದ ಕಾಲ ಜನರು ಇಮಾಮ್ ಅಬೂಹನೀಫಾರ(ರ) ಸಂಶೋಧಿತ ಆಧಾರಗಳನ್ನು ಸರಿಯಾ ಅರ್ಥಮಾಡಿಕೊಳ್ಳಲಿಲ್ಲ. ಇಮಾಮ್ ಅಬೂಹನೀಫಾರ(ರ) ಇಂಗಿತವೇನಾಗಿತ್ತೆಂದರೆ ಜುಮ ನಮಾಝ್ ವ್ಯವಸ್ಥೆಯು ಒಂದು ಪ್ರದೇಶದಲ್ಲಿ ಕೇಂದ್ರೀಯ ಸ್ಥಾನ ಪಡೆದಿರುವಂತ ಜನವಾಸದ ಸ್ಥಳದಲ್ಲಿ ಆಗಬೇಕು. ಇದು ಹದೀಸ್‌ಗೆ ಸಂಪೂರ್ಣ ಅನುಸಾರವಾಗಿದೆ. ಆದ ಅನಂತರದವರು ನಗರವನ್ನು ನಿರ್ಧರಿಸುವ ಕಾರ್ಯದಲ್ಲಿ ಬಹಳಷ್ಟು ತರ್ಕ ನಡೆಸಿದ್ದಾ ಮತ್ತು ಅದಕ್ಕೆ ಯಾವುದೇ ಪುರಾವೆಯೂ ಇಲ್ಲದಂತಹ ಅನೇಕ ಶರ್ತಗಳನ ಸೇರ್ಪಡೆಗೊಳಿಸಿದ್ದಾರೆ. *(ತರ್ಜುಮಾನುಲ್ ಕುರ್‌ಆನ್ ಜುಲೈ-ಅಕ್ಟೋಬರ್ 194*

15

ಮದ್‌ಹಬ್ ಬದಲಿಸುವುದು

ನಾಲ್ಕು ಮದ್‌ಹಬ್‌ಗಳ ಪೈಕಿ ಯಾವುದಾದರೊಂದನ್ನು ಅನುಸರಿಸುವುದು ಹಿಂದಿನ ಕಾಲಗಳಿಗಿಂತ ಈ ಕಾಲದಲ್ಲಿ ಕಡ್ಡಾಯವಾಗಿ ಬಿಟ್ಟಿದೆ. ಆದರೆ ವಿದ್ವಾಂಸನೊಬ್ಬನಿಗೆ ಈ ನಾಲ್ಕು ಪ್ರಸಿದ್ಧ ಮದ್‌ಹಬ್‌ಗಳನ್ನು ಬಿಟ್ಟು, ಹದೀಸ್‌ನಂತೆ ನಡೆಯಲು ಅಥವಾ ಇಜ್ತಿಹಾದ್ (ಸಂಶೋಧನೆ) ನಡೆಸಲು ಅಧಿಕಾರವಿದೆಯೇ? ಅಧಿಕಾರವಿಲ್ಲವೆಂದಾದರೆ ಅದಕ್ಕೆ ಆಧಾರವೇನು? ಆ ವಿದ್ವಾಂಸನು ಮಾಡುವುದು ಸರಿಯೆಂದಾದರೆ ತಹ್ತಾವಿಯಲ್ಲಿ ಉಲ್ಲೇಖವಾಗಿರುವ ದೊಡ್ಡ ಕರ್ಮಶಾಸ್ತ್ರ ಪಂಡಿತನೊಬ್ಬನ ಈ ಕೆಳಗಿನ ಮಾತಿನ ಅರ್ಥವೇನು?

"ಸಂಶೋಧನೆ ನಡೆಸಿ, ಆಧಾರ ಸಹಿತ ಒಂದು ಮದ್‌ಹಬನ್ನು ಬಿಟ್ಟು ಇನ್ನೊಂದು ಮದ್‌ಹಬ್‌ಗೆ ಹೋಗುವುದು ದಂಡನಾರ್ಹ ಅಪರಾಧವಾಗಿದೆ."

○ ನನ್ನ ಅಭಿಪ್ರಾಯದಲ್ಲಿ ಒಬ್ಬ ವಿದ್ವಾಂಸನ ಮಟ್ಟಿಗೆ ತಕ್‌ಲೀದ್ (ಒಂದು ರ್ಮಶಾಸ್ತ್ರ ರೀತಿಯನ್ನು ಅಂಧವಾಗಿ ಅನುಸರಿಸುವುದು) ಮಾಡುವುದು ಸಿಂಧುವಲ್ಲ. ಅದು ಪವೂ ಅದಕ್ಕಿಂತ ಭೀಕರವೂ ಆಗಿದೆ. ಆದರೆ ಒಂದು ವಿಷಯ ನೆನಪಿಡಬೇಕು. ವೇನೆಂದರೆ ಒಬ್ಬನು ಸಂಶೋಧನೆ ನಡೆಸಿದ ನಂತರ ಒಂದು ಮದ್‌ಹಬ್‌ನ ವಿಧಾನವನ್ನು ತ್ತು ತತ್ವಗಳನ್ನು ಅನುಸರಿಸುವುದು ಒಂದು ವಿಷಯವಾದರೆ, ತಕ್‌ಲೀದ್ ಮಾಡುತ್ತಲೇ ರುವೆನೆಂದು ಶಪಥ ಹಾಕುವುದು ಬೇರೆಯೇ ವಿಷಯವಾಗಿದೆ. ಇದನ್ನು ನಾನು ಸರಿಯೆಂದು ವಿಸುವುದಿಲ್ಲ. ಇನ್ನು ತಹ್ತಾವಿಯಲ್ಲಿರುವ ನೀವು ಉದ್ಧರಿಸಿದ ಫತ್ವಾ (ಧರ್ಮವಿಧಿ)ದ ಷಯ. ಅದನ್ನು ಎಷ್ಟೇ ದೊಡ್ಡ ವಿದ್ವಾಂಸನು ಬರೆದಿದ್ದರೂ ಅದನ್ನು ಅಂಗೀಕಾರಾರ್ಹವೆಂದು ನು ಭಾವಿಸುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಕೇವಲ ಸ್ವಾರ್ಥಕ್ಕಾಗಿ ಒಂದು ಮದ್‌ಹಬನ್ನು ಟ್ಟು ಇನ್ನೊಂದನ್ನು ಅನುಸರಿಸುವುದು ಪಾಪವಾಗಿದೆ. ಸಂಶೋಧನೆ ನಡೆಸಿ ಹಾಗೆ ಡುವುದಾದರೆ ಅದು ಪಾಪವಲ್ಲ.

(ತರ್ಜುಮಾನುಲ್ ಕುರ್‌ಆನ್, ಜುಲೈ-ಅಕ್ಟೋಬರ್ 1944)

16

ವಹ್ಹಾಬಿ

- *ವಹ್ಹಾಬಿ ಪಂಥದ ಸ್ಥಾಪಕ ಯಾರು? ಅದರ ವಿಶಿಷ್ಟ ನಂಬಿಕೆಗಳೇನು? ಭಾರತದ ಅದರ ಬೋಧನೆಗಳು ಪ್ರಚಾರವಾದದ್ದು ಹೇಗೆ? ಮುಸ್ಲಿಮ್ ಉಲಮಾಗಳು ಅದ ಖಂಡಿಸಿರಲಿಲ್ಲವೇ? ಖಂಡಿಸಿದ್ದರೆ ಹೇಗೆ? ಈ ಪಂಥವು ಇಸ್ಲಾಮಿನ ಪ್ರಚಾರದ ಭಾಗವಹಿಸಿತ್ತೇ ಅಥವಾ ಅದರ ಅಪಪ್ರಚಾರದಲ್ಲೇ?*

○ ವಹ್ಹಾಬಿ ಎಂಬುದು ಯಾವುದೇ ಪಂಥದ ಹೆಸರಲ್ಲ. ಇದು ಅಹ್ಲ ಹದೀಸ್‌ಗಳನ್ನು ಮತ್ತು ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್‌ರ ಅನುಯಾಯಿಗಳ ಅಣಕಿಸಲು ಇಟ್ಟ ಹೆಸರಾಗಿದೆ. ಅಹ್ಲುಲ್ ಹದೀಸ್ ಒಂದು ಪುರಾತನ ವಿಚಾರಧಾರೆಯಾಗಿ ನಾಲ್ಕು ಮಂದಿ ಇಮಾಮರ ಕಾಲದಿಂದಲೇ ಆ ವಿಚಾರಧಾರೆಯಿತ್ತು. ಇದು ಯಾವು ಇಮಾಮರ ಅನುಸರಣೆಗೆ ಬದಲಾಗಿ ನೇರವಾಗಿ ಕುರ್‌ಆನ್ ಮತ್ತು ಹದೀಸ್‌ನಿಂ ವಿಧಿಗಳನ್ನು ಸಂಶೋಧಿಸುವವರ ಗುಂಪಾಗಿದೆ. ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ ಅನುಯಾಯಿಗಳು ನಿಜವಾಗಿ ಹಂಬಲಿ ಮದ್‌ಹಬ್‌ನ ಜನರಾಗಿದ್ದಾರೆ. ಅವರ ಅಕಾ (ವಿಶ್ವಾಸ-ಶ್ರದ್ಧೆಗಳು) ಮತ್ತು ಕರ್ಮಶಾಸ್ತ್ರವು ಇಮಾಮ್ ಅಹ್ಮದ್ ಬಿನ್ ಹಂಬಲ್(ಅವರದ್ದೇ ಆಗಿದೆ. ಈ ವರ್ಗದ ಜನರು ಭಾರತದಲ್ಲಿ ಬಹುಶಃ ಎಲ್ಲಿಯೂ ಇಲ್ಲ. ಇ ವಹ್ಹಾಬಿ ಎಂದು ಹೇಳುವುದು ಅಹ್ಲುಲ್ ಹದೀಸ್‌ಗಳನ್ನೇ ಆಗಿದೆ. ಪ್ರಾರಂಭದಲ್ಲಿ ಅವ ಅನೇಕ ಉತ್ತಮ ಕೆಲಸಗಳನ್ನು ಮಾಡಿದ್ದರು. ಈಗಲೂ ಅವರಲ್ಲಿ ಒಳ್ಳೆಯವರಿದ್ದಾರೆ. ಜ ಅವರಲ್ಲಿ ಅನೇಕ ಅವಿವೇಕಿ ಮತ್ತು ಜಗಳಗಂಟಿ ಜನರೂ ಸೇರಿಕೊಂಡಿದ್ದಾರೆ. ಅವ ಸಣ್ಣ ಸಣ್ಣ ವಿಷಯಗಳಲ್ಲಿ ವ್ಯರ್ಥ ತರ್ಕ ಮತ್ತು ಸಂವಾದಗಳನ್ನು ನಡೆಸುತ್ತಿರುತ್ತಾ ಇಂತಹ ಅವಿವೇಕಿಗಳು ಹನಫೀಗಳಲ್ಲಿಯೂ ಧಾರಾಳ ಮಂದಿಯಿದ್ದಾರೆ. ಮುಸ್ಲಿ ಸಮುದಾಯದಲ್ಲಿ ವಾದ-ಪ್ರತಿವಾದಗಳು ಮತ್ತು ಜಗಳದ ವಾತಾವರಣವಿರುವುದು ಎರಡು ವರ್ಗಗಳ ಕೊಡುಗೆಯಿಂದಲೇ ಆಗಿದೆ.

- *ನಜ್ದ್‌ನಿಂದ ಒಂದು ಫಿತ್ನಾ (ಕ್ಷೋಭೆ) ಎದ್ದೇಳಲಿದೆ ಎಂದು ಯಾವುದಾದ ಹದೀಸ್‌ನಲ್ಲಿ ಬಂದಿದೆಯೇ? ಈ ಹದೀಸ್ ಪ್ರಸ್ತುತ ಪಂಥದವ ಅನ್ವಯಿಸುತ್ತದೆಯೇ?*

○ ನಜ್ದ್ ಅಥವಾ ಪೂರ್ವದಿಂದ ಒಂದು ಫಿತ್ನಾ ಏಳುವ ಬಗ್ಗೆ ಹದೀಸ್‌ನಲ್ಲಿ ರದಿಯಾಗಿದೆ. ಆದರೆ ಅದನ್ನು ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್‌ರಿಗೆ ನ್ವಯಗೊಳಿಸುವುದು ಕುರುಡು ವಿಭಾಗೀಯ ಪಕ್ಷಪಾತದ ಪರಿಣಾಮವಾಗಿದೆ. ಒಂದು ರ್ಗವು ಇನ್ನೊಂದು ವರ್ಗದೊಂದಿಗೆ ಜಗಳಕ್ಕೆ ಇಳಿದಾಗ ಅದರ ವಿರುದ್ಧ ಎಲ್ಲ ಸ್ತ್ರಗಳನ್ನೂ ಬಳಸುತ್ತದೆ. ಎಲ್ಲಿಯವರೆಗೆಂದರೆ ಅವರು ಅಲ್ಲಾಹ್ ಮತ್ತು ಪ್ರವಾದಿಯನ್ನು ಎಡಾ ಜಗಳದ ಒಂದು ಪಕ್ಷವಾಗಿ ಮಾರ್ಪಡಿಸಲೂ ಹೇಸುವುದಿಲ್ಲ.

(ತರ್ಜುಮಾನುಲ್ ಕುರ್‌ಆನ್ ಜುಲೈ-ಅಕ್ಟೋಬರ್ 1944)

17

ರಮಝಾನ್‌ನಲ್ಲಿ ಕಿಯಾಮುಲ್ಲೈಲ್

(1) ಸಾಮಾನ್ಯವಾಗಿ ವಿದ್ವಾಂಸರು ತರಾವೀಹ್ ನಮಾಝನ್ನು ಇಶಾ ನಮಾಝ್ ಜತೆಗೆ ನಿರ್ವಹಿಸುವುದು ಉತ್ತಮವೆನ್ನುತ್ತಾರೆ. ತರಾವೀಹ್ ಜಮಾಅತ್ ಸುನ್ನತ್ ಮುಅಕ್ಕಿದಃ ಕಿಫಾಯಃ ಎಂದೂ ಹೇಳುತ್ತಾರೆ. ಅರ್ಥಾತ್: ಒಂದು ಊರಿನ ತರಾವೀಹ್ ನಮಾಝನ್ನು ಜಮಾಅತ್ ಸಹಿತ ನಿರ್ವಹಿಸದೆ ಇದ್ದರೆ ಊರಿನವರೆಲ್ಲ ತಪ್ಪಿತಸ್ತರಾಗುವರು. ಇಬ್ಬರಾದರೂ ಸೇರಿ ಮಸೀದಿಯಲ್ಲಿ ಸಾಮೂಹಿಕವಾ ತರಾವೀಹ್ ನಮಾಝ್ ನಿರ್ವಹಿಸಿದರೆ ಎಲ್ಲರೂ ಜಮಾಅತ್ ತೊರೆದ ಪಾಪದಿಂ ಮುಕ್ತರಾಗುವರು. ಇದು ಸರಿಯೆ? ಇದು ಸರಿಯಾಗಿದ್ದರೆ ಹ. ಅಬೂಬಕರ್(ಅವರ ಕಾಲದಲ್ಲಿ ಇದನ್ನು ಏಕೆ ಆಚರಿಸಲಿಲ್ಲ? ಅಂದಿನ ಮುಸ್ಲಿಮರ ಬಗ್ಗೆ ಇರು ವಿಧಿಯೇನು? ಅವರೆಲ್ಲರೂ ತರಾವೀಹ್ ನಮಾಝ್ ಜಮಾಅತ್ ಸಹಿತ ಪಠಿಸ ಕಾರಣ ತಪ್ಪಿತಸ್ಥರಾಗಿದ್ದರೆ?

(2) ತರಾವೀಹ್ ನಮಾಝನ್ನು ಆರಂಭ ವೇಳೆಯಲ್ಲೇ ಮಲಗುವುದಕ್ಕಿಂತ ಮುಂ ನಿರ್ವಹಿಸುವುದು ಕಡ್ಡಾಯವೇ? ಸಹ್ರೀಯ ಸಮಯದಲ್ಲಿ ತರಾವೀಹ ನಿರ್ವಹಿಸುವವನಿಗೆ ಅಷ್ಟೇ ಪುಣ್ಯ ಸಿಗಲಾರದೆ? ಒಂದು ವೇಳೆ ಸಿಗಲಾರದೆಂದಾದ ಹ. ಉಮರ್(ರ) ಅವರ ಈ ಮಾತಿನ ಅರ್ಥವೇನು? "ನಮಾಝ್ ಮಾಡುವವರಿಗಿಂ ಮಲಗುವವರೇ ಉತ್ತಮರು."

(3) ರಮಝಾನ್ ತಿಂಗಳಲ್ಲಿ ತಹಜ್ಜುದ್‌ಗಿಂತ ತರಾವೀಹ್ ಉತ್ತಮವೇ? ಒಬ್ಬ ಇಶಾ ನಮಾಝ್ ಮಾಡಿ ಮಲಗಿ ತರಾವೀಹ್ ನಿರ್ವಹಿಸದೆಯೇ ರಾತ್ರಿ ಎದ್ದ ತಹಜ್ಜುದ್ ನಿರ್ವಹಿಸಿದರೆ ಅವನಿಗೆ ಏನಾದರೂ ಪಾಪವಿದೆಯೇ? ತಹಜ್ಜುದ ನಮಾಝ್‌ಗೆ ಪವಿತ್ರ ಕುರ್‌ಆನ್‌ನಲ್ಲಿ ಸ್ಪಷ್ಟ ಪ್ರೇರಣೆಯಿದೆ, ತರಾವೀಹ್‌ಗೆ ಆ ಸ್ಥಾ ಪ್ರಾಪ್ತವಿಲ್ಲ ಅಲ್ಲವೇ? ತರಾವೀಹ್ ಮತ್ತು ತಹಜ್ಜುದ್ ಎರಡನ್ನೂ ನಿರ್ವಹಿಸುವುದ ಕಷ್ಟ ಸಾಧ್ಯವೆಂಬುದು ಗಮನಾರ್ಹ.

(4) ತರಾವೀಹ್‌ನ ರಕಅತ್‌ಗಳೆಷ್ಟು? 8,20,36,40, ಈ ಪೈಕಿ ಯಾವುದ ಪ್ರವಾದಿವರ್ಯರಿಂದ(ಸ) ಪ್ರಾಮಾಣಿಕವಾಗಿ ವರದಿಯಾಗಿದೆ?

(5) ಪ್ರವಾದಿ(ಸ) ಕೇವಲ ಮೂರು ದಿವಸ ಮಸೀದಿಯಲ್ಲಿ ಜಮಾಅತ್ ಸಹಿ ತರಾವೀಹ್ ನಿರ್ವಹಿಸಿ, ಅನಂತರ ಜನರ ಹೆಚ್ಚಳವನ್ನು ಕಂಡು "ಇದು ನಿಮ್ಮ ಮೇ

ಕಡ್ಡಾಯವಾಗದಿರಲಿ. ನೀವು ನಿಮ್ಮ ಮನೆಗಳಲ್ಲೇ ಈ ನಮಾಝನ್ನು ನಿರ್ವಹಿಸಿರಿ. ಏಕೆಂದರೆ ಕಡ್ಡಾಯವಲ್ಲದ ನಮಾಝ್ ನಿರ್ವಹಿಸಲು ಉತ್ತಮ ಸ್ಥಳ ಮನೆಯೇ ಆಗಿದೆ" ಎಂದು ಹೇಳಿದ ನಂತರ ಒಬ್ಬ ಸಹಾಬಿಗೆ ಅದನ್ನು ಜಮಾಅತ್ ಸಹಿತ ಮಸೀದಿಯಲ್ಲಿ ನಿರ್ವಹಿಸುವ ಕ್ರಮವನ್ನು ಜಾರಿಗೊಳಿಸುವ ಹಕ್ಕಿದೆಯೇ?

○ ತರಾವೀಹ್‌ನ ಕುರಿತು ನನಗೆ ತಿಳಿದಿರುವುದರ ಸಾರಾಂಶ ಹೀಗಿದೆ:

(1) ಪ್ರವಾದಿ(ಸ) ಇತರ ದಿನಗಳಿಗಿಂತ ರಮಝಾನ್ ತಿಂಗಳಲ್ಲಿ ಕಿಯಾಮುಲ್ಲೈಲ್‌ಗೆ ಹೆಚ್ಚಿನ ಪ್ರೇರಣೆ ನೀಡುತ್ತಿದ್ದರು. ಇದರಿಂದ ರಮಝಾನ್‌ನಲ್ಲಿ ಕಿಯಾಮುಲ್ಲೈಲ್ ಪ್ರವಾದಿವರ್ಯರಿಗೆ(ಸ) ಬಹಳ ಪ್ರಿಯವಾಗಿತ್ತು ಎಂದು ತಿಳಿದು ಬರುತ್ತದೆ.

(2) ನಂಬಲರ್ಹ ಹದೀಸ್ ವರದಿಗಳಿಂದ ತಿಳಿದು ಬರುವಂತೆ ಒಮ್ಮೆ ರಮಝಾನ್ ತಿಂಗಳಲ್ಲಿ ಪ್ರವಾದಿ(ಸ) ಅವರು ಮೂರು ರಾತ್ರಿ ತರಾವೀಹ್ ನಮಾಝನ್ನು ಜಮಾಅತ್ ಸಹಿತ ನಿರ್ವಹಿಸಿದರು. 'ಇದು ನಿಮ್ಮ ಮೇಲೆ ಕಡ್ಡಾಯವಾದೀತೋ ಎಂದು ನನಗೆ ಭಯವಾಗುತ್ತಿದೆ' ಎಂದು ಹೇಳಿ ಅನಂತರ ಅದನ್ನು ತೊರೆದರು. ಇದರಿಂದ, ತರಾವೀಹ್‌ಗೆ ಜಮಾಅತ್ ಸುನ್ನತ್ ಆಗಿದೆ ಮತ್ತು ತರಾವೀಹ್‌ಗೆ ಕಡ್ಡಾಯ ನಮಾಝ್‌ನ ಸ್ಥಾನಮಾನವಿಲ್ಲವೆಂದು ತಿಳಿದು ಬರುತ್ತದೆ. ಜನರು ಒಂದು ಮೆಚ್ಚುಗೆಯ ಸುನ್ನತ್‌ನ ರೂಪದಲ್ಲಿ ತರಾವೀಹ್ ನಮಾಝನ್ನು ನಿರ್ವಹಿಸುತ್ತಿರಬೇಕೇ ಹೊರತು ಅದನ್ನು ಕಡ್ಡಾಯ ನಮಾಝ್‌ನಂತೆ ಮಾಡಿಕೊಳ್ಳಬಾರದೆಂದು ಪ್ರವಾದಿ(ಸ) ಬಯಸಿದ್ದರೆಂದೂ ಇದರಿಂದ ತಿಳಿದು ಬರುತ್ತದೆ.

(3) ಎಲ್ಲ ಹದೀಸ್ ವರದಿಗಳನ್ನು ಅವಲೋಕಿಸಿದಾಗ ತಿಳಿಯುವುದೇನೆಂದರೆ ಪ್ರವಾದಿ(ಸ) ಸ್ವತಃ ರಮಝಾನ್‌ನಲ್ಲಿ ಮಾಡಿಸಿದ ತರಾವೀಹ್ ನಮಾಝ್ ಆರಂಭದ ವೇಳೆಯಲ್ಲಿ ಆಗಿತ್ತೇ ಹೊರತು ಅಂತ್ಯ ಜಾಮದಲ್ಲಾಗಿರಲಿಲ್ಲ. ರಕಅತ್‌ನ ಸಂಖ್ಯೆ 8 ಆಗಿತ್ತು 20 ಅಲ್ಲ (20 ಎಂಬ ವರದಿಯಿದ್ದರೂ ಅದು 8 ಎಂಬ ವರದಿಗಿಂತ ಬಲಹೀನವಾಗಿದೆ). ಅಲ್ಲದೆ ಪ್ರವಾದಿವರ್ಯರ(ಸ) ಜತೆ ನಮಾಝ್ ಮಾಡಿದ ಬಳಿಕ ಜನರು ಮನೆಗೆ ಹೋಗಿ ಇನ್ನಷ್ಟು ರಕಅತ್‌ಗಳನ್ನು ನಿರ್ವಹಿಸುತ್ತಿದ್ದರು. ಆದರೆ ಆ ಹೆಚ್ಚುವರಿ ರಕಅತ್‌ಗಳು ಎಷ್ಟಾಗಿದ್ದುವು? ಎಂಬ ಕುರಿತು ಯಾವುದೇ ಸ್ಪಷ್ಟ ವರದಿ ಸಿಗುವುದಿಲ್ಲ. ಆದರೆ ಅನಂತರ ಹ. ಉಮರ್(ರ) ಅವರು 20 ರಕಅತ್‌ಗಳ ಕ್ರಮವನ್ನು ಜಾರಿಗೊಳಿಸಿದರು ಮತ್ತು ಎಲ್ಲ ಸಹಾಬಿಗಳೂ(ರ) ಅದನ್ನು ಅನುಮೋದಿಸಿದರು. ಇದರಿಂದ ತಿಳಿಯುವುದೇನೆಂದರೆ ಆ ಹೆಚ್ಚುವರಿ ರಕಅತ್‌ಗಳು 12 ಆಗಿದ್ದವು.

(4) ಪ್ರವಾದಿವರ್ಯರ(ಸ) ಕಾಲದಿಂದ ಹ. ಉಮರ್(ರ) ಅವರ ಕಾಲದ ತನಕ ಒಂದು ಜಮಾಅತ್‌ನಲ್ಲಿ ಎಲ್ಲರೂ ತರಾವೀಹ್ ನಿರ್ವಹಿಸುವ ಕ್ರಮ ಜಾರಿಯಲ್ಲಿರಲಿಲ್ಲ.

ಆಗ ಜನರು ತಂತಮ್ಮ ಮನೆಗಳಲ್ಲಿ ಅದನ್ನು ನಿರ್ವಹಿಸುತ್ತಿದ್ದರು ಅಥವಾ ಮಸೀದಿಗಳ ಸಣ್ಣ ಸಣ್ಣ ಜಮಾಅತ್‌ಗಳಲ್ಲಿ ಬೇರೆ ಬೇರೆಯಾಗಿ ನಿರ್ವಹಿಸುತ್ತಿದ್ದರು. ಹ. ಉಮರ್(ಅವರು ಮಾಡಿದ್ದಿಷ್ಟೇ. ಈ ಭಿನ್ನತೆಯನ್ನು ಹೋಗಲಾಡಿಸಿ ಎಲ್ಲರೂ ಒಂದೇ ಜಮಾಅತ್‌ನ ತರಾವೀಹ್ ನಿರ್ವಹಿಸುವಂತೆ ಅವರು ಆಜ್ಞಾಪಿಸಿದರು. ಅದಕ್ಕೆ ಹ. ಉಮರ್(ರ) ಅವ ಸ್ಪಷ್ಟ ಪುರಾವೆಯಿತ್ತು. ಪ್ರವಾದಿ(ಸ) ಮೂರು ಸಲ ತರಾವೀಹ್ ನಮಾಝ್ ಜಮಾಅ ಸಹಿತ ನಿರ್ವಹಿಸಿದ್ದರು. ಆದ್ದರಿಂದ ಅದನ್ನು ಬಿದ್‌ಅತ್ ಎನ್ನುವಂತಿರಲಿಲ್ಲ. 'ಇದು ನಿ ಮೇಲೆ ಕಡ್ಡಾಯವಾಗದಿರಲಿ' ಎಂದು ಹೇಳಿ ಪ್ರವಾದಿ(ಸ) ಅದನ್ನು ತೊರೆದುದರಿಂದ ಅ ನಿಧನಾನಂತರ ಅದು ಕಡ್ಡಾಯವಾಗುವ ಅಪಾಯವೇ ಉಳಿಯಲಿಲ್ಲ. ಈ ಹಿನ್ನೆಲೆಯ ಹ. ಉಮರ್(ರ) ಒಂದು ಸುನ್ನತ್ ಎಂಬ ನೆಲೆಯಲ್ಲಿ ಅದನ್ನು ಜಾರಿಗೊಳಿಸಿದರು. ಇ ಹ. ಉಮರ್(ರ) ಅವರ ಧೀಮಂತಿಕೆಯ ಅತ್ಯುತ್ತಮ ನಿದರ್ಶನಗಳಲ್ಲೊಂದಾಗಿದೆ. ಅವ ಪ್ರವಾದಿ(ಸ) ಅವರ ಇಂಗಿತವನ್ನು ಸರಿಯಾಗಿ ಅರ್ಥ ಮಾಡಿ ಸಮುದಾಯದಲ್ಲಿ ಒಂ ಉತ್ತಮ ಪದ್ಧತಿಯನ್ನು ಜಾರಿಗೊಳಿಸಿದರು. ಯಾವ ಸಹಾಬಿಯೂ(ರ) ಅದ ಆಕ್ಷೇಪಿಸದಿರುವುದು ಮಾತ್ರವಲ್ಲ ಎಲ್ಲರೂ ಅದನ್ನು ಮನಸಾರೆ ಸ್ವೀಕರಿಸಿರುವುದು ಅವ ಪ್ರವಾದಿ(ಸ) ಅವರ ಇಂಗಿತವನ್ನೇ ಪೂರ್ಣಗೊಳಿಸಿದ್ದಾರೆ ಎಂಬುದಕ್ಕೆ ಪುರಾವೆಯಾಗಿ 'ಅದನ್ನು ಕಡ್ಡಾಯಗೊಳಿಸಿಕೊಳ್ಳದಿರಲೆಂದು ಸ್ವಯಂ ಹ. ಉಮರ್(ರ) ಅವರು ಒ ತರಾವೀಹ್ ನಮಾಝ್‌ನಲ್ಲಿ ಭಾಗವಹಿಸಿರಲಿಲ್ಲ. ಅವರು ಅಬ್ದುರ್ರಹ್ಮಾನ್ ಬಿನ್ ಅಬ್ ಜತೆ ಮಸೀದಿಯಿಂದ ಹೊರಟರು ಮತ್ತು ಜನರು ತರಾವೀಹ್ ನಮಾಝ ನಿರ್ವಹಿಸುತ್ತಿರುವುದನ್ನು ಕಂಡು ಅದನ್ನು ಪ್ರಶಂಸಿಸಿದರು.

(5) ಹ. ಉಮರ್(ರ) ಅವರ ಕಾಲದಲ್ಲಿ ತರಾವೀಹ್ ನಮಾಝನ್ನು ಕ್ರಮಬದ್ಧವ ಜಮಾಅತ್ ಸಹಿತ ನಿರ್ವಹಿಸಲು ಆರಂಭಿಸಿದಾಗ ಎಲ್ಲ ಸಹಾಬಿಗಳ(ರ) ಒಮ್ಮತದೊಂ 20 ರಕಅತ್‌ಗಳನ್ನು ನಿರ್ವಹಿಸಲಾಯಿತು. ಅದನ್ನೇ ಹ. ಉಸ್ಮಾನ್(ರ) ಮತ್ತು ಅಲೀ(ರ) ಅವರ ಕಾಲದಲ್ಲೂ ಅನುಸರಿಸಲಾಯಿತು. ಈ ವಿಷಯದಲ್ಲಿ ಮೂರು ಮ ಖಲೀಫಾಗಳ ಒಮ್ಮತ ಮತ್ತು ಸಹಾಬಿಗಳಾರೂ ಅದನ್ನು ವಿರೋಧಿಸದೆ ಇದ್ದು ಪ್ರವಾದಿ(ಸ) ಕಾಲದಿಂದಲೇ ಜನರು 20 ರಕಅತ್‌ಗಳನ್ನು ಪಠಿಸುತ್ತಿದ್ದರೆಂಬುದ ಪುರಾವೆಯಾಗಿದೆ. ಆದ್ದರಿಂದಲೇ ಇಮಾಮ್ ಅಬೂ ಹನೀಫಾ, ಇಮಾಮ್ ಶಾಫಿಈ ಮ ಇಮಾಮ್ ಅಹ್ಮದ್ ಬಿನ್ ಹಂಬಲ್(ರ) 20 ರಕಅತ್‌ಗಳನ್ನೇ ಸಮರ್ಥಿಸಿದ್ದಾರೆ. ಒಂ ವರದಿಯಂತೆ ಇಮಾಮ್ ಮಾಲಿಕ್‌ರ ಅಭಿಪ್ರಾಯವೂ ಅದುವೇ ಆಗಿದೆ. ದಾವೂ ಝಾಹಿರಿ(ರ) ಅವರೂ ಇದನ್ನೇ ದೃಢೀಕೃತ ಸುನ್ನತ್ ಎಂದು ಅಂಗೀಕರಿಸಿದ್ದಾರೆ.

(6) ಹ. ಉಮರ್ ಬಿನ್ ಅಬ್ದುಲ್ ಅಝೀಝ್ ಮತ್ತು ಹ. ಅಬಾನ್ ಬಿ ಉಸ್ಮಾನ್(ರ) ಅವರು 20 ರಕಅತ್‌ಗೆ ಬದಲಾಗಿ 36 ರಕಅತ್‌ಗಳನ್ನು ನಿರ್ವಹಿಸುವ ಪದ್

ಆರಂಭಿಸಿದ್ದುದರ ಕಾರಣ ಅವರ ಸಂಶೋಧನೆ 'ಖಿಲಫಾಉರ್ರಾಶಿದೀನ್'ರ ಸಂಶೋಧನೆಗಿಂತ ಭಿನ್ನವಾಗಿತ್ತೆಂಬುದಲ್ಲ. ಬದಲಾಗಿ ಮಕ್ಕಾದ ಹೊರಗಿನ ಜನರೂ ಮಕ್ಕಾದವರಿಗೆ ಸರಿಸಮಾನರಾಗಲಿ ಎಂಬುದೇ ಅವರ ಉದ್ದೇಶವಾಗಿತ್ತು. ಮಕ್ಕಾದವರು ತರಾವೀಹ್‌ನ ಪ್ರತಿ ನಾಲ್ಕು ರಕಅತ್‌ಗಳ ನಂತರ ಕಅಬಾದ ತವಾಫ್ ಮಾಡುವುದು ರೂಢಿಯಾಗಿತ್ತು. ಈ ಇಬ್ಬರು ಮಹಾತ್ಮರು ಪ್ರತಿ ತವಾಫ್‌ಗೆ ಬದಲು ನಾಲ್ಕು ರಕಅತ್‌ಗಳನ್ನು ಹೆಚ್ಚುವರಿ ನಿರ್ವಹಿಸಲು ಆರಂಭಿಸಿದರು. ಈ ಪದ್ಧತಿ ಮದೀನಾದವರಲ್ಲಿ ರೂಢಿಯಲ್ಲಿತ್ತು. ಇಮಾಮ್ ಮಾಲಿಕ್(ರ) ಅವರು ಮದೀನಾದವರ ಕ್ರಮವನ್ನೇ ಆಧಾರವಾಗಿಸುತ್ತಿದ್ದರು. ಆದ್ದರಿಂದ ಅವರು ನಂತರ 20 ರಕಅತ್‌ನ ಬದಲು 36 ರಕಅತ್ ಪಠಿಸಬೇಕೆಂದು ವಿಧಿಸಿದರು.

(7) ಒಂದು ಊರಿನಲ್ಲಿ ತರಾವೀಹ್ ನಮಾಝ್ ಜಮಾಅತ್ ಸಹಿತ ನಿರ್ವಹಿಸದೆ ಇದ್ದರೆ ಎಲ್ಲರೂ ತಪ್ಪಿತಸ್ಥರಾಗುವರೆಂದು ವಿದ್ವಾಂಸರು ಯಾವ ಅಧಾರದಲ್ಲಿ ಹೇಳಿರುವರೆಂದರೆ ತರಾವೀಹ್ ಇಸ್ಲಾಮ್‌ನ ಒಂದು ಸುನ್ನತ್ ಆಗಿದೆ. ಅದು ಖಿಲಾಫತ್‌ನ ಕಾಲದಿಂದ ಮುಸ್ಲಿಮ್ ಸಮುದಾಯದಲ್ಲಿ ಚಾರಿಯಲ್ಲಿದೆ. ಇಂತಹ ಒಂದು ಇಸ್ಲಾಮೀ ಪದ್ಧತಿಯನ್ನು ಬಿಟ್ಟು ಬಿಡುವುದು ಮಾತ್ರವಲ್ಲ ಊರಿನ ಎಲ್ಲ ಜನರೂ ಒಟ್ಟಾಗಿ ಅದನ್ನು ತೊರೆಯುವುದು ಧರ್ಮದ ಬಗೆಗಿನ ಸಾರ್ವತ್ರಿಕ ಅಸಡ್ಡೆಯ ಲಕ್ಷಣವಾಗಿದೆ. ಅದನ್ನು ಹಾಗೆಯೇ ಸಹಿಸಿದರೆ ಬರಬರುತ್ತಾ ಅಲ್ಲಿ ಎಲ್ಲ ಇಸ್ಲಾಮೀ ಪದ್ಧತಿಗಳೂ ಅಳಿದುಹೋಗುವ ಭಯವಿದೆ.

(8) ತರಾವೀಹ್‌ಗೆ ಅತ್ಯುತ್ತಮ ಸಮಯ ಯಾವುದು ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಇಶಾದ ಜತೆ ಎಂಬುದಕ್ಕೂ ತಹಜ್ಜುದ್‌ನ ಸಮಯದಲ್ಲಿ ಎಂಬುದಕ್ಕೂ ಆಧಾರಗಳಿವೆ. ಆದರೆ ರಾತ್ರಿಯ ಅಂತ್ಯಜಾಮದ ಕಡೆಗೇ ಹೆಚ್ಚಿನ ಒಲವು ಕಾಣಿಸುತ್ತದೆ. ಆದರೆ ಇಶಾದ ಜತೆಗೆ ನಿರ್ವಹಿಸುವುದಕ್ಕೆ ಪ್ರಾಶಸ್ತ್ಯ ನೀಡಲು ಒಂದು ಬಲವಾದ ಕಾರಣವಿದೆ. ಸಾಮಾನ್ಯವಾಗಿ ಮುಸ್ಲಿಮರು ಇಶಾದ ಜತೆಗೇ ತರಾವೀಹ್ ನಮಾಝ್ ನಿರ್ವಹಿಸಬಲ್ಲರು. ರಾತ್ರಿಯ ಅಂತ್ಯ ಜಾಮದಲ್ಲಿ ನಮಾಝ್ ಮಾಡಿದರೆ ಮುಸ್ಲಿಮರ ಬಹುಸಂಖ್ಯೆಯ ಜನರು ಅದರ ಪುಣ್ಯದಿಂದ ವಂಚಿತರಾಗುವ ಸಾಧ್ಯತೆಯಿದ್ದು ಅದೊಂದು ದೊಡ್ಡ ನಷ್ಟವಾಗಿದೆ. ಕೆಲವು ಮಂದಿ ವಿದ್ವಾಂಸರು ರಾತ್ರಿಯ ಅಂತ್ಯ ಜಾಮದ ಶ್ರೇಷ್ಠತೆಯಮ್ನ ಪರಿಗಣಿಸಿ ಇಶಾದ ಜತೆಗೆ ನಡೆಯುವ ತರಾವೀಹ್‌ನ ಜಮಾಅತ್‌ನಲ್ಲಿ ಭಾಗವಹಿಸದಿದ್ದರೆ ಸಾಮಾನ್ಯ ಜನರು ಒಂದೋ ಆ ವಿದ್ವಾಂಸರ ಬಗ್ಗೆ ಸಂಶಯಕ್ಕೆ ಒಳಗಾಗುವರು ಅಥವಾ ಅವರ ಅನುಕರಣೆಯಲ್ಲಿ ತಾವೂ ಜಮಾಅತ್ ತೊರೆಯಬಹುದು. ಇಲ್ಲದೆ ಹೋದರೆ ಈ ವಿದ್ವಾಂಸರು ತಮ್ಮ ತಹಜ್ಜುದ್ ನಮಾಝ್ ನಿರ್ವಹಣೆಯ ಕುರಿತು ಬಹಿರಂಗ ಪಡಿಸಬೇಕಾದೀತು.

(ತರ್ಜುಮಾನುಲ್ ಖುರ್‌ಆನ್, ಏಪ್ರಿಲ್-ಮೇ 1956)

(18)

ಪರಸ್ಪರ ಶಪಿಸುವುದು ಮತ್ತು ವಾದ-ಪ್ರತಿವಾದ

● *ನನ್ನ ಒಬ್ಬ ವಿದ್ವಾಂಸ ಮಿತ್ರರು ಮೌಲಾನಾ ಮೌದೂದಿಯವರು 'ಮುಬಾಹಿಲಾ' (ಪರಸ್ಪರ ಶಪಿಸುವುದು) ಮತ್ತು 'ಮುನಾಝರಾ' (ವಾದ-ಪ್ರತಿವಾದ)ದ ಆಹ್ವಾನವನ್ನು ಏಕೆ ಸ್ವೀಕರಿಸುವುದಿಲ್ಲವೆಂದು ನನ್ನಲ್ಲಿ ವಿಚಾರಿಸಿದ್ದಾರೆ. ಪ್ರವಾದಿ(ಸ) ಯಹೂದಿಗಳೊಂದಿಗೆ 'ಮುಬಾಹಿಲಾ' ಮಾಡುವ ನಿರ್ಧಾರ ಕೈಗೊಂಡಿದ್ದರು. ಪ್ರವಾದಿಗಳು ಮತ್ತು ಸಜ್ಜನರಾದ ಪೂರ್ವಜರು 'ಮುನಾಝರಾ'ಗಳಲ್ಲಿ ಭಾಗವಹಿಸುತ್ತಿದ್ದರು. ತಮ್ಮ ವಿರೋಧಿಗಳು ಆಗಾಗ ತಮಗೆ ಪಂಥಾಹ್ವಾನ ನೀಡುತ್ತಿರುತ್ತಾರೆ. ತಾವು ಅವರೊಂದಿಗೆ 'ಮುಬಾಹಿಲಾ' ಮಾಡುವುದಿಲ್ಲ. 'ಮುನಾಝರಾ' ಮಾಡುವುದಕ್ಕೂ ಹಿಂಜರಿಯುತ್ತೀರಿ. ನಾನು ನನಗೆ ಸಾಧ್ಯವಿರುವಷ್ಟು ನನ್ನ ಮಿತ್ರರಿಗೆ ತಿಳಿ ಹೇಳಲು ಪ್ರಯತ್ನಿಸಿದೆ. ಪ್ರತಿಯೊಂದು 'ಮುಬಾಹಿಲಾ' ಅಥವಾ 'ಮುನಾಝರಾ'ದ ಆಹ್ವಾನ ಸ್ವೀಕರಿಸುವುದು ಕಡ್ಡಾಯವೋ ಪ್ರವಾದಿಚರ್ಯೆಯೋ ಅಲ್ಲ ಎಂದು ಅವರಿಗೆ ಹೇಳಿದೆ. ಆದರೂ ಈ ಬಗ್ಗೆ ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಇನ್ನಷ್ಟು ತೃಪ್ತಿಯಾದೀತು?*

○ ಪ್ರವಾದಿ(ಸ) ಯಹೂದಿಗಳೊಂದಿಗೆ 'ಮುಬಾಹಿಲಾ' ಮಾಡುವ ನಿರ್ಧಾರ ಮಾಡಿದ್ದರು ಎಂಬ ನಿಮ್ಮ ಮಿತ್ರರ ಹೇಳಿಕೆಯು ಅವರ ತಿಳಿವಳಿಕೆಯ ಕೊರತೆಯನ್ನು ಸೂಚಿಸುತ್ತದೆ. 'ಮುಬಾಹಿಲಾ' ಮಾಡುವ ನಿರ್ಧಾರ ಮಾಡಿದ್ದು ಪ್ರವಾದಿಯಲ್ಲ. ಅಲ್ಲಾಹನೇ ಅದನ್ನು ನಿರ್ಧರಿಸಿದ್ದನು. ಈ 'ಮುಬಾಹಿಲಾ' ಮಾಡಿದ್ದು ಯಹೂದಿಗಳೊಂದಿಗಾಗಿರದೆ ಕ್ರೈಸ್ತರೊಂದಿಗಾಗಿತ್ತು. ಪ್ರವಾದಿ(ಸ) ಅವರ ಜೀವಮಾನದಲ್ಲಿ 'ಮುಬಾಹಿಲಾ'ದ ಈ ಒಂದು ಘಟನೆ ಮಾತ್ರ ನಮಗೆ ಸಿಗುತ್ತದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಸತ್ಯನಿಷೇಧಿಗಳು ಅಥವಾ ಮುಸ್ಲಿಮರ ಜತೆ ಯಾವುದಾದರೂ ಭಿನ್ನಾಭಿಪ್ರಾಯ ತಲೆದೋರಿದ ಕೂಡಲೇ 'ಮುಬಾಹಿಲಾ'ದ ಆಹ್ವಾನ ನೀಡಿ ಬಿಡುವುದು ಸರಿಯಲ್ಲ. 'ಮುಬಾಹಿಲಾ' ಎಂಬುದು ಭಿನ್ನಾಭಿಪ್ರಾಯವಿರುವ ವಿಷಯಗಳ ತೀರ್ಮಾನದ ಖಾಯಂ ವ್ಯವಸ್ಥೆಯೇನಲ್ಲ. ಇಂದು ವೃತ್ತಿಪರ ವಾದ-ಪ್ರತಿವಾದ ಮಾಡುವವರು ತಮ್ಮ ಮಲ್ಲ ಯುದ್ಧದ ಒಂದು ತಂತ್ರದ ರೂಪದಲ್ಲಿ 'ಮುಬಾಹಿಲಾ'ವನ್ನು ವಿಧಿವತ್ತಾಗಿ ಸೇರಿಸಿಕೊಂಡಿದ್ದಾರೆ. ಆದರೆ ಇಸ್ಲಾಮಿ

ಇತಿಹಾಸದಲ್ಲಿ ನಮಗೆ 'ಮುಬಾಹಿಲಾ'ದ ಆಹ್ವಾನವಾಗಲೀ ಅದರ ಸ್ವೀಕಾರವಾಗಲೀ ಸಿಗುವುದು ಬಹಳ ಕಷ್ಟ. ಸಹಾಬಿಗಳ ಮಧ್ಯೆ ದೊಡ್ಡ ದೊಡ್ಡ ಭಿನ್ನಾಭಿಪ್ರಾಯಗಳು ತಲೆದೋರಿದ್ದುವು. ಕೆಲವೊಮ್ಮೆ ಕಾದಾಟವೂ ನಡೆಯಿತು. ಆದರೆ 'ಮುಬಾಹಿಲಾ' ಆದದ್ದು ಮಾತ್ರ ಬಹಳ ಅಪರೂಪಕ್ಕೆ. ತಾಬಿಈ, ತಾಬಿವುತ್ತಾಬಿಈ ಮತ್ತು ಇಮಾಮ್‌ಗಳ ಮಧ್ಯೆ ತೀವ್ರ ಸ್ವರೂಪದ ಭಿನ್ನಾಭಿಪ್ರಾಯಗಳಿದ್ದುವು. ದೊಡ್ಡ ದೊಡ್ಡ ಸಮಸ್ಯೆಗಳ ಕುರಿತು ಚರ್ಚೆಗಳಾದುವು. ಆದರೆ ಸಂವಾದದ ಬದಲು 'ಮುಬಾಹಿಲಾ'ದ ಕ್ರಮವನ್ನು ಅವರು ಸ್ವೀರಿಸಲಿಲ್ಲ. ಅನಂತರದ ಕಾಲಗಳಲ್ಲೂ ವಿದ್ವಾಂಸರ ಮಧ್ಯೆ ಭಿನ್ನಾಭಿಪ್ರಾಯಗಳಿದ್ದುವು. ಪರಸ್ಪರರ ಮೇಲೆ ಕುಫ್ರ್ (ಧರ್ಮ ಭ್ರಷ್ಟತೆ) ಮತ್ತು ಫಿಸ್ಕ್ (ಕರ್ಮ ಭ್ರಷ್ಟತೆ)ನ ಧರ್ಮವಿಧಿಗಳನ್ನು ಹೊರಡಿಸಲಾಯಿತು. ಆದರೆ 'ಮುಬಾಹಿಲಾ'ವನ್ನು ಯಾರೂ ರೂಢಿಸಿ ಕೊಳ್ಳಲಿಲ್ಲ.

ಪ್ರವಾದಿ ಮುಹಮ್ಮದ್(ಸ) ಅವರ ಕಾಲದಲ್ಲೂ ಅವರ ವಿರೋಧಿಗಳು ದೊಡ್ಡ ಸಂಖ್ಯೆಯಲ್ಲಿದ್ದರು. ಯಹೂದಿಗಳು, ಕ್ರೈಸ್ತರು, ಮುನಾಫಿಕ್ (ಕಪಟವಿಶ್ವಾಸಿ)ಗಳು ಹೆಜ್ಜೆ ಹೆಜ್ಜೆಗೂ ಪ್ರವಾದಿವರ್ಯರನ್ನು(ಸ) ವಿರೋಧಿಸಿದರು. ಆದರೆ ನಜ್ರಾನ್‌ನ ಕ್ರೈಸ್ತರ ಹೊರತು ಯಾರೊಂದಿಗೂ 'ಮುಬಾಹಿಲಾ' ಮಾಡಲಿಲ್ಲ. ಇದರಿಂದ ತಿಳಿದು ಬರುವುದೇನೆಂದರೆ 'ಮುಬಾಹಿಲಾ' ಒಂದು ಅಪವಾದದ (Exception) ರೂಪ. ಅದನ್ನು ಕೆಲವು ವಿಶಿಷ್ಟ ಕಾರಣ ಮತ್ತು ಸ್ಥಿತಿಯಿಂದಾಗಿ ನಜ್ರಾನ್‌ನ ಕ್ರೈಸ್ತರ ಕುರಿತು ಅಲ್ಲಾಹನೇ ನಿರ್ಣಯಿಸಿದ್ದನು. ಇದು ಸಮಸ್ಯೆಗಳ ಪರಿಹಾರದ ಸಾಮಾನ್ಯ ನಿಯಮವಲ್ಲ. ಪ್ರತಿಯೊಂದು ವಿವಾದಾಸ್ಪದ ವಿಷಯದಲ್ಲಿ ಇದನ್ನು ಪ್ರಯೋಗಿಸುವಂತಿಲ್ಲ. ನಜ್ರಾನ್‌ನ ವಿಷಯದಲ್ಲಿ ಈ ವಿಧಾನವನ್ನು ಏಕೆ ಅನುಸರಿಸಲಾಯಿತು? ಇದಕ್ಕೆ ಹದೀಸ್‌ಗಳಲ್ಲಿ ನಮಗೆ ಒಂದು ಕಾರಣ ಸಿಗುತ್ತದೆ. ನಜ್ರಾನ್‌ನ ಮೂವರು ಧಾರ್ಮಿಕ ನಾಯಕರು ಒಂದು ನಿಯೋಗದ ರೂಪದಲ್ಲಿ ಪ್ರವಾದಿವರ್ಯರ(ಸ) ಬಳಿಗೆ ಬಂದರು. ಅವರು ಮುಹಮ್ಮದ್(ಸ) ಅವರ ಪ್ರವಾದಿತ್ವವನ್ನು ಮನಸಾರೆ ಒಪ್ಪುತ್ತಿದ್ದರು. ಆದರೆ ತಮ್ಮ ಜನಾಂಗದಲ್ಲಿ ತಮ್ಮ ಗೌರವವನ್ನು ಉಳಿಸುವುದಕ್ಕಾಗಿ ಅವರ ಮೇಲೆ ವಿಶ್ವಾಸವಿಡುವುದಕ್ಕೆ ಹಿಂಜರಿಯುತ್ತಿದ್ದರು. ಪ್ರಯಾಣದ ಮಧ್ಯೆ ಅವರ ಪೈಕಿ ಒಬ್ಬರು ಪ್ರವಾದಿವರ್ಯರ(ಸ) ಕುರಿತು ಅಸಮಂಜಸ ಪದಗಳನ್ನು ಬಳಸಿದಾಗ ಇನ್ನೊಬ್ಬನು ಕೂಡಲೇ ಆತನನ್ನು ಅದರಿಂದ ತಡೆದನು. "ಆ ವ್ಯಕ್ತಿಯ ಕುರಿತು ಇಂತಹ ಅಸಭ್ಯ ಮಾತನ್ನು ಆಡದಿರು. ಏಕೆಂದರೆ ನಮ್ಮ ಗ್ರಂಥಗಳಲ್ಲಿ ಬಂದಿರುವ ಭವಿಷ್ಯವಾಣಿಯು ಈ ಪ್ರವಾದಿಯ(ಸ) ಕುರಿತೇ ಆಗಿದೆ." ಅಲ್ಲಾಹನಿಗೆ ಅವರ ಮನಸ್ಸಿನ ಸ್ಥಿತಿ ತಿಳಿದಿತ್ತು. ಅವರು ಮನಸ್ಸಿನಲ್ಲಿ ಪ್ರವಾದಿಯನ್ನು(ಸ) ನಂಬಿರುವಾಗ "ಸುಳ್ಳು ಹೇಳುವವನ ಮೇಲೆ ಅಲ್ಲಾಹನ

ಶಾಪವಿರಲಿ" ಎಂಬ ಅಭಿಶಪನದ ಮಾತುಗಳನ್ನು ಹೇಳಲು ಅವರು ಸಿದ್ಧರಾಗಲಾರರೆಂಬುದು ಅಲ್ಲಾಹನಿಗೆ ತಿಳಿದಿತ್ತು. ಆದ್ದರಿಂದ ಅವರ ಆಂತರಿಕ ಸ್ಥಿತಿಯನ್ನು ಅನಾವರಣಗೊಳಿಸಲಿಕ್ಕಾಗಿ ಅಲ್ಲಾಹನು 'ಮುಬಾಹಿಲಾ'ದ ವಿಧಾನವನ್ನು ನಿಶ್ಚಯಿಸಿದನು. ಅದರ ಪರಿಣಾಮವೂ ನಿರೀಕ್ಷೆಯಂತೆಯೇ ಮುಂದೆ ಬಂತು. ನಜ್ರಾನ್‌ನ ನಿಯೋಗವು 'ಮುಬಾಹಿಲಾ'ದ ಆಹ್ವಾನವನ್ನು ತಿರಸ್ಕರಿಸಿತು. ತನ್ಮೂಲಕ ಅವರ ಸುಳ್ಳು ಮತ್ತು ವಂಚನೆ ಬಟ್ಟ ಬಯಲಾಯಿತು.

ನಾನು 'ವಾದ-ಪ್ರತಿವಾದ' ಏಕೆ ಮಾಡುವುದಿಲ್ಲವೆಂದೂ ನಿಮ್ಮ ಮಿತ್ರರು ಕೇಳಿದ್ದಾರೆ. ಪ್ರವಾದಿಗಳು ಮತ್ತು ಸಜ್ಜನರು 'ವಾದ-ಪ್ರತಿವಾದ' ಮಾಡಿದ್ದರು ಎಂಬ ಸಮರ್ಥನೆಯನ್ನೂ ಅವರು ನೀಡಿದ್ದಾರೆ. ಆದರೆ ಆ 'ಮುನಾಝಿರಾ' ಕೇವಲ ಚರ್ಚೆ ಮತ್ತು ಸಂವಾದಕ್ಕೆ ಸೀಮಿತವಾಗಿತ್ತು. ಆದರೆ ಇಂದು ಯಾವುದನ್ನು ಸಾಮಾನ್ಯವಾಗಿ 'ಮುನಾಝಿರಾ' ಎಂದು ಹೇಳಲಾಗುತ್ತದೋ ಅದು ಕೋಳಿ ಕಾಳಗದಂತಿದೆ. ಸರಿಯಾದ ರೀತಿಯಲ್ಲಿ ಯಾರಾದರೂ ಯಾವುದಾದರೂ ವಿಷಯದಲ್ಲಿ ಮೌಖಿಕ ಅಥವಾ ಲಿಖಿತ ಸಂವಾದ-ಚರ್ಚೆ ನಡೆಸುವುದಾದರೆ ನನಗೆ ಅದರಲ್ಲಿ ಆಕ್ಷೇಪವಿಲ್ಲ. ಸಾಧ್ಯವಿದ್ದಾಗ ಮತ್ತು ಅಗತ್ಯ ಕಂಡಾಗ ನಾನು ಅಂತಹ ಚರ್ಚೆ-ಸಂವಾದಗಳಲ್ಲಿ ಪಾಲ್ಗೊಳ್ಳುತ್ತೇನೆ. ಆದರೆ ವೃತ್ತಿಪರ ಮತ್ತು ಜಗಳಗಂಟಿ ವಾದ-ಪ್ರತಿವಾದ ಮಾಡುವವರೊಂದಿಗೆ ಸೆಣಸುವುದು ನನ್ನ ಕೆಲಸವಲ್ಲ. ಈ ಕೆಲಸ ಯಾರಿಗೆ ಭೂಷಣವೆನಿಸುತ್ತದೋ ಅವರೇ ಇದನ್ನು ಮಾಡುತ್ತಿರಲಿ.

(ತರ್ಜುಮಾನುಲ್ ಕುರ್‌ಆನ್: ಆಗಸ್ಟ್- 1956)

19

ವಿದ್ವಾಂಸರ ಮತ್ತು ಸಜ್ಜನರ ಅನುಸರಣೆ

ಓರ್ವ ವಿದ್ವಾಂಸರು ತಮ್ಮ ಗ್ರಂಥದಲ್ಲಿ ಹೀಗೆ ಹೇಳಿರುವರು: "ಶಿರ್ಕ್‌ನ ಒಂದು ರೂಪವು ಉಲಮಾ ಮತ್ತು ಸುಲಹಾ (ಸಜ್ಜನರು)ಗಳನ್ನು ಇಮಾಮ್ ಮತ್ತು ಹಾದೀ ಎಂದು ನಂಬಿ ಅವರ ಮಾತುಗಳನ್ನು ಅಲ್ಲಾಹನ ಮಾತಿನಂತೆ ಯಾವುದೇ ಪುರಾವೆಯಿಲ್ಲದೆ ಒಪ್ಪಿಕೊಳ್ಳುವುದಾಗಿದೆ." ಅನಂತರ ಅವರು ಹೇಳುತ್ತಾರೆ: ಪ್ರಾಚೀನ ಇಮಾಮರು ಮತ್ತು ಧರ್ಮದ ಹಿರಿಯರ ಜ್ಞಾನ ಮತ್ತು ಸ್ಥಿತಿಗತಿಗಳಿಂದ ವೈಜ್ಞಾನಿಕ ಮತ್ತು ಐತಿಹಾಸಿಕ ಪ್ರಯೋಜನ ಪಡೆಯಬಹುದು. ಆದರೆ ಅವರ ಯಾವುದೇ ಮಾತನ್ನು ಕುರ್‌ಆನ್‌ನ ಪುರಾವೆಯಿಲ್ಲದೆ ದೀನ್ ಎಂದು ಪರಿಗಣಿಸುವುದು ಶಿರ್ಕ್ ಆಗಿದೆ. ಮತ್ತೊಂದು ಕಡೆ ಅವರು ಹೀಗೆ ಬರೆದಿರುವರು, "ಅಲ್ಲಾಹನ ಗ್ರಂಥವನ್ನು ಬಿಟ್ಟು ಪೂರ್ವಜರ ಅನುಸರಣೆ ಮಾಡುವುದು ಪಥಭ್ರಷ್ಟತೆಯಾಗಿದೆ." ಮುಂದುವರಿದು ಅವರು ಹೀಗೆ ಹೇಳುತ್ತಾರೆ, "ಪ್ರವಾದಿ ಮತ್ತು ಅಮೀರ್ (ನಾಯಕ)ನ ಇತಾಅತ್ (ಅನುಸರಣೆ)ನ ಹೊರತು ಬೇರೆ ಯಾರ ಅನುಸರಣೆಯನ್ನೂ ಕುರ್‌ಆನ್‌ನಲ್ಲಿ ಆಜ್ಞಾಪಿಸಲಾಗಿಲ್ಲ. ಮಾತ್ರವಲ್ಲ ಅದನ್ನು ನಿಷೇಧಿಸಲಾಗಿದೆ." ಕೊನೆಯಲ್ಲಿ ಒಂದೆಡೆ ಅವರು ಹೀಗೆ ಹೇಳಿರುವರು: "ಸಾಮಾನ್ಯವಾಗಿ ಮನುಷ್ಯರ ಅನುಸರಣೆಯನ್ನು ಕುರ್‌ಆನ್ ಅಪಾಯಕಾರಿಯೆಂದು ಸಾರುತ್ತದೆ." ಗ್ರಂಥಕರ್ತರ ಈ ಮಾತುಗಳು ಎಷ್ಟರ ಮಟ್ಟಿಗೆ ಸರಿಯಾಗಿವೆ?

○ ಈ ವಾಕ್ಯಗಳಲ್ಲಿ ಸರಿ-ತಪ್ಪು ಎರಡೂ ರೀತಿಯ ಮಾತುಗಳು ಸೇರಿಕೊಂಡಿವೆ. ಟ್ಟಿನಲ್ಲಿ ಪ್ರಸ್ತುತ ಗ್ರಂಥಕರ್ತರು ಸತ್ಯವಾದ ಮಾತನ್ನು ಹೇಳುವುದರ ಜತೆಗೆ ಒಂದು ತಿಯ ಅನಾವಶ್ಯಕ ಅಕ್ರಮವನ್ನೂ ಮಾಡಿದ್ದಾರೆ. ಮುಸ್ಲಿಮರಲ್ಲಿ ಕಾಣುತ್ತಿರುವ ತಿಳಿಗೇಡಿ ೀರ್‌ಗಳು ಮತ್ತು ದುಷ್ಟ ಉಲಮಾಗಳ ಅಂಧಾನುಕರಣೆ ಮತ್ತು ಅಜ್ಞಾನಭರಿತ ನುಸರಣೆಯ ಕುರುಹುಗಳ ಬಗ್ಗೆ ಎಷ್ಟು ರೋಷ ಪ್ರಕಟಿಸಿದರೂ ಕಡಿಮೆಯೇ. ಆದರೆ ಂಥಕರ್ತರು ಸುಧಾರಣೆ ಮಾಡುವ ಭರದಲ್ಲಿ ಸತ್ಯಸಂಧ ಉಲಮಾ, ಸಜ್ಜನರು ಮತ್ತು ನ್ಮಾರ್ಗಗಾಮಿಗಳಾದ ಇಮಾಮ್‌ಗಳ ಅನುಸರಣೆಯನ್ನು ಪಥಭ್ರಷ್ಟತೆಯೆಂದಿರುವುದು ೀದಕರ. ಅಷ್ಟಕ್ಕೇ ಸಾಕು ಮಾಡದೆ ಅದನ್ನು ಶಿರ್ಕ್ ಎಂದೂ ಹೇಳಿರುವರು. ವಸ್ತುತಃ ವರು ಯಾವ ಆಯತ್‌ಗಳ ಆಧಾರದಲ್ಲಿ ಅದನ್ನು ವಾದಿಸಿರುವರೋ ಆ ಆಯತ್‌ಗಳ ಗ್ಗೆ ಚಿಂತಿಸಿದ್ದರೆ ಅವರು ಸತ್ಯದಿಂದ ಬಹಳಷ್ಟು ದೂರ ಸರಿದಿರುವರೆಂದು ಅವರಿಗೇ ಂನವರಿಕೆಯಾಗುತ್ತಿತ್ತು. ಯಾವುದನ್ನು ಶಿರ್ಕ್ ಎಂದು ಕರೆಯಲಾಗುತ್ತದೋ ಅದು ಒಬ್ಬ

ವ್ಯಕ್ತಿ ಅಲ್ಲಾಹನ ಹೊರತು ಇತರ ಯಾರನ್ನಾದರೂ ನಿಜವಾದ ಅರ್ಥದಲ್ಲಿ ಆಜ್ಞೆ ವಿಧಿಸ ಮತ್ತು ನಿಷೇಧಿಸುವ ಹಕ್ಕುಳ್ಳವನೆಂದು ಸಾರುವ ತನಕ ಸಾಬೀತಾಗುವುದಿಲ್ಲ ಅಥವಾ ಅವ ಅಲ್ಲಾಹನ ವಿಧಿ ಮತ್ತು ನಿಷೇಧಕ್ಕೆದುರಾಗಿ ಅಥವಾ ಅದಕ್ಕೆ ಸಮಾನವಾಗಿ ಇತರರ ವಿ ನಿಷೇಧಗಳನ್ನು ಕಡ್ಡಾಯವಾಗಿ ಅನುಸರಣಾರ್ಹವೆಂದು ಪರಿಗಣಿಸಬೇಕು. ಮುಸ್ಲಿಮ ಎಷ್ಟೇ ಅಜ್ಞಾನಿಯಾಗಿರಲಿ ಅವನು ಈ ರೀತಿಯ ವಿಶ್ವಾಸವನ್ನು ಹೊಂದಿಲ್ಲ ಎಂಬು ರಹಸ್ಯವೇನಲ್ಲ. ಸ್ವತಃ ಗ್ರಂಥಕರ್ತರಿಗೂ ಅದು ತಿಳಿದಿರಬಹುದು. ಆದ್ದರಿಂದ ವಿಷಯದಲ್ಲಿ 'ಶಿರ್ಕ್'ನ ವಿಧಿ ನೀಡುವುದು ಅತಿರೇಕವೆನಿಸುತ್ತದೆ. ಯಾವ ವ್ಯಕ್ತಿಯ ಯಾವನೇ ಮಹಾನ್ ವ್ಯಕ್ತಿಯ ಕುರಿತು ಅವರು ಸನ್ಮಾರ್ಗಗಾಮಿಯಾಗಿದ್ದಾರೆ, ಅಲ್ಲಾಹ ಶರೀಅತ್ ಮತ್ತು ಅದರ ವಿಧಿಗಳನ್ನು ಇತರರಿಗಿಂತ ಹೆಚ್ಚು ತಿಳಿದವರಾಗಿದ್ದಾರೆ ಎಂ ಭಾವಿಸುವುದು ಮತ್ತು ಈ ಆಧಾರದಲ್ಲಿ ಅವರ ಅನುಸರಣೆಯು ಅಲ್ಲಾಹನ ಮೆಚ್ಚುಗೆಂ ಅನುಸರಣೆಯಾಗಿದೆಯೆಂದು ಭಾವಿಸಿ ಅವರನ್ನು ಅನುಸರಿಸಿದರೆ ಅಂತಹ ವ್ಯಕ್ತಿಯ ಮೇ 'ಶಿರ್ಕ್'ನ ಆರೋಪ ಹೊರಿಸುವುದು ಹೇಗೆ ಸಾಧ್ಯ?

ಇನ್ನು ಯಾರ ಅನುಸರಣೆ ಮಾಡಬೇಕು? ಯಾರ ಅನುಸರಣೆ ಮಾಡಬಾರದು? ಯಾ ಅನುಸರಣೆ ಧರ್ಮಸಮ್ಮತ ಮತ್ತು ಯಾರ ಅನುಸರಣೆ ಪಥಭ್ರಷ್ಟತೆಯಾಗುತ್ತದೆ? ಎಂ ಪ್ರಶ್ನೆ ಉಳಿಯುತ್ತದೆ. ಆ ಬಗ್ಗೆ ಕುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ:

"ಸತ್ಯನಿಷೇಧಿಗಳ ಮತ್ತು ಕಪಟವಿಶ್ವಾಸಿಗಳ ಅನುಸರಣೆ ಮಾಡಬೇಡಿರಿ."

(ಅಲ್ ಅಹ್‌ಝಾಬ್ :

"ನಾವು ನಮ್ಮ ಸ್ಮರಣೆಯಿಂದ ಬೋಧಶೂನ್ಯವಾಗಿ ಮಾಡಿರುವಂಥವನನ್ನೂ ತ ದೇಹೇಚ್ಛೆಗಳ ಅನುಸರಣೆಯನ್ನು ಸ್ವೀಕರಿಸಿಕೊಂಡಿರುವವನನ್ನೂ ಮೇರೆ ಮೀ ವರ್ತಿಸುವಂತಹವನನ್ನೂ ಅನುಸರಿಸಬೇಡಿರಿ." *(ಅಲ್ ಕಹ್ಫ್ : 2*

"ಆದುದರಿಂದ ನೀವು ಈ ಸುಳ್ಳಾಗಿಸುವವರ ಒತ್ತಡಕ್ಕೆ ಎಷ್ಟು ಮಾತ್ರಕ ಮಣಿಯಬೇಡಿರಿ." *(ಅಲ್ ಕಲಮ್ :*

"ಇವರ ಪೈಕಿ ಯಾವುದೇ ಕರ್ಮಭ್ರಷ್ಟ ಅಥವಾ ಸತ್ಯನಿಷೇಧಿ ವ್ಯಕ್ತಿಯ ಮಾತನ ಅನುಸರಿಸಬೇಡಿರಿ." *(ಅದ್ದಹ್ರ್ : 2*

ಈ ಸೂಕ್ತಗಳಲ್ಲಿ ಕಾಫಿರ್, ಮುನಾಫಿಕ್, ಅಲ್ಲಾಹನನ್ನು ಮರೆತವರ ಅತಿರೇಕವೆಸಗುವವರು, ಸತ್ಯವನ್ನು ನಿರಾಕರಿಸುವವರು ಮತ್ತು ಕೃತಘ್ನ ಅಪರಾಧಿಗ ಅನುಸರಣೆ ಮಾಡಬಾರದೆಂದು ಹೇಳಲಾಗಿದೆಯೇ ಹೊರತು ಸಜ್ಜನರು ಮತ್ತು ವಿದ್ವಾಂಸರನ ಅನುಸರಿಸ ಬೇಡಿರೆಂದು ಹೇಳಲಾಗಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕುರ್‌ಆನ್ ಹೀ ಹೇಳುತ್ತದೆ:

"ನಿಮಗೆ ಗೊತ್ತಿಲ್ಲದಿದ್ದರೆ ವಿದ್ವಾಂಸರನ್ನು ವಿಚಾರಿಸಿರಿ." *(ಅನ್ನಹ್ಲ್ : 43*

"ಅವರೇ ಅಲ್ಲಾಹನ ವತಿಯಿಂದ ಸನ್ಮಾರ್ಗ ಹೊಂದಿದವರಾಗಿದ್ದರು. ನೀವು ಅವರ ಾರ್ಗದಲ್ಲೇ ನಡೆಯಿರಿ." *(ಅಲ್ ಅನ್‌ಆಮ್ : 90)*

ನಾನು ಮೇಲೆ ಸೂಚಿಸಿದಂತೆ ಗ್ರಂಥಕರ್ತರು ಸರಿ-ತಪ್ಪುಗಳ ಕಲಸು ಮೇಲೋಗರ ಾಡಿ ಅತಿರೇಕವೆಸಗಿರುವರು. ಉಲಮಾ ಮತ್ತು ಸಜ್ಜನರನ್ನು 'ಹಾದೀ' (ಮಾರ್ಗದರ್ಶಕ) ಂದು ಪರಿಗಣಿಸುವುದು ಪಾಪಕಾರ್ಯವಲ್ಲ. ವಿದ್ವಾಂಸರಲ್ಲದವರು ಮತ್ತು ಸಜ್ಜನರಲ್ಲದವರು ್ಾಯವಾಗಿ ಅವರನ್ನು ಅನುಸರಿಸಬೇಕು. ಆದರೆ ಅವರ ಮಾತನ್ನು ಅಲ್ಲಾಹನ ಮಾತು ಂದು ಬಗೆಯುವುದು ಖಂಡಿತ ಪಾಪಕಾರ್ಯವಾಗುತ್ತದೆ. ಅದೇ ರೀತಿ ಅಲ್ಲಾಹನ ಂಥವನ್ನು ಬಿಟ್ಟು ಮಹಾವ್ಯಕ್ತಿಗಳ ಅನುಸರಣೆ ಮಾಡುವುದು ಪಥಭ್ರಷ್ಟತೆಯಾಗಿದೆ. ಆದರೆ ಾರಾದರೂ ಆ ಮಹಾತ್ಮರು ಅನುಸರಿಸಿದ, ಕ್ರಮವು ಅಲ್ಲಾಹನ ಗ್ರಂಥಕ್ಕೆ ಅನುಸಾರವಾಗಿದೆ, ದುದರಿಂದ ಅಲ್ಲಾಹನ ಗ್ರಂಥದ ಜ್ಞಾನವಿಲ್ಲದ ನಾನು ಅವರನ್ನು ಅನುಸರಿಸಬೇಕು ಎಂದು ಗೆದರೆ ಆತ ಅಪರಾಧ ಅಥವಾ ಪಾಪಕಾರ್ಯವನ್ನು ಎಸಗಿದಂತಾಗುವುದಿಲ್ಲ. ಹೆಚ್ಚೆಂದರೆ ವನು ಯಾವ ಮಹಾತ್ಮರನ್ನು ಅನುಸರಣೆಗಾಗಿ ಆಯ್ಕೆ ಮಾಡಿರುವನೋ ಆ ಆಯ್ಕೆ ಿಯಾಗಿಲ್ಲವೆಂದು ಮಾತ್ರ ಹೇಳಬಹುದು.

ನೀವು ಅಂಧಾನುಕರಣೆಯನ್ನು ಎಷ್ಟು ಬೇಕಾದರೂ ಹಳಿಯಬಹುದು. ನೀವು ೇಳುವುದು ಸರಿ. ಹೀಗೆ ವಿಲಾಯತ್ (ಮಹಾತ್ಮೆ), ಇಮಾಮತ್ (ನಾಯಕತ್ವ), ಇಜ್ತಿಹಾದ್ ಂಶೋಧನೆ) ಮತ್ತು ಜ್ಞಾನವು ನಮ್ಮ ಪೂರ್ವಜರಲ್ಲೇ ಕೊನೆಗೊಂಡಿಲ್ಲ. ಇಂದು ಕೂಡಾ ಎಲ್ಲ ಸ್ಥಾನ-ಮಾನಗಳು ಲಭಿಸಬಲ್ಲುವು. ಅವುಗಳನ್ನು ಗಳಿಸುವ ಪ್ರಯತ್ನ ಮಾಡಬೇಕು ಂದು ಕೂಡಾ ಹೇಳುವ ಹಕ್ಕು ನಿಮಗಿದೆ. ಆದರೆ 'ತಕ್ಲೀದ್'ನ ವಿರೋಧ ಮತ್ತು ಜ್ತಿಹಾದ್‌ನ ಒಲವು ನಿಮ್ಮಲ್ಲಿ ಪೂರ್ವಜರ ವಿರುದ್ಧ ಒಂದು ರೀತಿಯ ಹಠವನ್ನು ಉಂಟು ಾಡಿ ನೀವು ಅವರು ನಿರ್ಮಿಸಿದ ಕಟ್ಟಡಗಳನ್ನು ಕೆಡಹುವಂತಾಗಬಾರದು. ಹೊಸ ಮಾತು ಷ್ಟಿಸಲಿಕ್ಕಾಗಿ ನವೀನ ಶೈಲಿಗಳನ್ನು ಅಳವಡಿಸಬಾರದು. ಅನ್ಯಥಾ ಜನರು ಸಾಮರ್ಥ್ಯವಿಲ್ಲದೆಯೇ ಜ್ತಿಹಾದ್ ಮಾಡಲಾರಂಭಿಸುವರು. ತನ್ಮೂಲಕ ಅಲ್ಲಾಹನ ಗ್ರಂಥ ಮತ್ತು ಪ್ರವಾದಿಯ ುನ್ನತ್ ಮಕ್ಕಳಾಟಿಕೆಯ ವಸ್ತುಗಳಾದಾವು. ಇದು ಅಂಧಾನುಕರಣೆಗಿಂತ ದೊಡ್ಡ ಪಥಭ್ರಷ್ಟತೆ ಾಗುವುದು. ಧರ್ಮದ ಮಟ್ಟಿಗೆ ಅದು ಹೆಚ್ಚು ಹಾನಿಕರವಾಗುವುದು. ಮುಕಲ್ಲಿದ್‌ಗಳು ಅನುಕರಣೆ ಮಾಡುವವರು) ತಮ್ಮ ಹಿರಿಯರು ಕಟ್ಟಿದ ಗೋಡೆಗಳಿಗೆ ಕಾಲದ ೇಡಿಕೆಗಳಿಗನುಸಾರವಾಗಿ ಯಾವುದೇ ಸೇರ್ಪಡೆ ಮಾಡುವುದಿಲ್ಲ. ಆ ಕಟ್ಟಡವನ್ನು ಅವರು ಾಗೆಯೇ ಉಳಿಸಿಕೊಳ್ಳುತ್ತಾರೆ. ಆದರೆ ಆಧುನಿಕತೆಯ ಸೋಂಕು ತಗಲಿದವರು ಹಳೆಯ ಟ್ಟಡವನ್ನು ಕೆಡವಿ ಹಾಕುತ್ತಾರೆ ಹಾಗೂ ತಮ್ಮ ಇಷ್ಟಾನುಸಾರ ಹೊಸ ಕಟ್ಟಡದ ನಿರ್ಮಾಣ ಾಡಲು ಪ್ರಯತ್ನಿಸುತ್ತಾರೆ. ಈ ವಿಚಾರಧಾರೆಯು ಬೆಳೆದರೆ ಇಡೀ ಧರ್ಮವೇ ಮಂಕಾದೀತು. ದರ ರೂಪವನ್ನು ಯಾವ ರೀತಿ ಮಾಡಿ ಇಡಲಾಗುವುದೆಂದು ಹೇಳಲು ಸಾಧ್ಯವಿಲ್ಲ.

(ತರ್ಜುಮಾನುಲ್ ಕುರ್‌ಆನ್, ಆಗಸ್ಟ್ 1934)

20

'ಶಿರ್ಕ್' ಎಂಬ ಪದದ ಪಾರಿಭಾಷಿಕ ಪ್ರಯೋಗ

- *1962 ಮಾರ್ಚ್‌ನ ತರ್ಜುಮಾನುಲ್ ಕುರ್‌ಆನ್‌ನಲ್ಲಿ ಪ್ರಕಟವಾದ ಪ್ರಶ್ನೋತ್ತರಗಳ ಓದಿದೆ. ಲೇಖನದ ಕೊನೆಯ ಪಂಕ್ತಿಗಳ ಬಗ್ಗೆ ನನಗೆ ಭಿನ್ನಾಭಿಪ್ರಾಯವಿದೆ. ಆದ್ದರಿಂ ಭಿನ್ನಾಭಿಪ್ರಾಯ ನಿವಾರಿಸಲು ಮತ್ತು ಸತ್ಯವನ್ನರಿಯಲು ಈ ಕೆಳಗಿನ ವಿಷ ಬರೆಯುತ್ತಿರುವೆನು:*

  ಕುರ್‌ಆನ್ ಮತ್ತು ಸುನ್ನತ್‌ನ ಸ್ಪಷ್ಟ ವಿವರಣೆಗಳಿಂದ ವ್ಯಕ್ತವಾಗುವಂತೆ ತ್ರಿಕಾಲಜ್ಞ ಮತ್ತು ಸರ್ವವ್ಯಾಪಿ, ಸರ್ವ ವೀಕ್ಷಕ ಎಂಬ ಗುಣಗಳು ಅಲ್ಲಾಹನಿಗೆ ಮೀಸಲಾಗಿ ಆದ್ದರಿಂದ ಈ ವಿಶಿಷ್ಟ ಗುಣಗಳು ಹ. ಮುಹಮ್ಮದ್(ಸ) ಅಥವಾ ಇನ್ನಾರೇ ಪ್ರವಾ ಅಥವಾ ವಲೀ (ಮಹಾ ಪುರುಷ) ಅವರಲ್ಲೂ ಇದೆ ಎಂದು ನಂಬಿದರೆ ಅ ಕುರ್‌ಆನ್ ಮತ್ತು ಸುನ್ನತ್‌ನ ಸ್ಪಷ್ಟ ತೀರ್ಪಿನ ಪ್ರಕಾರ 'ಶಿರ್ಕ್' ಆಗುತ್ತದೆ. ಹಾ ನಂಬುವವರನ್ನು 'ಮುಶ್ರಿಕ್' ಎಂದು ಹೇಳದಿರುವುದು ಕುರ್‌ಆನ್ ಮತ್ತು ಸುನ್ನತ್‌ ಆದೇಶಗಳನ್ನು ಧಿಕ್ಕರಿಸಿದಂತಾಗುವುದು. ಇಂತಹವರನ್ನು ಅರೇಬಿಯಾ ಬಹುದೇವಾರಾಧಕರಿಗೆ ಹೋಲಿಸುವುದು ಅತಿರೇಕವೆನಿಸಲಾರದು. ಅದು ನ್ಯಾಯ ಬೇಡಿಕೆಯಾಗಿದೆ.

  ಈ ಗುಣಗಳನ್ನು ಅಲ್ಲಾಹನ ಹೊರತು ಇತರರಿಗೆ ಆರೋಪಿಸುವುದು ನೀವು 'ಶಿರ್ ಎನ್ನುತ್ತೀರಿ. ಆದರೆ ಹಾಗೆ ಮಾಡುವವನನ್ನು 'ಮುಶ್ರಿಕ್' ಎಂದು ಕರೆಯುವುದ ಅತಿರೇಕವೆನ್ನುತ್ತೀರಿ. ಇದೆಂತಹ ವಿಪರ್ಯಾಸ!

  ನಿಮ್ಮ ಅಭಿಪ್ರಾಯದಂತೆ ಒಬ್ಬ ಮುಸ್ಲಿಮನನ್ನು 'ಮುಶ್ರಿಕ್' ಎಂದು ಹೇಳಕೂಡದ ಏಕೆಂದರೆ ಅವನು ಎಸಗಿರುವುದು ಕೇವಲ ವ್ಯಾಖ್ಯಾನದ ತಪ್ಪು. ಅವನು 'ಶಿರ್ಕ್' ಅ 'ಶಿರ್ಕ್' ಎಂದು ತಿಳಿದು ಅದನ್ನು ಮಾಡುತ್ತಿಲ್ಲ. ನಿಮ್ಮ ಈ ಎರಡು ಸಮರ್ಥನೆಗಳ ನನ್ನ ಅಭಿಪ್ರಾಯದಂತೆ ಸತ್ಯದ ಮೇಲೆ ಆಧಾರಿತವಾಗಿಲ್ಲ.

○ ಪವಿತ್ರ ಕುರ್‌ಆನನ್ನು ನಾನು ಕಲಿತ ಮಟ್ಟಿಗೆ, ಅದರ ಪ್ರಕಾರ 'ಶಿರ್ಕ್' ಮಾಡು ಪ್ರತಿಯೊಬ್ಬ ವ್ಯಕ್ತಿ ಅಥವಾ ವಿಶ್ವಾಸ ಮತ್ತು ಆಚಾರದಲ್ಲಿ 'ಶಿರ್ಕ್' ಇರುವಂತ ಪ್ರತಿಯೊಬ್ಬ ವ್ಯಕ್ತಿಯನ್ನು ಪಾರಿಭಾಷಿಕವಾಗಿ 'ಮುಶ್ರಿಕ್' ಎನ್ನಲಾಗದು ಮತ್ತು ಅವನ ಜ ಮುಶ್ರಿಕ್‌ಗಳಂತಹ ವ್ಯವಹಾರ ಮಾಡಲಾಗದು. ಯಾರ ಧರ್ಮದ ಆಧಾರವೇ 'ಶಿರ್

ಆಗಿದೆಯೋ ಯಾರು ತೌಹೀದನ್ನು ಮೂಲಭೂತ ವಿಶ್ವಾಸದ ರೂಪದಲ್ಲಿ ಅಂಗೀಕರಿಸುವುದೇ ಇಲ್ಲವೋ ಮತ್ತು ವಹೀ (ದಿವ್ಯವಾಣಿ)ಪ್ರವಾದಿತ್ವ ಮತ್ತು ಅಲ್ಲಾಹನ ಗ್ರಂಥವನ್ನು ಧರ್ಮದ ಮೂಲವೆಂದು ಒಪ್ಪುವುದೇ ಇಲ್ಲವೋ ಅವರು ಮಾತ್ರ 'ಮುಶ್ರಿಕ್' ಎಂಬ ಹೆಸರಿಗೆ ಮತ್ತು ಮುಶ್ರಿಕರಂತಹ ವರ್ತನೆಗೆ ಅರ್ಹರಾಗಿದ್ದಾರೆ.

ಇದಕ್ಕೆ ಪುರಾವೆ ಏನೆಂದರೆ ಪವಿತ್ರ ಕುರ್‌ಆನ್‌ನಲ್ಲಿ ಯಹೂದಿಗಳನ್ನು ಮತ್ತು ಕ್ರೈಸ್ತರನ್ನು 'ಶಿರ್ಕ್' ಮಾಡುವವರೆಂದು ಹೇಳಲಾಗಿದೆ. ಉದಾ:

ಉಝೈರ್ ದೇವಪುತ್ರನೆಂದು ಯಹೂದಿಯರು ಹೇಳುತ್ತಾರೆ. ಮಸೀಹ್ ದೇವಪುತ್ರನೆಂದು ಕ್ರೈಸ್ತರು ಹೇಳುತ್ತಾರೆ. *(ಅತ್ತೌಬಃ 30)*

ಮರ್ಯಮರ ಪುತ್ರ ಮಸೀಹರೇ ಅಲ್ಲಾಹನೆಂದು ಹೇಳಿದವರು ಖಂಡಿತವಾಗಿಯೂ ಕುಫ್ರ್ ಕೈಗೊಂಡರು... ಅಲ್ಲಾಹ್ ಮೂವರಲ್ಲಿ ಒಬ್ಬನೆಂದು ಹೇಳಿದವರು ನಿಶ್ಚಯವಾಗಿಯೂ ಕುಫ್ರ್ ಕೈಗೊಂಡರು. *(ಅಲ್ ಮಾಇದಃ 72-73)*

ಆದಾಗ್ಯೂ ಪವಿತ್ರ ಕುರ್‌ಆನ್ ಅವರಿಗೆ 'ಮುಶ್ರಿಕ್' ಎಂಬ ಪಾರಿಭಾಷಿಕವನ್ನು ಬಳಸಲಿಲ್ಲ. ಬದಲಾಗಿ ಅವರಿಗೆ 'ಅಹ್ಲುಲ್ ಕಿತಾಬ್ (ಗ್ರಂಥದವರು) ಎಂಬ ಪಾರಿಭಾಷಿಕವನ್ನು ಉಪಯೋಗಿಸಿದೆ. ಅವರಲ್ಲಿ ಮತ್ತು ಮುಶ್ರಿಕ್‌ಗಳಲ್ಲಿ ಕೇವಲ ಪದದ ವ್ಯತ್ಯಾಸವನ್ನೇ ಇರಿಸಲಿಲ್ಲ. ಬದಲಾಗಿ ಅವರೊಂದಿಗೆ ಸತ್ಯವಿಶ್ವಾಸಿಗಳ ವ್ಯವಹಾರವೂ ಮುಶ್ರಿಕ್‌ಗಳಿಗಿಂತ ಭಿನ್ನವಾಗಿರಬೇಕೆಂದು ಸೂಚಿಸಲಾಯಿತು. ಒಂದು ವೇಳೆ ಅವರನ್ನು ಮುಶ್ರಿಕ್ ಎಂದು ಪರಿಗಣಿಸಲಾಗಿದ್ದರೆ "ಮುಶ್ರಿಕ್ ಮಹಿಳೆಯರು ಸತ್ಯವಿಶ್ವಾಸ ಸ್ವೀಕರಿಸದೆ ಅವರನ್ನು ವಿವಾಹವಾಗದಿರಿ" ಎಂಬ ಆಜ್ಞೆಯ ಪ್ರಕಾರ ಅವರ ಮಹಿಳೆಯರೊಂದಿಗೆ ಮದುವೆಯಾಗುವುದು ತನ್ನಿಂತಾನೇ ಹರಾಮ್ (ನಿಷಿದ್ಧ) ಎನಿಸುತ್ತಿತ್ತು. ಆದರೆ ಅಲ್ಲಾಹನು 'ಅಹ್ಲುಲ್ ಕಿತಾಬ್'ನ ಮಹಿಳೆಯರ ವಿಧಿಯನ್ನು ಮುಶ್ರಿಕ್‌ಗಳಿಂದ ತೀರಾ ಭಿನ್ನವಾಗಿರಿಸಿದನು. ಅವರೊಂದಿಗೆ ವಿವಾಹವಾಗುವುದನ್ನು ಮುಸ್ಲಿಮರಿಗೆ ಅನುಮತಿಸಿದನು. ಅದೇ ರೀತಿ ಅವರು 'ದಿಬ್ಹ್' ಮಾಡಿದ ಪ್ರಾಣಿಯ ವಿಧಿಯನ್ನೂ ಮುಶ್ರಿಕ್‌ಗಳು 'ದಿಬ್ಹ್' ಮಾಡಿದ ಪ್ರಾಣಿಗಳಿಗಿಂತ ಭಿನ್ನವಾಗಿರಿಸಿದನು. 'ಶಿರ್ಕ್' ಮಾಡಿದುದರ ಹೊರತಾಗಿಯೂ ಅವರು 'ತೌಹೀದ್' (ಏಕ ದೇವತ್ವ) ಅನ್ನು ಧರ್ಮದ ಮೂಲವೆಂದು ಪರಿಗಣಿಸಿದ್ದರು. ಹಾಗೂ ಪ್ರವಾದಿತ್ವ ಮತ್ತು ದೈವಿಕ ಗ್ರಂಥವನ್ನು ಧರ್ಮದ ಮೂಲವೆಂದು ಪರಿಗಣಿಸಿದ್ದರು ಎಂಬುದು ಮಾತ್ರ ಇದಕ್ಕೆ ಕಾರಣವಾಗಿತ್ತು. ಆದ್ದರಿಂದಲೇ ಅವರನ್ನುದ್ದೇಶಿಸಿ ಹೀಗೆ ಹೇಳಲಾಯಿತು:

"ಓ ಗ್ರಂಥದವರೇ! ನಿಮ್ಮ ಮತ್ತು ನಮ್ಮ ಮಧ್ಯೆ ಸಮಾನವಾಗಿರುವ ವಿಷಯಗಳ ಕಡೆಗೆ ಬನ್ನಿರಿ.

ನಾವು ಅಲ್ಲಾಹನ ಹೊರತು ಯಾರ ದಾಸ್ಯ-ಆರಾಧನೆಯನ್ನೂ ಮಾಡದಿರೋಣ ಅವನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡದಿರೋಣ. ಮತ್ತು ನಮ್ಮ ಪೈಕಿ ಯಾರು ಅಲ್ಲಾಹನ ಹೊರತು ಇತರ ಯಾರನ್ನೂ ತನ್ನ ಪ್ರಭುವಾಗಿರಿಸದಿರೋಣ."

(ಆಲಿ ಇಮ್ರಾನ್:46

ಅವರೊಡನೆ ಹೇಳಿರಿ: 'ನಮ್ಮ ಕಡೆಗೆ ಕಳುಹಿಸಲಾಗಿರುವುದರ ಮೇಲೂ ನಿಮ್ಮ ಕಡೆ ಕಳುಹಿಸಲಾಗಿದ್ದುದರ ಮೇಲೂ ನಾವು ವಿಶ್ವಾಸವಿರಿಸಿದ್ದೇವೆ. ನಮ್ಮ ದೇವನೂ ನಿಮ್ಮ ದೇವನೂ ಒಬ್ಬನೇ.' *(ಅಲ್ ಅನ್‌ಕಬೂತ್:46*

ಇದಕ್ಕೆ ವಿರುದ್ಧವಾಗಿ ಅಲ್ಲಾಹನು 'ಮುಶ್ರಿಕ್' ಎಂಬ ಪಾರಿಭಾಷಿಕವನ್ನು 'ಶಿರ್ಕ್' ಅನ್ನೇ ನೈಜ ಧರ್ಮವೆಂದು ಬಗೆದವರಿಗೆ ಬಳಸಿರುವನು. ಅವರಿಗೆ ಪ್ರವಾದಿ(ಸ) ಅವ ಬಗ್ಗೆ ಇದ್ದ ಆಕ್ಷೇಪವೇ "ಇವನು ಎಲ್ಲ ದೇವರುಗಳ ಸ್ಥಾನದಲ್ಲಿ ಕೇವಲ ಒಬ್ಬ ದೇವನನ್ನು ಮಾಡಿ ಬಿಟ್ಟನೇ? ನಿಜಕ್ಕೂ ಇದೊಂದು ಬಹಳ ವಿಚಿತ್ರ ಸಂಗತಿ." *(ಸ್ವಾದ್:5)* ಎಂಬುದಾಗಿತ್ತು. ಧರ್ಮದ ವಿಶ್ವಾಸ ಮತ್ತು ಆಚಾರಗಳು ದಿವ್ಯವಾಣಿ ಮತ್ತು ಪ್ರವಾದಿತ್ವದ ಮೂಲದಿಂದ ಬಂದಿರಬೇಕೆಂಬ ವಿಶ್ವಾಸವೇ ಅವರಿಗೆ ಸ್ವೀಕಾರಾರ್ಹವಾಗಿರಲಿಲ್ಲ.

"ಅಲ್ಲಾಹನು ಅವತೀರ್ಣಗೊಳಿಸಿದ ನಿರ್ದೇಶಗಳನ್ನು ಅನುಸರಿಸಿರಿ ಎಂದು ಅವರೊಡನೆ ಹೇಳಲಾದಾಗ' ನಾವು ನಮ್ಮ ಪೂರ್ವಿಕರು ಯಾವ ಕ್ರಮವನ್ನು ಅನುಸರಿಸುತ್ತಿದ್ದುದನ್ನು ಕಂಡಿದ್ದೇವೋ ಅದನ್ನೇ ಅನುಸರಿಸುವೆವು" ಎನ್ನುತ್ತಾರೆ. *(ಅಲ್‌ಬಕರಃ:170)*

ಅವರನ್ನು ಅಲ್ಲಾಹನು 'ಮುಶ್ರಿಕ್' ಎಂದು ಕರೆದನು. ಮಾತ್ರವಲ್ಲ ಅವರ ವ್ಯವಹಾರವನ್ನು 'ಅಹಲುಲ್ ಕಿತಾಬ್'ಗಳಿಗಿಂತ ಭಿನ್ನವಾಗಿರಿಸಿದನು.

ಈ ವಾಸ್ತವಿಕತೆ ನನ್ನ ಮುಂದಿರುವುದರಿಂದ 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಎಂದು ವಿಶ್ವಾಸವಿರಿಸುವವರನ್ನು 'ಮುಶ್ರಿಕ್' ಎಂದು ಕರೆಯುವುದು ಮತ್ತು ಅವರೊಂದಿಗೆ ಮುಶ್ರಿಕರಂತೆ ವ್ಯವಹರಿಸುವುದನ್ನು ನಾನು ಜಾಇಝ್ (ಧರ್ಮ ಸಮ್ಮತ) ಎಂದು ಪರಿಗಣಿಸುವುದಿಲ್ಲ. ಅವರು ಕುರ್‌ಆನನ್ನು ಅಲ್ಲಾಹನ ಗ್ರಂಥವೆಂದೂ ಅದು ನೈಜ ಪ್ರಮಾಣವೆಂದೂ ಒಪ್ಪುತ್ತಾರೆ. ಧರ್ಮದ ಅನಿವಾರ್ಯ ಬೇಡಿಕೆಗಳನ್ನು ನಿರಾಕರಿಸುವುದಿಲ್ಲ. ಅವರು 'ಶಿರ್ಕ್'ನ್ನು ನೈಜ ಧರ್ಮವೆಂದು ಬಗೆಯುವುದಂತಿರಲಿ ತಮ್ಮನ್ನು 'ಮುಶ್ರಿಕ್' ಎಂದು ಹೇಳಿದರೆ ಅದನ್ನು ಒಂದು ಅತ್ಯಂತ ಕೆಟ್ಟ ಬಯ್ಗುಳವೆಂದು ಅವರು ತಿಳಿಯುತ್ತಾರೆ. ಆದರೆ ವ್ಯಾಖ್ಯಾನದ ತಪ್ಪಿನಿಂದಾಗಿ ಯಾವುದೋ 'ಶಿರ್ಕ್'ನ ವಿಶ್ವಾಸ ಮತ್ತು ಆಚಾರದಲ್ಲಿ ಸಿಲುಕಿದ್ದಾರೆ. ಅವರು 'ಶಿರ್ಕ್'ನ್ನು

ಶಿರ್ಕ್' ಎಂದು ತಿಳಿದು ಅದನ್ನು ಆಚರಿಸುವುದಿಲ್ಲ. ತಮ್ಮ ಈ ವಿಶ್ವಾಸ ಮತ್ತು ಆಚಾರಗಳು ತೌಹೀದ್‌ನ ವಿಶ್ವಾಸಕ್ಕೆ ವಿರುದ್ಧವಾಗಿಲ್ಲ ಎಂಬ ತಪ್ಪು ತಿಳುವಳಿಕೆಗೆ ಅವರು ಒಳಗಾಗಿದ್ದಾರೆ. ಆದ್ದರಿಂದ ನಾವು ಅವರಿಗೆ ಏನಾದರೂ ಕೆಟ್ಟ ಹೆಸರು ಕೊಟ್ಟು ಬಿಡುವ ಬದಲು ಜಾಣ್ಮೆಯಿಂದ ಪುರಾವೆಗಳೊಂದಿಗೆ ಈ ತಪ್ಪು ತಿಳುವಳಿಕೆಯನ್ನು ನಿವಾರಿಸಲು ಪ್ರಯತ್ನಿಸಬೇಕು. ನೀವು ಇಂತಹ ವ್ಯಕ್ತಿಯ ಮುಂದೆ ಅವನ ಯಾವುದಾದರೂ ವಿಶ್ವಾಸ ಅಥವಾ ಆಚಾರ ತೌಹೀದ್‌ಗೆ ವಿರುದ್ಧವಾಗಿದೆ ಎಂದು ಸಾಬೀತುಪಡಿಸಲು ಕುರ್‌ಆನ್ ಮತ್ತು ಹದೀಸ್‌ನ ಸಮರ್ಥನೆಗಳನ್ನು ನೀಡುವಾಗ ಅವನು ಕುರ್‌ಆನ್ ಮತ್ತು ಹದೀಸನ್ನು ಪ್ರಮಾಣವೆಂದು ಪರಿಗಣಿಸುತ್ತಾನೆಂದು ಭಾವಿಸುವುದಿಲ್ಲವೇ? ನೀವು ಸಮರ್ಥನೆಯನ್ನು ಓರ್ವ ಹಿಂದೂ, ಸಿಕ್ಖ್ ಅಥವಾ ಕ್ರೈಸ್ತನ ಮುಂದೆ ಇಡಬಲ್ಲಿರಾ? ನೀವು ಅವನಿಗೆ ಇಂತಿಂತಹ ವಿಷಯ 'ಶಿರ್ಕ್' ಆಗಿದೆ. ಅದನ್ನು ತೊರೆಯಬೇಕು ಎಂದು ಹೇಳುವಾಗ ಅವನು ಶಿರ್ಕ್'ನ್ನು ಮಹಾ ಪಾಪವೆಂದು ಪರಿಗಣಿಸುತ್ತಾನೆಂದು ನಿಮಗೆ ತಿಳಿದಿರುವುದಿಲ್ಲವೇ? ಹಾಗಲ್ಲದಿದ್ದರೆ ಅವನನ್ನು 'ಶಿರ್ಕ್'ನ ಬಗ್ಗೆ ಎಚ್ಚರಿಸುವ ಯೋಚನೆಯೇ ನಿಮಗೆ ಎಲ್ಲಿಂದ ಬರುತ್ತಿತ್ತು?

(ತರ್ಜುಮಾನುಲ್ ಕುರ್‌ಆನ್,)

21

ಮನುಷ್ಯನು 'ಪ್ರಕೃತಿ'ಯಲ್ಲಿ ಹುಟ್ಟುವುದರ ತಾತ್ಪರ್ಯ

- *"ಹುಟ್ಟುವ ಪ್ರತಿಯೊಂದು ಮಗುವೂ 'ಪ್ರಕೃತಿ'ಯಲ್ಲಿ ಹುಟ್ಟುತ್ತದೆ. ಅದರ ತಂದೆ ತಾಯಿಗಳು ಅದನ್ನು ಯಹೂದಿಯಾಗಿಯೋ ಕ್ರೈಸ್ತನಾಗಿಯೋ, ಅಗ್ನಿ ಆರಾಧಕನಾಗಿಯೋ ಮಾರ್ಪಡಿಸುತ್ತಾರೆ" ಎಂಬ ಹದೀಸ್‌ನ ತಾತ್ಪರ್ಯವೇನು? ನಿಮ್ಮ 'ಖುತ್‌ಬಾತ್' ಎಂಬ ಗ್ರಂಥದಲ್ಲಿ 'ಮನುಷ್ಯನು ತಾಯಿಯ ಗರ್ಭದಿಂದ ಇಸ್ಲಾಮ್ ತೆಗೆದುಕೊಂಡು ಬರುವುದಿಲ್ಲ' ಎಂಬುದಾಗಿ ಪ್ರಸ್ತಾಪಿಸಿರುವುದರಿಂದ ಈ ಪ್ರಶ್ನೆ ಕೇಳಬೇಕಾಯಿತು. ಹುಟ್ಟುವ ಪ್ರತಿಯೊಂದು ಮಗು ಇಸ್ಲಾಮ್ ಧರ್ಮದಲ್ಲಿ ಹುಟ್ಟುತ್ತದೆ ಎಂದು ಸಾಮಾನ್ಯವಾಗಿ ಈ ಹದೀಸನ್ನು ವ್ಯಾಖ್ಯಾನಿಸಲಾಗುತ್ತದೆ. ಆದರೆ ನಿಮ್ಮ ಪ್ರಸ್ತುತ ಮಾತು ಇದಕ್ಕೆ ವಿರುದ್ಧವಾಗುತ್ತದೆ. ನಿಮ್ಮ ಈ ಮಾತನ್ನು ಇತರ ಅನೇಕರೂ ಆಕ್ಷೇಪಿಸಿದ್ದಾರೆ. ಆದರೆ ನಾನು ಅದರ ತಾತ್ಪರ್ಯವನ್ನು ಬೇರೆಯವರಿಂದ ತಿಳಿಯುವ ಅಥವಾ ನಾನೇ ಅರ್ಥೈಸಿಕೊಳ್ಳುವ ಬದಲಿಗೆ ನಿಮ್ಮಿಂದಲೇ ಕೇಳಿ ತಿಳಿಯಬೇಕೆಂದಿದ್ದೇನೆ. ಏಕೆಂದರೆ ಅನೇಕ ಸಲ ತಮ್ಮ ಯಾವುದಾದರೂ ಮಾತಿನ ಕುರಿತು ಜನರು ಆಕ್ಷೇಪಿಸಿದಾಗ ಮೇಲ್ನೋಟಕ್ಕೆ ಅವರ ಆಕ್ಷೇಪ ಸರಿಯೆಂದು ಕಂಡರೂ ನಿಮ್ಮ ಕಡೆಯಿಂದ ಅದರ ತಾತ್ಪರ್ಯ ವಿವರಿಸಲ್ಪಟ್ಟಾಗ ನಿಮ್ಮ ವಿವರಣೆಯು ಬುದ್ಧಿಗೆ ನಿಲುಕುವಂತಿತ್ತು.*

○ ಈ ಹದೀಸ್‌ನಲ್ಲಿ ವಿವರಿಸಲಾಗಿರುವ ವಾಸ್ತವಿಕತೆ ಏನೆಂದರೆ ಮನುಷ್ಯನು ದೇವನ ಬಳಿಯಿಂದ ಕುಫ್ರ್ (ಸತ್ಯನಿಷೇಧ), ಶಿರ್ಕ್ (ಬಹುದೇವ ವಿಶ್ವಾಸ) ಅಥವಾ ನಾಸ್ತಿಕತೆಯನ್ನು ತೆಗೆದುಕೊಂಡು ಬರುವುದಿಲ್ಲ. ಬದಲಾಗಿ ಅವನು ಅಪ್ಪಟ ಪ್ರಕೃತಿಯೊಂದಿಗೆ ಬರುತ್ತಾನೆ. ಅದು ಸೃಷ್ಟಿಕರ್ತನ ಹೊರತು ಇತರ ಯಾರನ್ನೂ ತನ್ನ ಆರಾಧ್ಯನೆಂದು ತಿಳಿಯುವುದಿಲ್ಲ. ದೇವದತ್ತವಾದ ಧರ್ಮದ ಪ್ರಾಕೃತಿಕ ನಿಯಮಗಳ ಹೊರತು ಇತರ ಯಾವುದನ್ನೂ ಅದು ಅರಿತಿರುವುದಿಲ್ಲ. ಈ ಪ್ರಕೃತಿಯಲ್ಲೇ ಮನುಷ್ಯನು ಉಳಿದರೆ ಮತ್ತು ಯಾವುದೇ ಕೆಟ್ಟ ವಾತಾವರಣ ಅವನನ್ನು ಬಹುದೇವಾರಾಧನೆಯ ವಿಶ್ವಾಸಾಚಾರ ಮತ್ತು ಪಥಭ್ರಷ್ಟ ನೀತಿ - ನಡವಳಿಕೆಗಳತ್ತ ವಾಲಿಸದಿದ್ದರೆ ಪ್ರವಾದಿಗಳು ಪ್ರಸ್ತುತ ಪಡಿಸಿದ ಶಿಕ್ಷಣವನ್ನು ಸ್ವೀಕರಿಸಲು ಅವನಿಗೆ ಸ್ವಲ್ಪವೂ ಸಂಕೋಚವಾಗಲಾರದು. ತನ್ನದೇ ವಸ್ತುವನ್ನು ಯಾರೋ ತಂದು ಕೊಟ್ಟಂತೆ ಅದನ್ನವನು ಸ್ವೀಕರಿಸುವನು.

ಆದರೆ ಇದು ವಾಸ್ತವಿಕತೆಯ ಒಂದು ಮುಖ ಮಾತ್ರ. ಅದರ ಇನ್ನೊಂದು ಮುಖವೇನೆಂದರೆ 'ಇಸ್ಲಾಮ್' ಯಾರಿಗೂ ತನ್ನಿಂತಾನೇ ಸಿಕ್ಕಿ ಬಿಡುವುದಿಲ್ಲ. ಅದು ಪ್ರವಾದಿಗಳ ಮುಖಾಂತರವೇ ಸಿಗುತ್ತದೆ. ಪ್ರವಾದಿಗಳು ಪ್ರಸ್ತುತ ಪಡಿಸಿದ ಧರ್ಮವನ್ನು ಅರಿತು ಅದನ್ನು ಮನಸ್ಸಿನಿಂದ ದೃಢೀಕರಿಸಿದಾಗ ಮಾತ್ರ ಒಬ್ಬ ವ್ಯಕ್ತಿ ಮುಸ್ಲಿಮ್ ಆಗುತ್ತಾನೆ. ಎಲ್ಲಿಯವರೆಗೆಂದರೆ ಒಬ್ಬನು ಪ್ರೌಢಾವಸ್ಥೆಗೆ ತಲುಪುವ ತನಕವೂ ಅಲ್ಲಾಹನು ಅವನನ್ನು ಸೃಷ್ಟಿಸಿದ ಸಹಜ ಪ್ರಕೃತಿಯಲ್ಲೇ ಇದ್ದರೂ ಪ್ರವಾದಿಗಳ ಮುಖಾಂತರ ಅವನಿಗೆ ದೊರಕಿದ ಧರ್ಮವನ್ನು ಸ್ವೀಕರಿಸಿದಾಗ ಮಾತ್ರ ಅವನು ಮುಸ್ಲಿಮ್ ಎನಿಸಿಕೊಳ್ಳುತ್ತಾನೆ. ಯಾರು ಇದನ್ನು ಒಪ್ಪುವುದಿಲ್ಲವೋ ಅವರು ಮನುಷ್ಯನು ತಾಯಿಯ ಹೊಟ್ಟೆಯಿಂದ ಬರುವಾಗ ತಂದದ್ದೇ ಇಸ್ಲಾಮ್ ಮತ್ತು ಅವನ ಸನ್ಮಾರ್ಗದರ್ಶನಕ್ಕೆ ಅದುವೇ ಸಾಕಾಗಿದೆ ಎಂದು ಹೇಳಿದಂತಾಗುವುದು. ಬೇರೆ ಮಾತಿನಲ್ಲಿ ಹೇಳುವುದಾದರೆ ಧರ್ಮ, ಅವತರಣ ಮತ್ತು ಪ್ರವಾದಿಗಳ ಆಗಮನದ ಅಗತ್ಯವೇ ಇಲ್ಲದಂತಾಗುತ್ತದೆ. ಆದರೆ ಮನುಷ್ಯನಿಗೆ ಎಲ್ಲ ಸ್ಥಿತಿಯಲ್ಲೂ ಅಲ್ಲಾಹನ ಕಡೆಯಿಂದ ಮಾರ್ಗದರ್ಶನದ ಅಗತ್ಯವಿದೆಯೆಂದೂ ಅದು ಪ್ರತಿಯೊಬ್ಬನಿಗೆ ನೇರವಾಗಿ ಲಭಿಸದೆ ಪ್ರವಾದಿಗಳ ಮುಖಾಂತರವೇ ಲಭಿಸುವುದೆಂದೂ ಅದನ್ನು ಸ್ವೀಕರಿಸುವುದರ ಮೇಲೆಯೇ ಮಾನವನ ಮೋಕ್ಷ ಅಡಕವಾಗಿದೆಯೆಂದೂ ಪವಿತ್ರ ಕುರ್‌ಆನ್ ಪದೇ ಪದೇ ಸ್ಪಷ್ಟವಾಗಿ ಹೇಳಿದೆ. ಯಾವುದೇ ಸಾಮಾಜಿಕ ವಾತಾವರಣ ಇಲ್ಲದಿದ್ದಾಗ ಯಹೂದಿ, ಕ್ರೈಸ್ತ ಮತ್ತು ಅಗ್ನಿ ಆರಾಧಕ ಧರ್ಮಗಳ ಸುಳಿವೂ ಇಲ್ಲದಿದ್ದಾಗ ಅಲ್ಲಾಹನು ಮಾನವಕುಲವನ್ನು ಸಂಬೋಧಿಸಿ ಈ ರೀತಿ ಹೇಳಿದ್ದನು:

ಇನ್ನು ನನ್ನ ಕಡೆಯಿಂದ ನಿಮ್ಮ ಬಳಿಗೆ ಯಾವುದೇ ಮಾರ್ಗದರ್ಶನ ಬಂದಾಗ ಯಾರು ನನ್ನ ಮಾರ್ಗದರ್ಶನವನ್ನು ಅನುಸರಿಸುವರೋ ಅವರಿಗೆ ಯಾವುದೇ ರೀತಿಯ ಭಯವಾಗಲೀ ವ್ಯಥೆಯಾಗಲೀ ಇರಲಾರದು. *(ಅಲ್ ಬಕರಃ : 38)*

ಇದರಿಂದ ತಿಳಿದು ಬರುವುದೇನೆಂದರೆ ಮನುಷ್ಯನ ಯಾವ ಪ್ರಕೃತಿಗೆ ಅಲ್ಲಾಹನು ಅದರ ಒಳಿತು - ಕೆಡುಕುಗಳ ಒಂದು ದಿವ್ಯಜ್ಞಾನವನ್ನು ದಯಪಾಲಿಸಿರುವನೋ ಅದು ತನ್ನ ಮೂಲ ಸ್ಥಿತಿಯಲ್ಲಿ ಸುರಕ್ಷಿತವಾಗಿದ್ದರೂ ಕೇವಲ ಅದೊಂದೇ ಸನ್ಮಾರ್ಗ ಕಂಡುಕೊಳ್ಳಲು ಪರ್ಯಾಪ್ತವಾಗಲಾರದು. ಅದಕ್ಕೆ ದಿವ್ಯವಾಣಿಯ ಮಾರ್ಗದರ್ಶನದ ಅಗತ್ಯ ಇದ್ದೇ ಇದೆ. ಪ್ರಕೃತಿಯ ಸಾಮರ್ಥ್ಯವೆಷ್ಟೆಂದರೆ ದಿವ್ಯವಾಣಿಯ ಮೂಲಕ ಅವನ ಮುಂದೆ ಸತ್ಯದ ಹಾದಿಯು ಗೋಚರವಾದಾಗ ಅದನ್ನು ಅದು ಗುರುತಿಸಿಕೊಳ್ಳುತ್ತದೆ ಮತ್ತು ಅದನ್ನು ದೃಢೀಕರಿಸುತ್ತದೆ. ಆದರೆ ದಿವ್ಯವಾಣಿಯ ಮಾರ್ಗದರ್ಶನವಿಲ್ಲದೆ ಸ್ವಯಂ ಸನ್ಮಾರ್ಗವನ್ನು

ಕಂಡುಕೊಳ್ಳುವುದು ಅದರಿಂದ ಸಾಧ್ಯವಲ್ಲ. ಪ್ರವಾದಿವರ್ಯರಿಗಿಂತ(ಸ) ಅಧಿಕ ತಮ್ಮ ಮೂಲ ಪ್ರಕೃತಿಯನ್ನು ಕಾಯ್ದುಕೊಂಡವರು ಇನ್ನಾರಿರಬಹುದು? ಆದರೆ ಅವರ ಅವಸ್ಥೆ ಏನಾಗಿತ್ತೆಂದರೆ ಎಲ್ಲಿಯವರೆಗೆ ದಿವ್ಯವಾಣಿಯ ಮಾರ್ಗದರ್ಶನ ಲಭಿಸಲಿಲ್ಲವೋ ಅಲ್ಲಿಯ ತನಕ ಅವರು ಯಾವುದು ಸನ್ಮಾರ್ಗವೆಂದು ತಿಳಿಯದೆ ಸ್ತಬ್ಧವಾಗಿ ನಿಂತಿದ್ದರು.

ಮತ್ತು ನಿಮ್ಮನ್ನು ಸನ್ಮಾರ್ಗವರಿಯದವರಾಗಿ ಕಂಡು ಮಾರ್ಗದರ್ಶನ ಮಾಡಲಿಲ್ಲವೇ?

(ಅದ್ದುಹಾ : 7)

ಇದೇ ರೀತಿಯಲ್ಲಿ ನಾವು ನಮ್ಮ ಅಪ್ಪಣೆಯಿಂದ ಒಂದು ರೂಹನ್ನು ನಿಮ್ಮ ಕಡೆಗೆ ವಹ್ಯ್ ಮಾಡಿರುತ್ತೇವೆ. ಗ್ರಂಥವೆಂದರೆ ಏನೆಂದೂ ಈಮಾನ್ ಎಂದರೆ ಏನೆಂದೂ ನಿಮಗೆ ಗೊತ್ತಿರಲಿಲ್ಲ. *(ಅಶ್ಶೂರಾ - 52)*

ಮುಸ್ಲಿಮ್ ಮನೆಯಲ್ಲಿ ಹುಟ್ಟಿದ ಪ್ರತಿಯೊಬ್ಬನಿಗೂ ಈ ಇಸ್ಲಾಮ್ ತನ್ನಿಂತಾನೇ ಸಿಕ್ಕಿ ಬಿಡುತ್ತದೆಂದೂ ಅದನ್ನು ಗಳಿಸಲು ಯಾವುದೇ ಪ್ರಜ್ಞೆ ಜ್ಞಾನ ಅಥವಾ ಐಚ್ಛಿಕ ದೃಢೀಕರಣದ ಅಗತ್ಯವಿಲ್ಲವೆಂದೂ ಬುದ್ಧಿ ಮತ್ತು ತಿಳುವಳಿಕೆಯಿರುವ ಯಾವನೇ ವ್ಯಕ್ತಿ ಹೇಳುವುದು ಸಾಧ್ಯವೇ? *(ತರ್ಜುಮಾನುಲ್ ಕುರ್‌ಆನ್ ಅಕ್ಟೋಬರ್-ನವೆಂಬರ್ 1952)*

22

ಮನೆ, ವಾಹನ ಮತ್ತು ಮಹಿಳೆಯಲ್ಲಿ ಅಪಶಕುನ

- *ನಾನು ವಾಸಕ್ಕೆ ಒಂದು ಮನೆಯನ್ನು ಖರೀದಿಸ ಬಯಸುತ್ತೇನೆ. ಒಂದು ಮನೆ ಮಾರಾಟಕ್ಕಿದೆ. ಅದರ ಒಡೆಯ ವಾರಸುದಾರರು ಯಾರೂ ಇಲ್ಲದೆ ತೀರಿಕೊಂಡಿದ್ದಾರೆ. ಆದ್ದರಿಂದ ಆ ಮನೆಯು ಅವರ ದೂರದ ಸಂಬಂಧಿಯೊಬ್ಬನ ಪಾಲಿಗೆ ಬಂದಿದೆ. ನಾನು ಆ ಮನೆಯನ್ನು ಖರೀದಿಸ ಹೊರಟಾಗ ನನ್ನ ಮನೆಯ ಕೆಲವು ಮಂದಿ ಆಕ್ಷೇಪಿಸಿದರು. ಅದು ಅಪಶಕುನದ ಮನೆ. ಅದರಲ್ಲಿರುವವರ ವಂಶವೃದ್ಧಿಯಾಗುವುದಿಲ್ಲ. ಎಲ್ಲಿಯವರೆಗೆಂದರೆ ಅದರ ಮೂಲ ಒಡೆಯನ ಸಂತತಿಯೇ ಅಳಿದು ಹೋಯಿತು ಎಂದರು. ಮನೆಯವರು ಕೆಲವು ಹದೀಸ್‌ಗಳನ್ನು ಉದ್ಧರಿಸಿದರು. ಅದರಲ್ಲಿ ಕೆಲವು ಮನೆ, ಕುದುರೆ ಮತ್ತು ಮಹಿಳೆಯರು ಅಪಶಕುನವಾಗಿದ್ದಾರೆಂಬ ಪ್ರಸ್ತಾಪವಿದೆ. ನಾನು ಹದೀಸ್ ಗ್ರಂಥಗಳಲ್ಲಿ ಆ ಕುರಿತ ಉಲ್ಲೇಖಗಳನ್ನು ನೋಡಿದೆ. ಅದರ ವ್ಯಾಖ್ಯಾನದಲ್ಲಿ ಬರೆದ ವಿಷಯಗಳನ್ನೂ ಓದಿದೆ. ಆದರೆ ನಿಖರ ಮತ್ತು ಖಾತ್ರಿಯಾದ ಯಾವುದೇ ಕಾರಣ ತಿಳಿದು ಬರಲಿಲ್ಲ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?*

○ ನೀವು ಪ್ರಸ್ತಾಪಿಸಿದ ಉಲ್ಲೇಖಗಳು ಹದೀಸ್ ಗ್ರಂಥಗಳಲ್ಲಿ ವರದಿಯಾಗಿರುವುದು ನಿಜ. ಆದರೆ ಆ ಕುರಿತು ಹ. ಆಯಿಶಾ(ರ) ಅವರ ಒಂದು ವರದಿಯಿಂದ ಅದರ ವಾಸ್ತವಿಕತೆ ಬೇರೆಯೇ ಆಗಿದೆ ಎಂದು ತಿಳಿದು ಬರುತ್ತದೆ. ಇಮಾಮ್ ಅಹ್ಮದ್(ರ) ಅವರು ತಮ್ಮ ಹದೀಸ್ ಗ್ರಂಥದಲ್ಲಿ ಅದನ್ನು ಈ ರೀತಿ ಉಲ್ಲೇಖಿಸಿರುವರು:

"ಇಬ್ಬರು ಹ. ಆಯಿಶಾ(ರ) ಅವರ ಬಳಿಗೆ ಬಂದು ಹೀಗೆ ನಿವೇದಿಸಿದರು: ಹ. ಅಬೂಹುರೈರಾ(ರ) ಅವರು ವರದಿ ಮಾಡುತ್ತಾರೆ. ಪ್ರವಾದಿ(ಸ) ಈ ರೀತಿ ಹೇಳುತ್ತಿದ್ದರು: 'ಅಪಶಕುನವು ಕೇವಲ ಮಹಿಳೆ, ಕುದುರೆ ಮತ್ತು ಮನೆಯಲ್ಲಿದೆ." ಅದಕ್ಕೆ ಹ. ಆಯಿಶಾ(ರ) ಹೇಳಿದರು: "ಕುರ್‌ಆನನ್ನು ಅಬುಲ್ ಕಾಸಿಮ್ [ಅರ್ಥಾತ್ ಮುಹಮ್ಮದ್(ಸ)] ಅವರ ಮೇಲೆ ಅವತೀರ್ಣಗೊಳಿಸಿದವನ ಆಣೆ. ಪ್ರವಾದಿ(ಸ) ಹೀಗೆ ಹೇಳಿದ್ದಲ್ಲ, ಬದಲಾಗಿ ಅವರು ಹೀಗೆ ಹೇಳಿದ್ದರು: "ಅಜ್ಞಾನ ಕಾಲದ ಜನರು ಮಹಿಳೆ, ಕುದುರೆ ಮತ್ತು ಮನೆಯಲ್ಲಿ ಅಪಶಕುನವಿದೆಯೆಂದು ನಂಬಿದ್ದರು." ಅನಂತರ ಹ. ಆಯಿಶಾ(ರ) ಈ ಆಯತ್ ಪಠಿಸಿದರು: "ಭೂಮಿಯಲ್ಲಿ ಮತ್ತು ನಿಮ್ಮ ಶರೀರಗಳ ಮೇಲೆ ಯಾವ ಆಪತ್ತೂ

ಬರುವುದಿಲ್ಲ. ಅದು ಪ್ರಕಟವಾಗುವುದಕ್ಕಿಂತ ಮುಂಚೆ ಒಂದು ಗ್ರಂಥದಲ್ಲಿ ಉಲ್ಲೇಖಿತವಾಗಿರದೆ." [ವರದಿ: ಹ. ಅಬೂಹಸ್ಸಾನ್ ಅಲ್‌ರಜ್(ರ)]

ಸತ್ಯವಿಶ್ವಾಸಿಗಳ ಮಾತೆಯಾದ ಹ. ಆಯಿಶಾ(ರ) ಅವರ ಈ ವಿವರಣೆಯಿಂದ ತಿಳಿದು ಬರುವಂತೆ ಹೆಚ್ಚಿನಂಶ ಹ. ಅಬೂಹುರೈರಾ(ರ) ಅವರಿಂದ ಉಲ್ಲೇಖಿತ ಹದೀಸ್ ಸರಿಯಾದ ಪದಗಳಲ್ಲಿ ವರದಿಯಾಗಿರಲಿಕ್ಕಿಲ್ಲ. ಒಂದು ವೇಳೆ ಅದನ್ನು ಸರಿಯೆಂದು ಒಪ್ಪಿಕೊಂಡರೂ ವೈಚಾರಿಕವಾಗಿ ಅದನ್ನು ವ್ಯಾಖ್ಯಾನಿಸಬಹುದಾಗಿದೆ.

ಅಪಶಕುನದ ಒಂದು ಕಲ್ಪನೆಯು ಮೂಢನಂಬಿಕೆಯಾಗಿದೆ. ಅದಕ್ಕೆ ಇಸ್ಲಾಮ್‌ನೊಂದಿಗೆ ಯಾವ ಸಂಬಂಧವೂ ಇಲ್ಲ. ಅಪಶಕುನದ ಒಂದು ವೈಜ್ಞಾನಿಕ ಕಲ್ಪನೆಯೂ ಇದೆ. ಅದರ ಅರ್ಥ ಒಂದು ವಸ್ತು ಅನುಯೋಜ್ಯ ಅಥವಾ ಅನುಕೂಲಕರ ಅಲ್ಲದಿರುವುದು. ಈ ವ್ಯಾಖ್ಯಾನವು ವೈಚಾರಿಕವೂ ಆಗಿದೆ. ಶರೀಅತ್‌ನಲ್ಲಿ ಅದಕ್ಕೆ ಅಂಗೀಕಾರವೂ ಇದೆ. ಹದೀಸ್‌ನಲ್ಲಿ ಮನೆಯಲ್ಲಿ ಅಪಶಕುನವಿದೆ ಎನ್ನುವುದರ ತಾತ್ಪರ್ಯ ಅಲ್ಲಿ ವಾಸಿಸುವವರ ಅದೃಷ್ಟ ಕೆಡಿಸುವ ಯಾವುದಾದರೂ ವಸ್ತು ಇದೆಯೆಂದಲ್ಲ. ಬದಲಾಗಿ ಅನುಭವದಿಂದ ಆ ಮನೆಯು ವಾಸಕ್ಕೆ ಅನುಯೋಜ್ಯ ಮತ್ತು ಅನುಕೂಲಕರ ಅಲ್ಲ ಎಂದು ರುಜುವಾಗುವುದಾಗಿದೆ. ಕೆಲವೊಮ್ಮೆ ಒಂದು ಸೋಂಕು ರೋಗಪೀಡಿತ ವ್ಯಕ್ತಿಗಳು ಒಬ್ಬರ ನಂತರ ಒಬ್ಬರಂತೆ ಆ ಮನೆಯಲ್ಲಿ ವಾಸಿಸುತ್ತಾ ಬರುತ್ತಾರೆ. ಇದರಿಂದ ಆ ರೋಗದ ವಿಷಾಣುಗಳು ಆ ಮನೆಯಲ್ಲಿ ಶಾಶ್ವತವಾಗಿ ಉಳಿಯುತ್ತದೆ. ಈಗ ಒಂದು ವೇಳೆ ಆ ಮನೆಯಲ್ಲಿ ಇದ್ದವರೆಲ್ಲಾ ಆ ವಿಶಿಷ್ಟ ಕಾಯಿಲೆಗೆ ತುತ್ತಾಗಿದ್ದಾರೆ ಎಂದು ಅನುಭವದಿಂದ ತಿಳಿದು ಬಂದರೆ, ಆ ಮನೆ ಇನ್ನು ವಾಸಕ್ಕೆ ಯೋಗ್ಯವಲ್ಲವೆಂದು ಪರಿಗಣಿಸಲ್ಪಡುವುದು. ವಿಶೇಷವಾಗಿ ಪ್ಲೇಗ್ ಮತ್ತು ಕ್ಷಯ ರೋಗದ ವಿಷಯದಲ್ಲಿ ಈ ಮಾತು ಅನುಭವ ವೇದ್ಯವಾಗಿದೆ. ಪ್ಲೇಗ್ ಹರಡಿರುವ ಕಡೆಯಿಂದ ಓಡಿ ಹೋಗಬಾರದು ಮತ್ತು ಅಲ್ಲಿಗೆ ಬೇರೆಡೆಯಿಂದ ಜನರು ಹೋಗಲೂ ಬಾರದು ಎಂದು ಹದೀಸ್‌ನಲ್ಲಿ ಆದೇಶಿಸಲಾಗಿದೆ. ಮಹಿಳೆ ಮತ್ತು ಕುದುರೆಯ ವಿಷಯವೂ ಅಷ್ಟೆ. ಒಂದು ಕುದುರೆಯು ಅನೇಕ ಜನರಿಗೆ ಸವಾರಿಗೆ ಪ್ರತಿಕೂಲವೆಂದು ಅನುಭವವಾದರೆ ಅಥವಾ ಓರ್ವ ಮಹಿಳೆಯನ್ನು ಒಬ್ಬರ ನಂತರ ಒಬ್ಬರಂತೆ ಅನೇಕರು ವಿವಾಹವಾಗಿ ಎಲ್ಲರೂ ಯಾವುದಾದರೂ ವಿಶಿಷ್ಟ ರೋಗಕ್ಕೆ ತುತ್ತಾಗಿದ್ದರೆ ಆ ಕುದುರೆ ಅಥವಾ ಮಹಿಳೆಯಲ್ಲಿ ಯಾವುದೋ ಅಜ್ಞಾತ ಕುಂದು ಇದೆ ಎಂದೇ ತಿಳಿಯಲಾಗುವುದು.

ಈಗ ನೋಡಬೇಕಾಗಿರುವುದು ನೀವು ಖರೀದಿಸ ಹೊರಟ ಮನೆಯ 'ಅಪಶಕುನ'ವು ಕೇವಲ ಮೂಢನಂಬಿಕೆಯೇ ಅಥವಾ ಅನುಭವಸಿದ್ಧವೇ ಎಂಬುದಾಗಿದೆ.

(ತರ್ಜುಮಾನುಲ್ ಕುರ್‌ಆನ್: ಜನವರಿ 1953)

23

'ದುಆ'ದಲ್ಲಿ ಮಹಾತ್ಮರ ವಸೀಲಾ

ಇಂತಹವರ ಮಹಾತ್ಮೆಯಿಂದ ಅಥವಾ ಇಂತಹವರ ಗೌರವದಿಂದ ಎನ್ನುತ್ತಾ ಅಲ್ಲಾಹನಲ್ಲಿ ಪ್ರಾರ್ಥಿಸುವುದಕ್ಕೆ ಶರೀಅತ್‌ನಲ್ಲಿ ಏನಾದರೂ ಪುರಾವೆ ಇದೆಯೇ ಎಂದು ನಾನೊಮ್ಮೆ ವಿಚಾರಿಸಿದ್ದೆ. ಆಗ ತಾವು ಸೂಫಿ ಪಂಥದಲ್ಲಿ ಇದು ಸಾಮಾನ್ಯವಾಗಿದ್ದರೂ ಕುರ್‌ಆನ್ ಮತ್ತು ಹದೀಸ್‌ನಿಂದ ಅದಕ್ಕೆ ಯಾವುದೇ ಆಧಾರವಿದೆಯೆಂದು ತಿಳಿಯಲಿಲ್ಲ ಎಂದು ಉತ್ತರಿಸಿದ್ದೀರಿ. ನಾನು ಈ ಬಗ್ಗೆ ಒಂದು ಆಯತ್ ಮತ್ತು ಒಂದು ಹದೀಸ್ ಮುಂದಿಡುತ್ತೇನೆ. ಸೂರಃ ಅಲ್‌ಬಕರಃದಲ್ಲಿ ಗ್ರಂಥದವರ ಕುರಿತು ಈ ರೀತಿ ಪ್ರಸ್ತಾವಿಸಲಾಗಿದೆ, "ಮುಹಮ್ಮದ್(ಸ) ಅವರ ಆಗಮನಕ್ಕಿಂತ ಮುಂಚೆ ಯಹೂದಿಗಳು ಕಾಫಿರರ ವಿರುದ್ಧ ವಿಜಯಕ್ಕಾಗಿ ಪ್ರಾರ್ಥಿಸುತ್ತಿದ್ದರು." ಇದನ್ನು ವ್ಯಾಖ್ಯಾನಿಸುತ್ತಾ ಇಮಾಮ್ ರಾಗಿಬ್ ಅವರು ಮುಫರ್ರಿದಾತ್‌ನಲ್ಲಿ ಹೀಗೆ ಹೇಳಿರುವರು. ಅರ್ಥಾತ್: 'ಮುಹಮ್ಮದ್(ಸ) ಅವರ ನಿಯುಕ್ತಿಯ ಮೂಲಕ ಅಲ್ಲಾಹನ ನೆರವು ಯಾಚಿಸುತ್ತಿದ್ದರು. ಮತ್ತು ಹೀಗೂ ಹೇಳಲಾಗಿದೆ,' ಯಹೂದಿಗಳು ಹೀಗೆ ಹೇಳುತ್ತಿದ್ದರು: ನಮಗೆ ಮೂರ್ತಿಪೂಜಕರ ವಿರುದ್ಧ ಮುಹಮ್ಮದ್(ಸ) ಅವರ ಮೂಲಕ ಸಹಾಯ ಒದಗಿಸಲಾಗುವುದು. ಮತ್ತು ಹೀಗೂ ಹೇಳಲಾಗಿದೆ, ಅವರು ಪ್ರವಾದಿ(ಸ) ಅವರ ಪ್ರಸ್ತಾಪ ಮಾಡುತ್ತಾ ಅಲ್ಲಾಹನಿಂದ ವಿಜಯಕ್ಕಾಗಿ ಪ್ರಾರ್ಥಿಸುತ್ತಿದ್ದರು.

ತಿರ್ಮಿದಿ ಎಂಬ ಹದೀಸ್ ಗ್ರಂಥದಲ್ಲಿ ಒಂದು 'ಹಸನ್ ಸಹೀಹ್ ಗರೀಬ್' ಹದೀಸ್ ವರದಿಯಾಗಿದೆ. ಓರ್ವ ಅಂಧನು ಪ್ರವಾದಿ(ಸ) ಅವರ ಬಳಿಗೆ ಬಂದು, "ನನ್ನ ಸಂಕಷ್ಟವನ್ನು ದೂರಮಾಡಲು ತಾವು ಅಲ್ಲಾಹನಲ್ಲಿ ಪ್ರಾರ್ಥಿಸಿರಿ" ಎಂದು ಬೇಡಿಕೊಂಡ. ಆಗ ಪ್ರವಾದಿ(ಸ) ಹೇಳಿದರು, "ನೀವು ಬಯಸಿದರೆ ನಾನು ಪ್ರಾರ್ಥಿಸಬಲ್ಲೆ. ಆದರೆ ನೀವು ಸಹನೆ ವಹಿಸುವುದಾದರೆ ಅದುವೇ ನಿಮ್ಮ ಪಾಲಿಗೆ ಉತ್ತಮವಾಗಿದೆ." ಆಗ ಆ ವ್ಯಕ್ತಿ, 'ತಾವು ಪ್ರಾರ್ಥಿಸಿರಿ' ಎಂದು ಬೇಡಿಕೊಂಡರು. ಪ್ರವಾದಿ(ಸ) ಆ ವ್ಯಕ್ತಿಗೆ ಚೆನ್ನಾಗಿ ವುಝೂ ಮಾಡಿ ಈ ರೀತಿ ಪ್ರಾರ್ಥಿಸಬೇಕೆಂದು ಆದೇಶಿಸಿದರು, "ಓ ಅಲ್ಲಾಹ್! ನಾನು ನಿನ್ನ ಪ್ರವಾದಿ ಮುಹಮ್ಮದ್(ಸ), ಕರುಣೆಯ ಪ್ರವಾದಿಯ ಮುಖಾಂತರ ನಿನ್ನಲ್ಲಿ ಪ್ರಾರ್ಥಿಸುತ್ತೇನೆ ಹಾಗೂ ನಿನ್ನೆಡೆಗೆ ಗಮನ

ಹರಿಸುತ್ತೇನೆ. ನಾನು ನನ್ನ ಈ ಬೇಡಿಕೆಗಾಗಿ ನಿನ್ನ ಕಡೆಗೇ ಗಮನ ಹರಿಸಿದ್ದೇನೆ ಪ್ರಭ ನೀನು ನನ್ನ ಬೇಡಿಕೆಯನ್ನು ಈಡೇರಿಸಲೆಂದು. ಆದ್ದರಿಂದ ಓ ಅಲ್ಲಾಹ್! ನ ಪರವಾಗಿ ಮುಹಮ್ಮದ್(ಸ) ಅವರ ಶಿಫಾರಸ್ಸನ್ನು ಸ್ವೀಕರಿಸು."

ಈ ಆಯತ್ ಮತ್ತು ಈ ಹದೀಸ್‌ನಿಂದ 'ಬಿ ಹುರ್‌ಮತಿ', 'ಬಿಜಾಹಿ', 'ಬಿತುಫೈ ಅಥವಾ 'ಬಿಬರಕತಿ' ಮುಹಮ್ಮದಿನ್ ಎಂದು ಪ್ರಾರ್ಥಿಸುವುದು ಧರ್ಮಸಮ್ಮತವೆಂ ಸಾಬೀತಾಗುವುದಿಲ್ಲವೇ?

○ ಯಹೂದಿಗಳು ಪ್ರವಾದಿ(ಸ) ಅವರ ನಿಯುಕ್ತಿಗೆ ಮುಂಚೆ ಅವರ ವಸೀಲದೊಂ ಕಾಫಿರರ ವಿರುದ್ಧ ವಿಜಯಕ್ಕಾಗಿ ಪ್ರಾರ್ಥಿಸುತ್ತಿದ್ದರೆಂಬುದು ಪ್ರಸ್ತುತ ಆಯತ ತಾತ್ಪರ್ಯವಲ್ಲ. ಅದರ ಸರಿಯಾದ ತಾತ್ಪರ್ಯವು ಇಮಾಮ್ ರಾಗಿಬ್(ರ) ಅವರ ಮೊದ ಎರಡು ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ. ಅದನ್ನೇ ನಂಬಲರ್ಹ ಹದೀಸ್ ವರದಿಗ ದೃಢೀಕರಿಸುತ್ತವೆ. ಅದೇನೆಂದರೆ ಪ್ರವಾದಿ(ಸ) ಅವರ ನಿಯುಕ್ತಿಗೆ ಮೊದಲು ಯಹೂದಿಗ ಪ್ರವಾದಿ(ಸ) ಅವರ ಕುರಿತು ಅವರ ಗ್ರಂಥಗಳಲ್ಲಿ ಬಂದಿರುವ ಭವಿಷ್ಯವಾಣಿಗಳ ಆಧಾರದ ಆ ಪ್ರವಾದಿ(ಸ) ಬರಲಿ ಎಂದೂ ತನ್ಮೂಲಕ ನಮಗೆ ಕಾಫಿರರ ವಿರುದ್ಧ ವಿಜ ಪ್ರಾಪ್ತವಾಗಲೆಂದೂ ಪ್ರಾರ್ಥಿಸುತ್ತಿದ್ದರು. ಇಬ್ನು ಹಿಶಾಮ್ ಅವರ ವರದಿಯಂತೆ ಮಕ್ಕಾದ ಹಜ್ಜ್‌ನ ವೇಳೆಯಲ್ಲಿ ಪ್ರಥಮಬಾರಿ ಮದೀನಾದ ಕೆಲವು ಮಂದಿ ಪ್ರವಾದಿ(ಸ) ಅವರ ಭೇಟಿಯಾದಾಗ ಮತ್ತು ಪ್ರವಾದಿ(ಸ) ಅವರ ಮುಂದೆ ಇಸ್ಲಾಮ್‌ನ ಸಂದೇಶವಿರಿಸಿದ ಅವರು ಪರಸ್ಪರ ಈ ರೀತಿ ಹೇಳಿಕೊಳ್ಳುತ್ತಿದ್ದರು, "ಜನರೇ! ನಿಮ್ಮನ್ನು ಯಹೂದಿಗ ಹೆದರಿಸುತ್ತಿದ್ದ ಪ್ರವಾದಿ ಇವರೇ ಆಗಿದ್ದಾರೆ. ಆದ್ದರಿಂದ ಅವರು ನಿಮಗಿಂತ ಮೊದ ಈ ಪ್ರವಾದಿಯ ಬಳಿ ತಲುಪುವಂತಾಗದಿರಲಿ."

(ಸೀರತ್ ಇಬ್ನು ಹಿಷಾಮ್: ಭಾಗ: 2- ಪು. 7

ಮುಂದೆ ಇಬ್ನು ಹಿಷಾಮ್ ಅವರು ಇದೇ ಆಯತನ್ನು ವ್ಯಾಖ್ಯಾನಿಸುತ್ತಾ ಮದೀನ ಅನ್ಸಾರ್‌ಗಳ ಹಿರಿಯರ ಈ ಹೇಳಿಕೆಯನ್ನು ಉಲ್ಲೇಖಿಸಿರುವರು: "ಈ ಆಯತ್ ನವ ಮತ್ತು ಯಹೂದಿಗಳ ಕುರಿತೇ ಅವತೀರ್ಣಗೊಂಡಿದೆ. ಅಜ್ಞಾನ ಕಾಲದಲ್ಲಿ ನಾವು ಅ ಮೇಲೆ ಮೇಲುಗೈ ಸಾಧಿಸಿದ್ದೆವು. ನಾವು ಬಹುದೇವಾರಾಧಕರಾಗಿದ್ದು ಅವ ಗ್ರಂಥದವರಾಗಿದ್ದರು. ಅವರು ನಮ್ಮಲ್ಲಿ ಹೀಗೆ ಹೇಳುತ್ತಿದ್ದರು: "ಶೀಘ್ರವೇ ಓರ್ವ ಪ್ರವ ಬರಲಿದ್ದಾರೆ. ಅವರ ಆಗಮನದ ಸಮಯ ಸನ್ನಿಹಿತವಾಗಿದೆ. ನಾವು ಅವರ ನಾಯಕತ್ವದ ನಿಮ್ಮನ್ನು ಇರಮ್‌ನ ಆದ್ ಜನಾಂಗವನ್ನು ಹೊಡೆದಂತೆ ಹೊಡೆಯುವೆವು. ಆ ಅಲ್ಲಾಹನು ತನ್ನ ಪ್ರವಾದಿಯನ್ನು(ಸ) ಕುರೈಶರಲ್ಲಿ ನಿಯುಕ್ತಗೊಳಿಸಿದಾಗ ನಾವು ಅ ಅನುಸರಣೆಯನ್ನು ಸ್ವೀಕರಿಸಿದೆವು. ಅವರು ಪ್ರವಾದಿಯನ್ನು(ಸ) ನಿರಾಕರಿಸಿದರು."

ಇನ್ನು, ತಿರ್ಮಿದಿ ಎಂಬ ಹದೀಸ್ ಗ್ರಂಥದಿಂದ ನೀವು ಉಲ್ಲೇಖಿಸಿರುವ ಹದೀಸ್‌ನ ಷಯ. ಅದರ ವಿಷಯದಿಂದಲೇ ತಿಳಿದು ಬರುವಂತೆ ಪ್ರವಾದಿವರ್ಯರಲ್ಲಿ(ಸ) ಅಲ್ಲಾಹನ ಳಿ ಪ್ರಾರ್ಥಿಸುವಂತೆ ಕೋರಲಾಗಿದೆ. ಆಗ ಅವರು ನೀವು ಅಲ್ಲಾಹನಲ್ಲಿ ಹೀಗೆ ಪ್ರಾರ್ಥಿಸಿ ಂದು ಆದೇಶಿಸಿದರು. "ಅಲ್ಲಾಹನೇ! ನಾನು ನಿನ್ನ ಪ್ರವಾದಿಯ ಮೂಲಕ ನಿನ್ನ ಮುಂದೆ ನ್ನ ಬೇಡಿಕೆಯನ್ನು ತಂದಿರುವೆನು. ನೀನು ನನ್ನ ಪರವಾಗಿ ನಿನ್ನ ಪ್ರವಾದಿಯ(ಸ) ಫಾರಸ್ಸನ್ನು ಸ್ವೀಕರಿಸು. ಇದರಿಂದ ಸ್ಪಷ್ಟವಾಗುವಂತೆ ಪ್ರವಾದಿ(ಸ) ಕೂಡಾ ಅವರ ರವಾಗಿ ಪ್ರಾರ್ಥಿಸಿದ್ದರು ಮತ್ತು ಅವರಿಗೂ "ನನ್ನ ಮೂಲಕ ಅಲ್ಲಾಹನಲ್ಲಿ ನಿನ್ನ ೕಡಿಕೆಯನ್ನು ಸಮರ್ಪಿಸು ಮತ್ತು ನನ್ನ ಶಿಫಾರಸ್ಸು ಸ್ವೀಕೃತವಾಗುವಂತೆ ಪ್ರಾರ್ಥಿಸು" ಂದು ಹೇಳಿದ್ದರು. ಇದು ದುಆದ ಒಂದು ಸಹಜ ವಿಧಾನವಾಗಿದೆ. ಇದರ ಉಪಮೆ ಾಗಿದೆಯೆಂದರೆ ಒಬ್ಬನು ನನ್ನಲ್ಲಿ ಬಂದು ಇಂತಿಂತಹ ಅಧಿಕಾರಿಯಲ್ಲಿ ನನ್ನ ಪರವಾಗಿ ಫಾರಸ್ಸು ಮಾಡು ಎಂದು ಹೇಳಿದಾಗ ನಾನು ಶಿಫಾರಸ್ಸು ಮಾಡುವುದರ ಜತೆಗೆ ಆ ಕ್ತಿಯೊಂದಿಗೆ ನೀನು ಕೂಡಾ ಆ ಅಧಿಕಾರಿಯಲ್ಲಿ "ನಾನು ಅವರನ್ನು ನನ್ನ ಫಾರಸ್ಸುದಾರನಾಗಿ ಕರೆತಂದಿರುವೆನು. ತಾವು ಅವರ ಶಿಫಾರಸ್ಸನ್ನು ಸ್ವೀಕರಿಸಿ ನನ್ನ ೕಡಿಕೆಯನ್ನು ಪೂರ್ಣಗೊಳಿಸಿರಿ" ಎಂದು ಹೇಳಿದಂತೆಯೇ ಇದೆ. ಇದಕ್ಕೆ ತದ್ವಿರುದ್ಧವಾಗಿ ಬ್ಬ ವ್ಯಕ್ತಿ ನನ್ನ ಅನುಮತಿಯಿಲ್ಲದೆಯೇ ಅಧಿಕಾರಿಯ ಬಳಿ ಹೋಗಿ ತನ್ನ ಯಾವ ೕಡಿಕೆಯನ್ನು ಬೇಕಾದರೂ ನನ್ನ ಶಿಫಾರಸ್ಸು ಹೇಳಿ ಮುಂದಿಡುವುದು ಬೇರೆಯೇ ಷಯವಾಗಿದೆ. ಈ ಎರಡನೆಯ ವಿಧವನ್ನು ಮೊದಲ ವಿಧಕ್ಕೆ ಹೋಲಿಸುವುದು ಹೇಗೆ? ಾವೆಯಿರುವುದು ಮೊದಲನೇ ವಿಧದ ಪ್ರಾರ್ಥನೆಗೆ ಮಾತ್ರ. ಅದರಿಂದ ಇದನ್ನು ದ್ವಿತೀಯ ಧಾನಕ್ಕೆ ಸಮರ್ಥನೆ ಮಾಡುವುದು ಯಾವ ರೀತಿಯಲ್ಲಿಯೂ ಸರಿಯೆನಿಸದು. ಅದನ್ನು ಬೀತುಗೊಳಿಸಲು ಪ್ರವಾದಿ(ಸ) ತಮ್ಮ ಎಲ್ಲ ಅನುಯಾಯಿಗಳಿಗೂ ತಮ್ಮ ಹೆಸರೆತ್ತಿ ನರ ಯಾವುದೇ ಬೇಡಿಕೆಯನ್ನು ಅಲ್ಲಾಹನ ಮುಂದಿರಿಸುವ ಸಾರ್ವತ್ರಿಕ ಅನುಮತಿ ಡಿರಬೇಕು.

(ತರ್ಜುಮಾನುಲ್ ಕುರ್‌ಆನ್, ಫೆಬ್ರವರಿ 1953)

24

ಇಸ್ಲಾಮೇತರ ರಾಷ್ಟ್ರಗಳಲ್ಲಿರುವ ಮುಸ್ಲಿಮರ ಸಂಕಷ್ಟಗಳು

- *ಬ್ರಿಟನ್‌ನಲ್ಲಿ ವಾಸವಾಗಿರುವ ವೇಳೆ ಶರೀಅತ್ ವಿಧಿಗಳ ಪಾಲನೆಯಲ್ಲಿ ನನಗೆ ಕೆಳಗಿನ ಕಷ್ಟಗಳು ಎದುರಾಗುತ್ತವೆ. ದಯವಿಟ್ಟು ಸರಿಯಾದ ಮಾರ್ಗದರ್ಶನವಿ ಕೃತಜ್ಞತೆಗೆ ಪಾತ್ರರಾಗಬೇಕು.*

(1) ಮೊದಲನೆಯದು ಶೌಚ್ಯ ಮತ್ತು ನಮಾಝ್‌ನ ಕುರಿತಾಗಿದೆ. ನನಗೆ ಬೆಳಿಗ್ಗೆ ಗಂಟೆಗೆ ನನ್ನ ನಿವಾಸದಿಂದ ಹೊರಡಬೇಕಾಗುತ್ತದೆ. ನಗರದಲ್ಲಿ ಸಂಚರಿಸುತ್ತಾ ಮ ಮೂತ್ರ ವಿಸರ್ಜನೆಯ ಅಗತ್ಯಬಂದರೆ ಎಲ್ಲೆಡೆ ಪಾಶ್ಚಾತ್ಯ ಮಾದರಿ ಶೌಚಾಲಾಯುಗಳಿರುತ್ತವೆ. ಅಲ್ಲಿ ನಿಂತುಕೊಂಡೇ ಮೂತ್ರ ವಿಸರ್ಜ ಮಾಡಬೇಕಾಗುತ್ತದೆ. ಇದರಿಂದ ಮೂತ್ರದ ಹನಿಗಳು ಬಟ್ಟೆಗೆ ತಾಗುವುದು ಅನಿವಾಯ ಮಲವಿಸರ್ಜನೆ ಮಾಡಿದರೆ ಶೌಚ್ಯಕ್ಕೆ ಕೇವಲ ಕಾಗದ ಮಾತ್ರ ಸಿಗುತ್ತದೆ. ಒಂ ಗಂಟೆಗೆ ಝುಹರ್‌ನ ಸಮಯವಾಗುತ್ತದೆ. ಆಗ ಸಾರ್ವಜನಿಕ ಸ್ಥಳಗಳಲ್ಲೆಲ್ಲಿಯ ನೀರು ಸಿಗುವುದಿಲ್ಲ. ನಿವಾಸಕ್ಕೆ ಬಂದು ಹೋಗಬೇಕಾದರೆ ತೊಂದರೆಯ ಸಹಿತ ಕನಿ ಒಂದು ಶಿಲ್ಲಿಂಗ್ ಖರ್ಚಾಗುತ್ತದೆ. ನಮಾಝ್‌ಗೆ ಶುದ್ಧ ಸ್ಥಳವೂ ಸಿಗುವುದಿ ಹೋಟೆಲ್‌ನಲ್ಲಿ ನೀರು ಸಿಕ್ಕಿದರೂ ಪ್ಯಾಂಟ್ ಧರಿಸಿರುವುದರಿಂದ ಶೌಚ್ಯ ಮಾಡುವು ಸಾಧ್ಯವಿಲ್ಲ. ಆದರೆ ವುಝೂ ಮಾಡಬಹುದು. ಅದರಲ್ಲೂ ನೀರು ನೆಲಕ್ಕೆ ಬೀಳದ ಜಾಗ್ರತೆ ವಹಿಸಬೇಕು. ಕೈ ತೊಳೆಯುವುದರಿಂದ ಹಿಡಿದು ತಲೆ ಸವರುವ ತ ಬೇಸಿನ್‌ನಲ್ಲಿ ಮಾಡಬಹುದು. ಆದರೆ ಕಾಲನ್ನು ಬೇಸಿನ್‌ನಲ್ಲಿ ತೊಳೆಯುವು ಇಲ್ಲಿಯ ಸಂಸ್ಕೃತಿಯಲ್ಲಿ ಅತ್ಯಂತ ಕೆಟ್ಟದು.

(2) ಇಲ್ಲಿ ಸಾಮಾನ್ಯವಾಗಿ ಜನರು ನಾಯಿ ಸಾಕುತ್ತಾರೆ. ಭೇಟಿಗೆ ಹೋದಾ ಮೊದಲು ನಾಯಿಯೇ ಸ್ವಾಗತಿಸುತ್ತದೆ. ಬಟ್ಟೆಗಳನ್ನು ಅದು ಸ್ಪರ್ಶಿಸುತ್ತದೆ. ಎಷ ಪ್ರಯತ್ನಿಸಿದರೂ ಈ ಕೀಟಲೆಯನ್ನು ತಪ್ಪಿಸಲಿಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿಯ ಬಟ್ಟೆಯನ್ನು ಆಗಾಗ ತೊಳೆಯುತ್ತಿರಬೇಕೇ?

(3) ಕಛೇರಿಗಳಲ್ಲಿ ಹೆಚ್ಚಾಗಿ ಮಹಿಳೆಯರೇ ಸಿಬಂದಿಗಳಾಗಿರುತ್ತಾರೆ. ಪರಿಚಯವಾ ವೇಳೆ ಅವರು ಹಸ್ತಲಾಘವಕ್ಕೆ ಕೈ ಚಾಚುತ್ತಾರೆ. ನಾವು ಕೈ ಮುಂದೆ ಮಾಡದಿದ್ದ ಅದನ್ನವರು ತಮ್ಮ ಅಪಮಾನವೆಂದು ಬಗೆಯುತ್ತಾರೆ. ಅದೇ ರೀತಿ ರಸ್ತೆಯಲ್ಲ ಬಹಳ ಜನಸಂದಣಿ ಇರುತ್ತದೆ. ಕಾಲ್ನಡಿಗೆಯಲ್ಲಿ ಹೋಗುವಾಗ ದೃಷ್ಟಿ ಕೆಳಗಿರಿಸಿ ಢಿಕ್ಕಿ ಹೊಡೆಯುವ ಅಪಾಯವಿರುತ್ತದೆ.

○ ನಿಮ್ಮ ಪತ್ರವನ್ನೋದಿ ಒಂದು ಇಸ್ಲಾಮೇತರ ರಾಷ್ಟ್ರದಲ್ಲಿ ಧರ್ಮನಿಷ್ಠೆಯುಳ್ಳ ಬ್ಬ ಮುಸ್ಲಿಮನಿಗೆ ಎಂತೆಂತಹ ಸಂಕಷ್ಟಗಳು ಎದುರಾಗುತ್ತವೆಯೆಂದು ಅಂದಾಜಿಸಬಹುದು. ಸ್ಲಾಮೇತರ ರಾಷ್ಟ್ರದಲ್ಲಿ ವಾಸಿಸುವುದನ್ನು ಮತ್ತು ಅಲ್ಲಿ ವಿವಾಹ ಮಾಡಿಕೊಳ್ಳುವುದನ್ನು ಮ್ಮ ಕರ್ಮಶಾಸ್ತ್ರ ಪಂಡಿತರು ಓರ್ವ ಮುಸ್ಲಿಮನ ಮಟ್ಟಿಗೆ ಮಕ್ರೂಹ್ (ಅನಪೇಕ್ಷಿತ) ಂದು ಏಕೆ ಹೇಳಿರುವರೆಂಬುದು ಮನವರಿಕೆಯಾಗುತ್ತದೆ. ಏನಾದರೂ ಕಾರಣಕ್ಕಾಗಿ ಅಲ್ಲಿ ರಬೇಕಾಗಿ ಬಂದರೆ ಕನಿಷ್ಠ ವರ್ಷಕ್ಕೊಮ್ಮೆ ಊರಿಗೆ ಮರಳಬೇಕೆಂದು ಕರ್ಮಶಾಸ್ತ್ರಜ್ಞರು ಭಿಪ್ರಾಯ ಪಟ್ಟಿದ್ದಾರೆ. ನೀವು ಪ್ರಸ್ತಾಪಿಸಿರುವ ಸಂಕಷ್ಟಗಳಿಗೆ ಪರಿಹಾರವನ್ನು ಸಂಕ್ಷಿಪ್ತವಾಗಿ ಕೆಳಗೆ ಕೊಡಲಾಗಿದೆ.

(1) ಕುಳಿತುಕೊಂಡು ಮೂತ್ರ ವಿಸರ್ಜನೆ ಮಾಡುವುದು ಸಾಧ್ಯವಿಲ್ಲದ ಕಡೆ ಂತುಕೊಂಡು ವಿಸರ್ಜಿಸಬಹುದು. ಜಾಗ್ರತೆ ವಹಿಸಿದರೆ ಬಟ್ಟೆಗಳಿಗೆ ಹನಿ ತಾಗದಂತೆ ಕ್ಷಿಸಬಹುದು. ಹೊರಗೆಲ್ಲಿಯಾದರೂ ಮಲ-ಮೂತ್ರ ವಿಸರ್ಜನೆ ಮಾಡಿದಾಗ ನೀರು ಗದಿದ್ದರೆ ಕಾಗದವನ್ನು ಬಳಸಬಹುದು. ಅನಂತರ ನಿವಾಸಕ್ಕೆ ಬಂದ ಮೇಲೆ ನೀರಿನಿಂದ ಚಿಗೊಳಿಸಬಹುದು. ವುಝೂ ಹೊರಗೆಲ್ಲಾದರೂ ಮಾಡಬೇಕಾಗಿ ಬಂದಾಗ ಮತ್ತು ಕಾಲು ೊಳೆಯುವುದು ಸಾಧ್ಯವಾಗದಿದ್ದಾಗ ಕಾಲುಚೀಲ ಅಥವಾ ಕಾಲುಚೀಲಸಮೇತ ಪಾದರಕ್ಷೆಯ ೀಲೆ ಸವರಿದರೆ ಸಾಕು. ಸ್ಥಳವು ಶುದ್ಧವಾಗಿದೆಯೆಂಬುದನ್ನು ಖಚಿತಪಡಿಸಿಕೊಂಡೇ ಮಾಝ್ ಮಾಡಬೇಕೆಂದಿಲ್ಲ. ಎಲ್ಲ ಒಣ ಜಾಗವನ್ನು ಅದು ಅಶುದ್ಧವಾಗಿದೆಯೆಂದು ಿಯುವ ತನಕ ಶುದ್ಧವೆಂದೇ ಪರಿಗಣಿಸಬೇಕು. ಆದ್ದರಿಂದ ಕೇವಲ ಸಂಶಯ ಮತ್ತು ಮಾನಿಯ ಆಧಾರದಲ್ಲಿ ನಮಾಝನ್ನು ಕಝಾ ಮಾಡುವುದು ಸರಿಯಲ್ಲ. ನಿಮ್ಮ ಸಂಶಯ ತ್ತು ಗುಮಾನಿ ದೂರವಾಗದಿದ್ದರೆ ನಿಮ್ಮ ನಿಲುವಂಗಿ ಅಥವಾ ಕೋಟನ್ನು ಹಾಸಿ ಅದರ ೀಲೆ ನಮಾಝ್ ಮಾಡಬಹುದು.

(2) ಆ ದೇಶದಲ್ಲಿ ನಾಯಿಗಳಿಂದ ದೂರವಿರುವುದು ಬಹಳ ಕಷ್ಟ. ನಿಮಗೆ ಯತ್ನಪಟ್ಟೂ ಅದರಿಂದ ರಕ್ಷಣೆ ಸಿಗದಿದ್ದರೆ ನಾಯಿಯ ಸ್ಪರ್ಶವಾದ ಕಡೆ ವುಝೂ ಾಡುವಾಗ ನೀರು ಚಿಮುಕಿಸಿ ನಿಮ್ಮ ಸಂಶಯವನ್ನು ದೂರಗೊಳಿಸಿ.

(3) ಮಹಿಳೆಯರ ಭೇಟಿಯ ವೇಳೆ ನಮ್ಮ ಸಂಸ್ಕೃತಿಯಲ್ಲಿ ಮಹಿಳೆಯ ಜತೆ ಕೈ ಲುಕುವುದು ಅಸಭ್ಯತೆಯಾಗಿದೆ. ಆದ್ದರಿಂದ ನಾನು ಹಸ್ತಲಾಘವ ಮಾಡದಿರುವ ಬಗ್ಗೆ ವು ತಪ್ಪು ತಿಳಿಯಬಾರದು ಎಂದು ಅವರಿಗೆ ವಿನಯಪೂರ್ವಕ ತಿಳಿ ಹೇಳಿರಿ. 'ಗದ್ದೆಬಸರ್' ಂದರೆ ಕಣ್ಣು ಕೆಳಗಿರಿಸುವುದಲ್ಲ, ಕಣ್ಣನ್ನು ರಕ್ಷಿಸುವುದಾಗಿದೆ. ನೀವು ಬೇಕು ಬೇಕೆಂದೇ ಾವ ಮಹಿಳೆಯನ್ನೂ ದಿಟ್ಟಿಸಿ ನೋಡಬೇಡಿರಿ. ಒಮ್ಮೆ ದೃಷ್ಟಿ ಬಿದ್ದರೆ ಮತ್ತೆ ದೃಷ್ಟಿ ರಿಸಬೇಡಿರಿ. ದೃಷ್ಟಿಯನ್ನು ರಕ್ಷಿಸುವುದು ಕಷ್ಟದ ಕೆಲಸವೇನಲ್ಲ. ನಿಮ್ಮ ದೃಷ್ಟಿಯ ಿಯನ್ನು ಸ್ವಲ್ಪ ಬದಲಾಯಿಸಿದರೆ ಸಾಕಾಗುತ್ತದೆ.

(ತರ್ಜುಮಾನುಲ್ ಕುರ್‌ಆನ್ ಜೂನ್, ಜುಲೈ 1952)

25

ಧ್ರುವಗಳ ಹತ್ತಿರದ ಸ್ಥಳಗಳಲ್ಲಿ ನಮಾಝ್ ಮತ್ತು ಉಪವಾಸ ವ್ರತದ ವೇಳೆಗಳು

- *ನನ್ನ ಒಬ್ಬ ಪುತ್ರ ತರಬೇತಿಗಾಗಿ ಬ್ರಿಟನ್‌ಗೆ ಹೋಗಿರುವನು. ಸದ್ಯ ಅವನು ಉತ್ತ ಧ್ರುವಕ್ಕೆ ಬಹಳ ಹತ್ತಿರ ಇರುವನು. ಆತ ನಮಾಝ್ ಮತ್ತು ಉಪವಾಸ ವ್ರತಗ ವೇಳಾಪಟ್ಟಿಯ ಬಗ್ಗೆ ಒಂದು ತಾತ್ವಿಕ ನಿಯಮಾವಳಿಯನ್ನು ಬಯಸುತ್ತಾನೆ. ಮೇ ಮೋಡ ಮತ್ತು ಮಂಜಿನ ಆಧಿಕ್ಯದಿಂದ ಅಲ್ಲಿ ಸೂರ್ಯನು ಕಾಣಸಿಕೊಳ್ಳುವುದ ಬಹಳ ಕಡಿಮೆ. ಕೆಲವೊಮ್ಮೆ ಹಗಲು ಬಹಳ ದೀರ್ಘವಾಗಿದ್ದರೆ ಕೆಲವೊಮ್ಮೆ ಬಹ ಸಣ್ಣದಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ಮಧ್ಯೆ 20 ಗಂಟೆಗಳ ಅಂತರವಿರುತ್ತವೆ. ಇಂತಹ ಸಂದರ್ಭದ 20 ಗಂಟೆ ಅಥವಾ ಅದಕ್ಕಿಂತ ಅಧಿಕ ಸಮಯದ ಉಪವಾಸ ವ್ರತ ಆಚರಿಸಬೇಕಾದೀತೇ*

○ ಯಾವ ದೇಶಗಳಲ್ಲಿ 24 ಗಂಟೆಯಲ್ಲಿ ಸೂರ್ಯೋದಯ ಮತ ಸೂರ್ಯಾಸ್ತಮಾನವಾಗುತ್ತದೋ ಅಲ್ಲಿನ ದಿನರಾತ್ರಿಗಳು ದೊಡ್ಡದಾದರೂ ಚಿಕ್ಕದಾದರ ನಮಾಝ್ ಮತ್ತು ಉಪವಾಸವ್ರತಕ್ಕೆ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ವಿವರಿಸಲಾ ನಿಯಮಗಳ ಪ್ರಕಾರವೇ ನಿಶ್ಚಯಿಸಲಾಗುವುದು. ಅಂದರೆ ಫಜ್ರ್ ನಮಾಝ ಸೂರ್ಯೋದಯಕ್ಕಿಂತ ಮುಂಚೆ, ಝುಹರ್‌ನ ನಮಾಝ್ ಸೂರ್ಯ ಇಳಿಮುಖವಾ ಮೇಲೆ, ಅಸರ್‌ನ ನಮಾಝ್ ಸೂರ್ಯಾಸ್ತಮಾನಕ್ಕಿಂತ ಮುಂಚೆ, ಮಗ್ರಿಬ್‌ನ ನಮಾಝ ಸೂರ್ಯಾಸ್ತಮಾನದ ನಂತರ ಮತ್ತು ಇಶಾ ನಮಾಝ್ ರಾತ್ರಿ ಸ್ವಲ್ಪ ಕಳೆದ ನಂತ ಅದೇ ರೀತಿ ಉಪವಾಸ ವ್ರತದ ಸಮಯವು ಫಜ್ರ್‌ನಿಂದ ಆರಂಭಗೊಂಡು ಸೂರ್ಯಾಸ್ತಮ ತನಕ ಇರುವುದು. ಎಲ್ಲಿ ಝುಹರ್ ಮತ್ತು ಅಸರ್ ಅಥವಾ ಮಗ್ರಿಬ್ ಮತ್ತು ಇಶಾಗ ಮಧ್ಯೆ ಅಂತರ ಮಾಡುವುದು ಸಾಧ್ಯವಿಲ್ಲವೋ ಅಲ್ಲಿ 'ಜಮಅಬೈನಸ್ಸಲಾತೈನ್' (ಝುಹರ್ ಅಸರ್‌ಗಳನ್ನು ಮತ್ತು ಮಗ್ರಿಬ್-ಇಶಾಗಳನ್ನು ಒಟ್ಟಿಗೆ ನಿರ್ವಹಿಸುವುದು) ಮಾಡಬಹುದ

ಬ್ರಿಟನ್‌ನ ವಿವಿಧ ಪ್ರದೇಶಗಳ ಉದಯಾಸ್ತಮಾನ ವೇಳಾಪಟ್ಟಿಯನ್ನು ಗಳಿಸಿಕೊಳ್ಳುವಂ

ನಿಮ್ಮ ಪುತ್ರನಿಗೆ ಹೇಳಿ. ಅನಂತರ ಆ ವೇಳೆಗೆ ಹೊಂದಿಕೊಂಡು ತನ್ನ ನಮಾಝ್‌ನ ಸಮಯಗಳನ್ನು ನಿಶ್ಚಯಿಸಿಕೊಳ್ಳಲಿ.

ಉಪವಾಸ ವ್ರತಕ್ಕೆ ಅಲ್ಲಿ ದಿನ ದೀರ್ಘವಾಗಿದೆಯೆಂದು ಹೆದರಬೇಕಾಗಿಲ್ಲ. ರಶ್ಯಾದ ಬುಲ್ಗಾರ್‌ನ ಬಗ್ಗೆ ಇಬ್ನು ಬತೂತಾ ಬರೆಯುತ್ತಾರೆ. ಅಲ್ಲಿ ಸೆಖೆಗಾಲದಲ್ಲಿ ಅವರು ತಲುಪಿದಾಗ ರಮಝಾನ್ ತಿಂಗಳಾಗಿತ್ತು. ಇಫ್ತಾರ್ ಮತ್ತು ಫಜ್ರ್‌ನ ಮಧ್ಯೆ ಕೇವಲ ಎರಡು ಗಂಟೆಗಳ ಅಂತರವಿತ್ತು. ಈ ಸಂಕ್ಷಿಪ್ತ ಅವಧಿಯಲ್ಲೇ ಅಲ್ಲಿನ ಮುಸ್ಲಿಮರು ಇಫ್ತಾರ್ ಮಾಡುತ್ತಿದ್ದರು, ಊಟ ಮಾಡುತ್ತಿದ್ದರು ಮತ್ತು ಇಶಾ ನಮಾಝ್ ಕೂಡಾ ನಿರ್ವಹಿಸುತ್ತಿದ್ದರು. ಇಶಾ ನಮಾಝ್ ಮುಗಿಸಿ ಸ್ವಲ್ಪ ಹೊತ್ತಿನಲ್ಲೇ ಫಜ್ರ್‌ನ ವೇಳೆ ಆರಂಭವಾಗುತ್ತಿತ್ತು. ಆಗ ಫಜ್ರ್ ನಮಾಝ್ ನಿರ್ವಹಿಸುತ್ತಿದ್ದರು.

(ತರ್ಜುಮಾನುಲ್ ಕುರ್‌ಆನ್, ಜೂನ್-ಜುಲೈ 1952)

26

ಹರಾಮನ್ನು ಹಲಾಲ್‌ಗೊಳಿಸುವ ನೆಪ

- *ಒಬ್ಬನ ಮೇಲೆ ಸರಕಾರದ ವತಿಯಿಂದ ಅಕ್ರಮ ತೆರಿಗೆಯ ಭಾರವಿದೆ. ಆತ ಅದನ್ನು ನಿರ್ವಾಹವಿಲ್ಲದೆ ಸಂದಾಯ ಮಾಡುತ್ತಾನೆ. ಆತನು ತನಗಾಗುವ ಈ ನಷ್ಟವನ್ನು ಭರ್ತಿಮಾಡುವ ಒಂದು ಉಪಾಯವನ್ನು ಕಂಡುಕೊಂಡಿದ್ದಾನೆ. ಅದೇನೆಂದರೆ ಆತನು ಬ್ಯಾಂಕ್ ಅಥವಾ ಅಂಚೆಕಛೇರಿಯಲ್ಲಿರುವ ಠೇವಣಿಗಳಿಂದ ಬರುವ ಬಡ್ಡಿಯನ್ನು ಪಡೆಯುತ್ತಾನೆ. ಹೀಗೆ ಮಾಡುವುದು ಸರಿಯೇ?*

○ ಈ ರೀತಿಯ ನೆವನಗಳಿಂದ ಬಡ್ಡಿ ಪಡೆಯುವುದು ಧರ್ಮಸಮ್ಮತವಲ್ಲ. ಬದಲಾಗಿ ಅದು ದ್ವಿಗುಣ ಪಾಪವಾಗುತ್ತದೆ. ಒಂದು ವೇಳೆ ಸರಕಾರದ ಯಾವುದಾದರೂ ತೆರಿಗೆಯು ಅಕ್ರಮವಾಗಿದ್ದರೆ ಹಾಗೂ ನೀವು ಅದನ್ನು ನಿರ್ವಾಹವಿಲ್ಲದೆ ಪಾವತಿ ಮಾಡುತ್ತಿದ್ದರೆ, ಇದು ಸರಕಾರವು ನಿಮ್ಮ ಮೇಲೆ ಮಾಡುವ ಒಂದು ಅನ್ಯಾಯವಾಗಿದೆ. ಆದರೆ ನೀವು ಯಾವ ಬಡ್ಡಿಯನ್ನು ಸರಕಾರೀ ಬ್ಯಾಂಕ್ ಅಥವಾ ಅಂಚೆ ಕಛೇರಿಯಿಂದ ಪಡೆಯುತ್ತೀರೋ ಅದನ್ನು ಸರಕಾರವು ತನ್ನ ಕಿಸೆಯಿಂದ ಕೊಡುವುದಿಲ್ಲ. ಅದು ಜನರಿಂದ ತೆರಿಗೆಯ ರೂಪದಲ್ಲಿ ಅಥವಾ ಬಡ್ಡಿಯ ರೂಪದಲ್ಲಿ ಅದನ್ನು ಪಡೆಯುತ್ತದೆ. ಅದರಿಂದ ಒಂದಂಶವನ್ನು ತನ್ನಲ್ಲಿರಿಸಿಕೊಂಡು ಉಳಿದುದನ್ನು ತನ್ನಲ್ಲಿ ಠೇವಣಿ ಇರಿಸಿದವರಿಗೆ ಕೊಡುತ್ತದೆ. ಈ ಬಡ್ಡಿಯನ್ನು ಪಡೆದರೆ ನೀವು ಸರಕಾರಕ್ಕೆ ಯಾವ ರೀತಿ ಶಿಕ್ಷೆ ಕೊಟ್ಟಂತಾಯಿತು? ಈ ಶಿಕ್ಷೆಯನ್ನು ನೀವು ಇತರ ಪ್ರಜೆಗಳಿಗೆ ನೀಡುತ್ತೀರಿ. ಇದಂತೂ ನಿಮ್ಮಲ್ಲಿ ಯಾರಾದರೂ ಕಳ್ಳತನ ಮಾಡಿದವನನ್ನು ಶಿಕ್ಷಿಸಲು ಆ ಕಳ್ಳನ ಮನೆಯಲ್ಲಿಟ್ಟಿರುವ ಇತರರ ಸೊತ್ತಿನಿಂದ ಸ್ವಲ್ಪ ತೆಗೆದುಕೊಂಡಂತಾಯಿತು. *(ತರ್ಜುಮಾನುಲ್ ಕುರ್‌ಆನ್, ಮೇ-ಜೂನ್ 1952)*

27

ಜಮಾಅತೆ ಇಸ್ಲಾಮಿಯ ಕುರಿತು!

ಜಮಾಅತೆ ಇಸ್ಲಾಮಿಯಲ್ಲಿ ಸೇರುವುದು ಅನಿವಾರ್ಯವೆಂದು ಭಾವಿಸುವೆನಾದರೂ ನನ್ನ ಮನಸ್ಸಿನಲ್ಲಿ ಕೆಲವೊಂದು ಸಂಶಯಗಳು ಕಾಡುತ್ತಿವೆ. ಸಾಧ್ಯವಾದರೆ ತಮ್ಮ ಪಾಂಡಿತ್ಯಪೂರ್ಣ ಅಭಿಪ್ರಾಯಗಳ ಮೂಲಕ ಈ ಸಂಶಯಗಳನ್ನು ನಿವಾರಿಸಬೇಕೆಂದು ವಿನಂತಿಸುತ್ತಿದ್ದೇನೆ. ಆ ಸಂಶಯ ಇಂತಿವೆ:

ನೀವು ನಿಮ್ಮ ಬರೆಹಗಳ ಮೂಲಕ ಅನೇಕ ವರ್ಷಗಳಿಂದ ಧರ್ಮಸಂಸ್ಥಾಪನೆಯ ಕರೆ ಕೊಡುತ್ತಿದ್ದೀರಿ. ಎರಡು ವರ್ಷಗಳಿಂದ ಜಮಾಅತ್ ಸ್ಥಾಪನೆಗೊಂಡಿದೆ. ನಿಮ್ಮ ಪ್ರಕಾರ ಈ ಆಂದೋಲನದ ಸ್ವರೂಪಕ್ಕನುಗುಣವಾಗಿ ಕೆಲವೇ ಮಂದಿ ಸಿಕ್ಕಿರುತ್ತಾರೆ. ಸಿಕ್ಕಿದವರಲ್ಲೂ ಎಂತಹ ಗುಣಗಳ ಮನುಷ್ಯರ ಅಗತ್ಯವಿದೆಯೋ ಅಂತಹವರಿಲ್ಲ. ಈ ಗುಣಗಳುಳ್ಳ ಜನರನ್ನು ಸಿದ್ಧಪಡಿಸುವುದು ಹೇಗೆಂದು ನಾನು ಹೆಚ್ಚಾಗಿ ಆಲೋಚಿಸುತ್ತಿದ್ದೇನೆ. ಸಮುದಾಯದ ಇತಿಹಾಸವನ್ನು ನೋಡಿದರೆ ನಾಲ್ವರು ಖಲೀಫರ ಕಾಲದ ನಂತರ ಧರ್ಮಸಂಸ್ಥಾಪನೆಯ ಸಂಘಟಿತ ಪ್ರಯತ್ನ ನಡೆದದ್ದೇ ಇಲ್ಲ. ಮುಜದ್ದಿದ್‌ಗಳು ಭಾಷಣ, ಬರೆಹ ಅಥವಾ ದೈಹಿಕವಾಗಿ ಮಾಡಿದ ಪ್ರಯತ್ನಗಳೆಲ್ಲವೂ ವೈಯಕ್ತಿಕವಾಗಿದ್ದುವು. ಬಹುಶಃ ಇಡೀ ಇಸ್ಲಾಮೀ ಚರಿತ್ರೆಯಲ್ಲಿ ಸೈಯದ್ ಅಹ್ಮದ್ ಬರೇಲ್ವಿಯವರ ಧ್ವಜದಡಿಯಲ್ಲಿ ಒಂದು ಸಂಘಟಿತ ಹೋರಾಟ ಈ ಉದ್ದೇಶಕ್ಕಾಗಿ ನಡೆದಿದೆ. ಅವರ ಅನುಯಾಯಿಗಳ ಆತ್ಮಸ್ಥೈರ್ಯ ಮತ್ತು ಪರಿಶ್ರಮಗಳನ್ನು ನೋಡುವಾಗ ಅವರಲ್ಲಿ ಇಷ್ಟೊಂದು ಆತ್ಮಾರ್ಪಣೆ ಮಾಡುವಂತಹ ಸ್ಫೂರ್ತಿ ಹುಟ್ಟಲು ಕಾರಣವಾದರೂ ಏನೆಂದು ನನಗೆ ಹೊಳೆಯುವುದಿಲ್ಲ. ಯಾವುದೇ ಸಂಘಟನೆಯಲ್ಲಿ ಸರ್ವಸ್ವವನ್ನೂ ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುವುದನ್ನೇ ತಮ್ಮ ಕರ್ತವ್ಯವೆಂದು ಭಾವಿಸುವಂತಹ ಪ್ರೇರಣೆ ಹೇಗೆ ಉಂಟಾಗುತ್ತವೆ? ಇದೆಲ್ಲವೂ ಬರೆಹ ಭಾಷಣಗಳ ಮೂಲಕ ಜನರಿಗೆ ಮನವರಿಕೆ ಮಾಡುವುದರಿಂದ ಆಗುತ್ತದೆಯೇ ಅಥವಾ ಅತ್ಯುತ್ತಮ ಹಾಗೂ ನೈಜ ಸಾಹಿತ್ಯಗಳನ್ನು ಒದಗಿಸುವುದರಿಂದ ಉಂಟಾಗುತ್ತದೆಯೇ? ನನ್ನ ಅಭಿಪ್ರಾಯದಲ್ಲಿ ಇದೆಲ್ಲವೂ ವೈಚಾರಿಕ ಸುಧಾರಣೆಯನ್ನಂತೂ ಮಾಡಬಹುದು. ಆದರೆ ಕೆಲಸ ಮಾಡುವ ಪ್ರೇರಣೆ ಬೇರಾವುದೋ ವಸ್ತುವಿನಿಂದ ಉಂಟಾಗುತ್ತವೆ. ಜನರು ಪ್ರಮಾಣವಚನ ಮಾಡಿ ಅದನ್ನು ಪೂರೈಸದಿರುವುದನ್ನು ಹಾಗೂ ಪ್ರಾಮಾಣಿಕ

ಸ್ಫೂರ್ತಿ ಉಂಟಾಗದಿರುವುದನ್ನು ನಾವು ನೋಡಬಹುದು. ಆಗ ಈ ಸ್ಫೂರ್ತಿಯ ಹೇಗೆ ಉಂಟು ಮಾಡುವುದು ಎಂಬ ಪ್ರಶ್ನೆ ಏಳುತ್ತದೆ. ನಾನು ತಮ್ಮ ಸಾಹಿತ್ಯಗಳ ಓದಿ, ಪವಿತ್ರ ಕುರ್‌ಆನ್‌ನ ಅಧ್ಯಯನ ನಡೆಸಿ, ನನ್ನ ಕರ್ಮಗಳ ಕ್ರಾಂತಿಯುಂಟಾಗಬೇಕೆಂದು ಆಗ್ರಹಿಸುತ್ತಿದ್ದೇನೆ. ಆದರೆ ಯಾವುದು ಅಗತ್ಯವೆ ಭಾವಿಸುತ್ತೇನೋ ಅದು ನನ್ನಲ್ಲಿ ಉಂಟಾಗುವುದಿಲ್ಲ. ಆದ್ದರಿಂದ ಜಮಾ ಇಸ್ಲಾಮಿಯಲ್ಲಿ ಈ ಶಕ್ತಿ ಎಷ್ಟರವರೆಗೆ ಪ್ರಕಟವಾಗುವುದಿಲ್ಲವೋ ಅಷ್ಟರವ ಜಮಾಅತ್ ಬಂಧುಗಳಲ್ಲಿ ತ್ಯಾಗ ಪರಿಶ್ರಮಗಳ ಸ್ಫೂರ್ತಿಯುಂಟಾಗಲಾರದು ಮ ಆಂದೋಲನವು ನಿಷ್ಕ್ರಿಯವಾಗಿ ಬಿಡಬಹುದು ಎಂದು ಖಂಡಿತ ಹೇಳಬಹುದು

○ ಈ ವಿಷಯದ ಕುರಿತು ನಾನು ಕೂಡಾ ಅನೇಕ ವರ್ಷಗಳಿಂದ ಆಲೋಚಿಸು ಇದ್ದೇನೆ. ಕಟ್ಟಕಡೆಗೆ ಸಾಮಾನ್ಯವಾಗಿ ಮುಸ್ಲಿಮರು ಉಸುರುತ್ತಿರುವ ಒಂದು ಚಿಕ್ಕವಾಕ ನನ್ನನ್ನು ಸಂತೃಪ್ತಗೊಳಿಸಿತು. ಅದೇನೆಂದರೆ 'ಅಸ್ಸಯ್‌ಯು ಮಿನ್ನೀ ವಲ್ ಇತ್ಮಾ ಮಿನಲ್ಲಾಹ್' (ಅರ್ಥಾತ್: ಪರಿಶ್ರಮ ನನ್ನ ಕಡೆಯಿಂದ, ಪೂರ್ತಿಗೊಳಿಸುವ ಕಾ ಅಲ್ಲಾಹನದು). ನನ್ನ ಅನಿಸಿಕೆ ಪ್ರಕಾರ ನಾವು ಮಾಡಬೇಕಾದ ಕೆಲಸವೇನೆಂದರೆ ವಿ ಮಾರ್ಗಗಳ ಪೈಕಿ ನಮಗಾಗಿ ನೇರಮಾರ್ಗವನ್ನು ಆಯ್ದುಕೊಳ್ಳುವುದು ಮತ್ತು ನ ಶ್ರಮವನ್ನೆಲ್ಲಾ ಆ ಮಾರ್ಗದಲ್ಲಿ ನಡೆಯಲಿಕ್ಕಾಗಿ ವ್ಯಯಿಸುವುದು ಮಾತ್ರ. ಅದರ ನಂ ಅವಕ್ಕೆ ಬೇಕಾಗುವ ಸಂಪನ್ಮೂಲಗಳನ್ನು ಒದಗಿಸುವುದು, ಮುನ್ನಡೆಯುವ ಶಕ್ತಿ ನೀಡುವ ಮತ್ತು ಸಂಕಷ್ಟಗಳನ್ನು ಸುಲಭಗೊಳಿಸುವುದು ಎಲ್ಲವೂ ಅಲ್ಲಾಹನ ಇಚ್ಛೆಗೆ ಬ ವಿಷಯಗಳಾಗಿವೆ. ಒಂದು ವೇಳೆ ದೊಡ್ಡ ಮಟ್ಟದಲ್ಲಿ ಶ್ರಮಪಟ್ಟು ಉನ್ನತ ಸ್ಥಾನಕ್ಕೆ ತಲ ನಿರೀಕ್ಷೆಯಿಲ್ಲದಿದ್ದರೆ ನಾವು ನೇರಮಾರ್ಗವನ್ನೇ ತೊರೆದು ಕೆಲವೊಂದು ದೊಡ್ಡ ಹಾ ಉನ್ನತ ಸ್ಥಾನಕ್ಕೆ ತಲಪುವಂತಹ ತಪ್ಪುದಾರಿಗಳನ್ನು ಹಿಡಿಯಬೇಕೆಂದು ಹೇಳುವವ ನಾನ ನಾವಂತೂ ಸರಿಯಾದ ಕಾರ್ಯವನ್ನೇ ಮಾಡಬೇಕು. ಅದು ದೊಡ್ಡ ಪ್ರಮಾಣದಲ್ಲಿ ಸಣ್ಣ ಪ್ರಮಾಣದಲ್ಲಿರಲಿ.

ಇದು ಈ ವಿಷಯಕ್ಕೆ ಸಂಬಂಧಿಸಿದ ಒಂದು ಮುಖವಾಗಿದೆ. ಅದರ ಇನ್ನೊ ಮುಖವೇನೆಂದರೆ ಯಾವ ವಿಶಿಷ್ಟ ನೈತಿಕ ಶಕ್ತಿಯು ಈ ಕಾರ್ಯಕ್ಕೆ ಅಗತ್ಯವೋ ಮ ಎಂತಹ ಪ್ರಭಾವಶಾಲಿ ವ್ಯಕ್ತಿಗಳು ಈ ಕಾರ್ಯಕ್ಕೆ ಸ್ಫೂರ್ತಿ ನೀಡಬಲ್ಲರೋ ಅವರೇ ಕುಟೀರಗಳಲ್ಲಿ ಹುಟ್ಟಲಾರರು. ಬದಲಾಗಿ ಈ ಮಾರ್ಗದಲ್ಲಿ ನಡೆಸುವ ಕ್ರಿಯಾ ಪರಿಶ್ರಮಗಳ ಫಲವಾಗಿಯೇ ಹುಟ್ಟಬಲ್ಲರು. ಈಗಂತೂ ಈ ಪರಿಶ್ರಮದ ಆರಂಭವ ಆಗಿದೆ. ಪರೀಕ್ಷಾ ಘಟ್ಟಗಳು ಇನ್ನೂ ಆರಂಭಗೊಂಡಿಲ್ಲ. ಆದುದರಿಂದ ಈ ಪರಿಶ್ರ

ತಿಫಲವು ಅಂಕಿ ಅಂಶದ ರೂಪದಲ್ಲಿ ನಿಮ್ಮ ಮುಂದೆ ಬಂದಿಲ್ಲ. ಆದರೆ ಈ ಾರ್ಗದಲ್ಲಿ ಮುನ್ನಡೆಯುತ್ತಾ ಪರೀಕ್ಷಾ ಘಟ್ಟಗಳು ಎದುರಾದಂತೆ, ಯಾರು ಅಲ್ಲಾಹನೊಂದಿಗೆ ಢ ಸಂಬಂಧ ವಿರಿಸುವವರಲ್ಲವೋ ಅವರು ಯಾವುದಾದರೊಂದು ಪರೀಕ್ಷಾ ಘಟ್ಟದಲ್ಲಿ ಮ್ಮ ದೌರ್ಬಲ್ಯಕ್ಕೆ ಸಿಕ್ಕಿ ಈ ಮಾರ್ಗವನ್ನು ಬಿಟ್ಟು ಹೋಗುವುದನ್ನು ನೀವು ಕಾಣುವಿರಿ. ಯಾರು ಅಲ್ಲಾಹನೊಂದಿಗೆ ನೈಜ ಸಂಬಂಧ ಇರಿಸಿರುವರೋ ಅವರು ಪ್ರತಿಯೊಂದು ರೀಕ್ಷೆಯಲ್ಲೂ ಉತ್ತೀರ್ಣರಾಗುವರು; ಮಾತ್ರವಲ್ಲ ಪ್ರತಿಯೊಂದು ಪರೀಕ್ಷೆಯೂ ಅವರ ಾರಿತ್ರ್ಯಕ್ಕೆ ಇನ್ನಷ್ಟು ಬಲ ನೀಡುವುದು. ಅವರಲ್ಲಿರುವ ಅನೇಕ ಕೆಡುಕುಗಳನ್ನು ೋಗಲಾಡಿಸುವುದು. ಕೊನೆಗೆ ಅವರು ಅಪ್ಪಟ ಚಿನ್ನದಂತಾಗುವರು. ಅನಂತರ ಅವರಲ್ಲಿ ರ್ಶಮಣಿಯಂತಹ ಗುಣಗಳುಂಟಾಗಿ ಅವರು ಯಾರನ್ನೆಲ್ಲ ಸ್ಪರ್ಶಿಸುವರೋ ಅವರೂ ನ್ನವಾಗುವರು.

ಒಟ್ಟಿನಲ್ಲಿ, ಈ ಕಾರ್ಯವನ್ನು ಆರಂಭಿಸುವುದಕ್ಕೆ ಮುಂಚೆ ಪರಿಪೂರ್ಣ ವ್ಯಕ್ತಿ ಥವಾ ವ್ಯಕ್ತಿಗಳು ಇರಬೇಕೆಂಬ ಶರ್ತ ವಿಧಿಸುವುದು ತಪ್ಪೆಂದು ನಾನು ಬಲವಾಗಿ ಂಬಿದ್ದೇನೆ. ಈ ಶರ್ತವು ಎಂದೂ ಪೂರ್ತಿಗೊಳ್ಳಲಾರದು. ಇದಕ್ಕೆ ತದ್ವಿರುದ್ಧವಾಗಿ ರಿಯಾದ ಮಾರ್ಗವೇನೆಂದರೆ ಪ್ರಾಮಾಣಿಕ ಸಂಕಲ್ಪದೊಂದಿಗೆ ಈ ಕಾರ್ಯವನ್ನು ರಂಭಿಸಬೇಕು. ಅನಂತರ ಮೆಲ್ಲಮೆಲ್ಲನೆ ಇದೇ ಕಾರ್ಯವು ಪರಿಪೂರ್ಣ ವ್ಯಕ್ತಿಗಳನ್ನು ಂಟು ಮಾಡುತ್ತಾ ಹೋಗುವುದು. ಇದು ಪರಿಪೂರ್ಣತೆಯ ಹಂತಗಳನ್ನು ಎಷ್ಟರ ಟ್ಟಿಗೆ ದಾಟುತ್ತಿರುವುದೋ ಅಷ್ಟೇ ಉನ್ನತ ವ್ಯಕ್ತಿತ್ವಗಳು ಅದರ ಕಾರ್ಯಕರ್ತರಿಂದ ಟ್ಟುತ್ತಾ ಹೋಗುವರು. ಸಮುದ್ರದ ಅಲೆಗಳೊಂದಿಗೆ ಹೋರಾಡಲು ಸಮುದ್ರಕ್ಕೆ ಳಿಯುವುದಕ್ಕೆ ಮುಂಚೆ ಅವುಗಳೊಂದಿಗೆ ಹೋರಾಡುವ ಶಕ್ತಿ ಗಳಿಸಿಕೊಡುವಂತಹ ಂದಿಯನ್ನು ನೀವೆಲ್ಲಿಂದಲೂ ತರಲಾರಿರಿ. ಈ ಶಕ್ತಿಯು ಸಮುದ್ರಕ್ಕೆ ಇಳಿದು ಅದರ ಲೆಗಳೊಂದಿಗೆ ಹೋರಾಡುವುದರಿಂದಲೇ ಪ್ರಾಪ್ತವಾಗಬಲ್ಲುದು. ದುರ್ಬಲರಾದವರು ದೇ ಸಮುದ್ರದಲ್ಲಿ ಮುಳುಗಿ ಸಾಯುವರು. ಯಾರಿಗೆ ಅಲ್ಲಾಹನು ಬಾಹುಬಲ ನೀಡಿರುವನೋ ವರು ಅಲೆಗಳ ಹೊಡೆತ ತಿನ್ನುತ್ತಾ ಅವುಗಳೊಂದಿಗೆ ಹೋರಾಡುತ್ತಾ ಕೊನೆಗೆ ಅತ್ಯುತ್ತಮ ಜುಪಟುಗಳಾಗಿ ಮಾರ್ಪಡುವರು. *(ತರ್ಜುಮಾನುಲ್ ಕುರ್‌ಆನ್: ಎಪ್ರಿಲ್ 1946)*

(28)

ಇಕಾಮತುದ್ದೀನ್

- *ಇನ್ನೊಂದು ಸಂಶಯವು ಇಕಾಮತುದ್ದೀನ್‌ನ ಸಂಕೇತಗಳ ಮತ್ತು ಹಂತಗಳ ಕುರಿತ ಉದ್ಭವಿಸುತ್ತದೆ. ಪವಿತ್ರ ಕುರ್‌ಆನ್‌ನಲ್ಲಿ ತೋರಿಸಲಾದ ಹಂತಗಳು, ಅವುಗಳಲ್ಲಿ ಸಿಗುತ್ತಿದ್ದ ಮಾರ್ಗದರ್ಶನ ಹಾಗೂ ಪರೋಕ್ಷ ಸಹಾಯಗಳು - ಎಲ್ಲದರಲ್ಲೂ ಪ್ರವಾದಿ(ಸ) ಮತ್ತು ದಿವ್ಯವಾಣಿಯ ಮಾರ್ಗದರ್ಶನಗಳಿದ್ದುವು. ಆದರೆ ಈಗ ನಮ್ಮ ಮಾರ್ಗದ ಆ ಹಂತಗಳಾವುವು, ಅವುಗಳನ್ನು ಹೇಗೆ ದಾಟಬಹುದು ಎಂಬುದನ್ನು ತೋರಿಸಿ ಕೊಡುವವರು ಯಾರಿದ್ದಾರೆ?*

○ ಇಕಾಮತುದ್ದೀನ್ (ಧರ್ಮಸಂಸ್ಥಾಪನೆ)ಯ ಹಂತಗಳು ನಿಶ್ಚಯಿಸಲ್ಪಟ್ಟಿಲ್ಲ. ಆ ಮಾರ್ಗದ ಪರಿಶ್ರಮ, ಪರಿಶ್ರಮದ ವೇಳೆ ಉಂಟಾಗುವ ಪರಿಸ್ಥಿತಿ ಹಾಗೂ ಇಸ್ಲಾಮಿ ಸ್ಫೂರ್ತಿಯನ್ನು ಚೆನ್ನಾಗಿ ಅರಿತಿರುವ ನಾಯಕರಲ್ಲಿರುವ ದೂರದೃಷ್ಟಿಯು ಈ ಹಂತಗಳನ್ನು ನಿರ್ಣಯಿಸುತ್ತವೆ. ಪ್ರವಾದಿಗಳ ಜೀವನಗಳಲ್ಲಿಯೂ ನಮಗೆ ಇದೇ ವಿಷಯ ಕಂಡ ಬರುತ್ತದೆ. ಅವರೆಲ್ಲರೂ ಒಂದೇ ರೀತಿಯ ಹಂತಗಳನ್ನು ದಾಟಲಿಲ್ಲ. ಹ. ಈಸಾ, ಮೂಸಾ ಯೂಸುಫ್(ಅ) ಮತ್ತು ಮುಹಮ್ಮದ್(ಸ) ಹಾಗೂ ಇತರ ಪ್ರವಾದಿಗಳ ಜೀವನ ಅಧ್ಯಯನಗಳಿಂದಲೂ ಇದು ವ್ಯಕ್ತವಾಗುತ್ತದೆ. ವಾಸ್ತವದಲ್ಲಿ ನಮ್ಮ ಮುಂದಿರಬೇಕಾ ವಿಷಯವೆಂದರೆ ಧ್ಯೇಯ ಸ್ಪಷ್ಟವಾಗಿರಬೇಕು. ಧ್ಯೇಯದ ಕಡೆಗೆ ಸಾಗಲು ಅಗತ್ಯವಿರುವಂತಹ ಯುಕ್ತಿ ನಮ್ಮಲ್ಲಿರಬೇಕು. ನಾವು ಪ್ರವಾದಿಗಳ ಕಾರ್ಯವಿಧಾನವನ್ನು ಚೆನ್ನಾಗಿ ಗ್ರಹಿ ಅದಕ್ಕಾಗಿ ಕಾರ್ಯತಃ ಪರಿಶ್ರಮಿಸಬೇಕು. ಅನಂತರ ಯಾವ ಹಂತಗಳು ನಮ್ಮ ಮುಂ ಬರುವುದೋ ಅವುಗಳ ಪೈಕಿ ಪ್ರತಿಯೊಂದು ಹಂತದ ಬೇಡಿಕೆಗಳೇನೆಂಬುದನ್ನು ನಾವು ನಮ್ಮ ಬುದ್ಧಿಮತ್ತೆಯಿಂದ ಗ್ರಹಿಸಿ ಅಲ್ಲಾಹನ ಭರವಸೆಯ ಮೇಲೆ ಅವುಗಳಿಗೆ ಸೂಕ್ತ ಮಾರ್ಗೋಪಾಯಗಳನ್ನು ಅಳವಡಿಸುತ್ತಾ ಸಾಗಬೇಕಾಗಿದೆ.

ಇನ್ನು, ನಿಮ್ಮ ಅನಿಸಿಕೆ- ಮೊದಲು ದಿವ್ಯವಾಣಿಯ ಮಾರ್ಗದರ್ಶನದಿಂದಾಗಿ ಸೂಕ್ತ ಸಂದರ್ಭದಲ್ಲಿ ಸೂಕ್ತ ಮಾರ್ಗೋಪಾಯಗಳನ್ನು ಅವಲಂಬಿಸಲಾಗುತ್ತಿತ್ತು. ಈಗ ಏನಾದೀತು ಆ ಕುರಿತು ಹೇಳಬೇಕಾದರೆ ಅದರ ಉತ್ತರವನ್ನು ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತದೆ

'ಯಾರು ನಮ್ಮ (ಅಲ್ಲಾಹನ) ಮಾರ್ಗದಲ್ಲಿ ಪರಿಶ್ರಮಿಸುವರೋ ಅವರಿಗೆ ನಾವು ಮಾರ್ಗಗಳನ್ನು ತೆರೆದು ಕೊಡುತ್ತೇವೆ." ಮೊದಲು ಮಾರ್ಗದರ್ಶನ ಮಾಡುತ್ತಿದ್ದ ಅದೇ ಅಲ್ಲಾಹನು ಈಗಲೂ ಮಾರ್ಗದರ್ಶನಕ್ಕೆ ಇದ್ದಾನೆ. ಅವನ ಮಾರ್ಗದರ್ಶನದಿಂದ ಪ್ರಯೋಜನ ಪಡೆಯುವವರು ಬೇಕು. ನಮ್ಮಲ್ಲಿ ಕುರ್‌ಆನ್‌ನ ಸ್ಫೂರ್ತಿಯನ್ನು ಮೈಗೂಡಿಸಿಕೊಂಡ ಇಬ್ಬರು ವ್ಯಕ್ತಿಗಳಾದರೂ ಇದ್ದರೆ ಮತ್ತು ಜಮಾಅತ್‌ನಲ್ಲಿರುವ ಹೆಚ್ಚಿನವರು ಸರಿ-ತಪ್ಪು ಮಾರ್ಗದರ್ಶನವನ್ನು ವಿವೇಚಿಸಬಲ್ಲವರಾದರೆ ಹಾಗೂ ಸರಿಯಾದ ಮಾರ್ಗದರ್ಶನ ದೊರೆತರೆ ಅವರು - ಅನುಸರಿಸುವವರಾಗಿದ್ದರೆ 'ಇನ್‌ಶಾಅಲ್ಲಾಹ್' ಅಲ್ಲಾಹನ ಮಾರ್ಗದರ್ಶನವೂ ನಮಗೆ ಪ್ರತಿ ಹಂತದಲ್ಲಿ ದೊರೆಯಬಹುದು. ನಾವು ಅವನ ಮಾರ್ಗದರ್ಶನದಿಂದ ಪ್ರಯೋಜನವನ್ನೂ ಪಡೆಯಬಲ್ಲೆವು. *(ತರ್ಜುಮಾನುಲ್ ಕುರ್‌ಆನ್, ಆಗಸ್ಟ್, 1952)*

29

ಹರಕೆ ಮತ್ತು ಈಸಾಲೆ ಸವಾಬ್

- **(1)** *ಹರಕೆ ಮತ್ತು 'ಫಾತಿಹಾ'ಕ್ಕೆ ಶರೀಅತ್‌ನಲ್ಲಿರುವ ಸ್ಥಾನವೇನು?*

  (2) *ಒಬ್ಬನ ಆದಾಯ ಮೂಲವು ಅಶ್ಲೀಲ ಸಂಪಾದನೆಯೆಂದು ತಿಳಿದೂ ಒ ವ್ಯಾಪಾರಿಯು ತನ್ನ ಸರಕನ್ನು ಅವನಿಗೆ ಮಾರಬಹುದೇ?*

○ ಹರಕೆ ಕೇವಲ ಅಲ್ಲಾಹನಿಗೇ ಆಗಿದ್ದರೆ ಅದು ಸಂಪೂರ್ಣ ಧರ್ಮಸಮ್ಮತ ಮ ಪುಣ್ಯದಾಯಕವಾಗಿದೆ. ಒಬ್ಬನು ಅನ್ನದಾನ, ಬಟ್ಟೆ ದಾನ ಅಥವಾ ಇತರ ದಾ ಧರ್ಮಗಳನ್ನು ಅಲ್ಲಾಹನ ಮಾರ್ಗದಲ್ಲಿ ಮಾಡಿ ಅಲ್ಲಾಹನು ಅದನ್ನು ಸ್ವೀಕರಿಸಿ ನವ ಯಾವನಾದರೂ ಬಂಧುವನ್ನು ಕ್ಷಮಿಸಿ ಬಿಡಲೆಂದು ಪ್ರಾರ್ಥಿಸಿದರೆ ಅಥವಾ ಅ ಪುಣ್ಯವನ್ನು ಆ ಬಂಧುವಿಗೆ ದಯಪಾಲಿಸಲೆಂದು ಬಯಸಿದರೆ ಅದನ ಧರ್ಮಬಾಹಿರವೆನ್ನಲಾಗದು. ಆದರೆ ಅದು ಆ ಬಂಧುವಿನ ಪಾಲಿಗೆ ಉಪಯುಕ್ತವಾಗುವು ಅಲ್ಲಾಹನ ಇಚ್ಛೆಯನ್ನು ಹೊಂದಿಕೊಂಡಿದೆ. ಆತನು ಬಯಸಿದರೆ ಅದನ್ನು ಅವನ ಪಾಲಿ ಉಪಯುಕ್ತವಾಗಿಸಬಹುದು. ಅನ್ಯಥಾ ದಾನ ಮಾಡುವವನಿಗಂತೂ ಖಂಡಿತ ಅ ಪುಣ್ಯದಾಯಕವಾಗುವುದು. ಒಂದು ವೇಳೆ ಯಾರಾದರೂ ಕುರ್‌ಆನ್ ಪಠಿಸಿ ಅಥ ಇನ್ನಾವುದಾದರೂ ದೈಹಿಕ ಆರಾಧನೆ ಮಾಡಿ ಅದರ ಪುಣ್ಯವನ್ನು ತನ್ನ ಯಾವನಾದರೂ ಮ ಬಂಧುವಿಗೆ ತಲುಪಿಸಬೇಕೆಂದು ಪ್ರಾರ್ಥಿಸಿದರೆ ಇಂತಹ 'ಈಸಾಲೆ ಸವಾಬ್' ಸರಿಯೆ ಅಲ್ಲವೋ ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಕೆಲವು ಇಮಾಮ್‌ಗಳ ಪ್ರಕಾರ ಇ ಸರಿಯಾಗಿದೆ. ಕೆಲವರು ಇವನ್ನು ಸರಿಯೆಂದು ಪರಿಗಣಿಸುವುದಿಲ್ಲ. ನಾನು ಶರೀಅತ್‌ನಲ್ಲಿರು ಅನೇಕ ಪುರಾವೆಗಳ ಆಧಾರದಲ್ಲಿ ಎರಡನೇ ಅಭಿಪ್ರಾಯಕ್ಕೇ ಆದ್ಯತೆ ನೀಡುತ್ತೇನೆ.

ಯಾವುದಾದರೂ ಆರ್ಥಿಕ ಅಥವಾ ದೈಹಿಕ ಆರಾಧನೆಯನ್ನು ಯಾರಾದರೂ ಮಹಾತ್ಮ 'ಈಸಾಲೆ ಸವಾಬ್'ಗಾಗಿ ಮಾಡುವ ಮೂಲಕ ಈ ಕಾಣಿಕೆಯಿಂದ ಸಂತುಷ್ಟರಾಗಿ ಅಲ್ಲಾಹ ಬಳಿ ಆ ಕಾಣಿಕೆ ಕಳುಹಿಸಿದವನ ಬಗ್ಗೆ ಶಿಫಾರಸ್ಸನ್ನು ಮಾಡುವನೆಂದು ಬಗೆದರೆ ಇದೊಂ ವಿವಾದಾಸ್ಪದ ಕರ್ಮವಾಗಿದೆ. ಇದರಲ್ಲಿ ಧರ್ಮಸಮ್ಮತ, ನಿಷಿದ್ಧ, ಪಾಪ ಮತ್ತು ಫಿತ್ನಾ ಅಂಶಗಳು ಪರಸ್ಪರ ಸೇರಿಕೊಂಡಿವೆ. ಆದ್ದರಿಂದ ಯಾವನೇ ಧರ್ಮನಿಷ್ಠ ವ್ಯಕ್ತಿಗೆ ನಾ ಇಂತಹ ಅಪಾಯದಲ್ಲಿ ಸಿಲುಕುವ ಸಲಹೆ ನೀಡಲಾರೆ.

ಇನ್ನು ಯಾರಾದರೂ ಮಹಾತ್ಮರ ಹೆಸರಲ್ಲಿ ಬೇಯಿಸಲ್ಪಟ್ಟ ಅನ್ನ ಅಥವಾ ಇದು ಂತಹ ಮಹಾತ್ಮರ ಹರಕೆಯಾಗಿದೆಯೆಂದು ಸ್ಪಷ್ಟವಾಗಿ ಹೇಳಿದ್ದರೆ ಅದನ್ನು ತಯಾರು ಾಡುವವನ ಸಂಕಲ್ಪವೂ ಅದು ಆ ಮಹಾತ್ಮರ ಆತ್ಮಕ್ಕೆ ಕಳುಹಿಸಲಾಗುವ ಒಂದು ಾಕೆಯೆಂದೇ ಇರುತ್ತದೆ. ಅದರ ಬಗ್ಗೆ ನಮ್ಮಲ್ಲಿ ತರತರದ ಸಂಪ್ರದಾಯಗಳಿವೆ. ಅದನ್ನು ಲ್ಲಂಘಿಸುವುದು ನಿಷಿದ್ಧವೆನಿಸಿದೆ. ಈ ರೀತಿಯ ಹರಕೆ-ಕಾಣಿಕೆಗಳ ಬಗ್ಗೆ ಗಾಢವಾದ ದ್ಧಾಭಕ್ತಿಗಳಿವೆ. ಇವು ಹರಾಮ್, ಪಾಪಕಾರ್ಯ ಮಾತ್ರವಲ್ಲ ತೌಹೀದ್ ಕದೇವಾರಾಧನೆಯ ಕಲ್ಪನೆ)ಗೆ ವಿರುದ್ಧವಾಗಿದೆ ಎಂಬುದರಲ್ಲಿ ನನಗೆ ಯಾವ ಸಂಶಯವೂ ಲ್ಲ.

(2) ಹರಾಮ್ ಸಂಪಾದನೆಯಿಂದ ಜೀವನ ಸಾಗಿಸುವ ವ್ಯಕ್ತಿಯು ಓರ್ವ ್ಯಾಪಾರಿಯಿಂದ ಏನಾದರೂ ಖರೀದಿಸ ಬಯಸಿದರೆ ಅದನ್ನು ಮಾರುವುದು ಆಕ್ಷೇಪಾರ್ಹವಲ್ಲ. ್ಯಾಪಾರಿಗೆ ಆ ಹಣವು ಧರ್ಮಸಮ್ಮತ ಮಾರ್ಗದಿಂದಲೇ ತಲುಪುತ್ತದೆ. ಕೊಳಕು ಮತ್ತು ಿದ್ಧ ಇರುವುದು ಹಣದಲ್ಲಲ್ಲ, ಅದನ್ನು ಸಂಪಾದಿಸುವ ವಿಧಾನದಲ್ಲಾಗಿದೆ. ಒಬ್ಬನಿಗೆ ರಾಮ್ ಮೂಲದಿಂದ ಹಣ ಬಂದಿದ್ದರೆ ಅದು ಅವನಿಗೇ ಹರಾಮ್ ಆಗಿದೆ. ಮ್ನೊಬ್ಬನಿಗೆ ಅದೇ ಹಣ ಹಲಾಲ್ ಮಾರ್ಗದಿಂದ ತಲುಪಿದರೆ ಅದನ್ನು ಹರಾಮ್ ಎಂದು ಳಲು ಸಾಧ್ಯವಿಲ್ಲ. *(ತರ್ಜುಮಾನುಲ್ ಕುರ್‌ಆನ್, ಆಗಸ್ಟ್ 1952)*

30

ಬಡ್ಡಿ ಮತ್ತು ಗೇಣಿಯ ವ್ಯತ್ಯಾಸ

- *ರೂಪಾಯಿಯ ಬಡ್ಡಿ ಮತ್ತು ನೆಲದ ಗೇಣಿಯಲ್ಲಿ ವ್ಯತ್ಯಾಸವೇನಿದೆ? ವಿಶೇಷವಾ ಇವೆರಡೂ ಬಂಡವಾಳದ ಘಟಕಗಳೇ ಆಗಿರುವಾಗ. ಉದಾಹರಣೆಗೆ ನೂರು ರೂಪಾಯಿ ವಾರ್ಷಿಕ ಐದು ರೂಪಾಯಿಯಂತೆ ಬಡ್ಡಿ ವಿಧಿಸುವುದಕ್ಕೂ ಒಂದು ಗುಂಟೆ ನೆಲ ವಾರ್ಷಿಕ ಐದು ರೂಪಾಯಿ ಗೇಣಿ ವಸೂಲು ಮಾಡುವುದಕ್ಕೂ ವ್ಯತ್ಯಾಸವಾದರ ಏನಿದೆ? ಎರಡೂ ಸ್ಥಿತಿಗಳಲ್ಲೂ ಪಡೆಯುವವನಿಗೆ ಲಾಭವಾಗುತ್ತದೋ ನಷ್ಟವಾಗುತ್ತದೋ ಎಂಬುದು ಸಂಶಯಾಸ್ಪದ ವಿಷಯವಾಗಿಯೇ ಇರುವುದು. ಸಾ ನೀಡುವವನಿಗೆ ಅಥವಾ ಜಮೀನು ಗೇಣಿಗೆ ನೀಡುವವನಿಗೆ ಈ ವಿಷಯದಲ್ಲೇನ ಚಿಂತೆಯಿಲ್ಲ. ಆತನು ಲಾಭ ನಷ್ಟಗಳ ಚಿಂತೆಯಿಂದ ಮುಕ್ತನಾಗಿರುತ್ತಾನೆ.*

○ ನನ್ನ ಅಭಿಪ್ರಾಯದಲ್ಲಿ ಗೇಣಿಯ ಧರ್ಮಸಮ್ಮತ ರೂಪ ಯಾವುದು ಎಂಬುದನ ನಾನು "ಜಮೀನಿನ ಮಾಲಕತ್ವದ ಸಮಸ್ಯೆ" ಎಂಬ ಪುಸ್ತಕದಲ್ಲಿ ವಿವರಿಸಿರುವೆನು. ಅದನ ದೃಷ್ಟಿಯಲ್ಲಿಟ್ಟು ಯೋಚಿಸಿ ನೋಡಿರಿ. ಅದರಲ್ಲೂ ಬಡ್ಡಿಯಲ್ಲೂ ಯಾವ ವ್ಯತ್ಯಾಸವಿದೆಯೆಂದ ನಿಮಗೆ ತಿಳಿದುಬರುವುದು. ಯಾವ ವಸ್ತುವಿನ ಮೇಲೆಲ್ಲಾ ಬಾಡಿಗೆ ಪಡೆಯಲಾಗುತ್ತದೊ ಅವು ಬಾಡಿಗೆದಾರನ ಉಪಯೋಗದಿಂದ ಸ್ವಲ್ಪವಾದರೂ ಸವೆಯುತ್ತವೆ ಅಥವಾ ಹಾಳಾಗುತ್ತವೆ ಅವು ತಮ್ಮ ಮೂಲ ರೂಪದಲ್ಲಿ ಒಡೆಯನಿಗೆ ಮರಳಿ ದೊರೆಯಲಾರವು. ಈ ನಿಯಮ ಪೀಠೋಪಕರಣ, ವಾಹನ ಮತ್ತು ಮನೆಗಳಿಗೆ ಅನ್ವಯಿಸುವಂತೆ ಜಮೀನಿಗೂ ಅನ್ವಯಿಸುತ್ತದೆ ಅದನ್ನು ಪಡೆದವನು ಕೃಷಿ ಮಾಡಲಿ, ಅಂಗಡಿ ಇಡಲಿ ಅಥವಾ ಇನ್ನಾವುದೇ ರೀತಿಯಿಂ ಅದನ್ನು ಉಪಯೋಗಿಸಲಿ. ಆದರೆ ರೂಪಾಯಿ ಕೇವಲ ಒಂದು ಖರೀದಿಸುವ ಶಕ್ತಿಯ ಹೆಸರು. ಅದನ್ನು ಯಾರಾದರೂ ಸಾಲ ಪಡೆದರೆ ಅದು ಸವೆದು ಹೋಗುವ ಅಥವ ಹಾಳಾಗುವ ಪ್ರಶ್ನೆಯಿಲ್ಲ. ಅದನ್ನು ಸಾಲ ಪಡೆದವನು ಇದ್ದಕ್ಕಿದ್ದಂತೆ ಮರಳಿಸಬಹುದು ಅದೇ ರೀತಿ ಯಾರಾದರೂ ಧಾನ್ಯವನ್ನು ಸಾಲ ರೂಪದಲ್ಲಿ ಪಡೆದಿದ್ದರೆ ಆತ ಪಡೆದಷ್ಟೆ ಧಾನ್ಯವನ್ನು ಮರಳಿಸಬಹುದು. ಸಾಲ ಪಡೆದುಕೊಂಡ ಧಾನ್ಯದ ಪ್ರಮಾಣವು ಸವೆಯು ಅಥವಾ ಹಾಳಾಗುವ ವಸ್ತುವಲ್ಲ. *(ತರ್ಜುಮಾನುಲ್ ಕುರ್‌ಆನ್ ಜನವರಿ- ಫೆಬ್ರವರಿ 1951)*

31

ವ್ಯಾಪಾರಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳು

(1) ನಾನೊಬ್ಬ ವ್ಯಾಪಾರಿ. ನನ್ನ ಮಳಿಗೆಯಲ್ಲಿ ಎಲ್ಲ ರೀತಿಯ ವಸ್ತುಗಳ ಮಾರಾಟವಾಗುತ್ತದೆ. ಉದಾ: ಪೌಡರ್, ಕ್ರೀಮ್, ಲಿಪ್‌ಸ್ಟಿಕ್, ನೈಲ್ ಪಾಲಿಶ್, ಸೆಂಟ್, ಅತ್ತರು, ಸಿಲ್ಕ್ ಬನಿಯಾನ್, ಟೂತ್ ಬ್ರಶ್, ಟೂತ್ ಪೇಸ್ಟ್, ಶೇವಿಂಗ್ ಸೆಟ್, ಶೃಂಗಾರ ಪೆಟ್ಟಿಗೆ, ಮಕ್ಕಳ ಆಟಿಕೆಗಳು, ಆಭರಣಗಳು ಇತ್ಯಾದಿ. ಮೇಲ್ಕಾಣಿಸಿದ ವಸ್ತುಗಳು ಧರ್ಮಬಾಹಿರವೇ? ಅವುಗಳನ್ನು ಮಾರಾಟ ಮಾಡುವುದು ಶರೀಅತ್ ಪ್ರಕಾರ ನಿಷಿದ್ಧವೇ? ಈ ಎಲ್ಲ ವಸ್ತುಗಳು ಐಷಾರಾಮದ ವಸ್ತುಗಳಾಗಿದ್ದು ಅಪವ್ಯಯವಾಗಿದೆ. ಆದ್ದರಿಂದ ಅವುಗಳನ್ನು ಉಪಯೋಗಿಸುವುದು ಮತ್ತು ಮಾರುವುದು ಅಪೇಕ್ಷಣೀಯವಲ್ಲವೆಂದು ಕೆಲವರು ಹೇಳುತ್ತಾರೆ. ಇದು ಸರಿಯೇ?

(2) ಶರೀಅತ್‌ನಲ್ಲಿ ಲಾಭಕ್ಕೆ ಮಿತಿ ಹೇರಲಾಗಿದೆಯೇ? ಹೇರಲಾಗಿದ್ದರೆ ಆ ಮಿತಿ ಯಾವುದು? ಹೇರಲಾಗಿಲ್ಲವೆಂದಾದರೆ ಎಷ್ಟರ ವರೆಗೆ ಲಾಭ ಪಡೆಯಬಹುದು? ಮಾರುಕಟ್ಟೆ ದರ ಅಥವಾ ಇನ್ನಾವುದೇ ದರದಲ್ಲಿ ತನ್ನ ಸರಕುಗಳನ್ನು ಮಾರಾಟ ಮಾಡುವ ಹಕ್ಕು ಅಂಗಡಿಯವನಿಗೆ ಇದೆಯೇ? ಹಲವು ವಸ್ತುಗಳಿಗೆ ಅತ್ಯಲ್ಪ ಲಾಭವಿರುತ್ತದೆ. ಕೆಲವೊಮ್ಮೆ ಖರೀದಿ ಬೆಲೆಗೆ ಅಥವಾ ಅದಕ್ಕಿಂತಲೂ ಕಡಿಮೆಗೂ ಮಾರಬೇಕಾಗುತ್ತದೆ.

(3) ಇಂದಿನ ಕಾಲದಲ್ಲಿ ಪ್ರತಿಯೊಂದು ವ್ಯಾಪರವನ್ನೂ ಮಹಿಳೆಯ ಜಾಹೀರಾತಿನಿಂದ ಆರಂಭಿಸಲಾಗುತ್ತದೆ. ನಾನು ಈ ಶಾಪದಿಂದ ಸುರಕ್ಷಿತನಾಗಿರುವೆನು(ಅಲ್ ಹಮ್ದು ಲಿಲ್ಲಾಹ್) ಆದರೆ ವಿದೇಶದಿಂದ ಬರುವ ಮತ್ತು ದೇಶದಲ್ಲೇ ತಯಾರಾಗುವ ಕೆಲವು ವಸ್ತುಗಳ ಮೇಲೆ ಮಹಿಳೆಯ ವಿವಿಧ ಭಂಗಿಗಳ ಲೇಬಲ್ ಇರುತ್ತದೆ. ಈ ಹೊರ ಕವಚವನ್ನು ಹರಿದು ಹಾಕಿದರೆ ಆ ವಸ್ತುವನ್ನು ಮಾರಾಟ ಮಾಡುವುದು ಕಷ್ಟ ಮಾತ್ರವಲ್ಲ ಅಸಾಧ್ಯ ಕೂಡ. ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ನೀವು ಮಹಿಳೆಯ ಚಿತ್ರಗಳನ್ನು ಮಾರಾಟ ಮಾಡುತ್ತೀರಿ, ಇದು ನಿಷಿದ್ಧವಾಗಿದೆಯೆಂದು ಕೆಲವು ಮಿತ್ರರು ಆಕ್ಷೇಪಿಸುತ್ತಾರೆ.

(4) ವಸ್ತುಗಳನ್ನು ಒಂದೇ ಬೆಲೆಗೆ ಮಾರಬೇಕೆಂದು ಶರೀಅತ್ ಆದೇಶಿಸಿದೆಯೇ? ಇಲ್ಲವಾದರೆ ಚೌಕಾಶಿ ಮಾಡಿ ಮಾರಬಹುದೇ?

(5) ಅಂಗಡಿಗೆ ಪರ್ದಾರಹಿತ ಮಹಿಳೆಯರು ಬರುತ್ತಾರೆ. ಮಹಿಳೆಯ ಮೇಲೆ ಎರಡನೆಯ ಸಲ ದೃಷ್ಟಿ ಬಿದ್ದರೆ ಮನುಷ್ಯ ಅಪರಾಧಿಯಾಗುತ್ತಾನೆಂದು ಇಸ್ಲಾಮ್ ವಿಧಿಸುತ್ತದೆ. ಇಲ್ಲಿ ಅವರೊಂದಿಗೆ ಮಾತಾಡಬೇಕಾಗುತ್ತದೆ. ಮಹಿಳೆಯರನ್ನು ಅಂಗಡಿಗೆ ಬರಲು ಬಿಡದಿದ್ದರೆ ಅದೂ ಸರಿಯಾಗದು. ಏಕೆಂದರೆ ಇಂದಿನ ಕಾಲದಲ್ಲಿ ಪುರುಷರ ಬದಲು ಹೆಚ್ಚಾಗಿ ಮಹಿಳೆಯರೇ ಶಾಪಿಂಗ್‌ಗಾಗಿ ಬರುತ್ತಾರೆ.

(6) ಸಾಮಾನ್ಯವಾಗಿ ವ್ಯಾಪಾರಿಗಳು ಎರಡು ವಿಧದ ಲೆಕ್ಕ-ಪತ್ರಗಳನ್ನಿಡುತ್ತಾರೆ. ಒಂದು ಅವನ ಖಾಸಗಿ ಲೆಕ್ಕ-ಪತ್ರ ಇನ್ನೊಂದು ಮಾರಾಟ ತೆರಿಗೆ, ಆದಾಯ ತೆರಿಗೆ ಇತ್ಯಾದಿಗಳ ಅಧಿಕಾರಿಗಳಿಗೆ ತೋರಿಸಲು. ಈ ಪದ್ಧತಿ ಸರಿಯೇ? ಸರಿಯಲ್ಲದಿದ್ದರೆ ವ್ಯಾಪಾರಿ ಏನು ಮಾಡಬೇಕು? ನನ್ನ ಒಬ್ಬ ಪರಿಚಿತರು ತನ್ನ ಒಂದು ವರ್ಷದ ಸರಿಯಾದ ಲೆಕ್ಕ-ಪತ್ರವನ್ನು ಆದಾಯ ತೆರಿಗೆ ಅಧಿಕಾರಿಗಳ ಮುಂದಿರಿಸಿದರು. ಒಂದು ಪೈಸೆಯನ್ನೂ ಅವರು ಬಚ್ಚಿಟ್ಟಿರಲಿಲ್ಲ. ಆದರೆ ಅಧಿಕಾರಿಯು ಅವರ ಮೇಲೆ ಅದರ ತೆರಿಗೆಯ ಹೊರತಾಗಿ ಭಾರೀ ಮೊತ್ತದ ಕರವನ್ನು ಹೊರಿಸಿದರು. ಅವರು ತೋರಿಸಿದ ಲೆಕ್ಕ-ಪತ್ರ ಸರಿಯಾಗಿರಲಿಲ್ಲವೆಂಬ ಸಂಶಯವನ್ನು ವ್ಯಕ್ತಪಡಿಸಿದರು. ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು?

○ ನಿಮ್ಮ ಪ್ರಶ್ನೆಗಳ ಉತ್ತರವನ್ನು ಅನುಕ್ರಮವಾಗಿ ಈ ಕೆಳಗೆ ಕೊಡಲಾಗಿದೆ.

(1) ನಿಮ್ಮ ಮಳಿಗೆಯಲ್ಲಿ ನೀವು ಮಾರುವ ವಸ್ತುಗಳಲ್ಲಿ (ನೀವು ನೀಡಿದ ಪಟ್ಟಿಯ ಪ್ರಕಾರ) ಯಾವುದೂ ಸ್ವಯಂ ಹರಾಮ್(ನಿಷಿದ್ಧ) ಅಲ್ಲ. ಅವುಗಳ ಬಳಕೆಯು ಧರ್ಮ ಸಮ್ಮತವೂ ನಿಷಿದ್ಧವೂ ಆಗಬಹುದು. ಈ ವಸ್ತುಗಳನ್ನು ಯಾರು ಯಾವ ರೀತಿ ಬಳಸುತ್ತಾರೆಂದು ನೋಡುವುದು, ಅಂಗಡಿದಾರನ ನೆಲೆಯಲ್ಲಿ ನಿಮ್ಮ ಕರ್ತವ್ಯವಲ್ಲ. ನೀವು ಯಾವುದೇ ನಿಷಿದ್ಧ ವಸ್ತುಗಳನ್ನು ಮಾರಾಟ ಮಾಡದಿದ್ದರೆ ಸಾಕು. ಅದೇ ರೀತಿ ನೀವು ಕ್ರಯ-ವಿಕ್ರಯದಲ್ಲಿ ಯಾವುದೇ ನಿಷಿದ್ಧ ವಿಧಾನವನ್ನು ಬಳಸಬಾರದು.

(2) ಲಾಭಕ್ಕೆ ಶರೀಅತ್‌ನಲ್ಲಿ ಯಾವುದೇ ಮಿತಿಯನ್ನು ನಿಗದಿಪಡಿಸಲಾಗಿಲ್ಲ. ವಾಡಿಕೆ ಮತ್ತು ನ್ಯಾಯದ ಪ್ರಚಲಿತ ಕಲ್ಪನೆಯನ್ನು ಆಧರಿಸಿ ಯಾವ ವ್ಯಾಪಾರದಲ್ಲಿ ಎಷ್ಟು ಲಾಭ ನ್ಯಾಯಸಮ್ಮತವಾದುದು ಮತ್ತು ಎಷ್ಟು ನ್ಯಾಯ ಬಾಹಿರವಾದುದು ಎಂದು ನಿರ್ಧರಿಸಲ್ಪಡುತ್ತದೆ.

(3) ನೀವು ಹೊರ ದೇಶಗಳಿಂದ ತರಿಸುವ ಅಥವಾ ದೇಶದ ಉದ್ಯಮಿಗಳಿಂದ ಖರೀದಿಸುವ ವಸ್ತುಗಳ ಮೇಲೆ ಮಹಿಳೆಯರ ಚಿತ್ರಗಳಿದ್ದರೆ ಅದರ ವ್ಯಾಪಾರವು ನಿಮ್ಮ ಪಾಲಿಗೆ ನಿಷಿದ್ಧವಾಗುವುದಿಲ್ಲ. ನೀವು ಉದ್ದೇಶಪೂರ್ವಕವಾಗಿ ಆ ಚಿತ್ರಗಳನ್ನು ಅಂಟಿಸುವುದಿಲ್ಲ. ನಿಮ್ಮ ಬಯಕೆಯಂತೆ ಕಾರ್ಖಾನೆಯವರು ಅಂಟಿಸುವುದೂ ಅಲ್ಲ. ಇದೊಂದು ಸಾರ್ವತ್ರಿಕ

ಡುಗು. ನಾವೆಲ್ಲರೂ ಅದರಲ್ಲಿ ಒತ್ತಾಯಪೂರ್ವಕವಾಗಿ ಶಾಮೀಲಾಗುತ್ತಿದ್ದೇವೆ. ಈ ರೀತಿ ೀವು ಚಿತ್ರಗಳ ಮಾರಾಟ ಮಾಡುತ್ತಿರುವಿರೆಂಬ ಆಕ್ಷೇಪ ಸರಿಯಲ್ಲ. ನೀವು ಚಿತ್ರಗಳನ್ನು ರೀದಿಸುವುದೂ ಇಲ್ಲ. ಮಾರುವುದೂ ಇಲ್ಲ. ನೀವು ಖರೀದಿಸುವ ವಸ್ತುಗಳಿಗೆ ಕೆಟ್ಟು ಹೋದ ಸಂಪ್ರದಾಯದ ಪ್ರಕಾರ ಕಾರ್ಖಾನೆಯವರು ಚಿತ್ರವನ್ನು ಅಂಟಿಸಿರುತ್ತಾರೆ ಅಷ್ಟೆ.

(4) ಸರಕನ್ನು ಒಂದೇ ಬೆಲೆಗೆ ಮಾರಬೇಕೆಂಬುದು ಶರೀಅತ್‌ನ ವಿಧಿಯೇನಲ್ಲ. ಗ್ರಾಹಕನಲ್ಲಿ ಮಾತಾಡಿ ನೀವು ಹೆಚ್ಚು ಕಡಿಮೆ ಮಾಡಬಹುದು. ಆದರೆ ಸುಳ್ಳು ಹೇಳಬಾರದು ಮತ್ತು ಸುಳ್ಳು ಆಣೆ ಹಾಕಬಾರದು. ನೀವು ಸರಕನ್ನು ಆ ಬೆಲೆಗೆ ಖರೀದಿಸಿರದಿದ್ದರೂ ಅಷ್ಟಕ್ಕೆ ಖರೀದಿಸಿರುವೆನೆಂದು ಗ್ರಾಹಕನನ್ನು ನಂಬಿಸಲು ಪ್ರಯತ್ನಿಸಬೇಡಿರಿ. ನಿಮಗೆ ಲಾಭವಿರುವಾಗಲೂ ಇದರಲ್ಲಿ ನನಗೇನೂ ಲಾಭವಿಲ್ಲವೆಂದು ಗ್ರಾಹಕನನ್ನು ನಂಬಿಸಬೇಡಿರಿ.

(5) ಮಹಿಳೆಯರು ಪರ್ದಾರಹಿತವಾಗಿ ನಿಮ್ಮ ಮಳಿಗೆಗೆ ಬಂದರೆ ಅವರನ್ನು ತಡೆಯುವುದು ಅಥವಾ ಅವರಿಗೆ ಸರಕು ಮಾರಲು ನಿರಾಕರಿಸುವುದು ನಿಮ್ಮ ಮೇಲೆ ಕಡ್ಡಾಯವಲ್ಲ. ಆದರೆ ನಿಮ್ಮ ಕಣ್ಣುಗಳನ್ನು ತಗ್ಗಿಸಿಡುವುದು ಮತ್ತು ಕಣ್ಣಿಗೆ ಕಣ್ಣು ಹಾಕಿ ಮಾತನಾಡದಿರುವುದು ನಿಮ್ಮ ಮೇಲೆ ಕಡ್ಡಾಯವಾಗಿದೆ. ಅವರ ಸೌಂದರ್ಯ-ಶೃಂಗಾರಗಳನ್ನು ಅಥವಾ ಅವರ ಮಾತುಕತೆಯನ್ನು ಆಸ್ವಾದಿಸಲು ಪ್ರಯತ್ನಿಸಬಾರದು. ಇಷ್ಟರ ಮಟ್ಟಿಗೆ ತಕ್ವಾವನ್ನು ಪಾಲಿಸಿದರೆ ನೀವು ಅಂಗಡಿಯಲ್ಲಿ ಕುಳಿತಿರುತ್ತಲೇ ಅಲ್ಲಾಹನ ಆಪ್ತದಾಸರ ಮಟ್ಟವನ್ನು ತಲುಪಬಹುದು 'ಇನ್‌ಶಾ ಅಲ್ಲಾಹ್'. ಈ ಒಂದು ಆತ್ಮ ನಿಗ್ರಹದ ಪ್ರಯತ್ನವು ಎಷ್ಟೋ 'ಕಾನ್‌ಖಾಹ್'ಗಳ ಆತ್ಮ ನಿಗ್ರಹದ ಪ್ರಯತ್ನಗಳಿಗಿಂತ ಮಿಗಿಲಾಗಿದೆ.

(6) ಈ ಕುಲಗೆಟ್ಟ ವಾತಾವರಣದಲ್ಲಿ ಕಳ್ಳ ಮತ್ತು ವಂಚಕನಲ್ಲದವನನ್ನೂ ಕಳ್ಳ ಮತ್ತು ವಂಚಕರೆಂದೇ ಪರಿಗಣಿಸಲಾಗುತ್ತದೆ. ಏಕೆಂದರೆ ವ್ಯಾಪಾರದಲ್ಲಿ ಯಾರಾದರೂ ಸತ್ಯವಂತ ಮತ್ತು ಪ್ರಾಮಾಣಿಕನಾಗಿರುವುದು ಸಾಧ್ಯವೆಂಬುದನ್ನು ಊಹಿಸಲಿಕ್ಕೂ ಇಂದು ಜಗತ್ತು ಸಿದ್ಧವಿಲ್ಲ. ಇಂತಹ ಅವನತಿಯ ಸ್ಥಿತಿಯಲ್ಲಿ ಸತ್ಯ ಮತ್ತು ಪ್ರಾಮಾಣಿಕತೆಯ ಮಾರ್ಗದಲ್ಲಿ ನಡೆಯಲು ನಿರ್ಧರಿಸುವವರು ಅದರ ಶಿಕ್ಷೆಯನ್ನು ಅನುಭವಿಸಲಿಕ್ಕೂ ಸಿದ್ಧರಿರಬೇಕು. ಸುಳ್ಳರು ಮತ್ತು ಅಪ್ರಾಮಾಣಿಕರು ಲಂಚ ಕೊಟ್ಟು ತಮ್ಮ ಅಪರಾಧಗಳ ಪರಿಣಾಮದಿಂದ ರಕ್ಷಣೆ ಪಡೆಯುತ್ತಾರೆ. ಆದರೆ ಸತ್ಯವಂತರು ಮತ್ತು ಪ್ರಾಮಾಣಿಕರಿಗೆ ಇಲ್ಲಿ ಇಮ್ಮಡಿ ಶಿಕ್ಷೆಯಿದೆ. ಒಂದು ಶಿಕ್ಷೆ ಸತ್ಯ ಮತ್ತು ಪ್ರಾಮಾಣಿಕತೆಯಿಂದ ವರ್ತಿಸಿದ್ದಕ್ಕೆ. ಇನ್ನೊಂದು ಶಿಕ್ಷೆ ಲಂಚ ನೀಡದಿರುವುದಕ್ಕೆ. ಈ ಶಿಕ್ಷೆಗಳನ್ನು ಅನುಭವಿಸುವ ಕೆಚ್ಚೆದೆ ನಿಮಗಿಲ್ಲದಿದ್ದರೆ ಯಾವ ಕೆಡುಕಿನಲ್ಲಿ ಜಗತ್ತು ಸಿಲುಕಿದೆಯೋ ಅದರಲ್ಲಿ ನೀವೂ ಸಿಲುಕಿಕೊಳ್ಳಿರಿ. ಇಹಲೋಕ ಮತ್ತು ಪರಲೋಕದ ಪೈಕಿ ಒಂದನ್ನು ಆರಿಸದೆ ಬೇರೆ ದಾರಿಯಿಲ್ಲ.

(ತರ್ಜುಮಾನುಲ್ ಕುರ್‌ಆನ್, ಜುಲೈ- 1951)

32

ನಮಾಝ್‌ನ ಸರಿಯಾದ ಕ್ರಮ

- *ನಾನು ಮೊದಲು ನಮಾಝ್ ಮಾಡುತ್ತಿರಲಿಲ್ಲ. ಆದರೆ ಈಗ ಅಲ್ಲಾಹನ ದಯೆಯಿಂ ನಮಾಝ್ ಮಾಡುತ್ತಿರುವೆನು. ನನಗೆ ಈ ಕುರಿತು ದೊಡ್ಡ ಚಿಂತೆಯಾಗಿದೆ. ನಾನ ಕಲಿಯುತ್ತಿರುವ ಊರಿನ ಜನರು ಹನಫೀಗಳಾಗಿದ್ದಾರೆ. ನನ್ನ ಊರಿನ ಜನ ಅಹ್ಲುಲ್ ಹದೀಸ್ ಆಗಿದ್ದಾರೆ. ನಾನು ಅಹ್ಲುಲ್ ಹದೀಸ್‌ನ ಕ್ರಮದಲ್ಲಿ ನಮಾಝ್ ಮಾಡಿದರೆ ನಾನು ಕಲಿಯುವ ಊರಿನ ಜನರು ನನ್ನನ್ನು 'ವಹ್ಹಾಬಿ' ಎಂದು ಗೇ ಮಾಡುತ್ತಾರೆ. ನಾನು ಹನಫೀ ಕ್ರಮದಂತೆ ನಮಾಝ್ ಮಾಡಿದರೆ ನನ್ನ ಊರಿ ಜನರು ನನ್ನನ್ನು 'ಮುಕಲ್ಲಿದ್' ಎಂದು ಅಣಕಿಸುತ್ತಾರೆ. ನನಗೆ ತಮ್ಮ ಮೇ ಭರವಸೆಯಿದೆ. ಆದ್ದರಿಂದ ಈ ಕುರಿತು ತಮ್ಮ ಮಾರ್ಗದರ್ಶನವನ್ನು ಅರಸುತ್ತೇನ ಪ್ರವಾದಿ(ಸ) ಅವರು ನಮಾಝ್ ಒಂದೇ ಕ್ರಮದಲ್ಲಿ ಮಾಡಿರಬೇಕು. ಹಾಗಿರುವಾ ಈ ವಿಭಿನ್ನ ವರ್ಗಗಳ ವಿಭಿನ್ನ ಕ್ರಮಗಳಿಗೆ ಇಸ್ಲಾಮ್‌ನಲ್ಲಿರುವ ಸ್ಥಾನವೇನೆಂಬುದ ಈಗಿರುವ ಪ್ರಶ್ನೆ. ಯಾವ ವರ್ಗವು ಪ್ರವಾದಿ(ಸ) ಅವರ ಕ್ರಮದಂತೆ ನಮಾಝ್ ಮಾಡುತ್ತದೆಂದು ನಾನು ತಿಳಿಯಬಯಸುತ್ತೇನೆ. ನಾನು ಯಾವ ಕ್ರಮವನ್ನ ಅವಲಂಬಿಸಬೇಕು. ತಾವು ಯಾವ ಕ್ರಮದಲ್ಲಿ ನಮಾಝ್ ಮಾಡುತ್ತೀರೆಂದೂ ನಾನ ತಿಳಿಯಬಯಸುತ್ತೇನೆ.*

○ ಅಹ್ಲುಲ್ ಹದೀಸ್, ಹನಫೀ, ಶಾಫಿಈ, ಮಾಲಿಕೀ,ಹಂಬಲಿಗಳು ಯಾವ ಯಾ ಕ್ರಮದಲ್ಲಿ ನಮಾಝ್ ಮಾಡುತ್ತಿರುವರೋ ಆ ಎಲ್ಲಾ ಕ್ರಮಗಳು ಪ್ರವಾದಿ(ಸ) ಅವರಿಂ ಸಾಬೀತಾಗಿವೆ. ಪ್ರತಿಯೊಬ್ಬರೂ ನಂಬಲರ್ಹ ಹದೀಸ್ ವರದಿಗಳಿಂದಲೇ ಅದನ ಪಡೆದಿದ್ದಾರೆ. ಆದ್ದರಿಂದಲೇ ಈ ಪೈಕಿ ಯಾವುದೇ ಗುಂಪಿನ ವರಿಷ್ಠ ಉಲೆಮಾಗಳು ತಮ್ಮ ಕ್ರಮದ ಹೊರತು ಬೇರಾವುದೇ ಕ್ರಮದಲ್ಲಿ ನಮಾಝ್ ಮಾಡುವವನ ನಮಾಝ್ ಸಿಂಧುವಾಗಲಾರದೆಂದು ಹೇಳಿಲ್ಲ. ತಮ್ಮ ಕ್ರಮದ ಹೊರತು ಇತರ ಕ್ರಮದಲ್ಲಿ ನಮಾಝ್ ಮಾಡುವುದನ್ನು ಕಂಡು ಅವನನ್ನು ಆಕ್ಷೇಪಿಸುವುದು ಕೇವಲ ಅಜ್ಞಾನಿಗಳ ಕೆಲಸವಾಗಿದೆ ನಿಜವಾಗಿ ಪ್ರವಾದಿ(ಸ) ಅವರು ವಿಭಿನ್ನ ಸಂದರ್ಭಗಳಲ್ಲಿ ಈ ಎಲ್ಲಾ ಕ್ರಮದಂತೆ ನಮಾಝ್

ಮಾಡಿದ್ದರು. ಭಿನ್ನಾಭಿಪ್ರಾಯವಿರುವುದು ಪ್ರವಾದಿ(ಸ) ಸಾಮಾನ್ಯವಾಗಿ ಯಾವ ಕ್ರಮದಂತೆ ನಮಾಝ್ ಮಾಡುತ್ತಿದ್ದರೆಂಬ ವಿಷಯದಲ್ಲಿ ಮಾತ್ರ. ಯಾವ ವಿಭಾಗಕ್ಕೆ ಪ್ರವಾದಿ(ಸ) ಅವರ ಸಾಮಾನ್ಯ ಕ್ರಮವೆಂದು ಯಾವುದು ದೃಢ ಪಟ್ಟಿತೋ ಅದನ್ನೇ ಆ ವಿಭಾಗವು ಅಳವಡಿಸಿತು.

ನಾನು ಹನಫೀ ಕ್ರಮದಂತೆ ನಮಾಝ್ ಮಾಡುತ್ತೇನೆ. ಆದರೆ ಅಹ್ಲುಲ್ ಹದೀಸ್, ಶಾಫಿಈ, ಮಾಲಿಕೀ, ಹಂಬಲೀ ಎಲ್ಲರ ನಮಾಝ್‌ಗಳನ್ನೂ ಸಿಂಧುವೆಂದು ತಿಳಿಯುತ್ತೇನೆ ಮತ್ತು ಎಲ್ಲರ ಹಿಂದೆಯೂ ನಮಾಝ್ ಮಾಡುತ್ತೇನೆ.

(ತರ್ಜುಮಾನುಲ್ ಕುರ್‌ಆನ್, ಜನವರಿ- ಫೆಬ್ರವರಿ- 1951)

33

ನಿಕಾಹ್‌ಗಿಂತ ಮೊದಲು ತಲಾಕ್?

- *ನನ್ನ ಒಬ್ಬ ಮದುವೆಯಾಗದ ಸ್ನೇಹಿತನು ಒಮ್ಮೆ ಭಾವನಾತ್ಮಕವಾಗಿ ಹೀಗೆ ಹೇಳಿದ್ದ "ನಾನು ಯಾವ ಮಹಿಳೆಯೊಂದಿಗೆ ವಿವಾಹವಾದರೂ ಆಕೆಯ ಮೇಲೆ ಮೂರು ತಲಾಕ್ ಇದೆ." ಈಗ ಅವನು ತನ್ನ ಈ ಮಾತಿನ ಬಗ್ಗೆ ಬಹಳ ನಾಚಿಕೆ ಪಟ್ಟುಕೊಳ್ಳುತ್ತಿದ್ದಾನೆ. ಅವನೀಗ ವಿವಾಹವಾಗ ಬಯಸುತ್ತಾನೆ.*

  ಆತ ವಿವಾಹವಾದ ಕೂಡಲೇ ಆ ಮಹಿಳೆಯ ಮೇಲೆ ತಲಾಕ್ ಆಗಿ ಬಿಡುವುದು ಎಂದು ಉಲೆಮಾಗಳು ಹೇಳುತ್ತಾರೆ. ಆದ್ದರಿಂದ ಜೀವನಾದ್ಯಂತ ಮದುವೆಯ ಪ್ರಯತ್ನ ಮಾಡುವುದು ಅವನ ಪಾಲಿಗೆ ಒಂದು ನಿರರ್ಥಕ ಕಾರ್ಯವಾಗಿದೆ ಎನ್ನುತ್ತಾರೆ. ಈ ಸಂಕಷ್ಟಮಯ ಗೊಂದಲದಿಂದ ಹೊರಬರುವ ಯಾವುದಾದರೂ ದಾರಿ ಇದೆಯೆ ಎಂದು ದಯವಿಟ್ಟು ತಿಳಿಸಿ.

○ ಹನಫೀ ಕರ್ಮಶಾಸ್ತ್ರಜ್ಞರ ಅಭಿಪ್ರಾಯದಂತೆ ಇಂತಹ ಪರಿಸ್ಥಿತಿಯಲ್ಲಿ ಆ ವ್ಯಕ್ತಿ ಯಾರೊಂದಿಗೆ ವಿವಾಹವಾದರೂ ಆಕೆಯ ಮೇಲೆ ಆ ತಲಾಕ್ ಜಾರಿಯಾಗುವುದು. ಆದರೆ ಎಲ್ಲ ಇಮಾಮರು ಮತ್ತು ಕರ್ಮಶಾಸ್ತ್ರ ವಿದ್ವಾಂಸರಿಗೆ ಈ ಬಗ್ಗೆ ಸಹಮತವಿಲ್ಲ. ಇಮಾಮ್ ಶಾಫಿಈ ಮತ್ತು ಇಮಾಮ್ ಅಹ್ಮದ್ ಬಿನ್ ಹಂಬಲ್(ರ) ಅವರ ಅಭಿಪ್ರಾಯದ ಪ್ರಕಾರ ತಲಾಕ್‌ನ ಹಕ್ಕು ಒಬ್ಬನಿಗೆ ನಿಕಾಹ್ ಆದ ಮೇಲೆಯೇ ಸಿಗುತ್ತದೆ. ನಿಕಾಹ್‌ಗೆ ಮೊದಲು ಯಾರಿಗೂ ಆ ಹಕ್ಕು ಇರುವುದಿಲ್ಲ. ಒಂದು ವೇಳೆ ಯಾರಾದರೂ ತಾನು ಮುಂದೆ ಯಾವ ಮಹಿಳೆಯೊಂದಿಗೆ ನಿಕಾಹ್ ಮಾಡಿದರೂ ಅವಳಿಗೆ ತಲಾಕ್ ಇದೆ ಎಂದು ಹೇಳಿದರೆ ಇದೊಂದು ಅಸಂಬದ್ಧ ಮಾತಾಗಿರುವುದು. ಆ ಮಾತಿಗೆ ಯಾವುದೇ ಬೆಲೆಯಿಲ್ಲ. ಅದರಿಂದ ಕಾನೂನು ಸಂಬಂಧವಾದ ಯಾವುದೇ ವಿಧಿ ಸಾಬೀತಾಗುವುದಿಲ್ಲ. ಈ ಅಭಿಪ್ರಾಯವೇ ಹ. ಅಲೀ, ಹ. ಮುಆದ್ ಬಿನ್ ಜಬಲ್, ಹ. ಜಾಬಿರ್ ಬಿನ್ ಅಬ್ದುಲ್ಲಾ, ಹ. ಇಬ್ನು ಅಬ್ಬಾಸ್ ಮತ್ತು ಹ. ಆಯಿಶಾ(ರ) ಅವರಿಂದಲೂ ವರದಿಯಾಗಿದೆ. "ನಿಕಾಹ್‌ನ ನಂತರವೇ ಹೊರತು ತಲಾಕ್ ಇಲ್ಲ" ಎಂಬ ಹದೀಸ್‌ನಿಂದಲೂ ಈ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುತ್ತದೆ. ಇಮಾಮ್ ಮಾಲಿಕ್(ರ) ಅವರ ಅಭಿಪ್ರಾಯದ ಪ್ರಕಾರ ಒಂದು ವೇಳೆ

ಾವುದಾದರೂ ವಿಶಿಷ್ಟ ಮಹಿಳೆ ಅಥವಾ ವಿಶಿಷ್ಟ ಗೋತ್ರದ ಮಹಿಳೆ ಅಥವಾ ವಿಶಿಷ್ಟ ುನೆತನದ ಮಹಿಳೆಯರ ಕುರಿತು ಒಬ್ಬನು ಇಂತಹ ಮಾತು ಹೇಳಿದ್ದರೆ ಅದರಿಂದ ತಲಾಕ್ ಾರಿಯಾಗುತ್ತದೆ. ಆದರೆ ಎಲ್ಲ ಮಹಿಳೆಯ ಕುರಿತು ಇಂತಹ ಮಾತು ಹೇಳಿದ್ದರೆ ಅದರಿಂದ ಲಾಕ್ ಜಾರಿಯಾಗಲಾರದು. ಏಕೆಂದರೆ ಮೊದಲನೆಯ ರೂಪದಲ್ಲಾದರೆ ಪುರುಷನು ಆ ುಹಿಳೆ ಅಥವಾ ಆ ಗೋತ್ರದ ಮಹಿಳೆಯರನ್ನು ಬಿಟ್ಟು ಇತರ ಮಹಿಳೆಯರನ್ನು ವಾಹವಾಗಬಹುದು. ಆದರೆ ಎರಡನೆಯ ರೂಪದಲ್ಲಿ ಒಂದು ಸುನ್ನತನ್ನು ೂರೆಯಬೇಕಾದಂತಹ ಅರೋಚಕ ಪರಿಸ್ಥಿತಿ ಅನಿವಾರ್ಯವಾಗುತ್ತದೆ. ಇದು ಒಂದು ಲಾಲ್ (ಧರ್ಮಸಮ್ಮತ) ಆದ ವಸ್ತುವನ್ನು ತನ್ನ ಪಾಲಿಗೆ ಹರಾಮ್(ನಿಷಿದ್ಧ) ಾಡಿಕೊಂಡಂತೆಯೇ ಆಗುತ್ತದೆ. *(ತರ್ಜುಮಾನುಲ್ ಕುರ್‌ಆನ್- ಜನವರಿ, 1956)*

(34)

ಇಂಗ್ಲಿಷ್‌ನಲ್ಲಿ ನಮಾಝ್

- *ನಾನು 21 ವರ್ಷ ಪ್ರಾಯದ ಓರ್ವ ಆಂಗ್ಲ ಮುಸ್ಲಿಮ್. ಒಂದು ವರ್ಷ ಮುಂ ನಾನು ಸೋಮಾಲೀ ಲೇಂಡ್‌ನಲ್ಲಿ ಓರ್ವ ಸೇನಾಧಿಕಾರಿಯಾಗಿದ್ದಾಗ ಇಸ್ಲಾಮ್‌ನಂತಃ ಮಹಾನ್ ಅನುಗ್ರಹವನ್ನು ಸ್ವೀಕರಿಸುವ ಸೌಭಾಗ್ಯ ಒದಗಿತು. ನನ್ನ ಪ್ರಶ್ನೆ ಇಸ್ಲಾಮ್‌ ಅಧಿಕೃತ ಭಾಷೆಯ ಕುರಿತಾಗಿದೆ. ಹಿಂದೆ ನಾನು ಕ್ರೈಸ್ತ ಧರ್ಮದ ಅನುಯಾಯಿಯಾಗಿದ್ದೆ ಆಗ ನಾನು ನನ್ನ ಪ್ರಾರ್ಥನೆ ಮತ್ತು ಪವಿತ್ರ ಗ್ರಂಥದ ಪಠಣ ನನ್ನ ಮಾತೃಭಾಷೆ(ಇಂಗ್ಲಿಷ್)ಯಲ್ಲಿ ಮಾಡುತ್ತಿದ್ದೆ. ಈಗ ನಾನು ಇಸ್ಲಾಮ್ ಧರ್ಮದೊಳ ಪ್ರವೇಶಿಸಿರುವಾಗ ನನಗೆ ನಮಾಝ್ ಮತ್ತು ಕುರ್‌ಆನ್ ಪಾರಾಯಣ ಎರಡನ್ನೂ ಅರಬಿ ಭಾಷೆಯಲ್ಲಿ ಮಾಡಬೇಕಾಗುತ್ತದೆ. ಈ ಬದಲಾವಣೆಯಿಂದಾಗಿ ನನ್ನ ಅನುಭವವೇನೆಂದರೆ ಅರಬೀ ಭಾಷೆಯಿಂದಾಗಿ - ಅದು ಎಷ್ಟೇ ಸುಂದರವಾಗಿದ್ದರು ಸರಿಯೇ - ನಾನು ಒಂದು ದೊಡ್ಡ ಆಧ್ಯಾತ್ಮಿಕ ಅನುಭವದಿಂದ ವಂಚಿತನಾಗಿದ್ದೇನ*

  ತಾವು ನನಗೆ ಈ ಕುರಿತು ಮಾರ್ಗದರ್ಶನ ಮಾಡಿದರೆ ನಾನು ಅತ್ಯಂತ ಕೃತಜ್ಞನಾಗಿರುವೆನು ನಾನು ನಮಾಝನ್ನು ಇಂಗ್ಲಿಷ್‌ನಲ್ಲಿ ನಿರ್ವಹಿಸಬಹುದೇ? ನನ್ನ ಮನಸ್ಸಿನ ಸಂತೃಪ್ತಿಗಾ ಈ ವಿಷಯದಲ್ಲಿ ತಮ್ಮ ವಿಚಾರವನ್ನು ಪ್ರಕಟಿಸಿರುವಂತಹ ಇಸ್ಲಾಮಿ ವಿದ್ವಾಂಸರನ್ನು ತಿಳಿಸಬೇಕಾಗಿ ವಿನಂತಿ.

  ಇದು ನನ್ನ ವೈಯಕ್ತಿಕ ಸಮಸ್ಯೆಯಾಗಿದ್ದರೂ ಇದು ವಿಶೇಷವಾಗಿ ಯುರೋಪ್‌ನಲ್ಲಿ ಅನೇಕ ಮುಸ್ಲಿಮೇತರರು ಇಸ್ಲಾಮ್ ಸ್ವೀಕರಿಸುವ ಹಾದಿಯ ತೊಡಕಾಗಿದೆಯೆಂದ ನಾನು ಧೈರ್ಯದಿಂದ ಹೇಳಬಲ್ಲೆ. ಈ ವಿಷಯದಲ್ಲಿ ತಮ್ಮನ್ನು ಸಂಪರ್ಕಿಸಲು ಲಂಡನ್‌ನ ನನ್ನ ಕೆಲವು ಮಿತ್ರರು ಸಲಹೆ ನೀಡಿದರು. ತಮ್ಮ ಮಾರ್ಗದರ್ಶನವು ನನಗ ಅತ್ಯಧಿಕ ಉಪಯುಕ್ತವಾದೀತೆಂದು ನಾನು ನಂಬುತ್ತೇನೆ.

○ ನಿಮ್ಮ ಇಸ್ಲಾಮ್ ಸ್ವೀಕಾರದ ವಿಷಯ ತಿಳಿದು ನನಗೆ ಬಹಳ ಸಂತೋಷವಾಯಿತು. ನಮ್ಮ ಓರ್ವ ಸಹೋದರನನ್ನು ತನ್ನ ಮಾರ್ಗದರ್ಶನದ ಜ್ಯೋತಿಯಿಂದ ಅನುಗ್ರಹಿಸಿದುದಕ್ಕೆ ನಾನು ಅಲ್ಲಾಹನಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಅವನು ನಿಮಗೆ ಸತ್ಯಧರ್ಮದ ಇನ್ನಷ್ಟು ಮಾರ್ಗದರ್ಶನವನ್ನೂ ದೃಢಚಿತ್ತತೆಯನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ನಿಮಗ ಧರ್ಮದ ವಿಧಿಗಳನ್ನು ತಿಳಿಯುವಲ್ಲಿ ನೆರವಾಗುವುದು ಎಷ್ಟರ ಮಟ್ಟಿಗೆ ನನ್ನಿಂದ ಸಾಧ್ಯವೋ

ನಿಷ್ಟರ ಮಟ್ಟಿಗೆ ಮಾಡಲು ನಾನು ಸಸಂತೋಷ ಸಿದ್ಧನಿದ್ದೇನೆ. ನೀವು ಬಯಸಿದಾಗಲೆಲ್ಲಾ ನನ್ನ ಸೇವೆಯನ್ನು ಪಡಕೊಳ್ಳಬಹುದಾಗಿದೆ.

ನಮಾಝ್‌ನ ಭಾಷೆಯ ಕುರಿತು ನೀವು ಕೇಳಿದ ಪ್ರಶ್ನೆಯ ಉತ್ತರವೇನೆಂದರೆ ನಮಾಝ್ ಕೇವಲ ಅರಬಿ ಭಾಷೆಯಲ್ಲಿ ಮಾತ್ರ ನಿರ್ವಹಿಸಬೇಕಾಗಿದೆ. ಏಕೆಂದರೆ ಕುರ್‌ಆನ್ ಪಠಣವು ನಮಾಝ್‌ನ ಅತ್ಯಂತ ಪ್ರಾಮುಖ್ಯ ಅಂಗವಾಗಿದೆ. ಕುರ್‌ಆನ್ ಅರಬೀ ಭಾಷೆಯಲ್ಲಿ ಅವತೀರ್ಣಗೊಂಡಿದೆ. ಅದರ ತರ್ಜುಮೆ ಎಷ್ಟೇ ಸರಿಯಾಗಿದ್ದರೂ ಅದು ಕುರ್‌ಆನ್ ಆಗಲಾರದು. ಅದನ್ನು ಅಲ್ಲಾಹನ ವಾಣಿ ಎನ್ನುವುದು ಸಾಧ್ಯವಲ್ಲ. ನಮಾಝ್‌ನಲ್ಲಿ ಪಠಿಸಲಾಗುವ ಇತರ ವಿಷಯಗಳನ್ನು ಪ್ರವಾದಿ(ಸ) ನಿಶ್ಚಯಿಸಿದ್ದಾರೆ. ಪ್ರವಾದಿ(ಸ) ಯಾವ ಭಾಷೆಯಲ್ಲಿ ಅವುಗಳನ್ನು ಕಲಿಸಿರುವರೋ ಅದೇ ಭಾಷೆಯಲ್ಲಿ ಅವುಗಳನ್ನು ಪಠಿಸಬೇಕು. ಇತರ ಭಾಷೆಗಳ ಪದಗಳು ಮೊದಲನೆಯದಾಗಿ ಅದರ ಸರಿಯಾದ ಅರ್ಥವನ್ನೂ ನೀಡಲಾರವು. ಸ್ವಲ್ಪ ಮಟ್ಟಿಗೆ ನೀಡಿದರೂ ಅದು ಪ್ರವಾದಿ(ಸ) ಅವರು ಕಲಿಸಿದ ಪದಗಳಿಗೆ ಪರ್ಯಾಯವಾಗಲಾರವು. ಆದ್ದರಿಂದ ಆರಂಭದಿಂದ ಇಂದಿನ ತನಕ ಎಲ್ಲಾ ಕರ್ಮಶಾಸ್ತ್ರ ಪಂಡಿತರ ಒಮ್ಮತಾಭಿಪ್ರಾಯ ಪ್ರಕಾರ ನಮಾಝನ್ನು ಅರಬಿ ಭಾಷೆಯಲ್ಲೇ ನಿರ್ವಹಿಸಬೇಕು. ಕುರ್‌ಆನ್‌ನ ಮೂಲ ಪದಗಳ ಸ್ಥಾನದಲ್ಲಿ ಅದರ ತರ್ಜುಮೆ ಓದುವುದಾಗಲೀ ಪ್ರವಾದಿ(ಸ) ಅವರು ಕಲಿಸಿದ ಪದಗಳನ್ನು ಪರಿವರ್ತಿಸುವುದಾಗಲೀ ಸಲ್ಲದು.

ಆದರೆ ಅರಬಿ ಅಲ್ಲದ ವ್ಯಕ್ತಿಯೊಬ್ಬ ಇಸ್ಲಾಮ್ ಧರ್ಮ ಸ್ವೀಕಾರ ಮಾಡಿದರೆ ಹಾಗೂ ತಕ್ಷಣವೇ ಕುರ್‌ಆನ್ ಮತ್ತು ಇತರ ನಮಾಝ್‌ನ ದಿಕ್ರ್‌ಗಳನ್ನು ಪಠಿಸಲು ಸಮರ್ಥನಾಗದಿದ್ದರೆ ಏನು ಮಾಡಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಇಮಾಮ್ ಅಬೂಹನೀಫಾ(ರ) ಅವರ ಶಿಷ್ಯರಾದ ಇಮಾಮ್ ಅಬೂ ಯೂಸುಫ್ ಮತ್ತು ಇಮಾಮ್ ಮುಹಮ್ಮದ್(ರ) ಅವರ ಪ್ರಕಾರ ಅಂತಹ ವ್ಯಕ್ತಿ ತನ್ನ ಭಾಷೆಯಲ್ಲಿ ಅವುಗಳ ತರ್ಜುಮೆ ಓದಬಹುದು. ಆದರೆ ಅವನು ಆದಷ್ಟು ಬೇಗ ಅರಬೀ ಭಾಷೆಯಲ್ಲೇ ನಮಾಝ್ ಮಾಡಲು ಪ್ರಯತ್ನಿಸಬೇಕು. ಇಮಾಮ್ ಅಬೂಹನೀಫಾ(ರ) ಅವರು ಮೊದಲು ಇಂತಹ ವ್ಯಕ್ತಿ ಅರಬಿ ಭಾಷೆಯನ್ನು ಉಚ್ಚರಿಸಲು ಶಕ್ತನಾಗಿದ್ದರೂ ಆತನಿಗೆ ಅರಬಿ ಅಲ್ಲದ ಭಾಷೆಯಲ್ಲಿ ನಮಾಝ್ ಮಾಡುವುದು ಧರ್ಮಸಮ್ಮತವೆಂಬ ಅಭಿಪ್ರಾಯ ಹೊಂದಿದ್ದರು. ಆದರೆ ಅನಂತರ ಅವರು ತಮ್ಮ ಅಭಿಪ್ರಾಯವನ್ನು ಬದಲಿಸಿ ಅವರ ಇಬ್ಬರು ಶಿಷ್ಯರಾದ ಇಮಾಮ್ ಅಬೂ ಯೂಸುಫ್ ಮತ್ತು ಇಮಾಮ್ ಮುಹಮ್ಮದ್(ರ) ಅವರ ಅಭಿಪ್ರಾಯವನ್ನೇ ತಾಳಿದರು. ಆದರೆ ಇಮಾಮ್ ಶಾಫಿಈ(ರ) ಅವರ ಅಭಿಪ್ರಾಯದಂತೆ ನಮಾಝನ್ನು ಯಾವ ಸ್ಥಿತಿಯಲ್ಲೂ ಅರಬಿ ಅಲ್ಲದ ಭಾಷೆಯಲ್ಲಿ ನಿರ್ವಹಿಸುವಂತಿಲ್ಲ. ಅರಬಿ ಉಚ್ಚಾರ ಮಾಡಲು

ಸಾಧ್ಯವಿಲ್ಲದವನು ನಮಾಝ್‌ನಲ್ಲಿ 'ಸುಬ್‌ಹಾನಲ್ಲಾಹ್' 'ಅಲ್‌ಹಮ್ದುಲಿಲ್ಲಾಹ್' ಇತ್ಯಾದಿ ಸಂಕ್ಷಿಪ್ತ ಪದಗಳನ್ನು ಉಚ್ಚರಿಸುತ್ತಿರಬೇಕು ಮತ್ತು ಆದಷ್ಟು ಬೇಗ ಅರಬೀ ಭಾಷೆಯಲ್ಲೇ ನಮಾಝ್ ಮಾಡಲು ಸಮರ್ಥನಾಗುವಂತೆ ಪ್ರಯತ್ನಿಸಬೇಕು. (ನೀವು ಈ ವಿಷಯದ ಸಂಶೋಧನೆ ನಡೆಸ ಬಯಸುವುದಾದರೆ 'ಹಿದಾಯಾ'ದ ಪ್ರಖ್ಯಾತ ವ್ಯಾಖ್ಯಾನ ಫತ್ಹುಲ್ ಕದೀರ್ ಭಾ. 1, ಪು. 199-201; ಇಮಾಮ್ ಸರ್‌ಖಸಿಯವರ ಅಲ್ ಮಬ್‌ಸೂತ್ ಭಾಗ- 1, ಪು. 37 ಮತ್ತು ಬಝ್‌ದವಿಯವರ ಕಶ್‌ಫುಲ್ ಅಸ್‌ರಾರ್ ಪು. 25 ನೋಡಿರಿ)

ಒಬ್ಬ ವ್ಯಕ್ತಿಗೆ ತಿಳಿಯದ ಭಾಷೆಯಲ್ಲಿ ನಮಾಝ್ ಮಾಡುವುದು ಮತ್ತು ಅದರ ಪದಗಳನ್ನು ಮಾತ್ರ ಹೇಳುವುದು ಬಾಹ್ಯ ನೋಟಕ್ಕೆ ವಿಚಿತ್ರವೆನಿಸುತ್ತದೆ. ಮೇಲ್ನೋಟಕ್ಕೆ ಇದು ಅಸಹಜವಾಗಿ ಕಾಣಿಸುತ್ತದೆ. ಆದರೆ ನೀವು ಸ್ವಲ್ಪ ಆಳವಾಗಿ ಚಿಂತಿಸಿದರೆ ಇದರಲ್ಲಿ ದೊಡ್ಡ ಔಚಿತ್ಯಗಳಿವೆಯೆಂದು ನಿಮಗೆ ಮನವರಿಕೆಯಾದೀತು.

ಒಂದು ಧರ್ಮವು ತನ್ನ ಮೂಲ ರೂಪದಲ್ಲಿ ಉಳಿಯಬೇಕಾದರೆ ಅದರ ಶಿಕ್ಷಣವು ತನ್ನ ಮೂಲಭಾಷೆಯಲ್ಲಿ ಸುರಕ್ಷಿತವಾಗಿರಬೇಕು. ಒಂದು ಭಾಷೆಯ ಅನುವಾದವು ಇನ್ನೊಂದು ಭಾಷೆಯಲ್ಲಾದರೆ ಅದು ಎಂದೂ ಮೂಲದ ಪರ್ಯಾಯವಾಗಲಾರದು. ಒಂದು ಭಾಷೆಯ ಮೂಲದ ಪೂರ್ಣ ಜೀವಾಳ ಮತ್ತು ಪರಿಪೂರ್ಣ ಅರ್ಥವನ್ನು ಇತರ ಭಾಷೆಗೆ ವರ್ಗಾಯಿಸುವುದು ಕೂಡಾ ಅಸಾಧ್ಯ. ಅನುವಾದವನ್ನು ಪ್ರತಿಯೊಬ್ಬನೂ ತನ್ನ ತಿಳುವಳಿಕೆಯ ಆಧಾರದಲ್ಲೇ ಮಾಡಬಲ್ಲನು. ಇಬ್ಬರು ಅನುವಾದಕರ ಅನುವಾದಗಳು ಎಂದೂ ಸಮಾನವಾಗಿರಲಾರವು. ಇದನ್ನು ಮಾನವಕೃತ ಗ್ರಂಥಗಳ ತರ್ಜುಮೆಯಲ್ಲಿ ನಾವು ದಿನನಿತ್ಯ ನೋಡುತ್ತಿರುತ್ತೇವೆ. ಹಾಗಿರುವಾಗ ಅಲ್ಲಾಹನ ವಾಣಿ ಮತ್ತು ಪ್ರವಾದಿ ಪದಗಳನ್ನು ಪೂರ್ಣ ಜೀವಾಳ ಮತ್ತು ಅರ್ಥದೊಂದಿಗೆ ಬೇರೆ ಭಾಷೆಗೆ ವರ್ಗಾಯಿಸುವುದು ಹೇಗೆ ಸಾಧ್ಯ? ಆ ಅನುವಾದವನ್ನು ಮೂಲದ ಪರ್ಯಾಯವೆಂದು ಹೇಳಬಹುದೇ?

ಲೋಕದ ಧರ್ಮಗಳ ಅವನತಿಯ ಒಂದು ದೊಡ್ಡ ಕಾರಣ ಅವುಗಳ ಮೂಲ ಗ್ರಂಥಗಳು ತಮ್ಮ ಮೂಲಭಾಷೆಯಲ್ಲಿ ಸುರಕ್ಷಿತವಾಗಿಲ್ಲದಿರುವುದಾಗಿದೆ. ಅವುಗಳ ಅನುಯಾಯಿಗಳು ಪೂರ್ಣವಾಗಿ ವಿಭಿನ್ನ ಭಾಷೆಗಳ ಬೇರೆ ಬೇರೆ ತರ್ಜುಮೆಗಳನ್ನು ಅವಲಂಬಿಸಿದ್ದಾರೆ. ಅವುಗಳಲ್ಲಿ ಏಕರೂಪತೆಯಿಲ್ಲ. ಅವುಗಳಲ್ಲಿ ಆಗಾಗ ತಿದ್ದುಪಡಿಗಳಾಗುತ್ತಿರುತ್ತವೆ. ಮುಸ್ಲಿಮರ ಧರ್ಮದ ಬುನಾದಿಯು ಯಾವ ಗ್ರಂಥದ ಮೇಲಿದೆಯೋ ಆ ಗ್ರಂಥವು ತನ್ನ ಮೂಲ ಭಾಷೆಯಲ್ಲಿದೆ ಮತ್ತು ಆ ಪ್ರವಾದಿ(ಸ) ಅವರ ಬೋಧನೆಗಳು ಅವರು ನೀಡಿದ ಭಾಷೆಯಲ್ಲೇ ಸುರಕ್ಷಿತವಿದೆ ಎಂಬುದು ಮುಸ್ಲಿಮರ ದೊಡ್ಡ ಸೌಭಾಗ್ಯವಾಗಿದೆ. ನಾವು ಈಗ ಆ ಅನುಗ್ರಹದ ಬೆಲೆ ಅರಿಯದಿದ್ದರೆ ಮತ್ತು ನಮ್ಮ ಧರ್ಮದ ಬುನಾದಿಯನ್ನೂ ತರ್ಜುಮೆಗಳ ಮೇಲೆ ಇಡುವುದಕ್ಕೆ ಆರಂಭಿಸಿದರೆ ಅದು ನಮ್ಮ

ಪಾಲಿನ ದೊಡ್ಡ ಅವಿವೇಕವಾದೀತು. ನಾವು ದಿನಕ್ಕೆ ಐದು ಸಲ ಮಾಡುವ ನಮಾಝ್ ನಮ್ಮನ್ನು ಕುರ್ಆನ್ ಮತ್ತು ಪ್ರವಾದಿ(ಸ) ಅವರ ಬೋಧನೆಗಳೊಂದಿಗೆ ಜೋಡಿಸುವ ಅತಿದೊಡ್ಡ ಕೊಂಡಿಯಾಗಿದೆ. ಅದರ ಭಾಷೆಯನ್ನು ಬದಲಿಸಿದ ಮೇಲೆ ನಮ್ಮ ಧರ್ಮದ ಮೂಲ ಸ್ತೋತ್ರಗಳ ಜತೆ ನಮ್ಮ ಸಂಬಂಧ ಬಾಕಿಯಿರುವುದೇ ಕಷ್ಟ.

ಒಂದು ಧರ್ಮವು ಸುರಕ್ಷಿತವಾಗಿರಬೇಕಾದರೆ ಅದರ ಆರಾಧನೆಗಳು ತಮ್ಮ ಮೂಲ ಸ್ವರೂಪದಲ್ಲಿ ಬಾಕಿ ಇರಬೇಕು. ಜನರಿಗೆ ತಮ್ಮ ಇಷ್ಟ ಪ್ರಕಾರ ಅದರಲ್ಲಿ ಪರಿವರ್ತನೆ ಮಾಡಲು ಸ್ವಾತಂತ್ರ್ಯವಿರಬಾರದು. ಧರ್ಮದ ಅತ್ಯಂತ ಮುಖ್ಯ ಭಾಗ ಅದರ ಆರಾಧನೆಗಳಾಗಿವೆ. ಅವುಗಳ ಅನುಸರಣೆ, ಗೌರವ ಮತ್ತು ಪಾಲನೆಯಿಂದ ಇತರ ಧಾರ್ಮಿಕ ಬೋಧನೆಗಳಿಗೆ ಜಾರಿಹೋಗುವ ಸಾಮರ್ಥ್ಯ ಸಿಗುತ್ತದೆ. ಈ ಆರಾಧನೆಗಳನ್ನು ಯಾವ ವಸ್ತು ಧರ್ಮಾನುಯಾಯಿಗಳಿಗೆ ಪಾವನ, ಗೌರವಾರ್ಹ ಮತ್ತು ಅನುಕರಣೀಯಗೊಳಿಸುತ್ತದೋ ಅದು ಅದರ ಪ್ರತಿಯೊಂದು ಅಂಗ ಮತ್ತು ಪ್ರತಿಯೊಂದು ಪದವು ಅವರು ನಂಬುವ ಆರಾಧ್ಯನು ನಿಶ್ಚಯಿಸಿದ್ದಾಗಿದೆ ಎಂಬ ವಿಶ್ವಾಸವಾಗಿದೆ. ಆರಾಧನೆಗಳ ರೂಪ ಮತ್ತು ಅವುಗಳ ಪದಗಳನ್ನು ನಿರ್ಣಯಿಸುವಲ್ಲಿ ಜನರ ಸ್ವಂತ ಅಭಿಪ್ರಾಯ ಮತ್ತು ಇಚ್ಛೆ ನಡೆಯತೊಡಗಿದರೆ ಈ ವಿಶ್ವಾಸವು ಕೊನೆಗೊಳ್ಳುವುದು. ಈ ವಿಶ್ವಾಸವು ಚಂಚಲವಾಗುತ್ತಲೇ ಇಡೀ ಧರ್ಮವು ವಿರೂಪವಾಗುವ ಮತ್ತು ಅದರ ವಿಧಿಗಳ ಅನುಸರಣೆಯಿಂದ ಜನರು ಮುಕ್ತರಾಗುವ ದಾರಿ ತೆರೆಯುತ್ತದೆ.

ಮೂರನೆಯ ಮುಖ್ಯ ವಿಷಯವೇನೆಂದರೆ ಇಡೀ ಲೋಕದ ಎಲ್ಲ ಜನಾಂಗ, ಎಲ್ಲ ದೇಶ ಮತ್ತು ಎಲ್ಲ ಭಾಷೆಯವರಿಗೆ ಅದಾನ್ ಮತ್ತು ನಮಾಝ್‌ನ ಭಾಷೆ ಒಂದೇ ಆಗಿರುವುದು. ಲೋಕದ ಎಲ್ಲ ಮುಸ್ಲಿಮರನ್ನು ಒಂದು ಸಮುದಾಯ ಮತ್ತು ಒಂದು ಜಾಗತಿಕ ಬಂಧುತ್ವದಲ್ಲಿ ಬೆಸೆಯುವ ಮಹಾನ್ ಬೆಸುಗೆಯಾಗಿದೆ. ನೀವು ಭೂಮುಖದ ಯಾವ ಮೂಲೆಗೆ ಹೋದರೂ ಅದಾನ್‌ನ ಕರೆ ಕೇಳುತ್ತಲೇ ಅಲ್ಲಿ ನಿಮ್ಮ ಸಮುದಾಯದ ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹ ಇದೆ ಮತ್ತು ಅದು ನಿಮ್ಮನ್ನು ನಮಾಝ್‌ಗೆ ಕರೆಯುತ್ತಿದೆ ಎಂದು ನಿಮಗೆ ತಿಳಿಯುತ್ತದೆ. ನಮಾಝ್‌ಗೆ ನೀವು ಎಲ್ಲಿ ಹೋದರೂ ಒಂದೇ ಪರಿಚಿತ ಸ್ವರವನ್ನು ಕೇಳುವಿರಿ. ನೀವು ಲಂಡನ್‌ನಲ್ಲಿರಲಿ, ನೈಜೀರಿಯಾದಲ್ಲಿರಲಿ ಅಥವಾ ಇಂಡೋನೇಶ್ಯಾದಲ್ಲಿರಲಿ. ನಿಮ್ಮ ಮುಸ್ಲಿಮ್ ಸಂಗಾತಿಯ ಭಾಷೆಯ ಒಂದೇ ಒಂದು ಪದ ನಿಮಗೆ ತಿಳಿಯದೆ ಇರಲಿ ಆದರೆ ನಮಾಝ್‌ನಲ್ಲಿ ನೀವು ಅವರ ಮಟ್ಟಿಗಾಗಲೀ ಅವರು ನಿಮ್ಮ ಮಟ್ಟಿಗಾಗಲೀ ಅಪರಿಚಿತರಾಗಿರಲಾರರು. ಇದಕ್ಕೆ ಬದಲಾಗಿ ನಮಾಝನ್ನು ಪ್ರತಿಯೊಬ್ಬನೂ ತನ್ನ ಮಾತೃಭಾಷೆಯಲ್ಲಿ ನಿರ್ವಹಿಸತೊಡಗಿದರೆ ಮತ್ತು ಅದಾನ್ ಕೂಡಾ ಪ್ರತಿಯೊಂದು ಕಡೆ ಅಲ್ಲಿನ ಭಾಷೆಯಲ್ಲಿ ಕೊಡಲಾರಂಭಿಸಿದರೆ ಈ ಜಾಗತಿಕ ಸಮುದಾಯವು

ಅಸಂಖ್ಯ ಸಣ್ಣ ಸಣ್ಣ ಗುಂಪುಗಳಾಗಿ ಹರಿಹಂಚಾಗುವುದು. ಕೇವಲ ಭಾರತೀಯ ಉಪಭೂಖಂಡದಲ್ಲಿ ಮುನ್ನೂರಕ್ಕಿಂತಲೂ ಅಧಿಕ ಭಾಷೆಗಳಿವೆ. ಒಬ್ಬ ಮುಸ್ಲಿಮನು ತ ಪ್ರದೇಶವನ್ನು ಬಿಟ್ಟು ಹೊರಗೆ ಹೋದರೆ ಅದಾನನ್ನು ಗುರುತಿಸುವುದಾಗಲೀ ಇತ ಮುಸ್ಲಿಮರ ಜತೆ ಸೇರಿ ನಮಾಝ್ ಮಾಡುವುದಾಗಲೀ ಅವನಿಗೆ ಸಾಧ್ಯವಾಗದು. ಲೋಕ ಇತರ ದೇಶಗಳಲ್ಲಿಯೂ ಇದೇ ಪರಿಸ್ಥಿತಿ ಉಂಟಾಗಬಹುದು. ಹಜ್ಜ್‌ನ ಸಂದರ್ಭದಲ್ಲಂತ ವಿಚಿತ್ರ ಪರಿಸ್ಥಿತಿ ತಲೆದೋರಬಹುದು. ಇದು ಮುಸ್ಲಿಮರಲ್ಲಿ ಚರ್ಚ್‌ಗಳ ರಾಷ್ಟ್ರೀಕರಣದಂತ ಪರಿಸ್ಥಿತಿಯ ಆರಂಭವಾಗುವುದು. ಕ್ರೈಸ್ತ ಜಗತ್ತು ಅದರಲ್ಲಿ ಸಿಲುಕಿ ಪರಸ್ಪರ ಕಚ್ಚಾಡು ವಿಭಿನ್ನ ವರ್ಗಗಳಾಗಿ ಹರಿ ಹಂಚಾಗಿದೆ. ರಾಷ್ಟ್ರೀಯತೆ, ಜನಾಂಗೀಯತೆ, ವರ್ಣ ಮತ್ತ ಭಾಷೆಯ ಆಧಾರದಲ್ಲಿ ಹರಿಹಂಚಾಗಿ ಹೋಗಿರುವ ಮಾನವತೆಗೆ ಇಸ್ಲಾಮ್ ಜಾಗತಿ ಏಕತೆಯ ಎಷ್ಟು ದೊಡ್ಡ ಮಾಧ್ಯಮವನ್ನು ನೀಡಿದೆ. ಇಡೀ ಲೋಕಕ್ಕೆ ಅರಬೀ ಅದಾನ್ ಅರಬೀ ನಮಾಝ್, ಅರಬೀ ಕಲಿಮ ಮತ್ತು ಅರಬೀ ಭಾಷೆಯ ಕೆಲವು ಚಿರಪರಿಚಿ ಹಾಗೂ ಸಮಾನ ಧಾರ್ಮಿಕ ಪಾರಿಭಾಷಿಕಗಳ ರೂಪದಲ್ಲಿ ನಿಮಗೆ ಕಾಣುತ್ತಿರುವ ಅನುಗ್ರಹದ ಪ್ರಜ್ಞೆ ನಿಮಗಿಲ್ಲವೇ? ಈ 'ಅಧಿಕೃತ ಭಾಷೆ'ಯ ಕಾರಣದಿಂದಾಗಿಯೆ ಮುಸ್ಲಿಮನು ಎಲ್ಲ ಕಡೆ ಮುಸ್ಲಿಮರನ್ನು ಗುರುತಿಸುತ್ತಾನೆ ಮತ್ತು ಅನಾದಿಯಿಂದಲೇ ಅವ ಆತ್ಮಗಳ ಮಧ್ಯೆ ಯಾವುದೋ ನಿಕಟ ಸಂಬಂಧವಿರುವಂತೆ ಅವನ ಜತೆ ಬೆರೆಯುತ್ತಾನ

ನಮಾಝನ್ನು ಅರ್ಥ ಅರಿತು ನಿರ್ವಹಿಸುವ ಅಗತ್ಯದ ಬಗ್ಗೆ ಹೇಳುವುದಾದ ಅದೊಂದು ನಿರಾಕರಿಸಲಾಗದ ಅಗತ್ಯವಾಗಿದೆ. ಆದರೆ ಈ ಅಗತ್ಯವನ್ನು ನಾನು ಮೇ ಸೂಚಿಸಿರುವ ದೊಡ್ಡ ನಷ್ಟವನ್ನು ಸಹಿಸದೆಯೇ ಪೂರ್ತಿಗೊಳಿಸಬಹುದಾಗಿದೆ. ನಮಾಝ್ ಪವಿತ್ರ ಕುರ್‌ಆನ್‌ನ ಕೆಲವೇ ಸೂರಃಗಳನ್ನು ಕಲಿತರೆ ಸಾಕು. ಕುರ್‌ಆನ್‌ನ ಹೊರತು ಏನೆಲ್ಲ ದಿಕ್ರ್‌ಗಳನ್ನು ನಮಾಝ್‌ನಲ್ಲಿ ಹೇಳಲಾಗುತ್ತದೋ ಅದು ಕೇವಲ ಕೆಲವೇ ಪದಗಳಿಂ ಕೂಡಿದೆ. ಅವುಗಳನ್ನು ಅರ್ಥಸಹಿತ ಕಲಿಯುವುದು ಕಷ್ಟದ ಕೆಲಸವೇನಲ್ಲ. ಈ ರೀತಿ ನೀವ 'ಆಧ್ಯಾತ್ಮಿಕ ಮೌಲ್ಯ'ವೆಂದು ಹೇಳಿರುವಂತಹ ಅಗತ್ಯವು ಪೂರ್ಣಗೊಳ್ಳುತ್ತದೆ.

(ತರ್ಜುಮಾನುಲ್ ಕುರ್‌ಆನ್: ಅಕ್ಟೋಬರ್, ನವೆಂಬರ್ 1957,

35

ಬಿಟ್ಟು ಹೋದ ಕಡ್ಡಾಯ ವಿಧಿಗಳ ಸಂದಾಯ.

ಒಬ್ಬ ಮೌಲವಿಯವರು ಒಂದೆಡೆ ಹೀಗೆ ಬರೆದಿರುವರು: "ಬಿಟ್ಟು ಹೋದ ನಮಾಝ್‌ಗಳನ್ನು ಆದಷ್ಟು ಬೇಗ ಸಂದಾಯ ಮಾಡುವುದು ಕಡ್ಡಾಯವಾಗಿದೆ. .. ಫರ್ಝ್ ನಮಾಝ್ ಉಳಿದಿರುವಾಗ ಯಾವುದೇ ಐಚ್ಛಿಕ ನಮಾಝ್ ಸ್ವೀಕೃತವಾಗದು.

ಈ ನಿಯಮದ ವೈಚಾರಿಕತೆಯ ಬಗೆಗೆ ಯವುದೇ ಪುರಾವೆಯ ಅಗತ್ಯವಿಲ್ಲ. ಆದರೆ ಶರೀಅತ್ ನಮ್ಮ ವೈಚಾರಿಕ ಸಿದ್ಧಾಂತವನ್ನು ಅಂಗೀಕರಿಸಿ ಅದರ ಆಧಾರದಲ್ಲಿ ತನ್ನ ವಿಧಿಗಳನ್ನು 'ನಿರ್ಧರಿಸಬೇಕೆಂದಿಲ್ಲ. ಮುಸ್ಲಿಮರಲ್ಲಿ ಹೆಚ್ಚಿನವರ ಸ್ಥಿತಿ ಏನೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದ ಒಂದು ಅವಧಿಯನ್ನು ಅಜ್ಞಾನದಲ್ಲಿ ಕಳೆದಿರುತ್ತಾನೆ. ಆ ಕಾಲದಲ್ಲಿ ಅವನಿಗೆ ನಮಾಝ್ ಮತ್ತು ಉಪವಾಸ ವ್ರತದ ಪರಿವೆಯೇ ಇದ್ದಿರುವುದಿಲ್ಲ. ಆದ್ದರಿಂದ ನಮಾಝ್ ಕಝಾ ಆಗಿರದವರು ಬಹಳ ವಿರಳವೇ ಇದ್ದಾರೆ.

ಈ ಸಮಸ್ಯೆಯಿಂದ ಈ ಕೆಳಗಿನ ಪ್ರಶ್ನೆಗಳು ಉದ್ಭವಿಸುತ್ತದೆ.

ಫರ್ಝ್ ನಮಾಝ್‌ನ ಕಝಾ ಬಾಕಿ ಇರುವಾಗ ಐಚ್ಛಿಕ ನಮಾಝ್‌ಗಳು ಸ್ವೀಕೃತವಾಗಲಾರವೇ?

ಫರ್ಝ್ ನಮಾಝ್‌ನ ಕಝಾ ಬಾಕಿ ಇರುವವರು ತಮ್ಮ ಫರ್ಝ್ ನಮಾಝ್‌ಗಳ ಜತೆಗೆ ನಿರ್ವಹಿಸುವ ಐಚ್ಛಿಕ ನಮಾಝ್‌ಗಳ ವಿಧಿಯೇನು? ಅವು ವ್ಯರ್ಥವಾಗುವವೇ ಅಥವಾ ಬಿಟ್ಟು ಹೋದ ಫರ್ಝ್ ನಮಾಝ್‌ನ ಸಂದಾಯವೆಂದು ಪರಿಗಣಿಸಲ್ಪಡುವವೇ?

ಇದೊಂದು ಸಾಮಾನ್ಯ ಮತ್ತು ಸಾರ್ವತ್ರಿಕ ನಿಯಮವಾಗಿದೆ. ಅದನ್ನು ನಮಾಝ್‌ಗೆ ಮಾತ್ರ ಸೀಮಿತಗೊಳಿಸುವಂತಿಲ್ಲ. ಹಾಗಿರುವಾಗ ಉಪವಾಸ ವ್ರತ ಮತ್ತು ಇತರ ಫರ್ಝ್‌ಗಳಿಗೂ ಇದೇ ನಿಯಮ ಅನ್ವಯವಾಗುವುದೇ?

ಮುಖ್ಯವಾಗಿ ಝಕಾತ್‌ನ ಕುರಿತು ಸ್ಪಷ್ಟೀಕರಣ ನೀಡಿರಿ. ಹೆಚ್ಚಿನ ಜನರು ಝಕಾತ್ ನೀಡುವುದಿಲ್ಲ. ಆದರೆ ಐಚ್ಛಿಕ ದಾನ-ಧರ್ಮಗಳನ್ನು ಮಾಡುತ್ತಿರುತ್ತಾರೆ. ಉದಾ: ಬಡವರಿಗೆ ಊಟ ಬಡಿಸುವುದು. ಯಾವುದಾದರೂ ಧಾರ್ಮಿಕ ಕಾರ್ಯಕ್ಕೆ ವಂತಿಗೆ ನೀಡುವುದು, ಭಿಕ್ಷುಕರಿಗೆ ಸಹಾಯ ಮಾಡುವುದು. ಇದೇ ರೀತಿ ನಮ್ಮ ಜಮೀನ್ದಾರರು

ಮತ್ತು ರೈತರು ಉಶ್ರ್(ಕೃಷಿ ಉತ್ಪನ್ನದ ಝಕಾತ್) ನೀಡುವುದಿಲ್ಲ. ಆದರೆ ಬೆ ಕೊಯ್ಯುವ ಸಮಯದಲ್ಲಿ ಸೇರಿದ ಬಡವರಿಗೆ ಏನಾದರೂ ಕೊಟ್ಟು ಬಿಡುತ್ತಾರೆ. ಇಡಿ ವರ್ಷ ಅವರ ಮನೆಗೆ ಬಂದ ಬಡವರಿಗೆ ಮುಷ್ಟಿ ಧಾನ್ಯವನ್ನು ನೀಡುತ್ತಿರುತ್ತಾರೆ. ಹೀ ನೀಡುವಾಗ ಅವರಿಗೆ ಝಕಾತ್ ಅಥವಾ ಉಶ್ರ್‌ನ ಸಂಕಲ್ಪವಿರುವುದಿಲ್ಲ. ಹಾಗೆಯೆ ಅವರು ಝಕಾತ್ ಮತ್ತು ಉಶ್ರ್‌ನ ಲೆಕ್ಕವನ್ನು ಇಟ್ಟಿರುವುದಿಲ್ಲ.

ಈ ರೀತಿಯ ದಾನಗಳ ಧಾರ್ಮಿಕ ವಿಧಿಯೇನು? ಇವೆಲ್ಲಾ ವ್ಯರ್ಥವಾಗುವುದೇ ಅಥವಾ ಅವುಗಳನ್ನು ಝಕಾತ್ ಮತ್ತು ಉಶ್ರ್ ಎಂದು ಪರಿಗಣಿಸಲಾಗುವುದೇ?

ಫರ್ಝ್‌ನ ಕಝಾ ಬಾಕಿಯಿರುವಾಗ ಯಾವುದೇ ಐಚ್ಛಿಕ ಸತ್ಕರ್ಮ ಸ್ವೀಕೃತವಾಗುವುದಿಲ್ಲವೆಂಬ ನಿಯಮಕ್ಕೆ ಪುರಾವೆ ಎಂಬ ರೂಪದಲ್ಲಿ "ಅವನಲ್ಲಿ ಪವಿತ್ರ ವಚನವು ಏರುತ್ತದೆ ಮತ್ತು ಸತ್ಕರ್ಮವು ಅದನ್ನು ಉನ್ನತಗೊಳಿಸುತ್ತದೆ" ಎಂಬ ಅರ್ಥದ ಕುರ್‌ಆನ್ ವಚನವನ್ನು ಮುಂದಿರಿಸುತ್ತಾರೆ. ಇದು ಎಷ್ಟರ ಮಟ್ಟಿ ಸರಿ? ಸತ್ಕರ್ಮವೆಂದರೆ ಫರ್ಝ್ ಆರಾಧನೆಗಳೆಂದೂ ಪವಿತ್ರ ವಚನವೆಂದರೆ ಐಚ್ಛಿ ದಿಕ್ರ್‌ಗಳೆಂದೂ ಯಾವುದಾದರೂ ಹದೀಸ್‌ನಲ್ಲಿ ಬಂದಿದೆಯೇ?

○ ಒಂದು ಸರಿಯಾದ ವಿಧಿಯನ್ನು ತಪ್ಪಾದ ರೀತಿಯಲ್ಲಿ ವಿವರಿಸಿರುವುದೇ ನಿಮ್ಮ ಎಲ್ಲ ಪ್ರಶ್ನೆಗಳು ಉದ್ಭವಿಸಲು ಕಾರಣ. ಯಾವುದೇ ಕರ್ಮವನ್ನು ಸ್ವೀಕರಿಸುವುದೂ ಸ್ವೀಕರಿಸದೆ ಇರುವುದೂ ಮನುಷ್ಯನ ಅಧಿಕಾರದಲ್ಲಿರುವ ವಿಷಯವಲ್ಲ. ಅದು ಅಲ್ಲಾಹನ ಅಧಿಕಾರದಲ್ಲಿರುವ ವಿಷಯವಾಗಿದೆ. ಒಬ್ಬನ ಮೇಲೆ ಫರ್ಝ್‌ಗಳ ಕಝಾ ಬಾಕಿಯಿದ್ದು ಅವನು ಆ ಕಝಾ ಸಂದಾಯ ಮಾಡುವುದರ ಜತೆಗೆ ಪ್ರಾಮಾಣಿಕವಾಗಿ ಸುನ್ನತ್ ಮತ್ತು ನಫಿಲ್‌ಗಳನ್ನು ಮಾಡಿದರೆ ಅಲ್ಲಾಹನು ಅವನ ಈ ಪ್ರಾಮಾಣಿಕ ಕರ್ಮವನ್ನು ಸ್ವೀಕರಿಸಲಾರನೆಂದು ಹೇಳಲು ನಮ್ಮ ಬಳಿ ಯಾವುದೇ ಪುರಾವೆಯಿಲ್ಲ. ಒಂದು ವೇಳೆ ಫರ್ಝ್‌ನ ಕಝಾ ಸಂದಾಯದ ಬಗ್ಗೆ ಅಸಡ್ಡೆ ತೋರಿ ಸುನ್ನತ್, ನಫಿಲ್‌ಗಳನ್ನು ನಿರ್ವಹಿಸಿದರೆ ಅದು ಅಲ್ಲಾಹನ ಬಳಿ ಸ್ವೀಕೃತವಾಗುವ ನಿರೀಕ್ಷೆಯಿಲ್ಲ. ಏಕೆಂದರೆ ಕಝಾ ಎಂಬುದು ಒಂದು ಸಾಲದಂತಿದೆ. ಸಾಲ ಸಂದಾಯ ಮಾಡದೆ ದಾನ ಧರ್ಮ ಮಾಡುವುದು ನಿರರ್ಥಕ.

ಆದರೆ ಒಬ್ಬರ ಜೀವಮಾನದಲ್ಲಿ ಒಂದು ಕಾಲವು ಅಜ್ಞಾನದಲ್ಲಿ ಕಳೆದಿದ್ದು ಅದರಲ್ಲಿ ಲೆಕ್ಕವಿಲ್ಲದಷ್ಟು ನಮಾಝ್‌ಗಳು ಬಿಟ್ಟು ಹೋಗಿದ್ದರೆ ಅಂತಹವರಿಗೆ ಹಿಂದಿನ ಕಝಾ ಸಂದಾಯ ಮಾಡುವುದು ಮತ್ತು ಸುನ್ನತ್ ನಫಿಲ್‌ಗಳನ್ನು ನೆರವೇರಿಸುವುದು ಕಷ್ಟ ಕಾರ್ಯ. ಇದರಿಂದ ಹೆಚ್ಚಿನ ವೇಳೆ ಆಲಸ್ಯದಿಂದಾಗಿ ಕಝಾ ಸಂದಾಯ ಉಳಿದು ಹೋಗುವ ಸಂಭವವಿದೆ. ಇದಕ್ಕೆ ತದ್ವಿರುದ್ಧವಾಗಿ ಒಬ್ಬನು ಪ್ರತಿಯೊಂದು ವೇಳೆಯ ನಮಾಝ್‌ನ ಜತೆಗೆ ಸುನ್ನತ್ ನಮಾಝ್ ಮಾಡುವ ಬದಲು ಹಿಂದಿನ ಫರ್ಝ್‌ನ ಕಝಾ ಸಂದಾಯ ಮಾಡುವುದು ಬಹಳ ಸುಲಭದ ವಿಧಾನ. ಈ ರೀತಿ ತನ್ನ ಮೇಲಿರುವ ಕಝಾ

ಸಂದಾಯವಾಯಿತು ಎಂಬ ವಿಶ್ವಾಸ ಮೂಡುವ ತನಕವೂ ನಿರ್ವಹಿಸುತ್ತಿರಬೇಕು. ಈ ರೀತಿ ಹೆಚ್ಚು ಕಷ್ಟವಿಲ್ಲದೆ ಒಬ್ಬನು ತನ್ನ ಫರ್ಝ್ ನಮಾಝ್‌ಗಳ ಕಝಾವನ್ನು ಸಂದಾಯ ಮಾಡಬಹುದು.

ನೀವು ನಿರ್ವಹಿಸಿದ ನಮಾಝ್‌ಗಳು ವ್ಯರ್ಥವಾಗುವ ಅಥವಾ ಆಗದಿರುವ ಚಿಂತೆ ಬಿಟ್ಟು ಬಿಡಿ. ಈಗಂತೂ ನಿಮಗೆ ಇದರ ವಿಧಿ ಗೊತ್ತಾಗಿದೆ. ಆದ್ದರಿಂದ ಇನ್ನು ಮುಂದೆ ಸುನ್ನತ್ ಮತ್ತು ನಫಿಲ್ ನಮಾಝ್‌ಗಳ ಬದಲು ಹಿಂದಿನ ಬಿಟ್ಟು ಹೋದ ನಮಾಝ್‌ಗಳ ಕಝಾ ನಿರ್ವಹಿಸಲು ಆರಂಭಿಸಿರಿ.

ಉಪವಾಸ ವ್ರತದ ಕಝಾದ ವಿಧಿಯೂ ಬಿಟ್ಟು ಹೋದ ನಮಾಝ್‌ನಂತೆಯೇ ಆಗಿದೆ. ಯಾರ ಕಡ್ಡಾಯ ಉಪವಾಸ ವ್ರತಗಳು ಬಿಟ್ಟು ಹೋಗಿವೆಯೋ ಆತ ನಫಿಲ್ ಉಪವಾಸ ವ್ರತ ಆಚರಿಸುವ ಬದಲು ಹಿಂದೆ ಬಿಟ್ಟು ಹೋದ ಕಡ್ಡಾಯ ಉಪವಾಸ ವ್ರತವನ್ನು ಸಂದಾಯ ಮಾಡುವುದು ಒಳ್ಳೆಯದು.

ಝಕಾತ್‌ನ ವಿಧಿಯೂ ಇದುವೇ ಆಗಿದೆ. ಒಬ್ಬನ ಮೇಲೆ ಕಡ್ಡಾಯ ಝಕಾತ್ ಕೊಡಬೇಕಾದ ಬಾಧ್ಯತೆಯಿದ್ದು ಆತ ಅದನ್ನು ನೀಡದೆ ಇತರ ದಾನ ಧರ್ಮಗಳನ್ನು ನೀಡಿದರೆ ಅದು ಹೇಗೆ ಸರಿಯಾದೀತು. ಆ ದಾನ-ಧರ್ಮಗಳನ್ನೇ ಅವನು ಝಕಾತ್‌ನ ಲೆಕ್ಕ ಮಾಡಿ ಯಾಕೆ ಕೊಡಬಾರದು? ಸ್ವೀಕರಿಸುವ ಅಥವಾ ವ್ಯರ್ಥಗೊಳಿಸುವ ಅಧಿಕಾರವಂತೂ ಅಲ್ಲಾಹನಿಗೇ ಇದೆ. ಆದರೆ ಒಂದು ವಿಷಯ ಮಾತ್ರ ನಮ್ಮ ಬುದ್ಧಿಗೆ ನಿಲುಕುತ್ತದೆ. ಅದೇನೆಂದರೆ ಕಡ್ಡಾಯ ವಿಧಿಯ ಬಗ್ಗೆ ಅಸಡ್ಡೆ ತೋರಿಸಿ ಐಚ್ಛಿಕ ವಿಧಿಗಳನ್ನು ಮಾಡುವುದಕ್ಕೆ ಅರ್ಥವಿಲ್ಲ. ಇಷ್ಟು ವಿಷಯವೂ ಅಲ್ಲಾಹನಿಗೆ ತಿಳಿಯದೆಂದು ನೀವು ಭಾವಿಸುತ್ತೀರಾ? ನಾನು ಕಡ್ಡಾಯಗೊಳಿಸಿದ್ದಂತೂ ನೀನು ಮಾಡದೆ ನಿನ್ನ ಇಷ್ಟದಂತೆ ಇಷ್ಟೆಲ್ಲಾ ನೀಡಿದುದೇಕೆ? ಎಂದು ಅಲ್ಲಾಹನು ಪ್ರಶ್ನಿಸಿದರೆ ನಿಮ್ಮ ಬಳಿ ಏನು ಉತ್ತರವಿದೆ?

'ಅಲ್ ಕಲಿಮುತ್ತಯ್ಯಿಬು' ಎಂದರೆ 'ನಫಿಲ್ ದಿಕ್ರ್‌ಗಳು ಮತ್ತು 'ಅಮ ಲುಸ್ಸಾಲಿಹ್' ಎಂದರೆ ಫರ್ಝ್‌ಗಳು ಎಂದು ಹೇಳುವ ಯಾವುದೇ ಸಹೀಹ್ ಹದೀಸ್ ನನ್ನ ಗಮನಕ್ಕೆ ಬಂದಿಲ್ಲ. ಹಾಗೆ ಹೇಳಿದವರಲ್ಲೇ ನೀವು ವಿಚಾರಿಸಿ ನೋಡಿ. ಅವರ ಗಮನಕ್ಕೆ ಅಂತಹ ಯಾವುದಾದರೂ ಹದೀಸ್ ಬಂದಿರಲೂ ಬಹುದು. ಆದರೆ ಇಬ್ನು ಅಬ್ಬಾಸ್(ರ) ಅವರು ಇದನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ.- 'ಅಲ್ ಕಲಿಮುತ್ತಯ್ಯಿಬು' ಎಂದರೆ ಅಲ್ಲಾಹನ ದಿಕ್ರ್ ಮತ್ತು 'ಅಮಲುಸ್ಸಾಲಿಹ್' ಎಂದರೆ ಕಡ್ಡಾಯ ವಿಧಿಗಳಾಗಿವೆ. ಯಾರು ಕಡ್ಡಾಯ ವಿಧಿಗಳನ್ನು ನಿರ್ವಹಿಸುವನೋ ಅವನ ಈ ಕರ್ಮವು ಅವನ ದಿಕ್ರ್‌ಗಳನ್ನು ಎತ್ತರಕ್ಕೆ ಏರಿಸುವುದು. ಆದರೆ ಯಾರು ಕೇವಲ ದಿಕ್ರ್‌ಗಳನ್ನು ಮಾಡಿ ಕಡ್ಡಾಯ ವಿಧಿಗಳನ್ನು ನಿರ್ವಹಿಸುವುದಿಲ್ಲವೋ ಅವನ ದಿಕ್ರ್‌ಗಳನ್ನು ತಿರಸ್ಕರಿಸಲಾಗುವುದು ಎಂಬುದೂ ಹ. ಇಬ್ನು ಅಬ್ಬಾಸ್(ರ) ಅವರ ಅಭಿಪ್ರಾಯವೇ ಆಗಿದೆ.

(ತರ್ಜುಮಾನುಲ್ ಖುರ್‌ಆನ್: ಅಕ್ಟೋಬರ್, ನವೆಂಬರ್- 1957)

ಬಿಟ್ಟು ಹೋದ ಕಡ್ಡಾಯ ವಿಧಿಗಳ ಸಂದಾಯ II

- *ಹಿಂದಿನ ಸಂಚಿಕೆಯಲ್ಲಿ ಬಿಟ್ಟು ಹೋದ ನಮಾಝ್ ಮತ್ತಿತರ ವಿಧಿಗಳ ಕಝಾ ಕುರಿತು ತಾವು ಹೀಗೆ ಬರೆದಿರುವಿರಿ: "ಒಬ್ಬನು ಪ್ರತಿಯೊಂದು ವೇಳೆ ನಮಾಝ್‌ ಜತೆಗೆ ಸುನ್ನತ್ ನಮಾಝ್ ಮಾಡುವ ಬದಲು ಹಿಂದಿನ ಫರ್ಝ್‌ನ ಕಝಾ ಸಂದಾಯ ಮಾಡುವುದು ಬಹಳ ಸುಲಭದ ವಿಧಾನ."*

ತನ್ನ ಜೀವಮಾನದ ಸ್ವಲ್ಪ ಅವಧಿಯನ್ನು ಅಜ್ಞಾನದಲ್ಲಿ ಕಳೆದಿರುವ ಪ್ರತಿಯೊಬ್ಬನೂ ಈ ರೀತಿ ಬಿಟ್ಟು ಹೋದ ಕಡ್ಡಾಯ ವಿಧಿಗಳ ಕಝಾ ಸಂದಾಯ ಮಾಡುವುದು ಕಡ್ಡಾಯವೇ? ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಯಾವುದಾದರೂ ಶರೀಅತ್ ಸಮ್ಮತ ಕಾರಣದಿಂದಾಗಿ ಮನುಷ್ಯನಿಂದ ಬಿಟ್ಟು ಹೋಗುವ ಧಾರ್ಮಿಕ ವಿಧಿಗಳ ಕುರಿತು ವಿಚಾರಿಸುವುದು ಪ್ರಶ್ನೆ ಕೇಳುವವನ ಉದ್ದೇಶವಾಗಿರಲಿಲ್ಲವೆಂಬುದು ವ್ಯಕ್ತ. ಅವರ ಉದ್ದೇಶವು ಮನುಷ್ಯನು ಬೇಕು ಬೇಕೆಂದೇ ಐದು, ಹತ್ತು, ಇಪ್ಪತ್ತು, ಮೂವತ್ತು ವರ್ಷಗಳ ಕಾಲ ಅನಾಸ್ಥೆ ಮತ್ತು ಅಸಡ್ಡೆಯಿಂದ ಬಿಟ್ಟ ಕರ್ಮಗಳಾಗಿವೆ. ಈಗ ಒಂದು ವೇಳೆ ಪೂರ್ಣ ಸ್ಥಿರಚಿತ್ತತೆಯೊಂದಿಗೆ ತನ್ನ ಗತಜೀವನದ ಬಗ್ಗೆ ಪಶ್ಚಾತ್ತಾಪ ಪಟ್ಟು ಮುಂದೆ ತನ್ನ ಜೀವನವನ್ನು ಶರೀಅತ್‌ಗೆ ಅನುಸಾರವಾಗಿ ಸಾಗಿಸುವ ಪಣತೊಟ್ಟರೆ ಹಾಗೂ ಎಲ್ಲಾ ಧಾರ್ಮಿಕ ವಿಧಿಗಳನ್ನು ಸರಿಯಾಗಿ ಪಾಲಿಸಿದರ ಹಿಂದಿನ ಜೀವನದಲ್ಲಿ ಬಿಟ್ಟು ಹೋದ ಧಾರ್ಮಿಕ ವಿಧಿಗಳನ್ನು ಕಡ್ಡಾಯವಾಗಿ ಸಂದಾಯ ಮಾಡಬೇಕೇ? ಪಶ್ಚಾತ್ತಾಪವು ಅವನ ಗತ ಪಾಪಗಳಿಗ ಪ್ರಾಯಶ್ಚಿತ್ತವಾಗಲಾರದೇ? ಹಾಗಾದರೆ ತೌಬಾದಿಂದ ಫಲವೇನು? ಸೂರಃ ಮರ್ಯಮ್‌ನ ಈ ಆಯತ್‌ನಿಂದ ಇದು ಸ್ಪಷ್ಟವಾಗುವುದಿಲ್ಲವೇ?

"ಅವರ ಬಳಿಕ ಅಯೋಗ್ಯರಾದವರು ಅವರ ಉತ್ತರಾಧಿಕಾರಿಗಳಾದರು. ಅವರು ನಮಾಝನ್ನು ವ್ಯರ್ಥಗೊಳಿಸಿದರು ಮತ್ತು ದೇಹೇಚ್ಛೆಗಳನ್ನು ಅನುಸರಿಸಿದರು. ಆದುದರಿಂದ ಶೀಘ್ರದಲ್ಲೇ ಅವರು ಪಥಭ್ರಷ್ಟತೆಯ ಪರಿಣಾಮವನ್ನು ಅನುಭವಿಸಲಿರುವರು. ಆದರೆ ಪಶ್ಚಾತ್ತಾಪ ಪಟ್ಟವರೂ ಸತ್ಯವಿಶ್ವಾಸ ಸ್ವೀಕರಿಸಿಕೊಂಡವರೂ ಸತ್ಕರ್ಮ ಕೈಗೊಂಡವರೂ ಸ್ವರ್ಗದಲ್ಲಿ ಪ್ರವೇಶ ಪಡೆಯುವರು ಮತ್ತು ಅವರ ಹಕ್ಕುಚ್ಯುತಿ ಕಿಂಚಿತ್ತೂ ಆಗದು." (ಪವಿತ್ರ ಕುರ್‌ಆನ್ 19:59-60)

ಇದು ಮಾತ್ರವಲ್ಲ ಪವಿತ್ರ ಕುರ್‌ಆನ್‌ನ ಇನ್ನೂ ಅನೇಕ ಆಯತ್ ಮತ್ತು ಪ್ರವಾದಿ ವಚನಗಳಿಂದ ಸಾಬೀತಾಗುವುದೇನೆಂದರೆ, "ಅತ್ತಾಇಬು ಮಿನದ್ದಂಬಿ ಕಮನ್ ಲಾ

ೞಂಬಲಹೂ" (ಪಾಪದಿಂದ ಪಶ್ಚಾತ್ತಾಪ ಪಡುವವನು ಪಾಪ ಮಾಡದವನಂತೆಯೇ ಗಿದ್ದಾನೆ) ಈ ಆಯತ್ ಮತ್ತು ಹದೀಸ್‌ಗಳ ಬೆಳಕಿನಲ್ಲಿ ತಮ್ಮ ಹೇಳಿಕೆಗಳ ವರಣೆ ಏನು?

ನ್ಯಾಯ ವಿಧಿಗಳ ಕಝಾ ಸಂದಾಯ ಮಾಡುವ ಕುರಿತು ತಾವು ಸೂಚಿಸಿರುವ ಮವನ್ನು ಯಾರಾದರೂ ಅನುಸರಿಸಿದರೆ ಅದರಿಂದ ಅನೇಕ ರೀತಿಯ ತೊಡಕುಗಳು ೦ಂಟಾಗುತ್ತವೆ. ಫರ್ಝ್‌ಗಳಲ್ಲಿ ಆಗಿರಬಹುದಾದ ಲೋಪದೋಷಗಳನ್ನು ರಿಹರಿಸುವುದೇ ಸುನ್ನತ್‌ಗಳನ್ನು ನಿರ್ವಹಿಸುವ ಉದ್ದೇಶವಾಗಿದೆ. ಹಿಂದಿನ ಜೀವನದಲ್ಲಿ ಟ್ಟು ಹೋದ ಫರ್ಝ್ ನಮಾಝ್‌ಗಳ ಕಝಾ ಸಂದಾಯ ಮಾಡುತ್ತಿರುವಾಗ ುನ್ನತ್ ಮತ್ತು ನಫಿಲ್‌ಗಳನ್ನು ನಿರ್ವಹಿಸಲು ಅವಕಾಶವಾಗುವುದಿಲ್ಲ. ಹೀಗೆ ಅವನ ಲ್ಲ ನಮಾಝ್‌ಗಳೂ ಅಪೂರ್ಣವಾಗುತ್ತವೆ. ಉಪವಾಸ ವ್ರತ ಮತ್ತು ಝಕಾತ್‌ನ ತಿಯೂ ಇದುವೇ ಆಗಿದೆ. ತನ್ನ ಪ್ರೌಢಾವಸ್ಥೆಯ ಬಳಿಕ ಆಯುಷ್ಯದ ಇಪ್ಪತ್ತು ಪ್ಪತ್ತೈದು ವರ್ಷಗಳ ಅವಧಿಯನ್ನು ಅಜ್ಞಾನದಲ್ಲಿ ಕಳೆದವನು ತಮ್ಮ ಸಲಹೆಯಂತೆ ವುಗಳ ಕಝಾ ಸಂದಾಯ ಮಾಡಬಯಸಿದರೂ ಅವನ್ನು ಯಥಾವಿಧಿ ೂರ್ಣಗೊಳಿಸಲಾರ ಮತ್ತು ಅದರಿಂದ ಅವನು ಸಂತೃಪ್ತಿಯನ್ನೂ ಗಳಿಸಲಾರ. ಲ್ಲದೆ ಅವನಿಗೆ ಇನ್ನು ಎಷ್ಟು ಕಾಲ ಜೀವನ ಉಳಿದಿದೆ ಎಂಬುದೂ ತಿಳಿದಿಲ್ಲ.

ನ್ನ ಅಭಿಪ್ರಾಯದಂತೆ ಈ ಸಮಸ್ಯೆ ಹೆಚ್ಚು ಕಡಿಮೆ ಎಲ್ಲ ಮುಸ್ಲಿಮರಿಗೂ ಇದೆ. ಕೆಂದರೆ ಮುಸ್ಲಿಮರ ಪ್ರಸಕ್ತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಾಮಾನ್ಯ ಜನರು ಾತ್ರವಲ್ಲ ದೊಡ್ಡ ದೊಡ್ಡ ಧರ್ಮನಿಷ್ಠ ಮನೆತನದ ಹೊಸ ಪೀಳಿಗೆಯೂ ಧರ್ಮದ ಗ್ಗೆ ಅನಾಸ್ಥೆಯಲ್ಲಿದೆ. ಹೀಗಿರುವಾಗ ಯಾರಾದರೂ ತನ್ನ ಜೀವನವನ್ನು ಇಸ್ಲಾಮಿಗೆ ನುಗುಣವಾಗಿ ಮಾರ್ಪಡಿಸಲು ನಿರ್ಧರಿಸಿದರೆ ತಮ್ಮ ಉತ್ತರದಿಂದ ಅವನಿಗೆ ಾಶೆಯಾಗಬಹುದು. ದಯವಿಟ್ಟು ಇದನ್ನು ಇನ್ನಷ್ಟು ವಿವರಿಸಿ ಕೃತಾರ್ಥರಾಗಬೇಕು.

ನಿಟ್ಟಿನಲ್ಲಿ ಒಂದು ಪ್ರಶ್ನೆ ನನ್ನ ಬಗೆಗೂ ನಾನು ತಮ್ಮಲ್ಲಿ ಕೇಳಬಯಸುತ್ತೇನೆ. ನ್ನ ಪತ್ನಿ 1950ರಲ್ಲಿ ಕ್ಷಯರೋಗ ಪೀಡಿತಳಾದಳು. ಆಕೆ ಒಂದು ಧರ್ಮನಿಷ್ಠ ುಟುಂಬಕ್ಕೆ ಸೇರಿದವಳು. ಆದ್ದರಿಂದ ಬಾಲ್ಯದಿಂದಲೇ ನಮಾಝ್, ಉಪವಾಸ ತಗಳನ್ನು ಪಾಲಿಸುತ್ತಾ ಬಂದಿರುವಳು. ಏಳು ವರ್ಷಗಳ ಕಾಲ ಆಕೆ ಆ ರೋಗದಿಂದ ಳಳುತ್ತಿದ್ದು ಈಗ ಎರಡು ಮೂರು ವರ್ಷಗಳಿಂದ ಗುಣಮುಖವಾಗಿದ್ದಾಳೆ. ಈಗ ೆ ತಾನು ರಮಝಾನ್ ಉಪವಾಸ ವ್ರತ ಆಚರಿಸಲು ಶಕ್ತಳಾಗಿರುವೆನೆಂದು ಾವಿಸುತ್ತಾಳೆ. ನಾನು ಆಕೆಯನ್ನು ಅದರಿಂದ ತಡೆದರೆ ಅಲ್ಲಾಹನ ಬಳಿ ಶಾಪಕ್ಕೆ

ಗುರಿಯಾಗುವನೋ ಎಂದು ಹೆದರುತ್ತೇನೆ. ಆಕೆಗೆ ಅನುಮತಿ ನೀಡಿದರೆ ಆ ಆಕೆಯನ್ನು ಪುನಃ ಆ ಮಾರಕ ಕಾಯಿಲೆಗೆ ಗುರಿಪಡಿಸೀತು. ಆಕೆ ಈ ಕಾಯಿ ಗುರಿಯಾಗಲು ಒಂದು ಕಾರಣ ನಾನು ಬೇಡವೆಂದಾಗಲೂ ಅತ್ಯಂತ ಸೆಖೆ ಕಾಲದಲ್ಲಿ, ಗರ್ಭಾವಸ್ಥೆ ಮತ್ತು ಬಾಣಂತಿತನದಲ್ಲಿ ರಮಝಾನ್ ತಿಂಗಳ ಉಪವ ವ್ರತ ಆಚರಿಸುತ್ತಿದ್ದಳು. ಇದೇ ಕಾರಣದಿಂದ ಅತ್ಯಂತ ಬಲಹೀನಳಾಗಿ ಈ ಕಾಯಿ ತುತ್ತಾದಳು. ಈಗ ಆಕೆ ಹೇಳುವುದೇನೆಂದರೆ ಇಡೀ ಜೀವಮಾನ ರಮಝಾ ಉಪವಾಸ ಆಚರಿಸುವ ಸೌಭಾಗ್ಯದಿಂದ ವಂಚಿತಳಾಗಿದ್ದರೆ ಅಲ್ಲಾಹನ ಬಳಿ ಯ ಮುಖ ಹೊತ್ತು ಹೋಗಲಿ? ಮತ್ತು ಅವುಗಳ ಕಝಾ ಸಂದಾಯ ಯಾವ (ಮಾಡಲಿ? ಬಡವರಿಗೆ ಊಟ ಹಾಕುವ ಫಿದ್‌ಯಾ ಇಡೀ ಜೀವಮಾನದ ಉಪವ ವ್ರತಗಳಿಗೆ ಪ್ರಾಯಶ್ಚಿತವಾಗಬಲ್ಲುದೇ? ಒಂದು ವೇಳೆ ಪತಿಯು ಕಾರಣಾಂತರದಿ ತನ್ನ ಪತ್ನಿಯ ಪರವಾಗಿ ಯಾರಾದರೂ ಬಡವನಿಗೆ ಎರಡು ಹೊತ್ತು ಊ ಕೊಡದಿದ್ದರೆ ಅಥವಾ ಅವನಿಂದ ಅದರಲ್ಲಿ ಕೊರತೆಯಾದರೆ ಅದರ ಜವಾಬ್ ಅವನಿಗೆ ಇರುವುದೇ?

○ ಮೊದಲನೆಯ ಪ್ರಶ್ನೆಯ ಸಂಕ್ಷಿಪ್ತ ಉತ್ತರ ಹೀಗಿದೆ: ಮೊದಲು ನಾನು ಅಜ್ಞ ಕಾಲದಲ್ಲಿ ಬೇಕು ಬೇಕೆಂದೇ ತೊರೆದ ಅಥವಾ ಅಸಡ್ಡೆಯಿಂದ ಬಿಟ್ಟು ಹೊ ನಮಾಝ್‌ಗಳಿಗೆ ಕೇವಲ ತೌಬಾ ಸಾಕಾಗುತ್ತದೆ. ಅವುಗಳ ಕಝಾ ಕಡ್ಡಾಯವಲ್ಲ ಎಂ ಭಾವಿಸಿದ್ದೆ. ಆದರೆ ಸಂಶೋಧನೆಯ ನಂತರ ತಿಳಿದು ಬಂದುದೇನೆಂದರೆ ವ್ಯಕ್ತಿಯು ಕಾಫಿ ಆಗಿರದಿದ್ದರೆ, ಕೇವಲ ಅಜ್ಞಾನ ಮತ್ತು ಅಸಡ್ಡೆಯಿಂದಾಗಿ ನಮಾಝ್ ತೊರೆದಿದ್ದ ಅವನಿಗೆ ಕೇವಲ ತೌಬಾ ಸಾಕಾಗುವುದಿಲ್ಲ. ಹಿಂದಿನ ನಮಾಝ್‌ಗಳ ಕಝಾ ಸಂದಾ ಮಾಡುವುದು ಕೂಡಾ ಅವನ ಪಾಲಿಗೆ ಕಡ್ಡಾಯವಾಗಿದೆ. ಇಮಾಮ್ ಇಬ್ನು ತೀಮಿಯಾ ಅವರು ಈ ವಿಷಯದ ಬಗ್ಗೆ ಚರ್ಚಿಸುತ್ತಾ ತೌಬಾದ ಜತೆಗೆ ಹಿಂದಿನದಕ್ಕೆ ಪ್ರಾಯಶ್ಚಿ ಮತ್ತು ಮುಂದೆ ಸುಧಾರಣೆಯ ಸಂಕಲ್ಪ ಎರಡೂ ಬೇಕೆಂದು ಹೇಳಿರುವರು. ಒಂದು ವ ಪ್ರಾಯಶ್ಚಿತ್ತ ಸಾಧ್ಯವೇ ಇಲ್ಲದ ಯಾವುದಾದರೂ ಪಾಪವೆಸಗಿದ್ದರೆ ಆ ವಿಷಯ ಬೇ ಅಂತಹ ಸಂದರ್ಭದಲ್ಲಿ ತೌಬಾ ಮತ್ತು ಪಶ್ಚಾತ್ತಾಪ ಸಾಕಾಗಬಹುದು. ಆದರೆ ಯ ಪಾಪಗಳ ಪ್ರಾಯಶ್ಚಿತ್ತ ಸಾಧ್ಯವಿದೆಯೋ ಅವುಗಳಿಗೆ ತೌಬಾದ ಜತೆಗೆ ಪರಿಹಾರವ ಮಾಡಲೇಬೇಕು. ಉದಾ: ನಿಮ್ಮ ಮೇಲೆ ಯಾರದಾದರೂ ಸಾಲವಿದ್ದು ದೀರ್ಘಕಾಲದಿ ನೀವು ಅದನ್ನು ಸಂದಾಯ ಮಾಡದಿದ್ದರೆ ಆ ಪಾಪಕ್ಕೆ ಕ್ಷಮೆ ಸಿಗಬೇಕಾದರೆ ಕೇವಲ ತೌ ಮಾಡಿದರೆ ಸಾಲದು. ಅದರ ಜತೆ ಸಾಲ ಸಂದಾಯವನ್ನೂ ಕಡ್ಡಾಯವಾಗಿ ಮಾಡಬೇ

ಫರ್ಝ್‌ಗಳ ಕುಂದುಕೊರತೆಯನ್ನು ಪರಿಹರಿಸುವ ಕಾರ್ಯವನ್ನು ಸುನ್ನತ್‌ಗಳು ಮಾಡುತ್ತವೆ. ಫರ್ಝ್‌ನ ಕಝಾ ಸಂದಾಯ ಮಾಡುವುದರಿಂದ ಈ ಅವಕಾಶ ತಪ್ಪಿ ಹೋಗುತ್ತದೆಂಬ ಸಮಸ್ಯೆಯ ಉತ್ತರವೇನೆಂದರೆ ಫರ್ಝ್‌ನ ಕಝಾ ಸಂದಾಯವೂ ಈ ಕೊರತೆಯನ್ನು 'ಇನ್‌ಶಾ ಅಲ್ಲಾಹ್' ನೀಗಿಸಬಲ್ಲುದು. ಮನುಷ್ಯನು ತನ್ನ ಗತ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಅದರ ಪರಿಹಾರಕ್ಕಾಗಿ ಮಾಡುವ ಪ್ರಯತ್ನದಲ್ಲಿ ಒಂದು ಹೆಚ್ಚುವರಿ ಪುಣ್ಯವಿದೆ.

ಉಳಿದ ಜೀವನ ಎಷ್ಟಿದೆಯೆಂಬುದು ಯಾರಿಗೂ ತಿಳಿಯುವುದು ಸಾಧ್ಯವಲ್ಲ. ಆದರೆ ಒಬ್ಬ ವ್ಯಕ್ತಿಯು ತನ್ನ ಗತ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಲು ಆರಂಭಿಸಿ ಬಿಟ್ಟರೆ ಅಲ್ಲಾಹನು ಅದನ್ನು ಗೌರವಿಸುವನು. ಎಲ್ಲ ಕಝಾ ಸಂದಾಯ ಮಾಡುವುದಕ್ಕೆ ಮುಂಚೆಯೇ ಜೀವನ ಅಂತ್ಯವಾದರೆ ಅಲ್ಲಾಹನ ಬಳಿ ಅವನ ಈ ಪ್ರಯತ್ನವು ಎಷ್ಟು ಸ್ವೀಕಾರಾರ್ಹವಾಗುವುದೆಂದರೆ ಅವನು ಉಳಿದು ಹೋದ ಕಡ್ಡಾಯ ವಿಧಿಗಳನ್ನು ಕ್ಷಮಿಸಿಬಿಡಲೂ ಬಹುದು.

ತಮ್ಮ ಪತ್ನಿಯ ಸಮಸ್ಯೆಯ ಕುರಿತು ಉತ್ತರವೇನೆಂದರೆ, ವೈದ್ಯರು ಅವರ ಪಾಲಿಗೆ ಉಪವಾಸ ಆಚರಿಸುವುದು ಮಾರಕವೆಂದು ಹೇಳಿದರೆ ಅವರು ಉಪವಾಸ ಆಚರಿಸಬಾರದು. ರಮಝಾನ್ ತಿಂಗಳಲ್ಲಿ ಪ್ರತಿದಿನ ಓರ್ವ ಬಡವನಿಗೆ ಊಟ ಮಾಡಿಸುತ್ತಿರಬೇಕು. ತಮಗೆ ಪತ್ನಿಯ ಜೀವನವು ಪ್ರಿಯವೆಂದಾದರೆ ಈ ತ್ಯಾಗ ತಾವೇ ಮಾಡಬೇಕು. ಅವರಿಗೆ ಪ್ರತಿದಿನ ಓರ್ವ ಬಡವನಿಗೆ ಉಣಬಡಿಸುವ ವೆಚ್ಚ ನೀಡುತ್ತಿರಬೇಕು. ಹಾಗೆ ಮಾಡದಿದ್ದರೆ ತಾವು ಶಿಕ್ಷಿತಸ್ಥರೆನಿಸದಿದ್ದರೂ ತಮ್ಮ ಪತ್ನಿಯ ಪ್ರಾಣವನ್ನು ಅಪಾಯಕ್ಕೊಡ್ಡಿದಂತಾಗುವುದು.

(ತರ್ಜುಮಾನುಲ್ ಕುರ್‌ಆನ್, ಮಾರ್ಚ್- 1959)

(36)

ಸಂತಾನ ನಿಯಂತ್ರಣ

● *ಈಗ ಸಂತಾನ ನಿಯಂತ್ರಣವನ್ನು 'ಕುಟುಂಬ ಯೋಜನೆ' ಎಂಬ ಹೊಸ ಹೆಸರಲ್ಲಿ ಜನಪ್ರಿಯಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಅದರ ಪರವಾಗಿ ಆರ್ಥಿಕ ಪುರಾವೆಗಳ ಜತೆಗೆ ಕೆಲವರು ಧಾರ್ಮಿಕ ಪುರಾವೆಗಳನ್ನೂ ಒದಗಿಸುತ್ತಾರೆ. ಉದಾ: ಹದೀಸ್‌ನಲ್ಲಿ 'ಅಝ್ಲ್'ನ (ಸಂಭೋಗದ ವೇಳೆ ವೀರ್ಯ ಸ್ಖಲನವಾಗುವಾಗ ಲಿಂಗವನ್ನು ಹೊರ ತೆಗೆಯುವುದು) ಅನುಮತಿಯಿದೆ ಎಂದು ಹೇಳುತ್ತಾರೆ. ಸಂತಾನ ನಿಯಂತ್ರಣಕ್ಕೆ ಅನುಮತಿಯಿದೆ ಎಂದು ಇದರಿಂದ ಊಹಿಸಬಹುದೆಂದು ಅವರು ಹೇಳುತ್ತಾರೆ. ಮಾತ್ರವಲ್ಲದೆ ಇದೀಗ ಸರಕಾರದ ವತಿಯಿಂದಲೂ ಪುರುಷರ ಸಂತಾನ ಶಕ್ತಿ ಹರಣ ಮಾಡುವ ಅನುಕೂಲತೆಗಳನ್ನು ಒದಗಿಸಲಾಗುತ್ತವೆ. ಪುರುಷನ ವೀರ್ಯದಲ್ಲಿ ಸಂತಾನೋತ್ಪತ್ತಿಯ ಶಕ್ತಿಯಿಲ್ಲದಂತೆ ಮಾಡುವ ಆದರೆ ಲೈಂಗಿಕ ಆಸಕ್ತಿಯನ್ನು ಹಾಗೆಯೇ ಉಳಿಸುವ ಔಷಧಿಗಳನ್ನೂ ಕಂಡು ಹಿಡಿಯಲಾಗುತ್ತಿದೆ. ಕೆಲವರು ಇದನ್ನು ಶರೀಅತ್ ಪ್ರಕಾರ ಆಕ್ಷೇಪಾರ್ಹವಲ್ಲವೆಂದು ಸಾರುತ್ತಾರೆ. ಅವರ ಅಭಿಪ್ರಾಯದಂತೆ ಇದು ಸಂತಾನ ಹರಣ ಅಥವಾ ಗರ್ಭಪಾತದ ವಿಧಿಗೆ ಒಳಪಡುವುದಿಲ್ಲ.*

ತಮ್ಮ ಅಭಿಪ್ರಾಯ ಪ್ರಕಾರ ಈ ಕ್ರಮಕ್ಕೆ ಇಸ್ಲಾಮ್‌ನಲ್ಲಿ ಅನುಮತಿ ಇದೆಯೇ ಇಲ್ಲವೇ ಎಂಬುದನ್ನು ದಯವಿಟ್ಟು ತಿಳಿಸಿ.

○ 'ಇಸ್ಲಾಮ್ ಮತ್ತು ಸಂತಾನ ನಿಯಂತ್ರಣ'ದ ವಿಷಯದಲ್ಲಿ ಹಲವು ವರ್ಷಗಳ ಹಿಂದೆ ನಾನು ಒಂದು ಪುಸ್ತಕ ಬರೆದಿರುವೆನು.* ಅದರಲ್ಲಿ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಕೋನದಲ್ಲಿ ಈ ವಿಷಯದ ಎಲ್ಲ ಮಗ್ಗುಲುಗಳ ಬಗ್ಗೆ ಚರ್ಚಿಸಲಾಗಿದೆ.

ತಮ್ಮ ಪ್ರಶ್ನೆಯ ಸಂಕ್ಷಿಪ್ತ ಉತ್ತರವೇನೆಂದರೆ 'ಅಝ್ಲ್'ನ ಬಗೆಗೆ ಪ್ರವಾದಿವರ್ಯರಲ್ಲಿ(ಸ) ಕೇಳಿದ ಪ್ರಶ್ನೆ ಮತ್ತು ಅದಕ್ಕೆ ಉತ್ತರವಾಗಿ ಪ್ರವಾದಿ(ಸ) ಹೇಳಿದ ವಿಷಯವು ಕೇವಲ ವೈಯಕ್ತಿಕ ಅಗತ್ಯಗಳು ಮತ್ತು ಅಪರೂಪದ ಪರಿಸ್ಥಿತಿಗೆ ಸಂಬಂಧಿಸಿತ್ತು.

---

* ಈ ಪುಸ್ತಕ ಹಲವು ವರ್ಷಗಳ ಹಿಂದೆ 'ಸನ್ಮಾರ್ಗ'ದಲ್ಲೂ ಧಾರಾವಾಹಿಯಾಗಿ ಪ್ರಕಟವಾಗಿದೆ.

ತಾನ ನಿಯಂತ್ರಣದ ಸಾರ್ವತ್ರಿಕ ಕರೆ ಮತ್ತು ಅಭಿಯಾನ ಅದರ ಉದ್ದೇಶ ಖಂಡಿತ ಗಿರಲಿಲ್ಲ. ಇಂತಹ ಯಾವುದೇ ಚಳವಳಿಯ ಸಿದ್ಧಾಂತವೆಂಬ ರೂಪದಲ್ಲಿಯೂ ಅದು ರ್ವಜನಿಕರಲ್ಲಿ ಪ್ರಚಾರವಾಗುತ್ತಿರಲಿಲ್ಲ. ಪರಸ್ಪರ ಸಂಸರ್ಗ ನಡೆಸಿದರೂ ಗರ್ಭಧಾರಣೆಯನ್ನು ತೆಯುವಂತಹ ಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಎಲ್ಲ ಸ್ತ್ರೀ-ಪುರುಷರಿಗೆ ಸಲಾಗುತ್ತಿರಲಿಲ್ಲ. ಗರ್ಭವನ್ನು ತಡೆಯುವಂತಹ ಔಷಧಿ ಮತ್ತು ಉಪಕರಣಗಳನ್ನು ಲ್ಲರಿಗೂ ತಲುಪುವಂತೆ ಅಲ್ಲಿ ವ್ಯವಸ್ಥೆಗೊಳಿಸಲಾಗಿರಲಿಲ್ಲ. 'ಅಝ್ಲ್'ನ ಕುರಿತು ರದಿಯಾಗಿರುವ ಕೆಲವು ಹದೀಸ್‌ಗಳ ವಾಸ್ತವಿಕತೆ ಏನೆಂದರೆ ಓರ್ವನು ತನ್ನ ಪರಿಸ್ಥಿತಿ ತ್ತು ಸಂಕಷ್ಟಗಳನ್ನು ವಿವರಿಸಿದಾಗ ಪ್ರವಾದಿ(ಸ) ಅವುಗಳನ್ನು ಮುಂದಿರಿಸಿಕೊಂಡು ನಕ್ಕೆ ಸೂಕ್ತವಾದ ಉತ್ತರ ನೀಡಿದರು. ಹದೀಸ್‌ನಲ್ಲಿ ಉಲ್ಲೇಖಿತವಾಗಿರುವ ಇಂತಹ ತ್ತರಗಳಿಂದ ಒಂದು ವೇಳೆ 'ಅಝ್ಲ್'ಗೆ ಅನುಮತಿಯಿದೆ ಎಂದು ಭಾವಿಸಿದರೂ ಸಂತಾನ ಯಂತ್ರಣಕ್ಕಾಗಿ ನಡೆಸಲಾಗುವಂತಹ ಸಾರ್ವತ್ರಿಕ ಅಭಿಯಾನದ ಪರವಾಗಿ ಅದನ್ನು ಳಸುವಂತಿಲ್ಲ. ಏಕೆಂದರೆ ಸಂತಾನ ನಿಯಂತ್ರಣದ ಆಂದೋಲನದ ಹಿಂದೆ ಇರುವುದು ಷ್ಪಟ ಭೌತಿಕವಾದಿ ಮತ್ತು ಮುಕ್ತ ಲೈಂಗಿಕತೆಯ ಸಿದ್ಧಾಂತವಾಗಿದೆ. ಇಂತಹ ಯಾವುದೇ ಭಿಯಾನ ಪ್ರವಾದಿವರ್ಯರ(ಸ) ಕಾಲದಲ್ಲಿ ಇರುತ್ತಿದ್ದರೆ ಖಂಡಿತವಾಗಿ ಅವರು(ಸ) ನನ್ನು ಶಪಿಸುತ್ತಿದ್ದರು. ಬಹುದೇವಾರಾಧನೆ, ಮೂರ್ತಿ ಪೂಜೆಗಳ ವಿರುದ್ಧ ಹೋರಾಟ ಡೆಸಿದಂತೆ ಅದರ ವಿರುದ್ಧವೂ ಹೋರಾಟ ನಡೆಸುತ್ತಿದ್ದರು. ಅಝ್ಲ್‌ನ ಕುರಿತು ಪ್ರವಾದಿ(ಸ) ವರ ಹೇಳಿಕೆಗಳನ್ನು ದುರುಪಯೋಗ ಪಡಿಸಿ ಅದನ್ನು ಪ್ರಸಕ್ತ ಸಂತಾನ ನಿಯಂತ್ರಣ ಭಿಯಾನದ ಪರ ಪುರಾವೆಯಾಗಿ ಬಳಸುವವರು ಅಲ್ಲಾಹನನ್ನು ಭಯ ಪಡಬೇಕೆಂದು ನು ಎಚ್ಚರಿಸುತ್ತೇನೆ. ಪ್ರವಾದಿ(ಸ) ಅವರ ಮೇಲೆ ಈ ರೀತಿಯ ಅಪವಾದ ಹೊರಿಸುವುದರಿಂದ ರವಿರಲು ಸಲಹೆ ನೀಡುತ್ತೇನೆ. ಪಾಶ್ಚಾತ್ಯ, ನಾಸ್ತಿಕ ಸಂಸ್ಕೃತಿ ಮತ್ತು ವಿಚಾರಧಾರೆಯನ್ನು ಾರಾದರೂ ಅನುಸರಿಸ ಬಯಸುವುದಾದರೆ ಅದನ್ನು ನೇರವಾಗಿ ಪಾಶ್ಚಾತ್ಯರ ಧರ್ಮ ದು ತಿಳಿದುಕೊಂಡೇ ಅನುಸರಿಸಲಿ. ಅದನ್ನು ಅಲ್ಲಾಹನ ಮತ್ತು ಪ್ರವಾದಿಯ ೋಧನೆಯೆಂದು ಸಾರಿಕೊಂಡು ಅಲ್ಲಾಹನ ಇನ್ನಷ್ಟು ಕ್ರೋಧವನ್ನು ಯಾಕೆ ಕಟ್ಟಿ ಳ್ಳಬೇಕು.

ಸಂತಾನ ನಿಯಂತ್ರಣದ ಸಾರ್ವತ್ರಿಕ ಆಂದೋಲನವನ್ನು ಇಸ್ಲಾಮ್ ನುಮತಿಸಿದಂತೆಯೇ ಉದ್ದೇಶ ಪೂರ್ವಕವಾಗಿ ಸಂತಾನ ಶಕ್ತಿ ಹರಣ ಮಾಡಿಕೊಳ್ಳುವುದನ್ನು ಡಾ ಅದು ಅನುಮತಿಸುವುದಿಲ್ಲ. ಬೇಕು ಬೇಕೆಂದೇ ಸಂತಾನ ಹರಣ ಚಿಕಿತ್ಸೆ

ಮಾಡಿಕೊಳ್ಳುವುದು ಧರ್ಮ ಸಮ್ಮತವೆನ್ನುವುದು ಆತ್ಮಹತ್ಯೆ ಧರ್ಮ ಸಮ್ಮತವೆನ್ನುವಷ್ಟೆ ತಪ್ಪಾಗಿದೆ. ತಮ್ಮ ಶರೀರ ಮತ್ತು ಅದರ ಶಕ್ತಿಗಳ ಒಡೆಯರು ತಾವೇ ಆಗಿದ್ದು ಅವನ ಯಾವ ರೀತಿ ಬೇಕಾದರೂ ಬಳಸುವ ಅಧಿಕಾರ ತಮಗಿದೆ ಎಂದು ಭಾವಿಸುವವರು ಮಾ ಇಂತಹ ಮಾತುಗಳನ್ನಾಡುತ್ತಾರೆ. ಈ ತಪ್ಪು ಕಲ್ಪನೆಯಿಂದಾಗಿಯೇ ಜಪಾನಿಗಳ ಆತ್ಮಹತ್ಯೆಯನ್ನು ಸರಿ ಎಂದು ಭಾವಿಸುತ್ತಾರೆ. ಇದೇ ತಪ್ಪು ಕಲ್ಪನೆಯಿಂದಾಗಿ ಕೆಲ ಯೋಗಿಗಳು ತಮ್ಮ ಕೈಕಾಲು ಅಥವಾ ನಾಲಗೆಯನ್ನು ನಿಷ್ಕ್ರಿಯಗೊಳಿಸಿಕೊಳ್ಳುತ್ತಾರೆ. ಆದ ಯಾರು ತನ್ನನ್ನು ಅಲ್ಲಾಹನ ದಾಸನೆಂದೂ ತನ್ನ ಶರೀರ ಹಾಗೂ ಅದರ ಸಾಮರ್ಥ್ಯಗಳ ಅಲ್ಲಾಹನ ಕೊಡುಗೆ ಮತ್ತು ವಿಶ್ವಸ್ಥ ನಿಧಿಯೆಂದೂ ಬಗೆಯುತ್ತಾನೋ ಅವನು ತ ಸಂತಾನ ಶಕ್ತಿ ಹರಣ ಮಾಡಿಕೊಳ್ಳುವುದನ್ನು ಕೂಡಾ ಇತರರನ್ನು ಬಲವಂತವಾಗಿ ಸಂತಾ ಶಕ್ತಿ ಹರಣ ಮಾಡಿಸುವಷ್ಟೆ ಅಥವಾ ಇತರರ ಕಣ್ಣು ಕಿತ್ತುಕೊಳ್ಳುವಷ್ಟೇ ದೊಡ ಅಪರಾಧವೆಂದು ಪರಿಗಣಿಸುವನು. *(ತರ್ಜುಮಾನುಲ್ ಖುರ್‌ಆನ್: ಏಪ್ರಿಲ್- 196(*

37

ಸಂತಾನ ನಿಯಂತ್ರಣ ಮತ್ತು ನೇತ್ರ ದಾನ

● *ಜಗತ್ತಿನ ಬೆಳೆಯುತ್ತಿರುವ ಜನಸಂಖ್ಯೆಗೆ ಇಸ್ಲಾಮ್ ಯಾವ ಪರಿಹಾರವನ್ನು ಸೂಚಿಸುತ್ತವೆ. ಸಂತಾನ ನಿಯಂತ್ರಣಕ್ಕಾಗಿ ಔಷಧಿಗಳ ಬಳಕೆ, ಕುಟುಂಬ ಯೋಜನೆ ಇತ್ಯಾದಿಗಳನ್ನು ಈಗಲೂ ಶರೀಅತ್ ವಿರೋಧಿ ಎಂದು ಹೇಳಿ ನಿಷೇಧಿಸಲಾಗುವುದೇ? ಒಬ್ಬ ಮುಸ್ಲಿಮನು ಮರಣಾನಂತರ ತನ್ನ ಕಣ್ಣುಗಳನ್ನು ಯಾರಾದರೂ ರೋಗಿಗೆ ನೀಡುವಂತೆ ದಾನ ಮಾಡಬಹುದೇ? ಈ ತ್ಯಾಗವು ಪಾಪವೆನಿಸುವುದೇ? ಇಂಥವನು ಪುನರುತ್ಥಾನದ ದಿನ ಅಂಧನಾಗಿ ಎದ್ದೇಳುವನೇ?*

○ ಹೆಚ್ಚುತ್ತಿರುವ ಲೋಕದ ಜನಸಂಖ್ಯೆಗೆ ಇಸ್ಲಾಮ್ ಒಂದೇ ಪರಿಹಾರವನ್ನು ಸೂಚಿಸುತ್ತದೆ. ಅಲ್ಲಾಹನು ಸೃಷ್ಟಿಸಿರುವ ಆಹಾರದ ಮೂಲಗಳನ್ನು ಅತ್ಯಧಿಕವಾಗಿ ಹೆಚ್ಚಿಸುವ ಮತ್ತು ಉಪಯೋಗಿಸುವ ಪ್ರಯತ್ನ ಮಾಡುವುದು. ಯಾವ ಮೂಲಗಳು ನಮಗಿನ್ನೂ ಮರೆಯಾಗಿವೆಯೋ ಅವುಗಳನ್ನು ಸಂಶೋಧಿಸಲು ನಿರಂತರ ಪ್ರಯತ್ನಿಸುವುದು. ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯುವ ಯಾವುದೇ ಪ್ರಯತ್ನವು ತಪ್ಪು ಹಾಗೂ ಅತ್ಯಂತ ಮಾರಕವಾಗಿದೆ. ಅದು ಸಂತಾನ ಹರಣವಾಗಲೀ ಗರ್ಭಪಾತವಾಗಲೀ ಅಥವಾ ಗರ್ಭ ನಿರೋಧವಾಗಲಿ. ಸಂತಾನ ನಿಯಂತ್ರಣ ಅಭಿಯಾನದ ನಾಲ್ಕು ಪರಿಣಾಮಗಳನ್ನು ತಡೆಯಲು ಸಾಧ್ಯವೇ ಇಲ್ಲ.

1. ವ್ಯಭಿಚಾರದ ಹೆಚ್ಚಳ

2. ಮನುಷ್ಯನಲ್ಲಿ ಸ್ವಾರ್ಥ ಮತ್ತು ಜೀವನ ಮಟ್ಟವನ್ನು ಏರಿಸುವ ಬಯಕೆಯು ಹೆಚ್ಚಾಗಿ ತನ್ನ ಮುದಿ ತಂದೆ-ತಾಯಿಗಳು, ಅನಾಥ ಸೋದರರು ಮತ್ತಿತರ ಬಡವರಾದ ಬಂಧುಗಳ ಅಸ್ತಿತ್ವವೇ ಅವನಿಗೆ ಅಸಹ್ಯವಾಗ ತೊಡಗುತ್ತದೆ. ಏಕೆಂದರೆ ಯಾವ ವ್ಯಕ್ತಿಯು ತನ್ನ ಆಹಾರದಲ್ಲಿ ತನ್ನ ಮಕ್ಕಳಿಗೆ ಪಾಲು ಕೊಡುವುದಕ್ಕೂ ಸಿದ್ಧನಿಲ್ಲವೋ ಅವನು ಇತರರನ್ನು ಅದರಲ್ಲಿ ಪಾಲುಗೊಳಿಸುವುದಾದರೂ ಹೇಗೆ?

3. ಒಂದು ಜನಾಂಗವನ್ನು ಜೀವಂತವಾಗಿರಿಸಲು ಬೇಕಾದ ಕನಿಷ್ಠ ಜನಸಂಖ್ಯಾ ವೃದ್ಧಿಯೂ ಆಗದಿರುವುದು. ಏಕೆಂದರೆ ಎಷ್ಟು ಮಕ್ಕಳನ್ನು ಹುಟ್ಟಿಸಬೇಕೆಂಬ ತೀರ್ಮಾನ ಮಾಡುವವರು ವ್ಯಕ್ತಿಗಳಾಗಿರುವಾಗ ಮತ್ತು ತೀರ್ಮಾನದ ಆಧಾರ ಹೊಸ ಮಕ್ಕಳ

ಜನನದಿಂದ ಜೀವನ ಮಟ್ಟ ಕೆಳಗಿಳಿಯದಂತೆ ನೋಡುವುದಾಗಿರುವಾಗ ಅವರು ತಮ ಜನಾಂಗಕ್ಕೆ ಅದರ ಜನಸಂಖ್ಯೆಯನ್ನು ಒಂದು ಕನಿಷ್ಠ ಮಿತಿಯಲ್ಲಿ ಇರಿಸಲು ಬೇಕಾಗುವಷ ಮಕ್ಕಳನ್ನು ಹುಟ್ಟಿಸಲಿಕ್ಕೂ ಸಿದ್ಧರಾಗಲಾರರು. ಇಂತಹ ಪರಿಸ್ಥಿತಿಯಲ್ಲಿ ಕೆಲವೊಮ ಜನನದ ಪ್ರಮಾಣವು ಮರಣದ ಪ್ರಮಾಣಕ್ಕಿಂತಲೂ ಕಡಿಮೆಯಾಗುವ ಸಂದರ್ಭ ಬರುತ್ತದೆ. ಇಂತಹ ಪರಿಸ್ಥಿತಿ ಫ್ರಾನ್ಸ್‌ಗೆ ಒದಗಿತ್ತು. ಅನಂತರ ಅಮ ಹೆಚ್ಚು ಮಕ್ಕಳನ ಹುಟ್ಟಿಸುವ ಅಭಿಯಾನವನ್ನು ಕೈಗೊಳ್ಳಬೇಕಾಯಿತು. ಅದಕ್ಕಾಗಿ ಹೆಚ್ಚು ಮಕ್ಕಳನ ಹಡೆಯುವವರಿಗೆ ಬಹುಮಾನವನ್ನು ಘೋಷಿಸಲಾಗಿತ್ತು.

4. ರಾಷ್ಟ್ರದ ರಕ್ಷಣಾ ವ್ಯವಸ್ಥೆಯು ಬಲಹೀನವಾಗುವುದು. ವಿಶೇಷವಾಗಿ ತನಗಿಂ ಹೆಚ್ಚು ಜನಸಂಖ್ಯೆಯಿರುವ ಶತ್ರು ರಾಷ್ಟ್ರಗಳಿಂದ ಸುತ್ತುವರಿಯಲ್ಪಟ್ಟ ದೇಶಕ್ಕೆ ಇದು ಹೆಚ ಅಪಾಯಕಾರಿಯಾಗಿದೆ.

ನೇತ್ರ ದಾನದ ವಿಷಯದಲ್ಲಿ ಹೇಳುವುದಾದರೆ ಕೇವಲ ಕಣ್ಣು ಮಾತ್ರವಲ್ಲ ಇತ ಅನೇಕ ಅಂಗಗಳು ಕೂಡಾ ರೋಗಿಗಳಿಗೆ ಅಗತ್ಯವಾಗಿವೆ. ಅವುಗಳನ್ನು ಇತರ ಉಪಯು ಕಾರ್ಯಗಳಿಗಾಗಿಯೂ ಬಳಸಬಹುದಾಗಿದೆ. ಈ ರೀತಿ ಅಂಗಾಂಗಗಳ ದಾನದ ದ್ವಾರವನ ತೆರೆದಿಟ್ಟರೆ ಮುಸ್ಲಿಮನೊಬ್ಬನನ್ನು ಗೋರಿಯಲ್ಲಿ ದಫನ ಮಾಡುವುದು ಕೂಡ ಕಷ್ಟವಾಗಬಹುದು. ಅವನ ದೇಹವಿಡೀ ದಾನದ ರೂಪದಲ್ಲಿ ವಿತರಿಸಲ್ಪಡುವುದು. ಯಾ ವ್ಯಕ್ತಿಯೂ ತನ್ನ ಶರೀರದ ಒಡೆಯನಲ್ಲವೆಂಬುದು ಇಸ್ಲಾಮಿನ ಸಿದ್ಧಾಂತವಾಗಿದೆ. ಆದ್ದರಿಂ ಅವನಿಗೆ ಸಾಯುವ ಮೊದಲು ತಾನು ಸತ್ತ ಮೇಲೆ ತನ್ನ ಅಂಗಾಂಗಗಳನ್ನು ದಾನ ಮಾಡು ಉಯಿಲು ಬರೆಯುವ ಅಧಿಕಾರವಿಲ್ಲ. ಅವನ ದೇಹವು ಅವನು ಅದರಲ್ಲಿರುವ ತನಕವ ಅವನ ನಿಯಂತ್ರಣದಲ್ಲಿರುತ್ತದೆ. ಅವನು ಅದರಿಂದ ಹೊರಟು ಹೋದ ಮೇಲೆ ಆ ಜ ದೇಹದ ಮೇಲೆ ಅವನಿಗೆ ಯಾವುದೇ ಅಧಿಕಾರವೂ ಇರುವುದಿಲ್ಲ. ಆದ್ದರಿಂದ ಅವರ ಬ ಅವನ ಉಯಿಲು ಜಾರಿಯಾಗುವುದಿಲ್ಲ. ಇಸ್ಲಾಮಿ ನಿಯಮಗಳ ಪ್ರಕಾರ ಜೀವಂ ಮನುಷ್ಯರು ಆತನ ದೇಹವನ್ನು ಗೌರವಪೂರ್ಣವಾಗಿ ದಫನ ಮಾಡಬೇಕಾದುದು ಅವ ಕರ್ತವ್ಯವಾಗಿದೆ.

ಮಾನವ ಶವದ ಗೌರವದ ಬಗ್ಗೆ ಇಸ್ಲಾಮ್ ನೀಡಿರುವ ಆಜ್ಞೆಯು ಮಾನವ ಜೀವ ಗೌರವದ ಒಂದು ಅನಿವಾರ್ಯ ಬೇಡಿಕೆಯಾಗಿದೆ. ಒಮ್ಮೆ ಮಾನವ ಶವದ ಗೌರವ ಇಲ್ಲವಾದರೆ ಅದರಿಂದಾಗಿ ಜಡ ದೇಹದ ಉಪಯುಕ್ತ ಅಂಗಾಂಗಗಳು ಜೀವಂ ಮನುಷ್ಯರ ಚಿಕಿತ್ಸೆಗಾಗಿ ಉಪಯೋಗವಾಗುವುದು ಮಾತ್ರವಲ್ಲ ಕ್ರಮೇಣ ಮನುಷ್ಯ ದೇಹ

ೊಬ್ಬಿನಿಂದ ಸಾಬೂನು ತಯಾರಿಸುವುದು (ದ್ವಿತೀಯ ಮಹಾ ಯುದ್ಧದ ವೇಳೆ ಜರ್ಮನರು ದನ್ನು ಮಾಡಿದ್ದರು), ಮನುಷ್ಯನ ಚರ್ಮವನ್ನು ಸುಲಿದು ಅದನ್ನು ಹದಗೊಳಿಸಿ ಪಾದರಕ್ಷೆ, ೂಟ್‌ಕೇಸ್ ಮತ್ತು ಪರ್ಸ್‌ಗಳನ್ನು ತಯಾರಿಸುವುಮ(ಕೆಲವು ವರ್ಷಗಳ ಹಿಂದೆ ಮದ್ರಾಸ್‌ನ ಂದು ಟ್ಯಾನರಿ ಇದನ್ನೂ ಪ್ರಯೋಗಿಸಿದೆ), ಮನುಷ್ಯನ ಎಲುಬು, ಕರುಳು ಮತ್ತಿತರ ಸ್ತುಗಳನ್ನು ಬಳಸುವುದು ಕೂಡ ನಡೆಯಬಹುದು. ಇದರ ನಂತರ ಮತ್ತೊಮ್ಮೆ ನುಷ್ಯನು ಪುನಃ ಅನಾಗರಿಕ ಮತ್ತು ಕ್ರೂರ ಯುಗಕ್ಕೆ ಮರಳಬಹುದು. ಅಲ್ಲಿ ಮನುಷ್ಯರು ರಸ್ಪರರ ಮಾಂಸವನ್ನು ಭಕ್ಷಿಸುವರು. ಮಾನವ ಶವದ ಅಂಗಗಳನ್ನು ಚಿಕಿತ್ಸೆಗಾಗಿ ತೆಗೆದು ಳಸುವುದನ್ನು ಧರ್ಮಸಮ್ಮತವೆಂದು ಒಮ್ಮೆ ಘೋಷಿಸಿ ಬಿಟ್ಟರೆ ಅವನ ದೇಹದ ಇತರ ುಪಯುಕ್ತ' ಬಳಕೆಗಳನ್ನು ತಡೆಯಲು ಯಾವ ಮೇರೆಯೂ ಇರಲಾರದು. ಅಂತಹ ಯಂತ್ರಣವನ್ನು ಸಮರ್ಥಿಸಲು ನಮ್ಮ ಬಳಿ ಯಾವ ವೈಚಾರಿಕ ಪುರಾವೆಯೂ ಇರಲಾರದು.

(ತರ್ಜುಮಾನುಲ್ ಕುರ್‌ಆನ್- ಜನವರಿ, 1962)

38

ಧರ್ಮ ವಿಧಿಗಳಲ್ಲಿ ಸಂಶೋಧನೆ

- *ನನ್ನ ಒಬ್ಬ ಜರ್ಮನ್ ಮಿತ್ರನಿದ್ದಾನೆ. ಅವನೊಂದಿಗೆ ನನಗೆ ಪತ್ರ ವ್ಯವಹಾರ
ಅವನು ನನ್ನಲ್ಲಿ ಕೆಲವು ಸಂಶಯಗಳನ್ನು ತೋಡಿಕೊಂಡಿದ್ದಾನೆ. ಇತ್ತೀಚೆಗೆ ಅ
ಒಂದು ಪತ್ರ ಬಂದಿತ್ತು. ಕರ್ಮಶಾಸ್ತ್ರದ ವಿಧಿಗಳಲ್ಲಿ 'ಇಜ್ತಿಹಾದ್'ನ (ಸಂಶೋ
ನಿಯಮದಂತೆ ಎಷ್ಟರ ಮಟ್ಟಿಗೆ ಪರಿವರ್ತನೆ ಮಾಡಬಹುದೆಂದು ಆತ ಅದ
ವಿಚಾರಿಸಿದ್ದಾನೆ. ಅವನ ಅಭಿಪ್ರಾಯದಂತೆ ಇಸ್ಲಾಮ್‌ನ ಹೆಚ್ಚಿನ ವಿಧಿಗಳು ಕರ್ಮಶಾ
ಪಂಡಿತರ ಸಂಶೋಧನೆಗಳಿಂದ ಕ್ರೋಢೀಕರಿಸಲ್ಪಟ್ಟಿವೆ. ಅವು ಪ್ರವಾದಿ(ಸ) ಅ
ನಿಧನಾನಂತರದ ಕೆಲವು ವಿಶಿಷ್ಟ ಭೌಗೋಳಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿ
ಸೃಷ್ಟಿಯಾಗಿವೆ. ಕೆಲವು ಶತಮಾನಗಳ ತನಕ ಸಂಶೋಧನೆಯ ದ್ವಾರ ತೆರೆದಿ
ಅನಂತರ ತಾತ್ವಿಕವಾಗಿ ಸಂಶೋಧನೆಯ ಅಗತ್ಯವನ್ನು ಅಂಗೀಕರಿಸಿದರೂ ಕಾಯ
ಅದನ್ನು ಮುಚ್ಚಿ ಬಿಡಲಾಯಿತು. ಇದರಿಂದಾಗಿ ಇಂದಿನ ಪರಿಸ್ಥಿತಿಯಲ್ಲಿ ವಿಶೇಷ
ಐರೋಪ್ಯ ಮುಸ್ಲಿಮರಿಗೆ ಕೆಲವು ವಿಧಿಗಳ ಪಾಲನೆಯು ಕ್ಲಿಷ್ಟವಾಗುತ್ತಿ
ಉದಾಹರಣೆಯ ರೂಪದಲ್ಲಿ ಅವರು ವುಝೂವಿನ ಸಮಸ್ಯೆಯನ್ನು ಮುಂದಿಡುತ್ತಾ
ವುಝೂ ಮಾಡುವಾಗ ಪ್ರತಿ ಸಲ ಕಾಲು ತೊಳೆಯುವುದು ಐರೋಪ್ಯರಿಗೆ ಅನ
ಮತ್ತು ಕಷ್ಟವೆಂದು ಭಾಸವಾಗುತ್ತದೆ. ಅಲ್ಲಿನ ಜನರು ಸದಾ ಕಾಲು ಚೀಲ ಮ
ಶೂ ಧರಿಸಿರುತ್ತಾರೆ. ಆದ್ದರಿಂದ ಕಾಲುಗಳಿಗೆ ಧೂಳಾಗುವ ಅಥವಾ ಮಲಿನವಾ
ಸಾಧ್ಯತೆ ಬಹಳ ಕಡಿಮೆ. ಚಳಿಗಾಲದಲ್ಲಿ ಕಾಲು ತೊಳೆಯುವುದು ಸುಲಭವೂ ಅ
ಮುಖದ ಅವಸ್ಥೆಯೂ ಇದುವೇ ಆಗಿದೆ. ಐರೋಪ್ಯ ರಾಷ್ಟ್ರಗಳಲ್ಲಿ ಸಾಮಾನ್ಯ
ಧೂಳು ಏಳುವುದಿಲ್ಲ. ಬೆವರುವುದು ಕೂಡಾ ಬಹಳ ಅಪರೂಪ. ಆದ್ದರಿಂದ ಅ
ಅಭಿಪ್ರಾಯದಂತೆ ಮುಖ ಮತ್ತು ಕಾಲುಗಳನ್ನು ದಿನಕ್ಕೊಮ್ಮೆ ತೊಳೆದರೆ ಸಾಕಾಗುತ್ತ
ದಯವಿಟ್ಟು ನನ್ನ ಮಿತ್ರನ ವಿಚಾರಗಳ ಬಗ್ಗೆ ಸರಿಯಾದ ಇಸ್ಲಾಮಿ ದೃಷ್ಟಿಕೋನದಿ
ವಿಮರ್ಶೆ ಮಾಡಿ ಅವರಿಗೆ ತೃಪ್ತಿಕರ ಉತ್ತರ ನೀಡಲು ನೆರವಾಗುವಿರೆಂದು ಹಾರೈಸುತ್ತೆ*

○ ನಿಮ್ಮ ಜರ್ಮನ್ ಮಿತ್ರರು ಕರ್ಮಶಾಸ್ತ್ರ ವಿದ್ವಾಂಸರು ವಿವರಿಸಿರುವ ವಿಧಿಗಳ
ಪರಿಸ್ಥಿತಿಗನುಗುಣವಾಗಿ ಎಷ್ಟರವರೆಗೆ ತಿದ್ದುಪಡಿ ಸಾಧ್ಯವೆಂದು ತಮ್ಮ ಪ್ರಶ್ನೆಯ

ರಂಭಿಸಿದ್ದಾರೆ. ಆದರೆ ಅವರು ಒಂದು ನಿರ್ದಿಷ್ಟ ಉದಾಹರಣೆಯನ್ನು ಮುಂದಿಡುವಾಗ ರ್ಮಶಾಸ್ತ್ರ ಪಂಡಿತರ ವಿಧಿಗಳಲ್ಲ ಸ್ವಯಂ ಪವಿತ್ರ ಕುರ್‌ಆನ್‌ನ ಸ್ಪಷ್ಟ ಆದೇಶದಲ್ಲೇ ಪ್ಪುಪಡಿಯ ಪ್ರಶ್ನೆ ಉಂಟಾಗುತ್ತದೆ. ವುಝೂವಿನಲ್ಲಿ ಮುಖ, ಕೈ ಮತ್ತು ಕಾಲುಗಳನ್ನು ಳೆಯುವ ಆಜ್ಞೆಯನ್ನು ಪವಿತ್ರ ಕುರ್‌ಆನ್‌ನಲ್ಲೇ ನೀಡಲಾಗಿದೆ. (ನೋಡಿರಿ ಅಲ್ ಾಇದಃ -6)

ಮುಖ ಮತ್ತು ಕಾಲುಗಳನ್ನು ತೊಳೆಯುವ ಆಜ್ಞೆಗೆ ನಿಮ್ಮ ಮಿತ್ರರು ತಿಳಿದಿರುವ ರಣವೂ ಸರಿಯಲ್ಲ. ಈ ಆಜ್ಞೆಯನ್ನು ಕೇವಲ ಧೂಳು ನೀಗಿಸಲಿಕ್ಕಾಗಿ ನೀಡಲಾಗಿದೆ, ಳು ಇಲ್ಲದಿದ್ದರೆ ಅದರ ಅಗತ್ಯವಿಲ್ಲ ಎಂದು ಅವರು ಭಾವಿಸಿದ್ದಾರೆ. ವಾಸ್ತವದಲ್ಲಿ ವರ ನೈಜ ಕಾರಣ ಇದಲ್ಲ. ನಿಜವಾಗಿ ಅಲ್ಲಾಹನು ತನ್ನ 'ಇಬಾದತ್'ಗೆ ಅರ್ಹನಾಗಿರುವ ತ್ತು ಅರ್ಹನಾಗದೆ ಇರುವ ಸ್ಥಿತಿಯ ಮಧ್ಯೆ ತಾರತಮ್ಯ ಮಾಡಬಯಸುತ್ತಾನೆ. ಮನುಷ್ಯನು ಲ್ಲಾಹನ 'ಇಬಾದತ್' ಮಾಡುವ ಸಂಕಲ್ಪ ಮಾಡಿದಾಗ ತನ್ನ ಶರೀರ ಮತ್ತು ಬಟ್ಟೆಯನ್ನು ವಲೋಕಿಸಿ ತಾನು ಅಲ್ಲಾಹನ ಮುಂದೆ ಹಾಜರಾಗಲು ಅರ್ಹನಾಗಿರುವೆನೋ ಇಲ್ಲವೋ ಬುದನ್ನು ನೋಡಿಕೊಳ್ಳಬೇಕೆಂದೂ ಹಾಜರಾಗಲು ಹೋಗುವ ಮುಂಚೆ ತನ್ನನ್ನು ಶುದ್ಧ ಾಡಿಕೊಂಡು ಕ್ರಮಬದ್ಧವಾಗಿ ಹೋಗಬೇಕೆಂದೂ ಅಲ್ಲಾಹನು ಬಯಸುತ್ತಾನೆ. ಈ ರೀತಿ ಬಾದತ್‌ನ ಮಹತ್ವವು ಮನಸ್ಸಿನಲ್ಲಿ ದೃಢವಾಗುತ್ತದೆ ಮತ್ತು ಮನುಷ್ಯನು ಅದನ್ನು ತನ್ನ ಕೃದ ಸಾಮಾನ್ಯ ಕೆಲಸಗಳಿಗಿಂತ ಭಿನ್ನವಾದ ಮತ್ತು ಉನ್ನತವಾದ ಕಾರ್ಯವೆಂದು ಬಗೆದು ರವೇರಿಸುತ್ತಾನೆ. ಆದ್ದರಿಂದ ಎಲ್ಲಿ ನೀರು ಸಿಗುವುದಿಲ್ಲವೋ ಅಲ್ಲಿ ತಯಮ್ಮುಮ್ ಾಡುವಂತೆ ವಿಧಿಸಲಾಗಿದೆ. ವಸ್ತುತಃ ತಯಮ್ಮುಮ್‌ನಿಂದ ಬಾಹ್ಯ ನೋಟಕ್ಕೆ ಯಾವುದೇ ದ್ಧತೆ ಉಂಟಾಗುವುದಿಲ್ಲ.

ಇದಲ್ಲದೆ ವುಝೂವಿನಲ್ಲಿ ಯಾವ ನೈರ್ಮಲ್ಯದ ಆಜ್ಞೆ ನೀಡಲಾಗಿದೆಯೋ ಅದರ ಂದು ಉಪ ಉದ್ದೇಶ ಐದು ಹೊತ್ತಿನ ನಮಾಝ್‌ನ ಮೂಲಕ ಮನುಷ್ಯನಿಗೆ ದ್ಧವಾಗಿರುವ ಅಭ್ಯಾಸ ಮಾಡಿಸುವುದಾಗಿದೆ. ಮಾಲಿನ್ಯವು ಕೇವಲ ಮಣ್ಣು ಮತ್ತು ಳಿನಿಂದ ಉಂಟಾಗುವುದಲ್ಲ. ಮನುಷ್ಯ ದೇಹದಿಂದ ರೋಮ ಕೂಪಗಳ ಮೂಲಕ ಂದಲ್ಲ ಒಂದು ಮಾಲಿನ್ಯ ಯಾವಾಗಲೂ ಹೊರ ಬೀಳುತ್ತಲೇ ಇರುತ್ತದೆ. ಅದನ್ನು ಳೆಯದಿದ್ದರೆ ಅದು ಶರೀರದ ಮೇಲೆ ಗಟ್ಟಿಯಾಗಿ ಅಂಟಿಕೊಂಡು ಅದರಿಂದ ದುರ್ಗಂಧ ಂಟಾಗುತ್ತದೆ. ಇದರಿಂದಾಗಿಯೇ ಅನೇಕ ಬಿಳಿಯರ ಬಾಯಿಯಿಂದ ವಾಸನೆ ಬರುತ್ತದೆ. ವರ ಶರೀರದಲ್ಲೂ ಒಂದು ರೀತಿಯ ದುರ್ಗಂಧ ಬರುತ್ತದೆ. ಅವರ ಕಾಲುಗಳಂತೂ

ಅತ್ಯಂತ ದುರ್ನಾತಭರಿತವಾಗಿರುತ್ತದೆ. ಅವರ ಕಾಲು ಚೀಲ ಮತ್ತು ಪಾದರಕ್ಷೆಗಳಿಂದಲ ದುರ್ವಾಸನೆ ಬರುತ್ತದೆ. ಇಸ್ಲಾಮ್ ತನ್ನ ಅನುಯಾಯಿಗಳು ಇಂತಹ ಅಸ ಸ್ಥಿತಿಯಲ್ಲಿರುವುದನ್ನು ಇಷ್ಟಪಡುವುದಿಲ್ಲ. ಐರೋಪ್ಯರು ಈ ದುರ್ವಾಸನೆಯನ್ನು ಅಡಗಿಸಲಿಕ್ಕಾ ಸುಗಂಧ ದ್ರವ್ಯಗಳನ್ನು ಬಳಸುತ್ತಾರೆ. ಆದರೆ ದುರ್ನಾತವನ್ನು ಬಾಹ್ಯ ಸುಗಂಧದಿಂ ಅಡಗಿಸುವುದು ನೈರ್ಮಲ್ಯವಲ್ಲ.

ಚಳಿಗಾಲದಲ್ಲಿ ಅಥವಾ ಚಳಿ ಪ್ರದೇಶದಲ್ಲಿ ಕಾಲು ತೊಳೆಯುವ ಕಷ್ಟದಿಂದ ರಕ್ಷಿಸ ಶರೀಅತ್‌ನಲ್ಲಿ ಮೊದಲಿನಿಂದಲೇ ಸೌಲಭ್ಯವನ್ನು ಇರಿಸಲಾಗಿದೆ. ವ್ಯಕ್ತಿಯು ಒಮ್ಮೆ ವುಝು ಮಾಡಿ ಕಾಲು ಚೀಲ ಧರಿಸಿದರೆ 24 ಗಂಟೆಗಳ ತನಕ ಮತ್ತು ಪ್ರಯಾಣಿಕನಾಗಿದ್ದರೆ ಗಂಟೆಗಳ ತನಕ ಕಾಲು ತೊಳೆಯಬೇಕಾಗಿಲ್ಲ. ಆದರೆ ಆ ಅವಧಿಯಲ್ಲಿ ಕಾಲುಚೀ ಕಳಚಬಾರದು.

ಪರಿಸ್ಥಿತಿ ಮತ್ತು ಅಗತ್ಯಗಳಿಗೆ ಅನುಸಾರವಾಗಿ ಇಸ್ಲಾಮ್‌ನ ಆಂಶಿಕ ವಿಧಿಗಳ ತಿದ್ದುಪಡಿ ಮಾಡಬಹುದಾಗಿದೆ. ಆದರೆ ಇಂತಹ ತಿದ್ದುಪಡಿ ಮಾಡಲು ಶರೀಅತ್ ಗಹನವಾದ ಪಾಂಡಿತ್ಯ ಇರಲೇಬೇಕು. ಪ್ರತಿಯೊಬ್ಬನಿಗೂ ಸಾರಾಸಗಟಾಗಿ ಈ ಅಧಿಕಾರಗಳನ ಕೊಡಲಾಗಿಲ್ಲ ಎಂದು ನಿಮ್ಮ ಜರ್ಮನ್ ಮಿತ್ರರಿಗೆ ತಿಳಿಸಿ ಬಿಡಿರಿ.

(ತರ್ಜುಮಾನುಲ್ ಕುರ್‌ಆನ್ ಆಗಸ್ಟ್- 196

39

ವಿಮೆ ಧರ್ಮಸಮ್ಮತವೇ?

ವಿಮೆಯ (Insurance) ವಿಷಯದಲ್ಲಿ ನನಗೆ ಸಂದೇಹವಿದೆ. ಇಸ್ಲಾಮಿನ ದೃಷ್ಟಿಯಲ್ಲಿ ವಿಮೆ ಮಾಡಿಸುವುದು ಧರ್ಮ ಸಮ್ಮತವೇ? ಅಲ್ಲವೇ? ಎಂಬುದನ್ನು ನನಗೆ ಸರಿಯಾಗಿ ತಿಳಿಯಲಾಗಲಿಲ್ಲ. ಒಂದು ವೇಳೆ ಪ್ರಸಕ್ತ ವಿಮೆಯ ವ್ಯವಹಾರವು ಧರ್ಮ ಸಮ್ಮತವಲ್ಲದಿದ್ದರೆ ಅದನ್ನು ಧರ್ಮ ಸಮ್ಮತಗೊಳಿಸಲು ಯಾವ ಉಪಾಯವಿದೆ? ಪ್ರಸಕ್ತ ಪರಿಸ್ಥಿತಿಯಲ್ಲಿ ನಾವು ಅದನ್ನು ತೊರೆದರೆ ನಮ್ಮ ಸಮಾಜ ಬಾಂಧವರು ಅನೇಕ ಪ್ರಯೋಜನಗಳಿಂದ ವಂಚಿತರಾಗುವರು. ಈ ವ್ಯವಹಾರವು ಲೋಕದಾದ್ಯಂತ ಇಂದು ನಡೆಯುತ್ತಿದೆ. ಪ್ರತಿಯೊಂದು ರಾಷ್ಟ್ರವು ದೊಡ್ಡ ಪ್ರಮಾಣದಲ್ಲಿ ಇನ್ಶೂರೆನ್ಸ್ ವ್ಯವಸ್ಥೆಯನ್ನು ಮಾಡಿಕೊಂಡು ಅದರಿಂದ ಪ್ರಯೋಜನ ಪಡೆಯುತ್ತಿದೆ. ಆದರೆ ನಮ್ಮಲ್ಲಿ ಇಂದಿಗೂ ಅದರ ಕುರಿತು ಸಂಶಯ-ಸಂದೇಹಗಳು ಉಳಿದುಕೊಂಡಿವೆ. ತಾವು ಈ ವಿಷಯದ ನೈಜ ಸ್ಥಿತಿಯನ್ನು ತಿಳಿಸುವ ಮೂಲಕ ನಮ್ಮ ಕೃತಜ್ಞತೆಗೆ ಪಾತ್ರರಾಗುತ್ತೀರೆಂದು ಆಶಿಸುತ್ತೇನೆ.

○ ಇನ್ಶೂರೆನ್ಸ್‌ನ ಕುರಿತು ಇಸ್ಲಾಮೀ ದೃಷ್ಟಿಕೋನದಂತೆ ಮೂರು ತಾತ್ವಿಕ ಆಕ್ಷೇಪಗಳಿವೆ. ಆದ್ದರಿಂದ ಅದನ್ನು ಧರ್ಮ ಸಮ್ಮತವೆನ್ನಲಾಗದು.

(1) ಇನ್ಶೂರೆನ್ಸ್ ಕಂಪೆನಿಗಳು ಪ್ರೀಮಿಯಮ್‌ನ (Premium) ರೂಪದಲ್ಲಿ ವಸೂಲಿ ಮಾಡುವ ಹಣದ ಒಂದು ದೊಡ್ಡ ಭಾಗವನ್ನು ಬಡ್ಡಿಯಾಧಾರಿತ ವ್ಯವಹಾರಗಳಲ್ಲಿ ತೊಡಗಿಸಿ ಅದರಿಂದ ಲಾಭ ಗಳಿಸುತ್ತವೆ. ಈ ಧರ್ಮಬಾಹಿರ ವ್ಯವಹಾರದಲ್ಲಿ ತಮ್ಮ ಜೀವದ ಅಥವಾ ವಸ್ತುವಿನ ವಿಮೆ ಮಾಡಿಸುವವರು ತನ್ನಿಂತಾನೇ ಪಾಲುದಾರರಾಗಿ ಬಿಡುತ್ತಾರೆ.

(2) ಮರಣ, ಅಪಘಾತ ಅಥವಾ ನಷ್ಟದ ಸಂದರ್ಭದಲ್ಲಿ ಹಣ ಕೊಡುವ ಜವಾಬ್ದಾರಿಯನ್ನು ಈ ಕಂಪೆನಿಗಳು ಹೊರುತ್ತವೆ. ಇದರಲ್ಲಿ ಜೂಜಿನ ತತ್ವವು ಅಡಕವಾಗಿದೆ.

(3) ಒಬ್ಬ ವ್ಯಕ್ತಿ ಮರಣ ಹೊಂದಿದರೆ ಇನ್ಶೂರೆನ್ಸ್ ಕಂಪೆನಿಗಳು ನೀಡುವ ಹಣವು ಇಸ್ಲಾಮ್‌ನ ದೃಷ್ಟಿಯಲ್ಲಿ ಸತ್ತವನ ವಾರೀಸು ಸೊತ್ತಾಗಿದೆ. ಅದು ಅವನ ಧರ್ಮಸಮ್ಮತ ವಾರಸುದಾರರಲ್ಲಿ ಹಂಚಲ್ಪಡಬೇಕು. ಆದರೆ ಈ ಹಣವನ್ನು ವಾರಸು ಸೊತ್ತಿನ ರೂಪದಲ್ಲಿ ಉತ್ತರಾಧಿಕಾರಿಗಳಿಗೆ ವಿತರಿಸಲಾಗುವುದಿಲ್ಲ. 'ಪಾಲಿಸಿ' ಹೊಂದಿದವನು ಯಾವ ವ್ಯಕ್ತಿ

ಅಥವಾ ವ್ಯಕ್ತಿಗಳಿಗೆ ಉಯಿಲು ಮಾಡಿರುವನೋ ಆ ಹಣ ಅವರಿಗೆ ಸಿಗುತ್ತದೆ. ವಸು ತನ್ನ ಕಾನೂನುಬದ್ಧ ಉತ್ತರಾಧಿಕಾರಿಗಳ ಪಾಲಿಗೆ ವಸಿಯ್ಯತ್ (ಉಯಿಲು) ಮಾಡುವ ಹ ಅವನಿಗಿರುವುದಿಲ್ಲ.

ಇನ್ನುಳಿದಿರುವುದು ಇನ್ಶೂರೆನ್ಸ್ ವ್ಯವಹಾರವನ್ನು ಇಸ್ಲಾಮೀ ತತ್ವಗಳ ಆಧಾರದ ಹೇಗೆ ನಡೆಸುವುದು ಎಂಬ ಪ್ರಶ್ನೆ. ಇದರ ಉತ್ತರವು ಪ್ರಶ್ನೆಯಷ್ಟು ಸುಲಭವಲ್ಲ. ಇ ಇಸ್ಲಾಮ್‌ನ ಸಿದ್ಧಾಂತಗಳನ್ನೂ ಇನ್ಶೂರೆನ್ಸ್‌ನ ವ್ಯವಹಾರವನ್ನೂ ಚೆನ್ನಾಗಿ ತಿಳಿದಿರ ಪರಿಣತರ ಒಂದು ತಂಡವು ಈ ವಿಷಯದ ಕೂಲಂಕಷ ಅಧ್ಯಯನ ನಡೆಸಬೇ ಶರೀಅತ್‌ನ ಯಾವುದೇ ಸಿದ್ಧಾಂತಕ್ಕೆ ಚ್ಯುತಿ ಬಾರದಂತೆ ಈ ವ್ಯವಹಾರವನ್ನು ನಡೆಸ ಪ್ರಚಲಿತ ಇನ್ಶೂರೆನ್ಸ್‌ನ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಬೇಕು. ಈ ಕಾರ್ಯ ಆಗ ತನಕ ಇನ್ಶೂರೆನ್ಸ್ ವ್ಯವಹಾರದಲ್ಲಿ ಪಾಲ್ಗೊಳ್ಳುವವರು ಕನಿಷ್ಠ ಪಕ್ಷ ತಾವು ಒಂ ತಪ್ಪು ಕೆಲಸ ಮಾಡುತ್ತಿದ್ದೇವೆಂಬುದನ್ನಾದರೂ ಅಂಗೀಕರಿಸಬೇಕು. ತಪ್ಪಿನ ಪ್ರಜ್ಞೆಯ ನಮ್ಮಲ್ಲಿ ಇಲ್ಲದೇ ಹೋದರೆ ಯಾವುದೇ ಸುಧಾರಣೆಯ ಪ್ರಮೇಯವೇ ಉಂಟಾಗುವುದಿ

ಈಗಿನ ಕಾಲದಲ್ಲಿ ಇನ್ಶೂರೆನ್ಸ್‌ಗೆ ಬಹಳ ಮಹತ್ವವಿದೆ ಎಂಬುದರಲ್ಲಿ ಸಂಶಯವಿ ಇಡೀ ಲೋಕದಲ್ಲಿ ಇಂದು ಅದು ನಡೆಯುತ್ತಿದೆ. ಆದರೆ ಈ ಪುರಾವೆಯಿಂದ ಯಾವು ಹರಾಮ್ (ನಿಷಿದ್ಧ) ವಸ್ತು ಹಲಾಲ್ (ಧರ್ಮಸಮ್ಮತ) ಆಗಿ ಬಿಡುವುದಿಲ್ಲ. ಲೋಕದ ನಡೆಯುತ್ತಿರುವುದೆಲ್ಲಾ ಹಲಾಲ್ ಆಗಿದೆ ಅಥವಾ ಲೋಕದಲ್ಲಿ ಅದು ನಡೆಯುತ್ತಿರುವುದರಿ ಅದು ಹಲಾಲ್ ಆಗಿರಲೇ ಬೇಕು ಎಂದು ಯಾರೂ ವಾದಿಸುವಂತಿಲ್ಲ. ಒಂದು ಮುಸ್ಲಿ ಸಮುದಾಯವೆಂಬ ನೆಲೆಯಲ್ಲಿ ಧರ್ಮಸಮ್ಮತ ಮತ್ತು ಧರ್ಮಬಾಹಿರ ವಸ್ತುಗಳ ಅಂತರವ ತಿಳಿಯುವುದು ಮತ್ತು ನಮ್ಮ ವ್ಯವಹಾರಗಳನ್ನು ಧರ್ಮಸಮ್ಮತ ಮಾರ್ಗಗಳಲ್ಲೇ ನಡೆಸುವು ನಮ್ಮ ಕರ್ತವ್ಯವಾಗಿದೆ. *(ತರ್ಜುಮಾನುಲ್ ಕುರ್‌ಆನ್, ಆಗಸ್ಟ್ - 19*

40

ಕಸ್ರ್ ಮತ್ತು ಕಝಾ ನಮಾಝ್

ನನ್ನ ಕೆಲವು ಇರಾಕೀ ಮಿತ್ರರು ಹಲವು ವರ್ಷಗಳಿಂದ ಲಂಡನ್‌ನಲ್ಲಿ ವಾಸಿಸುತ್ತಿದ್ದಾರೆ. ಅವರು ಈಗಲೂ ನಮಾಝನ್ನು ಕಸ್ರ್ ಮಾಡುತ್ತಾರೆ. ಪವಿತ್ರ ಕುರ್‌ಆನ್‌ನಲ್ಲಾಗಲೀ ಹದೀಸ್‌ಗಳಲ್ಲಾಗಲೀ ಪ್ರಯಾಣದ ಸ್ಥಿತಿಯ ಗರಿಷ್ಠ ಮಿತಿಯನ್ನು ನಿಗದಿಪಡಿಸಲಾಗಿಲ್ಲವೆಂದು ಅವರು ಹೇಳುತ್ತಾರೆ. ಅದು ಕೇವಲ ಕರ್ಮಶಾಸ್ತ್ರ ಪಂಡಿತರು ಮಾಡಿದ್ದು. ಆದ್ದರಿಂದ ಅದನ್ನು ನಾವು ಒಪ್ಪುವುದಿಲ್ಲವೆನ್ನುತ್ತಾರೆ. ನಾವು ನಮ್ಮ ಊರಿನಿಂದ ಹೊರಗಿರುವ ತನಕ ಪ್ರಯಾಣಿಕರಾಗಿದ್ದೇವೆ. ಅಷ್ಟರ ತನಕ ನಾವು ಕಸ್ರ್ ಮಾಡುತ್ತಿರುವೆವು. ಇಡೀ ಜೀವಮಾನ ಲಂಡನ್‌ನಲ್ಲಿ ಕಳೆಯಬೇಕಾಗಿ ಬಂದರೂ ಸರಿಯೇ ಎನ್ನುತ್ತಾರೆ. ಅವರ ಈ ನಿಲುವು ಸರಿಯಲ್ಲವೆಂದು ಅವರಿಗೆ ಮನಗಾಣಿಸುವುದು ಹೇಗೆ?

ಅವರ ಹೇಳಿಕೆಯ ಪ್ರಕಾರ ಉಪವಾಸ ವ್ರತಕ್ಕೆ ಮಾತ್ರ ಕಝಾ ಇದೆ, ನಮಾಝ್‌ಗೆ ಇಲ್ಲ. ಬಿಟ್ಟು ಹೋದ ಉಪವಾಸ ವ್ರತಗಳನ್ನು ಮತ್ತೆ ಆಚರಿಸಬೇಕೆಂದು ಕುರ್‌ಆನ್‌ನಲ್ಲಿದೆ. ಆದರೆ ನಮಾಝ್ ಒಮ್ಮೆ ಬಿಟ್ಟು ಹೋದರೆ ಅದು ಹೋದಂತೆಯೇ ಸರಿ. ಕುರ್‌ಆನ್‌ನಲ್ಲಾಗಲೀ ಹದೀಸ್‌ಗಳಲ್ಲಾಗಲೀ ಕಝಾ ನಮಾಝ್‌ನ ಪ್ರಸ್ತಾಪವೇ ಇಲ್ಲ. ಇದು ಸರಿಯೇ?

○ ಅರಬ್ ರಾಷ್ಟ್ರಗಳ ಈ ಯುವಕರು ಧರ್ಮದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಂದಿಲ್ಲ. ಮಾತ್ರವಲ್ಲ ಕರ್ಮಶಾಸ್ತ್ರ ಪಂಡಿತರ ಪೈಕಿ ಯಾರನ್ನು ಅನುಸರಿಸಲಿಕ್ಕೂ ಅವರು ದ್ಧರಿಲ್ಲ ಎಂಬುದು ವಿಷಾದದ ಸಂಗತಿ. ಆದ್ದರಿಂದಲೇ ಅವರ ಚಿತ್ರ ವಿಚಿತ್ರ ಸಂಶೋಧನೆಗಳು ನನಿತ್ಯ ಕೇಳಿ ಬರುತ್ತಿದೆ. ಪ್ರಯಾಣಿಕನ ವಿಷಯದಲ್ಲಿ ಇಮಾಮ್ ಶಾಫಿಈ, ಇಮಾಮ್ ಹ್ಮದ್ ಮತ್ತು ಒಂದು ವರದಿಯ ಪ್ರಕಾರ ಇಮಾಮ್ ಮಾಲಿಕ್(ರ) ಅವರ ಮತವೇನೆಂದರೆ ಒಬ್ಬನು ಯಾವುದಾದರೊಂದು ಊರಿನಲ್ಲಿ ನಾಲ್ಕು ದಿನಗಳು ಅಥವಾ ದಕ್ಕಿಂತ ಹೆಚ್ಚು ಸಮಯ ನಿಲ್ಲುವ ಉದ್ದೇಶ ಹೊಂದಿದ್ದರೆ ಅವನು ಕಸ್ರ್ ಮಾಡುವಂತಿಲ್ಲ. ರ್ತಿ ನಮಾಝ್ ಮಾಡಬೇಕು. ಹ. ಇಬ್ನು ಅಬ್ಬಾಸ್(ರ) ಮತ್ತು ಹ. ಅಲೀ(ರ) ಅವರ

ಅಭಿಮತವೇನೆಂದರೆ ಹತ್ತು ದಿನ ಅಥವಾ ಅದಕ್ಕಿಂತ ಹೆಚ್ಚು ತಂಗುವ ಉದ್ದೇಶವಿರುವವ ಪ್ರಯಾಣಿಕನೆಂದು ಪರಿಗಣಿಸಲ್ಪಡುವುದಿಲ್ಲ. ಇಮಾಮ್ ಔಝಾಈ ಇದಕ್ಕೆ 12 ದಿನಗ ಮತ್ತು ಇಮಾಮ್ ಅಬೂ ಹನೀಫಾ(ರ) ಅವರು 15 ದಿನಗಳ ಮಿತಿಯನ್ನು ನಿಗದಿಪಡಿಸಿದ್ದಾ ತನ್ನ ಊರಿಂದ ಹೊರಗೆ ಹೋಗಿ ಬೇರೆ ಊರಿನಲ್ಲಿ ತಿಂಗಳುಗಟ್ಟಲೆ ಮತ್ತು ವರ್ಷಗಟ್ಟ ತಂಗಿರುವವನು ಕೂಡಾ ಪ್ರಯಾಣಿಕನಾಗಿಯೇ ಪರಿಗಣಿಸಲ್ಪಡುವನು ಮತ್ತು ನಮಾಝ ಕಸ್ರ್ ಮಾಡುತ್ತಿರುವನು ಎಂದು ಇಸ್ಲಾಮಿ ಪಂಡಿತರ ಪೈಕಿ ಯಾರೂ ಅಭಿಪ್ರಾ ಪಟ್ಟಿಲ್ಲ. ಒಂದು ವೇಳೆ ಒಬ್ಬನು ಒಂದು ಊರಿನಲ್ಲಿ ತಾತ್ಕಾಲಿಕವಾಗಿ ತಂಗಿದ್ದು ಯಾ ಕ್ಷಣದಲ್ಲಾದರೂ ಅಲ್ಲಿಂದ ಹೊರಟು ಹೋಗುವ ಸಾಧ್ಯತೆ ಇದ್ದರೆ ಮತ್ತು ಅವನಿಗೆ ಅ ತಂಗುವ ಉದ್ದೇಶವಿಲ್ಲದಿದ್ದರೆ ಅವನು ಅಲ್ಲಿ ತಿಂಗಳುಗಟ್ಟಲೆ ವಾಸಿಸಿದರೂ ಪ್ರಯಾಣಿಕನ ಕಸ್ರ್ ಮಾಡಬಹುದೆಂದು ಕರ್ಮಶಾಸ್ತ್ರ ವಿದ್ವಾಂಸರು ಹೇಳುತ್ತಾರೆ. ಇದೇ ಕಾರಣದಿಂ ಪ್ರವಾದಿ(ಸ) ತಬೂಕ್‌ನಲ್ಲಿ 15 ದಿನಗಳ ಮತ್ತು ಮಕ್ಕಾ ವಿಜಯದ ಸಂದರ್ಭದಲ್ಲಿ ದಿನಗಳ ಕಾಲ ಕಸ್ರ್ ಮಾಡಿದ್ದರು. (ಮುಸ್ನದ್ ಅಹ್ಮದ್, ಅಬೂ ದಾವೂದ್) ಕಾರಣದಿಂದಲೇ ಸಹಾಬಿಗಳ ಸೇನೆಯು ಅಝರ್‌ಬೈಜಾನ್‌ನಲ್ಲಿ ಎರಡು ತಿಂಗಳ ತ ಕಸ್ರ್ ಮಾಡಿತ್ತು. *(ಮುಸ್ನದ್, ಅಹ್ಮದ*

ಇವರು ನಮಾಝ್‌ನ ಕಝಾವನ್ನು ಒಪ್ಪುವುದಿಲ್ಲವೆಂಬುದೂ ಆಶ್ಚರ್ಯಕರ ಸಂಗ ಇದು ಅನೇಕ ಹದೀಸ್‌ಗಳಿಂದ ವ್ಯಕ್ತವಾಗಿರುವ ಒಂದು ವಿಷಯವಾಗಿದೆ. ಇಸ್ಲಾಮ್‌ನ ಎ ಕರ್ಮಶಾಸ್ತ್ರ ಪಂಡಿತರ ಮಧ್ಯೆ ಈ ಬಗ್ಗೆ ಒಮ್ಮತಾಭಿಪ್ರಾಯವಿದೆ. ಇಡೀ ಇಸ್ಲಾಮಿ ಇತಿಹಾಸದಲ್ಲಿ ಕರ್ಮಶಾಸ್ತ್ರ ವಿದ್ವಾಂಸರ ಪೈಕಿ ಒಬ್ಬನಾದರೂ ಉಪವಾಸ ವ್ರತಕ್ಕೆ ಮಾ ಕಝಾ ಇರುವುದು ನಮಾಝ್‌ಗೆ ಇಲ್ಲ ಎಂದು ಪ್ರತಿಪಾದಿಸಿಲ್ಲ. ಬುಖಾರಿ, ಮುಸ್ಲಿಮ ಅಬೂ ದಾವೂದ್, ನಸಾಈ, ಇಬ್ನು ಮಾಜಃ, ತಿರ್ಮಿದಿ ಮತ್ತು ಮುಸ್ನದ್ ಅಹ್ಮದ ಎಂಬ ಹದೀಸ್ ಗ್ರಂಥಗಳಲ್ಲಿ ಹ. ಅನಸ್(ರ), ಹ. ಅಬೂ ಹುರೈರಾ(ರ) ಮತ್ತು ಅಬೂ ಕತಾದಃ ಅನ್ಸಾರಿ(ರ) ಅವರಿಂದ ವರದಿಯಾಗಿರುವ ಹದೀಸ್‌ಗಳ ಪ್ರಕಾರ ಒ ವ್ಯಕ್ತಿಯು ಒಂದು ನಮಾಝನ್ನು ಮರೆತರೆ ಅಥವಾ ಅವನು ನಿದ್ರೆ ಹೋಗಿದ್ದು ನಮಾಝ್ ವೇಳೆಯು ಕಳೆದು ಹೋಗಿದ್ದರೆ ಅವನಿಗೆ ನೆನಪಾದಾಗ ಅಥವಾ ಅವನು ಎಚ್ಚರಗೊಂಡಾ ಬಿಟ್ಟು ಹೋದ ನಮಾಝನ್ನು ನಿರ್ವಹಿಸಬೇಕು ಎಂದು ಪ್ರವಾದಿ(ಸ) ಹೇಳಿರುವರು.

ಇದು ಪ್ರವಾದಿವರ್ಯರ(ಸ) ಮೌಖಿಕ ಆಜ್ಞೆಯಾಗಿದೆ. ಅವರ ಕ್ರಿಯೆಯ ಬ ಹೇಳುವುದಾದರೆ ಪ್ರವಾದಿ(ಸ) ಮತ್ತು ಸಹಾಬಿಗಳು ಬಿಟ್ಟು ಹೋದ ನಮಾಝ್‌ಗಳನ

ರ್ವಹಿಸಿದ ಬಗ್ಗೆ ಅಬೂ ಸಈದ್ ಕುದ್ರೀ, ಜಾಬಿರ್ ಬಿನ್ ಅಬ್ದುಲ್ಲಾ, ಇಮ್ರಾನ್ ಬಿನ್ ಸ್ಸೀನ್(ರ) ಅವರಿಂದ ಅನೇಕ ವರದಿಗಳು ಮುಸ್ನದ್ ಅಹ್ಮದ್, ಬುಖಾರಿ, ಮುಸ್ಲಿಮ್ ುತ್ತು ನಸಾಈಯಲ್ಲಿ ಉಲ್ಲೇಖಗೊಂಡಿವೆ. ಒಂದು ಪ್ರಯಾಣದ ವೇಳೆ ರಾತ್ರಿಯಿಡೀ ನಡೆದ ಳಿಕ ಯಾತ್ರಾತಂಡವು ಒಂದೆಡೆ ಬಿಡಾರ ಹೂಡಿತು. ಆಗಲೇ ಎಲ್ಲರಿಗೂ ನಿದ್ರೆ ಆವರಿಸಿತು. ೂರ್ಯ ಉದಿಸಿ ಬಿಸಿಯೇರಿದಾಗ ಜನರು ಎಚ್ಚರಗೊಂಡರು. ಪ್ರವಾದಿ(ಸ) ಕೂಡಲೇ ದಾನ್ ಹೇಳುವಂತೆ ಆದೇಶಿಸಿದರು. ಜಮಾಅತ್ ಸಹಿತ ಫಜ್ರ್ ನಮಾಝ್ ನಿರ್ವಹಿಸಿದರು. ಂದಕ್ ಯುದ್ಧದ ವೇಳೆ ಒಂದು ದಿನ ಅಸರ್ ನಮಾಝ್ ಕಝಾ ಆಯಿತು. ಮಗ್ರಿಬ್‌ನ ಮಯದಲ್ಲಿ ಪ್ರವಾದಿ(ಸ) ಅದನ್ನು ನಿರ್ವಹಿಸಿದರು. ಅದೇ ಯುದ್ಧದ ವೇಳೆ ಒಂದು ದಿನ ಝುಹರ್, ಅಸರ್ ಮತ್ತು ಮಗ್ರಿಬ್‌ನ ನಮಾಝ್‌ಗಳು ಕಝಾ ಆದುವು. ಇಶಾದ ವೇಳೆ ಆರಂಭವಾಗುವ ಸಮಯದಲ್ಲಿಯೇ ಈ ಮೂರೂ ನಮಾಝ್‌ಗಳನ್ನು ನಿರ್ವಹಿಸಲಾಯಿತು.

ಈ ವಿವರಣೆಯ ನಂತರ ಬಿಟ್ಟು ಹೋದ ನಮಾಝ್‌ನ ಕಝಾ ರ್ವಹಿಸಬೇಕಾಗಿಲ್ಲವೆಂದು ಹೇಳುವ ಅವಕಾಶ ಯಾರಿಗಾದರೂ ಇದೆಯೇ?

(ತರ್ಜುಮಾನುಲ್ ಕುರ್‌ಆನ್, ಜುಲೈ 1966)

41

ಬಿದ್‌ಅತ್ ಎಂದರೇನು?

● *ಬಿದ್‌ಅತ್‌ನಲ್ಲಿ ಹಸನಃ ಮತ್ತು ಸಯ್ಯಿಅಃ ಎಂಬ ಎರಡು ವಿಧಗಳಿವೆಯೇ? ಕೆಲವರು ಹ. ಉಮರ್ ಫಾರೂಕ್(ರ) ಅವರ ಒಂದು ವಚನದ ಆಧಾರದಲ್ಲಿ ಬಿದ್‌ಅತ್‌ನಲ್ಲಿ ಹಸನ(ಉತ್ತಮ) ಎಂಬುದೂ ಇದೆ ಎಂದು ಸಮರ್ಥಿಸುತ್ತಾರೆ. ಹದೀಸ್‌ನಲ್ಲಿ ಯಾವ ರೀತಿಯ ಬಿದ್‌ಅತ್‌ಗಳನ್ನು ಝುಲಾಲತ್(ಪಥಭ್ರಷ್ಟತೆ) ಎನ್ನಲಾಗಿದೆ?*

○ ಶರೀಅತ್‌ನ ಪಾರಿಭಾಷಿಕದಲ್ಲಿ ಯಾವುದನ್ನು 'ಬಿದ್‌ಅತ್' ಎನ್ನುತ್ತಾರೋ ಅದರಲ್ಲಿ 'ಹಸನಃ' ಎಂಬ ವಿಧವಿಲ್ಲ. ಎಲ್ಲ 'ಬಿದ್‌ಅತ್'ಗಳೂ 'ಸಯ್ಯಿಅಃ' ಮತ್ತು 'ಝುಲಾಲತ್' (ಕೆಡುಕು ಮತ್ತು ಪಥಭ್ರಷ್ಟತೆ) ಆಗಿವೆ. ಏಕೆಂದರೆ ಹದೀಸ್‌ನಲ್ಲಿ 'ಕುಲ್ಲು ಬಿದ್‌ಅತಿನ್ ಝುಲಾಲತ್' ಎನ್ನಲಾಗಿದೆ. ಆದರೆ ಶಬ್ದ ಕೋಶಾರ್ಥದ ಪ್ರಕಾರ 'ಬಿದ್‌ಅತ್' ಉತ್ತಮವೂ ಆಗಬಹುದು ಕೆಟ್ಟದೂ ಆಗಬಹುದು. ಹ. ಉಮರ್ ಫಾರೂಕ್(ರ) ತರಾವೀಹ್ ಜಮಾಅತ್‌ನ ಕುರಿತು ಹೇಳಿರುವ "ನಿಅ್‌ಮತುಲ್ ಬಿದ್‌ಅತು ಹಾದಿಹೀ" ಎಂಬ ಮಾತಿನಲ್ಲಿ 'ಬಿದ್‌ಅತ್' ಎಂದಿರುವುದು ಶರೀಅತ್ ಪಾರಿಭಾಷಿಕವಾದ 'ಬಿದ್‌ಅತ್' ಅಲ್ಲ. ಅದು ಶಬ್ದ ಕೋಶಾರ್ಥದ 'ಬಿದ್‌ಅತ್' ಆಗಿರಲು ಮಾತ್ರ ಸಾಧ್ಯ. ಆದ್ದರಿಂದ ಆ ಮಾತಿನ ಆಧಾರದಲ್ಲಿ 'ಹಸನಃ' ಎಂಬ ಒಂದು 'ಬಿದ್‌ಅತ್' ಇದೆ ಎನ್ನುವಂತಿಲ್ಲ.

ಈ ವಿಷಯವನ್ನು ಚೆನ್ನಾಗಿ ತಿಳಿಯಲಿಕ್ಕೆ ಮೊದಲು 'ಬಿದ್‌ಅತ್'ಗೆ ಶರೀಅತ್‌ನಲ್ಲಿ ಇರುವ ತಾತ್ಪರ್ಯವೇನೆಂಬುದನ್ನು ತಿಳಿದು ಕೊಳ್ಳಬೇಕು. ಅನಂತರ ತರಾವೀಹ್ ಜಮಾಅತ್ ಸಹಿತ ನಿರ್ವಹಿಸುವ ಕ್ರಮವನ್ನು ಜಾರಿಗೊಳಿಸಿರುವುದು ಆ ತಾತ್ಪರ್ಯದ ಪ್ರಕಾರ 'ಬಿದ್‌ಅತ್'ನ ಅರ್ಥ ವ್ಯಾಪ್ತಿಯಲ್ಲಿ ಬರುತ್ತದೆಯೇ ಎಂಬುದನ್ನು ಪರಿಶೀಲಿಸಬೇಕು.

ಅರಬೀ ಭಾಷೆಯಲ್ಲಿ 'ಬಿದ್‌ಅತ್' ಎಂಬ ಪದವನ್ನು ಇತರ ಭಾಷೆಗಳ(ಕನ್ನಡ) 'ನವೀನತೆ' ಎಂಬ ಪದದ ಅರ್ಥದಲ್ಲೇ ಬಳಸಲಾಗುತ್ತದೆ. ಅಂದರೆ ಹಿಂದೆ ಆಗದಿರುವ ಅಥವಾ ಯಾವುದೇ ಉದಾಹರಣೆ ಇಲ್ಲದಿರುವ ಒಂದು ಹೊಸ ವಿಷಯ. ಆದರೆ ಶರೀಅತ್‌ನಲ್ಲಿ ಈ ಪದವನ್ನು ಅಷ್ಟು ವಿಶಾಲ ಅರ್ಥದಲ್ಲಿ ಬಳಸಲಾಗುವುದಿಲ್ಲ. ಈ ಅರ್ಥದಲ್ಲಿ ಎಲ್ಲ ಹೊಸ ವಸ್ತು, ಕಾರ್ಯ ಅಥವಾ ವಿಧಾನವನ್ನು ಪಥಭ್ರಷ್ಟತೆ ಎನ್ನಲಾಗಿಲ್ಲ. ಶರೀಅತ್‌ನ ಪಾರಿಭಾಷಿಕದಲ್ಲಿ 'ಬಿದ್‌ಅತ್'ನ ತಾತ್ಪರ್ಯವೇನೆಂದರೆ ಯಾವ ವಿಷಯ ಮತ್ತು ಸಮಸ್ಯೆಗಳನ್ನು ಇಸ್ಲಾಮ್ ಧರ್ಮವು ತನ್ನ ವ್ಯಾಪ್ತಿಯಲ್ಲಿ ತೆಗೆದು ಕೊಂಡಿದೆಯೋ

ವುಗಳಲ್ಲಿ ಧರ್ಮದ ಮೂಲ(ಕುರ್‌ಆನ್, ಹದೀಸ್, ಇಜ್ಮಾಅ್ ಮತ್ತು ಕಿಯಾಸ್)ಗಳಲ್ಲಿ ಯಾವುದೇ ಆಧಾರ ಪ್ರಮಾಣವಿಲ್ಲದಂತಹ ದೃಷ್ಟಿಕೋನ ಅಥವಾ ಕಾರ್ಯವಿಧಾನವನ್ನು ಅನುಸರಿಸುವುದು. ಈ ವಿವರಣೆಯ ಪ್ರಕಾರ ಯಾವ ವಿಷಯ ಅಥವಾ ಸಮಸ್ಯೆಯಲ್ಲಿ ಧರ್ಮವು ಸಕಾರಾತ್ಮಕ ಅಥವಾ ನಕಾರಾತ್ಮಕವಾದ ಯಾವುದೇ ಮಾರ್ಗದರ್ಶನ ನೀಡುವುದಿಲ್ಲವೋ, ಯಾವ ವಿಷಯ ಅಥವಾ ಸಮಸ್ಯೆಗಳ ಕುರಿತು ಪ್ರವಾದಿ(ಸ) "ನಿಮ್ಮ ಲೌಕಿಕ ವ್ಯವಹಾರವನ್ನು ನೀವೇ ಚೆನ್ನಾಗಿ ಬಲ್ಲಿರಿ" ಎಂದು ಹೇಳಿರುವರೋ ಅವುಗಳಲ್ಲಿ ಸುನ್ನತ್ ಮತ್ತು ಬಿದ್‌ಅತ್‌ನ ಚರ್ಚೆಗೆ ಆಸ್ಪದವೇ ಇರುವುದಿಲ್ಲ. ಒಂದು ವಿಷಯವು ಬಿದ್‌ಅತ್ ಆಗಿದೆಯೋ ಇಲ್ಲವೋ ಎಂಬ ಪ್ರಶ್ನೆ ಏಳುವುದು ಧರ್ಮವು ಮಾರ್ಗದರ್ಶನ ಮಾಡಿರುವ ವಿಷಯಗಳಲ್ಲಿ ಮಾತ್ರ. ವಿಶ್ವಾಸ-ಶ್ರದ್ಧೆಗಳು, ವಿಚಾರ-ಸಿದ್ಧಾಂತಗಳು, ಆರಾಧನೆಗಳು, ನೀತಿ-ನಡವಳಿಕೆಗಳು, ಧಾರ್ಮಿಕ ಆಚಾರಗಳು, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾನ್ಯವಾಗಿ ಲೌಕಿಕ ವ್ಯವಹಾರಗಳೆಂದು ಪರಿಗಣಿಸಲ್ಪಡುವ ಯಾವುದೇ ವಿಷಯದಲ್ಲಿ ಅಲ್ಲಾಹನು ಮತ್ತು ಆತನ ಪ್ರವಾದಿ(ಸ) ಯಾವುದಾದರೂ ಆಜ್ಞೆ ನೀಡಿದ್ದರೆ ಅಥವಾ ಮಾರ್ಗದರ್ಶನ ಮಾಡಿದ್ದರೆ ಮಾತ್ರ ಅಲ್ಲಿ 'ಬಿದ್‌ಅತ್'ನ ಪ್ರಶ್ನೆ ಏಳುತ್ತದೆ. ಈ ವಿಷಯದ ಬಗ್ಗೆ ಅಲ್ಲಾಹನ ಗ್ರಂಥ, ಪ್ರವಾದಿ(ಸ) ಅವರ ಶಿಕ್ಷಣ ಮತ್ತು ಮಾರ್ಗದರ್ಶನದಿಂದ ಯಾವುದಾದರೂ ಉಲ್ಲೇಖವಿಲ್ಲದೆ ಅಥವಾ ಈ ಮೂಲ ಆಧಾರಗಳಿಂದ ಯಾವುದಾದರೂ ಸಮರ್ಥನೆಯಿಲ್ಲದೆ ಒಂದು ಆಚಾರವನ್ನು ಜಾರಿಗೆ ತಂದರೆ ಅದು 'ಬಿದ್‌ಅತ್' ಎನಿಸುತ್ತದೆ. ಅದು ಕುರ್‌ಆನ್ ಮತ್ತು ಹದೀಸ್‌ನ ಶಿಕ್ಷಣಕ್ಕೆ ವಿರುದ್ಧವಾಗಿದ್ದರೆ ಬಿದ್‌ಅತ್ ಆಗುವುದು ಮಾತ್ರವಲ್ಲ ಫಿಸ್ಕ್ (ದುರಾಚಾರ) ಮತ್ತು ಮಅಸಿಯ್ಯತ್ (ಅಪರಾಧ) ಕೂಡಾ ಆಗುವುದು.

ಶರೀಅತ್‌ನಲ್ಲಿ 'ಬಿದ್‌ಅತ್'ಗೆ ಇರುವ ತಾತ್ಪರ್ಯವನ್ನು ವಿವರಿಸಿದ ಬಳಿಕ ಈ ಅರ್ಥದಲ್ಲಿ ಯಾವ ವಿಷಯವು 'ಬಿದ್‌ಅತ್' ಆಗಿರುವುದೋ ಅದು ಹಸನಃ(ಉತ್ತಮ) ಆಗಿರಬಹುದೆಂಬ ಕಲ್ಪನೆಯನ್ನೂ ಮಾಡಲು ಸಾಧ್ಯವಿಲ್ಲ. ಅದು ಸಯ್ಯಿಅಃ(ಕೆಡುಕು) ಮಾತ್ರ ಆಗಿರುವುದು ಸಾಧ್ಯ. ಏಕೆಂದರೆ ಧರ್ಮವೆಂಬುದು ಅಲ್ಲಾಹ್ ಮತ್ತು ಆತನ ಪ್ರವಾದಿಯವರ ಶಿಕ್ಷಣ ಮತ್ತು ಮಾರ್ಗದರ್ಶನದ ಮೇಲೆ ಆಧಾರಿತವಾದ ಜೀವನ ವ್ಯವಸ್ಥೆಯಾಗಿದೆ. ಈ ಶಿಕ್ಷಣ ಮತ್ತು ಮಾರ್ಗದರ್ಶನಕ್ಕೆ ಅನುಗುಣವಾಗಿರದ ಯಾವುದೇ ವಿಷಯವನ್ನು ಅದರಲ್ಲಿ ಸೇರಿಸುವುದು ಸಾಧ್ಯವೇ ಇಲ್ಲ. ಅಂತಹ ವಿಷಯ ಅದರಲ್ಲಿ ಸೇರಿಕೊಂಡಾಗ ಆ ಧರ್ಮದ ಪ್ರವೃತ್ತಿ ಮತ್ತು ಸಂಯೋಜನೆಯನ್ನೇ ಕೆಡಿಸಿ ಬಿಡುವುದು. ಹಾಗಿರುವಾಗ ಕೆಡಿಸುವಂತಹ ಯಾವುದಾದರೂ ವಸ್ತು ಹಸನಃ(ಉತ್ತಮ) ಆಗುವುದಾದರೂ ಹೇಗೆ?

ಯಾವುದನ್ನು ಹ. ಉಮರ್(ರ) ಅವರು ಉತ್ತಮ 'ಬಿದ್‌ಅತ್' ಎಂದಿರುವರೋ ಅದು ಶರೀಅತ್‌ನ ಪಾರಿಭಾಷಿಕದಲ್ಲಿ 'ಬಿದ್‌ಅತ್'ಗೆ ಇರುವ ಅರ್ಥವ್ಯಾಪ್ತಿಯಲ್ಲಿ ಬರುತ್ತದೆಯೇ ಎಂಬುದನ್ನು ನೋಡಿರಿ.

ರಮಝಾನ್‌ನಲ್ಲಿ ಇಶಾ ನಮಾಝ್‌ನ ನಂತರ ತರಾವೀಹ್ ಎಂದು ಕರೆಯಲ್ಪಡು 'ಕಿಯಾಮುಲ್ಲೈಲ್'ಗೆ ಸಂಬಂಧಿಸಿ ಹೇಳುವುದಾದರೆ ಅದು ಧರ್ಮಸಮ್ಮತ ಮಾತ್ರವ ಅಪೇಕ್ಷಣೀಯವೂ ಸುನ್ನತೂ ಆಗಿದೆ. ಪ್ರವಾದಿ(ಸ) ಅದಕ್ಕೆ ಪ್ರೇರೇಪಿಸಿರುವರು. ಅದ ಇತರ ದಿನಗಳ ಕಿಯಾಮುಲ್ಲೈಲ್‌ಗಿಂತ ಹೆಚ್ಚಿನ ಪ್ರಾಮುಖ್ಯ ನೀಡಿರುವರು. ಸ್ವ ಪ್ರವಾದಿವರ್ಯರು(ಸ) ಅದನ್ನು ಆಚರಿಸಿರುವರು. ಅದನ್ನು ಜಮಾಅತ್ ಸಹಿತ ನಿರ್ವಹಿಸು ಬಗ್ಗೆ ಹೇಳುವುದಾದರೆ ಅದು ಕೂಡ ಪ್ರವಾದಿ(ಸ) ಅವರ ಕಾಲದಲ್ಲಿ ಅವರ ತಿಳಿವಳಿಕೆಯಲ್ಲಿ ಕಾರ್ಯರೂಪಕ್ಕೆ ಬಂದಿದೆ. ಪ್ರವಾದಿ(ಸ) ಅದಕ್ಕೆ ಅನುಮತಿ ನೀಡಿದ್ದರು. ಮಸ್ಜಿದುನ್ನಬವಿಯ ರಮಝಾನ್‌ನ ರಾತ್ರಿಗಳಲ್ಲಿ ಅನೇಕ ಜನರು ನಮಾಝ್ ಮಾಡುತ್ತಿದ್ದರು. ಯಾರಿಗೆ ಎಷ ಕುರ್‌ಆನ್ ಕಂಠಪಾಠವಿತ್ತೋ ಅವರು ಅಷ್ಟನ್ನೇ ಪಠಿಸುತ್ತಿದ್ದರು. ಒಬ್ಬರ ಹಿಂದೆ ಒಬ್ಬರು ಇನ್ನೊಬ್ಬರ ಹಿಂದೆ ಐವರು, ಮತ್ತೊಬ್ಬರ ಹಿಂದೆ ಏಳು ಮಂದಿ ಹೀಗೆ ವಿಭಿ ಸಂಖ್ಯೆಯಲ್ಲಿ ಮುಕ್ತದೀ(ಅನುಯಾಯಿ)ಗಳು ನಿಂತು ನಮಾಝ್ ಮಾಡುತ್ತಿದ್ದರು ಎಂದ ಮುಸ್ನದ್ ಅಹ್ಮದ್ ಎಂಬ ಹದೀಸ್ ಗ್ರಂಥದಲ್ಲಿ ಹ. ಆಯಿಶಾ(ರ) ಅವರು ವರ ಮಾಡಿರುವರು. ಇನ್ನು ಎಲ್ಲರನ್ನೂ ಒಬ್ಬ ಇಮಾಮರ ಹಿಂದೆ ಒಟ್ಟುಗೂಡಿಸಿ ಜಮಾಅತ ಸಹಿತ ತರಾವೀಹ್ ನಮಾಝ್ ಮಾಡುವ ಕುರಿತು ಹೇಳುವುದಾದರೆ ಅದನ್ನು ಕೂಡ ಪ್ರವಾದಿ(ಸ) ಅನೇಕ ಸಲ ಆಚರಿಸಿ ತೋರಿಸಿದ್ದಾರೆ. ತಿರ್ಮಿದಿ, ಅಬೂ ದಾವೂದ್ ಮತ್ತು ಇತರ ಹದೀಸ್ ಗ್ರಂಥಗಳಲ್ಲಿ ಹ. ಅಬೂದರ್(ರ) ಅವರು ಒಂದು ರಮಝಾನ್ ಕಥೆಯನ್ನು ಹೀಗೆ ವಿವರಿಸುತ್ತಾರೆ. "ತಿಂಗಳು ಮುಗಿಯಲು ಏಳು ದಿನಗಳು ಉಳಿದಿದ್ದು ಪ್ರ ರಾತ್ರಿ ವೇಳೆ ಪ್ರವಾದಿ(ಸ) ನಮಗೆ ನಮಾಝ್ ಮಾಡಿಸಿದರು. ಅದರಲ್ಲೇ ಮೂರನೆಯ ಒಂದು ರಾತ್ರಿ ಕಳೆದು ಹೋಯಿತು. ಅನಂತರ ಒಂದು ದಿನ ಬಿಟ್ಟು ಒಂದು ದಿನ ಸಹರಿಯ ಸಮಯದ ತನಕ ನಮಾಝ್ ಮಾಡಿಸುತ್ತಿದ್ದರು."

ಬುಖಾರಿ ಮತ್ತು ಮುಸ್ಲಿಮ್ ಹದೀಸ್ ಗ್ರಂಥಗಳಲ್ಲಿ ಹ. ಆಯಿಶಾ(ರ) ಇನ್ನೊಂದು ರಮಝಾನ್ ತಿಂಗಳ ವೃತ್ತಾಂತವನ್ನು ವಿವರಿಸಿರುತ್ತಾರೆ. ಪ್ರವಾದಿ(ಸ) ಎರಡು ಅಥವಾ ಮೂರು ದಿವಸ ನಿರಂತರ ತರಾವೀಹ್ ನಮಾಝ್ ಮಾಡಿಸಿದರು. ಅನಂತರ ಮೂರನೆಯ ಅಥವಾ ನಾಲ್ಕನೆಯ ದಿನ ಜನರು ಸೇರಿದಾಗ ಪ್ರವಾದಿ(ಸ) ಮನೆಯಿಂದ ಹೊರ ಬರಲೆ ಇಲ್ಲ. ಅನಂತರ, ಹೊರ ಬಾರದಿರಲು ಕಾರಣ 'ಅದು ಕಡ್ಡಾಯವೆಂದು ಸಾರಲ್ಪಡದಿರಲಿ ಎಂದು ತಿಳಿಸಿದ್ದರು.

ಇದರಿಂದ ತಿಳಿದು ಬರುವುದೇನೆಂದರೆ ಇದೆಲ್ಲವೂ ಸುನ್ನತ್ ಆಗಿತ್ತು. ಇನ್ನು ಈ ಪದ್ಧತಿಯನ್ನು ಶಾಶ್ವತವಾಗಿ ಜಾರಿಗೊಳಿಸಿದ ಹ. ಉಮರ್(ರ) ಅವರ ಕ್ರಮವನ್ನು ಮಾತ್ರ

ಹೊಸ ವಿಷಯ ಎನ್ನಬಹುದಾಗಿದೆ. ಆದರೆ ಅದನ್ನು ಬಿದ್‌ಅತ್ ಎನ್ನಲಾಗದು. ಏಕೆಂದರೆ ಯಾವಾಗಲೂ ತರಾವೀಹ್ ನಮಾಝನ್ನು ಜಮಾಅತ್ ಸಹಿತ ನಿರ್ವಹಿಸದೆ ಇರಲು ಪ್ರವಾದಿ(ಸ) ನೀಡಿದ ಕಾರಣವು 'ಅದು ಜನರ ಮೇಲೆ ಕಡ್ಡಾಯವಾಗದಿರಲಿ' ಎಂಬುದಾಗಿತ್ತು. ಪ್ರವಾದಿ(ಸ) ಅವರ ಪ್ರಕಾರ ಈ ಪದ್ಧತಿಯು ಜಾರಿಗೆ ಬರುವುದು ಇತರ ಎಲ್ಲ ನೆಲೆಗಳಲ್ಲೂ ಅಪೇಕ್ಷಣೀಯವೇ ಆಗಿತ್ತು ಎಂಬುದನ್ನು ಈ ಕಾರಣವೇ ಸೂಚಿಸುತ್ತದೆ. ಪ್ರವಾದಿ(ಸ) ಅದನ್ನು ಜಾರಿಗೊಳಿಸಿದರೆ ಅದು ಕಡ್ಡಾಯವಾಗಿ ಬಿಡುವುದೋ ಎಂಬ ಭಯ ಅವರಿಗಿತ್ತು. ಇದುವೇ ಅದನ್ನು ಶಾಶ್ವತವಾಗಿ ಜಾರಿಗೊಳಿಸುವುದಕ್ಕೆ ಅಡ್ಡಿಯಾಗಿತ್ತು. ಪ್ರವಾದಿ(ಸ) ಅವರ ನಿಧನಾನಂತರ ಈ ಭಯಕ್ಕೆ ಆಸ್ಪದವೇ ಇಲ್ಲ. ಏಕೆಂದರೆ ಬೇರೆ ಯಾವ ವ್ಯಕ್ತಿಯ ಆಚಾರವೂ ಶರೀಅತ್‌ನಲ್ಲಿ ಒಂದು ವಿಷಯ ಕಡ್ಡಾಯವಾಗುವುದಕ್ಕೆ ಪುರಾವೆಯಾಗುವುದಿಲ್ಲ. ಆದ್ದರಿಂದ ಪ್ರವಾದಿ(ಸ) ಅವರು ಒಡ್ಡಿದ ಈ ಕಾರಣದಲ್ಲಿದ್ದ ಇಂಗಿತವನ್ನು ಹ. ಉಮರ್(ರ) ಪೂರ್ತಿಗೊಳಿಸಿದರು. ಅರ್ಥಾತ್: ಈ ಪದ್ಧತಿ ಜಾರಿಯಾಗಬೇಕು. ಆದರೆ ಅದು ಕೇವಲ ಸುನ್ನತ್ ಆಗಿರಬೇಕೇ ಹೊರತು ಫರ್ಝ್ ಅಥವಾ ಕಡ್ಡಾಯವಾಗಬಾರದು. ಕೆಲವರಿಗೆ ಇದೊಂದು 'ಬಿದ್‌ಅತ್' ಆಗಲಾರದೇ ಎಂಬ ಸಂಶಯ ಉಂಟಾದಾಗ ಹ. ಉಮರ್(ರ) ಅವರು 'ಇದು ಉತ್ತಮ ಬಿದ್‌ಅತ್ ಆಗಿದೆ' ಎನ್ನುತ್ತಾ ಅದನ್ನು ನೀಗಿಸಿದರು. ಅರ್ಥಾತ್: ಇದು ಹೊಸ ವಿಷಯ ಹೌದು. ಆದರೆ ಶರೀಅತ್‌ನಲ್ಲಿ ಆಕ್ಷೇಪಾರ್ಹವಾಗುವಂತಹ ಹೊಸ ವಿಷಯವಲ್ಲ. ಆದ್ದರಿಂದಲೇ ಸಹಾಬಿಗಳೆಲ್ಲರೂ ಒಮ್ಮತದಿಂದ ಈ ಪದ್ಧತಿಯ ಜಾರಿಯನ್ನು ಅಂಗೀಕರಿಸಿದರು. ಅವರ ನಂತರ ಇಡೀ ಮುಸ್ಲಿಮ್ ಸಮುದಾಯ ಅದನ್ನು ಆಚರಿಸುತ್ತಾ ಬಂದಿದೆ. ಅನ್ಯಥಾ ಹ. ಉಮರ್(ರ) ಅವರು ಶರೀಅತ್‌ನಲ್ಲಿ ಬಿದ್‌ಅತ್ ಎಂದು ಪರಿಗಣಿಸಲ್ಪಡುವ ಒಂದು ಪದ್ಧತಿಯನ್ನು ಜಾರಿಗೊಳಿಸಿರುವರೆಂದೂ ಸಹಾಬಿಗಳ ಇಡೀ ಸಮುದಾಯವೇ ಅದನ್ನು ಕಣ್ಣು ಮುಚ್ಚಿ ಅಂಗೀಕರಿಸಿತೆಂದೂ ಊಹಿಸುವುದು ಕೂಡಾ ಅಸಾಧ್ಯ. *(ತರ್ಜುಮಾನುಲ್ ಕುರ್‌ಆನ್ : ಅಕ್ಟೋಬರ್, ನವೆಂಬರ್ 1957)*

42

'ತವಸ್ಸುಲ್'

- *ದುಆಗಳಲ್ಲಿ 'ಬಿಜಾಹಿ ಫುಲಾನಿನ್' ಮತ್ತು 'ಬಿಹುರ್ಮತಿ ಫುಲಾನಿನ್' ಎಂದ ಸೇರಿಸುವುದರ ಧಾರ್ಮಿಕ ವಿಧಿಯೇನು? ಪ್ರವಾದಿಚರ್ಯೆ ಏನು ಹೇಳುತ್ತದೆ? ಸಹಾಬಿಗ ನಡವಳಿಕೆ ಹೇಗಿತ್ತು? ಈ ರೀತಿ ದುಆ ಮಾಡುವುದು ಧಾರ್ಮಿಕವಾಗಿ ಆಕ್ಷೇಪಾರ್ಹವೇ*

○ ದುಆದಲ್ಲಿ ಯಾರದಾದರೂ 'ಸ್ಥಾನಮಾನ' ಅಥವಾ 'ಗೌರವ'ದ ವಸೀ ನೀಡುವುದು ಅಲ್ಲಾಹನು ಮತ್ತು ಅವನ ಪ್ರವಾದಿ(ಸ) ನಮಗೆ ಕಲಿಸಿದ ಕ್ರಮವಲ್ಲ ಕುರ್‌ಆನ್‌ನಲ್ಲಿ ಇಂತಹ ಕಲ್ಪನೆಯೇ ನಮಗೆ ಸಿಗುವುದಿಲ್ಲ. ನನ್ನ ತಿಳಿವಳಿಕೆಯಂತೆ ಇದಕ್ಕೆ ಹದೀಸ್‌ನಲ್ಲಿಯೂ ಯಾವುದೇ ಆಧಾರವಿಲ್ಲ. ಯಾವ ಸಹಾಬಿಯೂ ಸ್ವಯಂ ಈ ರೀತಿ ಪ್ರಾರ್ಥಿಸಿರುವುದಾಗಲಿ ಇತರರಿಗೆ ಅದನ್ನು ಕಲಿಸಿರುವುದಾಗಲಿ ನನಗೆ ತಿಳಿದಿಲ್ಲ. ಸರ್ವ ಲೋಕ ಪರಿಪಾಲಕನ ಮುಂದೆ ಪ್ರಾರ್ಥಿಸುವಾಗ ಅವನ ದಾಸರ ಪೈಕಿ ಯಾರದಾದರೂ 'ವಸೀಲಾ' ನೀಡುವ ಅಥವಾ ಅವರ ಮೂಲಕ ನನ್ನ ಆಶೆಯನ್ನು ಈಡೇರಿಸು ಎಂದು ಪ್ರಾರ್ಥಿಸುವ ಈ ಕ್ರಮವನ್ನು ಮುಸ್ಲಿಮರು ಎಲ್ಲಿಂದ ಕಲ್ಪಿಸಿಕೊಂಡರು ಎಂದು ತಿಳಿಯದು ಈ ರೀತಿ ಮಾಡುವುದು ನಿಷಿದ್ಧವೆಂದು ನಾನು ಹೇಳುವುದಿಲ್ಲ. ನಾನು ಎರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.

1. ಈ ರೀತಿ ಮಾಡುವುದು ಅಲ್ಲಾಹನು ನಮಗೆ ಕಲಿಸಿ ಕೊಟ್ಟ ಪ್ರಾರ್ಥನಾ ವಿಧಾನಕ್ಕೆ ಅನುಗುಣವಾಗಿಲ್ಲ. ಪ್ರವಾದಿ(ಸ) ತಮ್ಮ ಅನುಯಾಯಿಗಳಿಗೆ ನೇರವಾಗಿ ಕಲಿಸಿ ಕೊಟ್ಟ ಪ್ರಾರ್ಥನಾ ಕ್ರಮಕ್ಕೂ ಇದು ಅನುಗುಣವಾಗಿಲ್ಲ. ಆದ್ದರಿಂದ ಈ ಕ್ರಮವನ್ನು ಕೈ ಬಿಡುವುದೇ ಉತ್ತಮ. ಏಕೆಂದರೆ ಪ್ರವಾದಿ ಮುಹಮ್ಮದ್(ಸ) ಮತ್ತು ಇತರೆಲ್ಲ ಪ್ರವಾದಿಗಳು ಬಂದ ಉದ್ದೇಶ ಅಲ್ಲಾಹನ ಮತ್ತು ಅವನ ದಾಸರ ಮಧ್ಯೆ ಸಂಬಂಧದ ಸರಿಯಾದ ಕ್ರಮವನ್ನು ಕಲಿಸುವುದಕ್ಕಾಗಿತ್ತು. ಅವರು ಸ್ವಯಂ ಈ ಕ್ರಮವನ್ನು ಅನುಸರಿಸದಿರುವಾಗ ಮತ್ತು ಇತರರಿಗೆ ಅದನ್ನು ಕಲಿಸದಿರುವಾಗ ಯಾರು ಆ ಕ್ರಮವನ್ನು ಅನುಸರಿಸುತ್ತಾನೋ ಅವನು ಅಧಿಕೃತ ಕ್ರಮವನ್ನು ಬಿಟ್ಟು ಅನಧಿಕೃತ ಕ್ರಮವನ್ನು ಅನುಸರಿಸಿದಂತಾಗುತ್ತದೆ.

2. ನನಗೆ ಪ್ರಾರ್ಥನೆಯ ಈ ವಿಧಾನದಲ್ಲಿ ಅರೋಚಕತೆ ಅನುಭವವಾಗುತ್ತದೆ ಇತರರು ಅದರ ಅರ್ಥವನ್ನು ನಿರ್ಲಕ್ಷಿಸಿದುದರಿಂದ ಅರೋಚಕತೆ ಅನುಭವಿಸದೆ ಇರಬಹುದು

ನು ಪ್ರಾರ್ಥನೆಯ ಈ ವಿಧಾನದ ಇಂಗಿತಗಳ ಕುರಿತು ಚಿಂತಿಸಿದಾಗ ನನ್ನ ಮುಂದೆ ಂದ ಚಿತ್ರವು ಈ ರೀತಿಯಿದೆ: ಒಬ್ಬ ದೊಡ್ಡ ದಾನಿಯಿದ್ದಾನೆ. ಅವನ ಮನೆಯ ಬಾಗಿಲು ಲ್ಲರ ಪಾಲಿಗೂ ಸದಾ ತೆರೆದಿರುತ್ತದೆ. ಅವನ ಕರುಣೆ, ಅನುಗ್ರಹಗಳು ಸಾರ್ವತ್ರಿಕವಾಗಿವೆ. ಲ್ಲರ ಆಶೆಗಳೂ ಅಲ್ಲಿ ಈಡೇರುತ್ತವೆ. ಯಾರು ಬೇಕಾದರೂ ಅಲ್ಲಿ ಹೋಗಿ ಬೇಡಬಹುದು. ಾರ ಪಾಲಿಗೂ ಅವನ ಕೊಡುಗೆ ಸ್ಥಗಿತಗೊಳ್ಳುವುದಿಲ್ಲ. ಇಂತಹ ವ್ಯಕ್ತಿಯ ಬಳಿ ಒಬ್ಬನು ರುತ್ತಾನೆ. "ಓ ದಯಾಳು, ಕರುಣಾಮಯಿ! ನನಗೆ ಸಹಾಯ ಮಾಡು" ಎಂದು ಆತ ೇಳುವುದಿಲ್ಲ. ಬದಲಾಗಿ "ನಿಮ್ಮ ಇಂತಿಂತಹ ಸ್ನೇಹಿತನಿಗಾಗಿ ನನ್ನ ಆಶೆಯನ್ನು ಪೂರೈಸಿರಿ" ನ್ನುತ್ತಾನೆ. ಬೇಡುವ ಈ ಕ್ರಮದಲ್ಲಿ ಒಂದು ರೀತಿಯ ಅವಿಶ್ವಾಸ ಅಡಗಿದೆ. ಅವನು ನ್ನ ದಯೆ ಮತ್ತು ಕರುಣೆಯ ಗುಣದಿಂದಾಗಿ ನೀಡುವುದಲ್ಲ. ಬದಲಾಗಿ ತನ್ನ ಮಿತ್ರರು, ್ನೇಹಿತರು ಮತ್ತು ಆಪ್ತರಿಗಾಗಿ ಉಪಕಾರ ಮಾಡುತ್ತಾನೆ. ಅವರ ವಸೀಲಾ ನೀಡದೆ ಇದ್ದರೆ ವನಿಂದ ಏನೂ ದೊರಕುವ ನಿರೀಕ್ಷೆಯಿಲ್ಲ. ಇನ್ನು 'ಬಿಜಾಹಿ ಫುಲಾನಿನ್' ಎಂದು ಹೇಳಿ ್ರಾರ್ಥಿಸಿದರೆ ಅದು ಅವಿಶ್ವಾಸಕ್ಕಿಂತಲೂ ಹೆಚ್ಚಿನದ್ದಾಗಿರುತ್ತದೆ. ಅದರಿಂದ ನೀವು ಅವನ ೇಲೆ ಒತ್ತಡ ಹೇರಿದಂತಾಗುತ್ತದೆ. ನಾನು ಇಂತಿಂತಹ ದೊಡ್ಡ ವ್ಯಕ್ತಿಯ ಮೂಲಕ ಂದಿರುವೆನು. ಆದ್ದರಿಂದ ನನ್ನ ಅರ್ಜಿಯನ್ನು ಏನೂ ವರ್ಚಸ್ಸಿಲ್ಲದವನ ಅರ್ಜಿಯೆಂದು ರಸ್ಕರಿಸಿ ಬಿಡಬಾರದು. ಈ ದುಆದ ಧಾಟಿ ಇದು ಅಲ್ಲವೆಂದಾದರೆ ನನಗೆ ಅದನ್ನು ತಿಳಿಸಿ ೊಡಿ. ನನ್ನ ಮನಸ್ಸಿನ ಅಳುಕು ದೂರವಾಗಿ ನಾನು ಸಂತೋಷ ಪಡುವೆ. ಒಂದು ವೇಳೆ ಈ ಪ್ರಾರ್ಥನೆಯ ನೈಜ ಇಂಗಿತ ಇದುವೇ ಆಗಿದ್ದರೆ ಅಲ್ಲಾಹನ ಪರಿಪೂರ್ಣ ಗುಣಗಳ ಗ್ಗೆ ನಂಬಿಕೆಯುಳ್ಳವನು ಇಂತಹ ಪ್ರಾರ್ಥನಾ ವಿಧಾನವನ್ನು ಕೈಗೊಳ್ಳುವುದನ್ನು ಕಲ್ಪಿಸಲಿಕ್ಕೂ ಾಧ್ಯವಿಲ್ಲ.

ಈ ಕಾರಣಗಳಿಗಾಗಿಯೇ ಕರ್ಮಶಾಸ್ತ್ರ ವಿದ್ವಾಂಸರು ಕೂಡಾ ಈ ರೀತಿಯ ಪ್ರಾರ್ಥನಾ ್ರಮವನ್ನು ಮಕ್ರೂಹ್ (ಅರೋಚಕ) ಎಂದು ಸಾರಿರುವರು. ಹನಫೀ ಕರ್ಮಶಾಸ್ತ್ರದ ುಪ್ರಸಿದ್ಧ ಗ್ರಂಥ 'ಹಿದಾಯ'ದಲ್ಲಿ ಹೀಗಿದೆ:

ಒಬ್ಬ ವ್ಯಕ್ತಿಯು ತನ್ನ ದುಆದಲ್ಲಿ 'ಬಿಹಕ್ಕಿ ಫುಲಾನಿನ್' ಅಥವಾ 'ಬಿಹಕ್ಕಿ ಅಂಬಿಯಾ ವ ರುಸುಲ್' ಎನ್ನುವುದು ಮಕ್ರೂಹ್ ಆಗಿದೆ. ಏಕೆಂದರೆ ಸೃಷ್ಟಿಗಳ ಬಗ್ಗೆ ಅಲ್ಲಾಹನ ಮೇಲೆ ಯಾವ ಹಕ್ಕೂ ಇರುವುದಿಲ್ಲ.

(ತರ್ಜುಮಾನುಲ್ ಕುರ್‌ಆನ್, ಅಕ್ಟೋಬರ್-ನವೆಂಬರ್: 1957)

43

ಅಲ್ಲಾಹನ ಮತ್ತು ಹೆತ್ತವರ ಹಕ್ಕುಗಳು

- *ನಾನೊಂದು ತೀವ್ರ ಸಂಘರ್ಷದಲ್ಲಿದ್ದೇನೆ. ತಮ್ಮ ಮಾರ್ಗದರ್ಶನವನ್ನು ಬಯಸುತ್ತೇನೆ. ನಾನು ಜಮಾಅತ್‌ನ ಓರ್ವ ಪೂರ್ಣಾವಧಿ ಕಾರ್ಯಕರ್ತ. ಆದ್ದರಿಂದ ನನಗೆ ಮನೆಯಿಂದ ದೂರವಿರಬೇಕಾಗುತ್ತದೆ. ನನ್ನ ಹೆತ್ತವರು ನಾನು ಅವರ ಬಳಿಯಿದ್ದು ವ್ಯಾಪಾರ ಆರಂಭಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ನೀನು ಹೆತ್ತವರ ಹಕ್ಕುಗಳನ್ನು ನಿರ್ಲಕ್ಷಿಸುತ್ತಿರುವಿ ಎಂದು ಅವರು ಆಗಾಗ ನನಗೆ ಪತ್ರ ಬರೆಯುತ್ತಿರುತ್ತಾರೆ. ಈ ಬಗ್ಗೆ ನಾನು ಸದಾ ಕಳವಳದಲ್ಲಿರುತ್ತೇನೆ. ಒಂದೆಡೆ ನನಗೆ ತಂದೆ-ತಾಯಿಗಳ ಹಕ್ಕುಗಳ ತೀವ್ರ ಪ್ರಜ್ಞೆ ಕಾಡುತ್ತದೆ. ಇನ್ನೊಂದೆಡೆ ಅಲ್ಲಾಹನ ಧರ್ಮದ ಸಂಸ್ಥಾಪನೆಯ ಉದ್ದೇಶಕ್ಕಾಗಿ ನಾನು ಜಮಾಅತ್‌ನ ಕಾರ್ಯಕರ್ತನಾಗಿ ಮುಂದುವರಿಯುವುದು ಅಗತ್ಯವೆನಿಸುತ್ತದೆ. ಈ ಬಗ್ಗೆ ನಾನು ಯಾವುದೇ ಅತಿರೇಕದಿಂದ ದೂರ ಉಳಿಯುವಂತಾಗಲು ತಮ್ಮ ಸಲಹೆಗಳ ಅಗತ್ಯವಿದೆ. ವಿಚಾರಗಳ ಭಿನ್ನತೆಯ ಕಾರಣ ಮನೆಯಲ್ಲಿ ನನ್ನ ಜೀವನ ಬಹಳ ಕಷ್ಟಕರವಾಗಲಿದೆ ಎಂಬುದು ಕೂಡಾ ನನಗೆ ತಿಳಿದಿದೆ. ಆದರೆ ಒಂದು ವೇಳೆ ಶರೀಅತ್‌ನ ಪ್ರಕಾರ ಅವರ ಬೇಡಿಕೆಯು ಅಂಗೀಕಾರ ಯೋಗ್ಯವಾಗಿದ್ದರೆ ನಾನು ಆ ಕಷ್ಟವನ್ನು ಸಸಂತೋಷ ಸಹಿಸುವುದು ಒಳ್ಳೆಯದು. ನನ್ನ ತಂದೆಯವರು ನನ್ನ ಪ್ರತಿಯೊಂದು ಮಾತನ್ನು ಆಕ್ಷೇಪಿಸುತ್ತಾರೆ. ನನ್ನ ಕಡೆಯಿಂದ ಅತ್ಯಂತ ನಮ್ರತೆಯ ಉತ್ತರವನ್ನು ಕೇಳಲಿಕ್ಕೂ ಅವರು ಸಿದ್ಧವಾಗುವುದಿಲ್ಲ.*

○ ಜಮಾಅತೆ ಇಸ್ಲಾಮಿ ಮತ್ತು ಅದರ ಉದ್ದೇಶದೊಂದಿಗೆ ಸಹಾನುಭೂತಿಯಿಲ್ಲದೆ ಇರುವ ಹೆತ್ತವರನ್ನು ಹೊಂದಿದ ಯುವಕರಿಗೆ ಹೆತ್ತವರ ಅನುಸರಣೆ ಮತ್ತು ಧರ್ಮದ ಸೇವೆಯ ಮಧ್ಯೆ ಸಮತೋಲನದ ಸಮಸ್ಯೆಯು ಕಳವಳಕಾರಿಯಾಗಿರುತ್ತದೆ. ಸಾಮಾನ್ಯವಾಗಿ ಮಗ ಸರಕಾರಿ ನೌಕರನಾಗಿದ್ದಾಗ ಅಥವಾ ಉತ್ತಮ ವ್ಯಾಪಾರದಲ್ಲಿ ತೊಡಗಿರುವಾಗ ಆತ ಸಹಸ್ರಾರು ಮೈಲಿ ದೂರವಿದ್ದರೂ ಹೆತ್ತವರು ಅದನ್ನು ಸಹಿಸಿಕೊಳ್ಳುತ್ತಾರೆ. ನೀನು ಕೆಲಸ ಅಥವಾ ವ್ಯಾಪಾರ ಬಿಟ್ಟು ಬಂದು ನಮ್ಮ ಸೇವೆ ಮಾಡುತ್ತಿರು ಎಂದು ಆಗ ಅವರು ಅವನಿಗೆ ಹೇಳುವುದಿಲ್ಲ. ಮಗನ ಜೀವನಶೈಲಿಯು ಇಸ್ಲಾಮಿಗೆ ವಿರುದ್ಧವಾಗಿದ್ದರೂ ಅವರು

ಸಾಮಾನ್ಯವಾಗಿ ಆಕ್ಷೇಪಿಸುವುದಿಲ್ಲ. ಆದರೆ ಮಗನೊಬ್ಬ ತನ್ನನ್ನು ಅಲ್ಲಾಹನ ಧರ್ಮದ ಸೇವೆಯಲ್ಲಿ ತೊಡಗಿಸಿಕೊಂಡಾಗ ಮಾತ್ರ ಅವರಿಗೆ ತಮ್ಮ ಎಲ್ಲ ಹಕ್ಕುಗಳ ನೆನಪಾಗುತ್ತದೆ. ಜಮಾಅತ್ ಅಂತಹವರಿಗೆ ಉತ್ತಮ ಸಂಬಳ ನೀಡುತ್ತಿದ್ದರೂ ಅವರು ಆತ ಮನೆಯಲ್ಲಿದ್ದುಕೊಂಡು ತಮ್ಮ ಸೇವೆ ಮಾಡುತ್ತಿರಬೇಕೆಂದು ಹಠತೊಡುತ್ತಾರೆ. ಅವರ ಹಕ್ಕುಗಳನ್ನು ತೀರಿಸಿದಾಗಲೂ ಅವರಿಗೆ ಸಮಾಧಾನವಾಗುವುದಿಲ್ಲ. ಅವನ ಪ್ರತಿಯೊಂದು ಮಾತು ಅವರಿಗೆ ಆಕ್ಷೇಪಾರ್ಹವೆನಿಸುತ್ತದೆ. ಅವನ ಯಾವ ಸೇವೆಯಿಂದಲೂ ಅವರು ತೃಪ್ತರಾಗುವುದಿಲ್ಲ. ಈ ಪರಿಸ್ಥಿತಿಯನ್ನು ಬಹಳ ಕಾಲದಿಂದ ನಾನು ನೋಡುತ್ತಿರುವೆನು. ಜಮಾಅತ್‌ನ ಅನೇಕ ಯುವಕರು ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ನಿಮ್ಮಲ್ಲಿರುವ ಪರಿಸ್ಥಿತಿ ಏನೆಂಬುದು ನನಗೆ ನಿಖರವಾಗಿ ತಿಳಿದಿಲ್ಲ. ನಿಮ್ಮ ಹೇಳಿಕೆಯಿಂದ ತಿಳಿದು ಬರುವ ಪರಿಸ್ಥಿತಿಯೇ ಆಗಿದ್ದರೆ ಅದು ನಿಮ್ಮ ಹೆತ್ತವರ ಅತಿರೇಕವೆನಿಸುತ್ತದೆ. ನೀವು ಕೆಲಸ ಮಾಡುತ್ತಿರುವಲ್ಲೇ ಕೆಲಸವನ್ನು ಮುಂದುವರಿಸಿ. ನಿಮಗೆ ಸಾಧ್ಯವಿದ್ದಷ್ಟು ಅವರಿಗೆ ಆರ್ಥಿಕ ನೆರವು ನೀಡುತ್ತಲಿರಿ. ನಿಮಗೆ ಸ್ವಲ್ಪ ಕಷ್ಟವಾದರೂ ಚಿಂತಿಸದೆ ಅವರಿಗೆ ಗರಿಷ್ಠ ಹಣ ಕಳುಹಿಸುತ್ತಲಿರಿ. ಸಾಧ್ಯವಾದಾಗಲೆಲ್ಲಾ ಅವರಲ್ಲಿಗೆ ಹೋಗಿ ಬರುತ್ತಲಿರಿ. ಒಂದು ವೇಳೆ ಪರಿಸ್ಥಿತಿಯು ಇದಕ್ಕಿಂತ ಭಿನ್ನವಾಗಿದ್ದು ನಿಮ್ಮ ಹೆತ್ತವರಿಗೆ ನಿಮ್ಮ ಉಪಸ್ಥಿತಿಯು ನಿಜವಾಗಿ ಅಗತ್ಯವಾಗಿದ್ದರೆ ನೀವು ಅವರ ಮಾತು ಕೇಳುವುದು ಒಳ್ಳೆಯದು. ಅಲ್ಲಿದ್ದುಕೊಂಡೇ ನಿಮಗೆ ಸಾಧ್ಯವಿರುವ ಧಾರ್ಮಿಕ ಸೇವೆ ಮಾಡುತ್ತಲಿರಿ.

(ತರ್ಜುಮಾನುಲ್ ಕುರ್‌ಆನ್- ಜನವರಿ- 1956)

44

ಅಲ್ಲಾಹೇತರರಿಗೆ ಸುಜೂದ್

- *ನಾನು ತಫ್ಹೀಮುಲ್ ಕುರ್‌ಆನ್ ಓದುತ್ತಿರುವೆನು. 'ಶಿರ್ಕ್'ನ ವಿಷಯದಲ್ಲಿ ಗೊಂದಲಕ್ಕೀಡಾಗಿದ್ದೇನೆ. ದಯವಿಟ್ಟು ಮಾರ್ಗದರ್ಶನ ಮಾಡಿರಿ. ತಫ್ಹೀಮುಲ್ ಕುರ್‌ಆನ್‌ನ ದೃಢವಾದ ಅಧ್ಯಯನದಿಂದ 'ಆಲಿಮುಲ್‌ಗೈಬ್ (ಪರೋಕ್ಷ ಜ್ಞಾನಿ), ಸಮೀಅ್(ಸರ್ವಶ್ರುತ) ಮತ್ತು ಬಸೀರ್ (ಸರ್ವ ವೀಕ್ಷಕ) ಎಂಬುದು ಅಲ್ಲಾಹನ ವಿಶಿಷ್ಟ ಗುಣಗಳಲ್ಲಿ ಸೇರಿವೆ ಎಂದು ಮನವರಿಕೆಯಾಯಿತು. ಅಲ್ಲಾಹನ ಹೊರತು ಇತರರಿಗೆ ಈ ಗುಣಗಳನ್ನು ಆರೋಪಿಸುವುದು 'ಶಿರ್ಕ್' ಆಗಿದೆ. ಅದೇ ರೀತಿ ಅಲ್ಲಾಹನ ವಿಶಿಷ್ಟ ಹಕ್ಕುಗಳಲ್ಲಿ 'ಸುಜೂದ್'(ಸಾಷ್ಟಾಂಗ) ಮತ್ತು 'ರುಕೂಅ್' (ಬಾಗುವುದು) ಕೂಡಾ ಸೇರಿವೆ. 'ಶಿರ್ಕ್'ಅನ್ನು ಅಲ್ಲಾಹನು ಮಹಾ ಪಾಪ ಮತ್ತು ಅಕ್ಷಮ್ಯ ಅಪರಾಧ ಎಂದು ಸಾರಿರುವನು. ಆದ್ದರಿಂದ ಆತ ಇಂತಹ ಅಪರಾಧ ಎಸಗುವಂತೆ ಯಾರಿಗೂ ಆದೇಶಿಸಲಾರನೆಂಬುದು ವ್ಯಕ್ತ. ಆದರೆ ಅಲ್ಲಾಹನು ಹ. ಆದಮ್(ಅ) ರಿಗೆ ಸುಜೂದ್ ಮಾಡುವಂತೆ ಮಲಕ್‌ಗಳಿಗೆ ಆದೇಶಿಸಿದ್ದಾನೆ. ಹಾಗೆಯೇ ಯಾವ ಪ್ರವಾದಿಯೂ 'ಶಿರ್ಕ್' ಮಾಡುವುದೂ ಇಲ್ಲ. ಮಾಡಿಸುವುದೂ ಇಲ್ಲ. ಆದರೆ ಹ. ಯೂಸುಫ್(ಅ) ಅವರ ಮುಂದೆ ಅವರ ಸಹೋದರರು ಮತ್ತು ಹೆತ್ತವರು ಸುಜೂದ್ ಮಾಡಿರುವರು. ಅಲ್ಲಾಹನ ಹೊರತು ಇತರರಿಗೆ ಸುಜೂದ್ ಮಾಡುವುದು 'ಶಿರ್ಕ್' ಆಗಿದ್ದರೆ ಪ್ರಸ್ತುತ ಘಟನೆಗಳನ್ನು ಯಾವ ರೀತಿ ಸಮರ್ಥಿಸಬಹುದು ಎಂದು ತಿಳಿಸುವಿರಾ?*

○ 'ಶಿರ್ಕ್'ನ ಕುರಿತು ನೀವು ಮುಂದಿರಿಸಿರುವ ಸಂಶಯಗಳು 'ತಫ್ಹೀಮುಲ್ ಕುರ್‌ಆನ್'ನ ನಿರಂತರ ಅಧ್ಯಯನದಿಂದ ಸುಲಭದಲ್ಲಿ ನಿವಾರಣೆಯಾದೀತು. ಒಂದು ಪತ್ರದಲ್ಲಿ ಅದನ್ನು ವಿವರವಾಗಿ ತಿಳಿಸುವುದು ಕಷ್ಟ. ಆದರೆ 'ಶಿರ್ಕ್'ನ ವಿಷಯ ಬಹಳ ಗಂಭೀರ ಮತ್ತು ಅಪಾಯಕಾರಿಯಾಗಿದೆ. ನೀವು ಬಹಳ ಕಾಲ ಈ ಗೊಂದಲದಲ್ಲಿ ಸಿಲುಕಿರುವುದು ನನಗೆ ಇಷ್ಟವಿಲ್ಲ. ಆದ್ದರಿಂದ ಸಂಕ್ಷಿಪ್ತವಾಗಿ ಕೆಲವೇ ಪದಗಳಲ್ಲಿ ನಿಮ್ಮ ಸಂಶಯವನ್ನು ನಿವಾರಿಸಲು ಪ್ರಯತ್ನಿಸುವೆನು.

ಮೊದಲನೆಯದಾಗಿ ನೀವು ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ 'ಸುಜೂದ್' ಸ್ವಯಂ ಶಿರ್ಕ್ ಅಲ್ಲ. ಅದು 'ಶಿರ್ಕ್'ನ ಒಂದು ಸಂಕೇತ ಮಾತ್ರ. ವಾಸ್ತವದಲ್ಲಿ ಅಲ್ಲಾಹನ ಅಸ್ತಿತ್ವ, ಗುಣ ಮತ್ತು ಹಕ್ಕುಗಳಲ್ಲಿ ಇತರರನ್ನು ಭಾಗೀದಾರರಾಗಿ ಮಾಡುವುದೇ 'ಶಿರ್ಕ್' ಆಗಿದೆ. ಇಂತಹ ಯಾವುದಾದರೂ ನಂಬಿಕೆಯೊಂದಿಗೆ 'ಸುಜೂದ್' ಮಾಡಿದರೆ ಅದು 'ಶಿರ್ಕ್' ಆಗುತ್ತದೆ. ಈ ಕೃತ್ಯದಿಂದ ಬಹುದೇವವಿಶ್ವಾಸಿಗಳ ಅನುಕರಣೆಯಾಗುವುದರಿಂದ ಇದನ್ನು ನಿಷೇಧಿಸಲಾಗಿದೆಯೇ ಹೊರತು ಇದು ಸ್ವಯಂ 'ಶಿರ್ಕ್' ಆಗಿರುವುದರಿಂದಲ್ಲ. ಹ. ಆದಮ್(ಅ)ರನ್ನು ಸೃಷ್ಟಿಸಿದಾಗ ಅವರಿಗೆ ಸುಜೂದ್ ಮಾಡುವಂತೆ ಅಲ್ಲಾಹನೇ ಮಲಕ್‌ಗಳಿಗೆ ಆಜ್ಞಾಪಿಸಿದ್ದನು. ಆದ್ದರಿಂದ ಮಲಕ್‌ಗಳು ಏನು ಮಾಡಿದ್ದರೋ ಅದು ಅಲ್ಲಾಹನ ಸ್ಪಷ್ಟ ಆದೇಶದ ಅನುಸರಣೆಯಾಗಿತ್ತು. ಅವರೇ ಆದಮ್‌ರನ್ನು(ಅ) ಆರಾಧ್ಯ ಅಥವಾ ಗೌರವಾರ್ಹವೆಂದು ಬಗೆದು 'ಸುಜೂದ್' ಮಾಡಿದುದಾಗಿರಲಿಲ್ಲ. ಆದ್ದರಿಂದ ಅದರಲ್ಲಿ 'ಶಿರ್ಕ್'ನ ಲವಲೇಶವೂ ಇರಲಿಲ್ಲವೆಂಬುದು ವ್ಯಕ್ತ.

ಕುರ್‌ಆನ್‌ನ ಪ್ರಕಾರ ಅಲ್ಲಾಹನು ಹ. ಯೂಸುಫ್(ಅ) ಅವರಿಗೆ ತೋರಿಸಿದ ನೈಜ ಕನಸಿನ ಆಧಾರದಲ್ಲಿ ಅವರ ಮುಂದೆ ಅವರ ತಂದೆ-ತಾಯಿ ಮತ್ತು ಸಹೋದರರು 'ಸುಜೂದ್' ಮಾಡಿದ್ದರು. ಅದನ್ನು ಹ. ಯಾಕೂಬ್(ಅ) ಅಲ್ಲಾಹನ ಆದೇಶವೆಂದು ಬಗೆದಿದ್ದರು. *(ನೋಡಿರಿ: ಸೂರಃ ಯೂಸುಫ್: 4-6)*

ಹ. ಯೂಸುಫ್(ಅ) ಅವರು ಕೂಡ ಆ ಸುಜೂದನ್ನು ಅದೇ ಕನಸಿನ ಸಾಕ್ಷಾತ್ಕಾರವೆಂದು ಹೇಳಿರುವರು. (ಸೂರಃ ಯೂಸುಫ್: 100). ಆದ್ದರಿಂದ ಇದು ಕೂಡಾ ಅಲ್ಲಾಹನ ಆದೇಶದ ಪ್ರಕಾರವೇ ಆಗಿದೆ. ಅಲ್ಲಾಹನ ಆದೇಶದ ಪ್ರಕಾರ ಮಾಡುವ ಕಾರ್ಯವು 'ಶಿರ್ಕ್' ಎನಿಸುವುದು ಅಸಾಧ್ಯ.

ಇನ್ನು ಅಲ್ಲಾಹನ ಯಾವುದೇ ಆದೇಶವಿಲ್ಲದೆ ಯಾವುದೇ ವ್ಯಕ್ತಿಯನ್ನು ಮಹಾನ್ ಮತ್ತು ಪವಿತ್ರವೆಂದು ಬಗೆದು ತನ್ನ ಇಚ್ಛೆಯಂತೆ ಅವನ ಮುಂದೆ ಸುಜೂದ್ ಮಾಡುವ ವ್ಯಕ್ತಿಯ ವಿಷಯವನ್ನು ನೋಡಿ. ಯಾವುದೇ ಪುರಾವೆಯಿಂದ ಈ ಕೃತ್ಯವನ್ನು 'ಶಿರ್ಕ್' ಅಲ್ಲ ಎಂದು ಹೇಳಬಹುದೇ? ಅಲ್ಲಾಹನು ಮೇಲಿನ ಎರಡು ಘಟನೆಗಳಲ್ಲಿ ಅಲ್ಲಾಹೇತರರಿಗೆ ಸುಜೂದ್ ಮಡುವುದನ್ನು ಧರ್ಮಸಮ್ಮತವೆಂದಿರುವಾಗ ಈ ಕೃತ್ಯವು ಎಲ್ಲ ಸಂದರ್ಭಗಳಲ್ಲೂ ಧರ್ಮಸಮ್ಮತವಾಗುತ್ತದೆ ಎಂಬ ವಾದವು ಸರಿಯಾದೀತೆ? ಅಥವಾ ಅಲ್ಲಾಹನ ಆದೇಶವಿಲ್ಲದೆಯೇ ನಾವು ಯಾರಿಗೆ ಬೇಕಾದರೂ ಗೌರವಪೂರ್ವಕವಾಗಿ ಸುಜೂದ್ ಮಾಡಬಹುದೇ? ಸೂರಃ ಕಹಫ್‌ನಲ್ಲಿ ಅಲ್ಲಾಹನು ತನ್ನ ಓರ್ವ ವಿಶಿಷ್ಟ ದಾಸನ ಕುರಿತು

ತಿಳಿಸಿದ್ದಾನೆ. ಆ ವ್ಯಕ್ತಿ ಯಾವುದೋ ಉದ್ದೇಶಕ್ಕಾಗಿ ಅಲ್ಲಾಹನ ಆದೇಶದಂತೆ ಕೆಲವು ಮಂದಿ ಬಡವರಿಗೆ ಸೇರಿದ ಒಂದು ಹಡಗಿಗೆ ತೂತು ಮಾಡುತ್ತಾರೆ. ಓರ್ವ ಬಾಲಕನನ್ನು ವಧಿಸುತ್ತಾರೆ. ನಾವು ಕೂಡಾ ಔಚಿತ್ಯವನ್ನು ನೋಡಿ ಮನ ಬಂದಂತೆ ಯಾರ ಸ್ವತ್ತನ್ನೂ ನಾಶ ಪಡಿಸಬಹುದೆಂದು ಇದನ್ನು ಆಧಾರವಾಗಿಟ್ಟು ವಾದಿಸಬಹುದೇ? ಅಲ್ಲಾಹ್ ಮತ್ತು ಆತನ ಪ್ರವಾದಿಯು ಶರೀಅತ್‌ನ ಸ್ಪಷ್ಟ ವಿಧಿಗಳ ಮೂಲಕ ಅಲ್ಲಾಹನ ಹೊರತು ಇತರರಿಗೆ ಸುಜೂದ್ ಮಾಡುವುದನ್ನು ನಿಷೇಧಿಸಿರುವಾಗ ಇತರರ ಸೊತ್ತು-ಪ್ರಾಣಗಳ ಕುರಿತು ವ್ಯವಹರಿಸಲು ಸ್ಪಷ್ಟ ಮೇರೆಗಳನ್ನು ಗೊತ್ತು ಪಡಿಸಿರುವಾಗ ಅಲ್ಲಾಹನ ಕೆಲವು ವಿಶಿಷ್ಟ ಕೃತ್ಯಗಳನ್ನು ಮಾದರಿ ಎಂದು ಬಗೆದು ಅವುಗಳ ಆಧಾರದಲ್ಲಿ ಈ ನಿಷಿದ್ಧ ಕಾರ್ಯಗಳನ್ನು ತನ್ನ ಪಾಲಿಗೆ ಧರ್ಮಸಮ್ಮತ ಮಾಡಿಕೊಳ್ಳಲು ಯಾರಿಗಾದರೂ ಅಧಿಕಾರವಿರುವುದು ಹೇಗೆ ಸಾಧ್ಯ? *(ತರ್ಜುಮಾನುಲ್ ಕುರ್‌ಆನ್- ಮಾರ್ಚ್: 1962)*

45

ಸರ್ವವ್ಯಾಪಿ

- *ಸರ್ವವ್ಯಾಪಿ (ಹಾಝಿರ್-ನಾಝಿರ್) ಎಂಬ ಗುಣವೂ ಅಲ್ಲಾಹನಿಗೆ ಮೀಸಲು ಎಂದು ಪರಿಗಣಿಸಲಾಗುತ್ತದೆ. ಆದರೆ ಅಲ್ಲಾಹನು ಮರಣದ ಮಲಕ್ (ದೇವಚರ)ಗೂ ಈ ಗುಣವನ್ನು ದಯಪಾಲಿಸಿರುವನು. ಅವರು ಒಮ್ಮೆಗೇ ನೂರಾರು ಅಲ್ಲ ಸಾವಿರಾರು ಮನುಷ್ಯ, ಪ್ರಾಣಿ, ಪಕ್ಷಿ ಮತ್ತು ಜಿನ್ನ್‌ಗಳ ಪ್ರಾಣ ಹರಣ ಮಾಡುತ್ತಾರೆ. ಇದರಿಂದ ಅವರು ಕೂಡಾ ಸರ್ವವ್ಯಾಪಿಯಾಗಿದ್ದಾರೆಂದು ತಿಳಿಯುತ್ತದೆ. ಆದರೆ ಸರ್ವವ್ಯಾಪಿ ಎಂಬುದು ಅಲ್ಲಾಹನಿಗೆ ಮೀಸಲಾಗಿರುವ ಗುಣವಾಗಿದೆ. ಒಂದು ವೇಳೆ ಅಲ್ಲಾಹನು ಒಂದು ಕರ್ತವ್ಯದ ನಿರ್ವಹಣೆಗಾಗಿ ತನ್ನ ವಿಶಿಷ್ಟ ಗುಣವನ್ನು ಈ ಮಲಕ್‌ಗೆ ನೀಡಿರುವನೆಂದು ವಾದಿಸುವುದಾದರೆ ಪ್ರವಾದಿ ಮುಹಮ್ಮದ್(ಸ) ಅವರನ್ನು ಸರ್ವವ್ಯಾಪಿ ಎಂದು ಭಾವಿಸುವವರು ಮತ್ತು ಆ ಗುಣವನ್ನು ಅಲ್ಲಾಹನು ಅವರಿಗೆ ದಯಪಾಲಿಸಿದ್ದಾನೆ ಎಂದು ನಂಬುವವರು ಮುಶ್ರಿಕ್ ಆಗುವುದು ಹೇಗೆ?*

○ ಸರ್ವವ್ಯಾಪಿಯ ವಿಷಯದಲ್ಲಿ ನೀವು ನೀಡಿರುವ ಮಲಕುಲ್ ಮೌತ್ (ಮರಣದ ದೇವಚರ)ನ ಉದಾಹರಣೆಯಲ್ಲಿ ಅನೇಕ ತಪ್ಪುಗಳಿವೆ. ಇಡೀ ವಿಶ್ವದ ಮಲಕುಲ್ ಮೌತ್ ಒಬ್ಬರೇ ಆಗಿರುವರೆಂದು ಕುರ್‌ಆನ್‌ನಲ್ಲಾಗಲೀ ಹದೀಸ್‌ನಲ್ಲಾಗಲೀ ಎಲ್ಲೂ ಹೇಳಿಲ್ಲ. ಪ್ರಾಣಹರಣ ಮಾಡುವ ಕಾರ್ಯವನ್ನು ಒಬ್ಬರೇ ದೇವಚರರು ಮಾಡುತ್ತಾರೆಂದು ಕುರ್‌ಆನ್‌ನಿಂದ ವ್ಯಕ್ತವಾಗುವುದಿಲ್ಲ. ಕುರ್‌ಆನ್‌ನಲ್ಲಿ ಅನೇಕ ಕಡೆ ಪ್ರಾಣ ಹರಣ ಮಾಡುವ ದೇವಚರರ ಪ್ರಸ್ತಾಪವು ಬಹುವಚನದಲ್ಲಿ ಬಂದಿದೆ. ಉದಾಹರಣೆಗೆ ಈ ಕೆಳಗಿನ ಸೂಕ್ತಗಳನ್ನು ನೋಡಿರಿ-

"ತಮ್ಮ ಮೇಲೆ ತಾವೇ ಅಕ್ರಮವೆಸಗುತ್ತಿದ್ದವರ ಪ್ರಾಣವನ್ನು ಮಲಕ್‌ಗಳು ವಶಪಡಿಸಿಕೊಂಡಾಗ ಅವರೊಡನೆ 'ನೀವು ಯಾವ ಸ್ಥಿತಿಯಲ್ಲಿದ್ದಿರಿ' ಎಂದು ಕೇಳಿದರು. *(ಸೂರಃ ಅನ್ನಿಸಾ: 97)*

"ಮಲಕ್‌ಗಳು ಇವರ ಆತ್ಮಗಳನ್ನು ವಶಪಡಿಸಿಕೊಳ್ಳುವಾಗ ಮತ್ತು ಇವರ ಮುಖಗಳಿಗೂ ಬೆನ್ನುಗಳಿಗೂ ಹೊಡೆಯುತ್ತಾ ಇವರನ್ನು ಕೊಂಡೊಯ್ಯುವಾಗ ಇವರ ಅವಸ್ಥೆ ಏನಾದೀತು?" *(ಸೂರಃ ಮುಹಮ್ಮದ್: 27)*

"ಮಲಕ್‌ಗಳು ಮುತ್ತಕೀಗಳ ಪ್ರಾಣಗಳನ್ನು ಪಾವನಾವಸ್ಥೆಯಲ್ಲಿ ವಶಪಡಿಸಿಕೊಳ್ಳುವಾಗ 'ನಿಮ್ಮ ಮೇಲೆ ಶಾಂತಿ ಇರಲಿ' ಎನ್ನುವರು." *(ಸೂರಃ ಅನ್ನಹ್ಲ್: 32)*

"ಇಂಥವರು ನಮ್ಮಿಂದ ಕಳುಹಿಸಲ್ಪಟ್ಟ ಮಲಕ್‌ಗಳು ಅವರ ಪ್ರಾಣಹರಣ ಮಾಡಲು ತಲುಪುವ ಕ್ಷಣದವರೆಗೂ ವಿಧಿ ಲಿಖಿತದಂತೆ ತಮ್ಮ ಪಾಲನ್ನು ಪಡೆಯುತ್ತಲೇ ಇರುವರು. ಆಗ ಮಲಕ್‌ಗಳು ಅವರೊಡನೆ, 'ನೀವು ಅಲ್ಲಾಹನ ಬದಲಿಗೆ ಕೂಗಿ ಕರೆಯುತ್ತಿದ್ದ ನಿಮ್ಮ ಆರಾಧ್ಯರು ಈಗ ಎಲ್ಲಿದ್ದಾರೆ' ಎಂದು ಕೇಳುವರು." *(ಸೂರಃ ಅಲ್ ಅಲ್‌ರಾಫ್: 37)*

ಪ್ರಾಣಹರಣದ ಕಾರ್ಯಕ್ಕೆ ನಿಯುಕ್ತಗೊಂಡಿರುವ ಓರ್ವ ದೊಡ್ಡ ದೇವಚರರೊಂದಿಗೆ ಅನೇಕ ಸಹಾಯಕ ದೇವಚರರೂ ಇದ್ದಾರೆ ಎಂದು ಈ ಆಯತ್‌ಗಳಿಂದ ತಿಳಿದು ಬರುತ್ತದೆ. ಇದು ಇಬ್ಲೀಸ್ ಒಬ್ಬ ದೊಡ್ಡ ಶೈತಾನನಾಗಿದ್ದು ಅವನ ಅಧೀನವಾಗಿ ಅಗಣಿತ ಶೈತಾನರು ಇರುವಂತೆಯೇ ಇದೆ. ಆ ಶೈತಾನರು ಇಡೀ ಲೋಕದಲ್ಲಿ ಹರಡಿಕೊಂಡಿದ್ದಾರೆ. ಇಬ್ಲೀಸ್ ಆಗಲಿ ಮಲಕುಲ್ ಮೌತ್ ಆಗಲಿ ಎಲ್ಲಾ ಕಡೆ ಹೋಗುವುದಿಲ್ಲ.

ನೆಲ-ಜಲ-ವಾಯುಗಳ ಎಲ್ಲ ಜೀವಿಗಳ ಪ್ರಾಣಹರಣ ಮಾಡುವುದು ಕೂಡಾ ಮನುಷ್ಯನ ಪ್ರಾಣಹರಣಕ್ಕೆ ನೇಮಕಗೊಂಡಿರುವ 'ಮಲಕುಲ್ ಮೌತ್' ಆಗಿದೆ ಎಂದು ಎಲ್ಲೂ ಹೇಳಲಾಗಿಲ್ಲ. "ನಿಮ್ಮ ಪ್ರಾಣಗಳನ್ನು 'ಮಲಕುಲ್ ಮೌತ್' ಹರಣ ಮಾಡುತ್ತಾರೆ" ಎಂದು ಮಾತ್ರ ಕುರ್‌ಆನ್‌ನಲ್ಲಿ ಹೇಳಲಾಗಿದೆ. ಇದರಿಂದ ತಿಳಿದು ಬರುವುದು ಈ ಭೂಮಿಯ ಮೇಲೆ ಮನುಷ್ಯರ ಪ್ರಾಣಹರಣ ಮಾಡಲಿಕ್ಕೆ ಓರ್ವ ದೇವಚರರು ನಿಯುಕ್ತರಾಗಿರುವರು ಎಂದು ಮಾತ್ರವಾಗಿದೆ. ಒಂದು ವೇಳೆ ಆ ಒಬ್ಬ ದೇವಚರರೇ ಎಲ್ಲ ಸಾಯುವವರ ಆತ್ಮವನ್ನು ಸೆರೆ ಹಿಡಿಯುತ್ತಾರೆಂದಾದರೂ ಇದು ಅಲ್ಲಾಹನು ತನ್ನ ದೇವಚರರಿಗೆ ನೀಡಿರುವ ಬಹಳ ಸೀಮಿತವಾದ ಒಂದು ಶಕ್ತಿಯಾಗಿದೆ. ಇದಕ್ಕೂ ಅಲ್ಲಾಹನು ಸಮಸ್ತ ವಿಶ್ವದಲ್ಲಿ ಸರ್ವವ್ಯಾಪಿಯಾಗಿದ್ದು ಎಲ್ಲವನ್ನೂ ಆಲಿಸುವವನಾಗಿದ್ದಾನೆಂಬ ಅಪಾರ ಶಕ್ತಿಗೂ ಯಾವುದೇ ಸಾಮ್ಯತೆಯಿದೆಯೇ? ಇದಲ್ಲದೆ ಇಲ್ಲಿ ಉಂಟಾಗುವ ಇನ್ನೊಂದು ಪ್ರಶ್ನೆ ಏನೆಂದರೆ ನಾವೀಗ ನಮ್ಮ ವಿಶ್ವಾಸ-ಶ್ರದ್ಧೆಯ ಕಟ್ಟಡವನ್ನು ಕೇವಲ ಗುಮಾನಿಗಳ ಮೇಲೆ ನಿರ್ಮಿಸ ಹೊರಟಿದ್ದೇವೆಯೇ? 'ಮಲಕುಲ್ ಮೌತ್'ನ ಕುರಿತಂತೂ ಅಲ್ಲಾಹನೇ ನಾನು ಅವರನ್ನು ಮನುಷ್ಯನ ಪ್ರಾಣ ಹರಣ ಮಾಡಲಿಕ್ಕಾಗಿ ನೇಮಿಸಿದ್ದೇನೆ ಎಂದು ಹೇಳಿರುವನು. ಇದರಿಂದ ಹೆಚ್ಚೆಂದರೆ ಈ ದೇವಚರರು ಏಕ ಕಾಲದಲ್ಲಿ ಭೂಮುಖದ ಪ್ರತಿಯೊಂದು ಭಾಗದಲ್ಲಿ ಲಕ್ಷಗಟ್ಟಲೆ ಜನರ ಪ್ರಾಣ ಹರಣ ಮಾಡುತ್ತದೆ ಎಂದು ಮಾತ್ರ ಭಾವಿಸಬಹುದಾಗಿದೆ. ಪ್ರವಾದಿ(ಸ) ಎಲ್ಲಾ ಕಡೆ ಇರುವವರು ಮತ್ತು ಎಲ್ಲವನ್ನೂ ನೋಡುತ್ತಿರುವವರು ಎಂದು ಇದರಿಂದ ಊಹಿಸುವುದು ಸಾಧ್ಯವೇ? ಈ ಎರಡೂ ವಿಷಯಗಳಲ್ಲಿರುವ ಸಾಮ್ಯತೆಯಾದರೂ ಏನು? ಇವೆರಡನ್ನೂ ಸಮಾನವೆಂದು ಬಗೆಯುವುದು ಹೇಗೆ? ಅದನ್ನು ವಿಶ್ವಾಸ-ಶ್ರದ್ಧೆಯ ಒಂದು ಭಾಗವೆಂದು ಪರಿಗಣಿಸಿ ಜನರಿಗೆ ಹಾಗೆ ವಿಶ್ವಾಸ ತಾಳುವಂತೆ ಆಹ್ವಾನಿಸುವುದು

ಮತ್ತು ಹಾಗೆ ನಂಬದವರ ವಿಶ್ವಾಸದಲ್ಲಿ ಕುಂದು ಇದೆ ಎಂದು ಸಾಬೀತುಪಡಿಸುವುದು ಯಾವ ಆಧಾರದಲ್ಲಿ? ಇದು ಒಂದು ವೇಳೆ ಇಸ್ಲಾಮೀ ವಿಶ್ವಾಸ-ಶ್ರದ್ಧೆಯ ಭಾಗವಾಗಿದ್ದರೆ ಖಂಡಿತವಾಗಿಯೂ ಅಲ್ಲಾಹನು ಅದನ್ನು ತನ್ನ ಗ್ರಂಥದಲ್ಲಿ ವಿವರಿಸಿ ತನ್ನ ಪ್ರವಾದಿಯನ್ನು(ಸ) ಸರ್ವವ್ಯಾಪಿ ಮತ್ತು ಸರ್ವವೀಕ್ಷಕನೆಂದು ನಂಬಲಿ ಎಂದು ಆದೇಶಿಸುತ್ತಿದ್ದ. ಪ್ರವಾದಿ(ಸ) ಅವರೂ ಅದನ್ನು ಸಾರಿ ಹೇಳುತ್ತಿದ್ದರು. ನಾನು ಎಲ್ಲೆಡೆ ವ್ಯಾಪಿಸಿದ್ದೇನೆ ಮತ್ತು ಕಿಯಾಮತ್‌ನ ತನಕ ನಾನು ಸರ್ವವ್ಯಾಪಿಯೂ ಸರ್ವವೀಕ್ಷಕನೂ ಆಗಿರುವೆನೆಂದು ವಿಶ್ವಾಸ ತಾಳುವಂತೆ ಕರೆ ನೀಡುತ್ತಿದ್ದರು. ಸಹಾಬಿಗಳಲ್ಲಿ ಮತ್ತು ಸಜ್ಜನರಾದ ಪೂರ್ವಜರಲ್ಲಿ ಈ ವಿಶ್ವಾಸವು ವ್ಯಾಪಕವಾಗಿರುತ್ತಿತ್ತು ಮತ್ತು ಇಸ್ಲಾಮೀ ವಿಶ್ವಾಸ-ಶ್ರದ್ಧೆಗಳ ಗ್ರಂಥಗಳಲ್ಲಿ ಅದು ಉಲ್ಲೇಖಿತವಾಗಿರುತ್ತಿತ್ತು.

ಕೆಲವರನ್ನು 'ಮುಶ್ರಿಕ್' ಎಂದು ಕರೆಯುವ ಅಥವಾ ಕರೆಯದಿರುವ ಕುರಿತು ನಿಮ್ಮ ಪ್ರಸ್ತಾಪದ ಬಗ್ಗೆ ನನ್ನ ನಿಲುವು ಏನು ಎಂಬುದು ನಿಮಗೆ ತಿಳಿದಿರಲಾರದು. ಈ ವಿಷಯಗಳಲ್ಲಿ ಅವರ ವಿಚಾರಗಳನ್ನು ನಾನು ವ್ಯಾಖ್ಯಾನದ ತಪ್ಪೆಂದು ಬಗೆಯುತ್ತೇನೆ. ಅದನ್ನು ತಪ್ಪೆಂದು ಹೇಳಲು ನಾನು ಹಿಂಜರಿಯುವುದಿಲ್ಲ. ಆದರೆ ಅವರನ್ನು 'ಮುಶ್ರಿಕ್' ಎಂದು ಕರೆಯುವ ಬಗ್ಗೆ ನನಗೆ ಸಹಮತವಿಲ್ಲ. ಅವರನ್ನು ಅರೇಬಿಯದ ಮುಶ್ರಿಕರಿಗೆ ಹೋಲಿಸುವುದನ್ನು ನಾನು ಒಪ್ಪುವುದಿಲ್ಲ. ಅವರು 'ಶಿರ್ಕ್'ಅನ್ನು 'ಶಿರ್ಕ್' ಎಂದು ತಿಳಿದುಕೊಂಡೇ ಅದನ್ನು ಒಪ್ಪುತ್ತಾರೆಂದು ನಾನು ಭಾವಿಸುವುದಿಲ್ಲ. ಅವರು ತೌಹೀದ್ (ಏಕದೇವ ವಿಶ್ವಾಸ)ಅನ್ನೇ ನೈಜ ಧರ್ಮವೆಂದು ಒಪ್ಪಿ ಅದನ್ನೇ ನಂಬುತ್ತಾರೆಂದು ನನಗೆ ನಂಬಿಕೆಯಿದೆ. ಆದ್ದರಿಂದ ಅವರನ್ನು 'ಮುಶ್ರಿಕ್' ಎನ್ನುವುದು ಅತಿರೇಕವಾಗಿದೆ. ಆದರೆ ಅವರು ಕೆಲವು ಆಯತ್ ಮತ್ತು ಹದೀಸ್‌ಗಳನ್ನು ವ್ಯಾಖ್ಯಾನಿಸುವಲ್ಲಿ ದೊಡ್ಡ ತಪ್ಪು ಮಾಡಿದ್ದಾರೆ. ಅವರನ್ನು ಹಠವಾದಿಗಳಾಗಿ ಮಾಡುವ ಬಗ್ಗೆ ಮಾತಾಡುವುದನ್ನು ಬಿಟ್ಟು ಪುರಾವೆಗಳೊಂದಿಗೆ ಅವರಿಗೆ ತಿಳಿ ಹೇಳಿದರೆ ಅವರು ತಿಳಿದೂ ತಿಳಿದೂ ಒಂದು ಪಥಭ್ರಷ್ಟತೆಗೆ ಖಂಡಿತ ಅಂಟಿಕೊಂಡಿರಲಾರರು.

(ತರ್ಜುಮಾನುಲ್ ಕುರ್‌ಆನ್: ಮಾರ್ಚ್- 1962)

46

ಪರೋಕ್ಷ ಜ್ಞಾನ

● *ಪರೋಕ್ಷ ಜ್ಞಾನವು ಅಲ್ಲಾಹನಿಗೆ ಮೀಸಲಾಗಿರುವ ವಿಶಿಷ್ಟ ಗುಣವಾಗಿದ್ದರೆ ಅದು ಯಾವುದೇ ಸೃಷ್ಟಿಯಲ್ಲಿ ಇರಬಾರದು. ಆದರೆ ಕುರ್‌ಆನ್ ಮತ್ತು ಹದೀಸ್‌ಗಳು ಪ್ರಮಾಣ ಪಡಿಸುವಂತೆ ಪ್ರವಾದಿಗಳು ಮತ್ತು ಸಂದೇಶವಾಹಕರಿಗೆ ಪರೋಕ್ಷ ಜ್ಞಾನವಿರುತ್ತಿತ್ತು. ಹಾಗಿರುವಾಗ ಯಾವುದೇ ಸೃಷ್ಟಿ ಅಥವಾ ಯಾವನೇ ವ್ಯಕ್ತಿಯಲ್ಲಿ ಈ ಗುಣವಿದೆಯೆಂದು ನಾವು ಒಪ್ಪಿಕೊಂಡರೆ 'ಶಿರ್ಕ್' ಮಾಡಿದಂತೆ ಆಗುವುದು ಹೇಗೆ? ಪ್ರವಾದಿ(ಸ) ಅವರಿಗೆ ಪ್ರಳಯ ಕಾಲದ ತನಕದ ಎಲ್ಲ ಜ್ಞಾನವನ್ನು ಅಲ್ಲಾಹನು ನೀಡಿದ್ದಾನೆ ಎಂದು ಒಂದು ವೇಳೆ ಯಾರಾದರೂ ನಂಬಿದರೆ ಆತ ಮುಶ್ರಿಕ್ ಎನಿಸುವುದು ಹೇಗೆ? ಯಾರ ಮೇಲೆ 'ಶಿರ್ಕ್' ಮಾಡುತ್ತಿರುವವರೆಂದು 'ಫತ್ವಾ' ನೀಡಲಾಗುತ್ತಿದೆಯೋ ಅವರು ಪ್ರವಾದಿ(ಸ) ಅವರಿಗೆ ವ್ಯಕ್ತಿಗತವಾಗಿ ಪರೋಕ್ಷದ ಜ್ಞಾನವಿದೆಯೆಂದು ನಂಬುವುದಿಲ್ಲ. ಬದಲಾಗಿ ಅವರು ಅದು ಅಲ್ಲಾಹನ ಕೊಡುಗೆಯಾಗಿದೆ ಎಂದು ನಂಬುತ್ತಾರೆ. ಅವರ ಮತ್ತು ಇತರ ವಿದ್ವಾಂಸರ ಮಧ್ಯೆ ಭಿನ್ನಾಭಿಪ್ರಾಯವಿರುವುದಾದರೆ ಅದು ಪರೋಕ್ಷ ಜ್ಞಾನದ ಪ್ರಮಾಣದ ಕುರಿತು ಮಾತ್ರವಾಗಿದೆ. ಕೇವಲ ಹೆಚ್ಚು-ಕಡಿಮೆ ಎಂಬುದೇ ಸಮಸ್ಯೆಯಾಗಿರುವಾಗ 'ಶಿರ್ಕ್'ನ ಫತ್ವಾ ನೀಡುವುದು ಸರಿಯೇ?*

○ ಪರೋಕ್ಷ ಜ್ಞಾನದ ವಿಷಯದಲ್ಲಿ ಸಮಗ್ರ ಮತ್ತು ವ್ಯಕ್ತಿಗತ ಪರೋಕ್ಷ ಜ್ಞಾನವು ಅಲ್ಲಾಹನಿಗೇ ಸೀಮಿತವಾಗಿದೆ ಎಂದು ಎಲ್ಲರೂ ಒಪ್ಪುತ್ತಾರೆ. ತನ್ನ ಪರೋಕ್ಷ ಜ್ಞಾನದ ಯಾವ ಮತ್ತು ಎಷ್ಟು ಭಾಗವನ್ನು ಅಲ್ಲಾಹನು ಯಾರಿಗೆ ಬಯಸುತ್ತಾನೋ ಅವರಿಗೆ ನೀಡಬಲ್ಲವನಾಗಿದ್ದಾನೆ ಎಂಬುದನ್ನೂ ಯಾರೂ ನಿರಾಕರಿಸುವುದಿಲ್ಲ. ಈ ರೀತಿಯ ಆಂಶಿಕ ಮತ್ತು ನೀಡಲ್ಪಟ್ಟ ಪರೋಕ್ಷ ಜ್ಞಾನವು ಅಲ್ಲಾಹನ ವಿಶಿಷ್ಟ ಗುಣವಾಗಿರುವ ಪರೋಕ್ಷ ಜ್ಞಾನಕ್ಕಿಂತ ತೀರ ಭಿನ್ನವಾದ ವಸ್ತುವಾಗಿದೆ. ಇಂತಹ ಪರೋಕ್ಷ ಜ್ಞಾನವು ಯಾರಿಗಾದರೂ ಇದೆ ಎಂದು ನಂಬುವುದನ್ನು ಯಾರೂ ಶಿರ್ಕ್ ಎಂದು ಪರಿಗಣಿಸುವುದಿಲ್ಲ. ನಿಜವಾಗಿ ದೋಷ ಎಲ್ಲಿಂದ ಆರಂಭವಾಗುತ್ತದೆಂದರೆ ಜನರು ಶ್ರದ್ಧೆಯಲ್ಲಿ ಅತಿರೇಕವೆಸಗುತ್ತಾ ಮೂಲ ಇಸ್ಲಾಮಿ ವಿಶ್ವಾಸಕ್ಕೆ ವ್ಯತಿರಿಕ್ತವಾದ ವಿಷಯಗಳನ್ನು ಕಂಡು ಹಿಡಿಯುತ್ತಾರೆ.

ಮೊದಲನೆಯದಾಗಿ ಅವರು ನೀಡಲ್ಪಟ್ಟ ಪರೋಕ್ಷ ಜ್ಞಾನವನ್ನು ಆಂಶಿಕವೆಂಬುದಕ್ಕೆ ುದಲಾಗಿ ಸಮಗ್ರವೆಂದು ನಂಬುತ್ತಾರೆ. ಅಲ್ಲಾಹನ ಯಾವನಾದರೂ ದಾಸನನ್ನು ಆತನು ನ್ನಂತೆಯೇ ತ್ರಿಕಾಲಜ್ಞಾನಿಯಾಗಿ ಮಾಡಿರುವನೆಂದು ಅವರು ವಾದಿಸುತ್ತಾರೆ. ಬಾಹ್ಯ ೋಟಕ್ಕೆ ಇಲ್ಲಿ ಆಂಶಿಕ ಮತ್ತು ಸಮಗ್ರದ ಮಧ್ಯೆ ಇರುವ ಅಂತರವು ದೂರವಾಗಿದ್ದರೂ ್ಯಕ್ತಿಗತ ಮತ್ತು ನೀಡಲ್ಪಟ್ಟ ಎಂಬ ವ್ಯತ್ಯಾಸ ಕಂಡು ಬರುತ್ತದೆ. ಈ ಕಾರಣದಿಂದ ಇಂತಹ ಶ್ವಾಸ ಹೊಂದಿರುವುದು ಶಿರ್ಕ್ ಆಗಲಾರದು ಎಂದು ವಾದಿಸಬಹುದು. ಆದರೆ ಇಂತಹ ಶ್ವಾಸವಿರಿಸುವುದರಲ್ಲಿ ಎಷ್ಟು ದೊಡ್ಡ ಅಪಾಯ ಅಡಕವಾಗಿದೆ ಎಂಬುದು ಸ್ವಲ್ಪ ೋಚಿಸಿದರೆ ತಿಳಿದು ಬರುತ್ತದೆ. ಒಂದು ವೇಳೆ ಅಲ್ಲಾಹನು ತನ್ನ ಸಂಪೂರ್ಣ ಪರೋಕ್ಷ ಜ್ಞಾನವನ್ನು ತನ್ನ ದಾಸರ ಪೈಕಿ ಯಾರಿಗಾದರೂ ದಯಪಾಲಿಸಬಹುದೆಂದಾದರೆ ಅವನು ತನ್ನ ರ್ವಶಕ್ತತೆಯನ್ನು, ಚಿರಂತನತೆಯನ್ನು ಮತ್ತು ಸರ್ವರನ್ನು ಬದುಕಿಸುವ ಶಕ್ತಿಯನ್ನು ಯಪಾಲಿಸಿ ಅವರನ್ನೂ ಸೃಷ್ಟಿಕರ್ತ ಮತ್ತು ಪ್ರಭುವಾಗಿ ಯಾಕೆ ಮಾಡಬಾರದು ಎಂಬ ್ರಶ್ನೆಯೂ ಏಳುತ್ತದೆ. ಹಾಗಾದರೆ ಅಲ್ಲಾಹನ ಕೊಡುಗೆಯಿಂದ ಯಾರಾದರೂ ದಾಸರು ೇವನಾಗಿ ಬಿಡುವುದಕ್ಕೆ ಇರುವ ತಡೆಯಾದರೂ ಏನು? ಈ ರೀತಿ ಎರಡು ಸಮಾನ ಗುಣ ುತ್ತು ಅಧಿಕಾರಗಳನ್ನು ಹೊಂದಿದ ದೇವರುಗಳ ಮಧ್ಯೆ ಇರುವ ವ್ಯಕ್ತಿಗತ ಗುಣ ಮತ್ತು ೀಡಲ್ಪಟ್ಟ ಗುಣ ಎಂಬ ವ್ಯಾತ್ಯಾಸವು 'ಶಿರ್ಕ್'ನಿಂದ ನಮ್ಮನ್ನು ತಡೆಯಲು ಸಾಕಾಗುವುದೇ?

ಈ ಮಹನೀಯರು ಎಸಗುವ ಎರಡನೆಯ ಅತಿರೇಕವೇನೆಂದರೆ ಇವರು ಅಲ್ಲಾಹನ ೊಡುಗೆಯನ್ನು ಸ್ವಯಂ ವಿತರಣೆ ಮಾಡುವ ಅಧಿಕಾರ ಉಳ್ಳವರೆಂದು ಭಾವಿಸಿಕೊಳ್ಳುತ್ತಾರೆ. ಯಾರಿಗೆ ಏನನ್ನು ದಯಪಾಲಿಸಿರುವನು ಏನನ್ನು ದಯಪಾಲಿಸಿಲ್ಲ ಎಂಬುದನ್ನೂ ತಿಳಿಸುವ ಾರ್ಯವು ಸ್ವತಃ ದಯಪಾಲಿಸುವವನದ್ದಾಗಿದೆ. ದಯಪಾಲಿಸುವವನ ಸ್ವಂತ ಹೇಳಿಕೆಯ ಧಾರವಿಲ್ಲದೆ ಅವನು ಏನೆಲ್ಲ ದಯಪಾಲಿಸಿದ್ದಾನೆಂದು ನಿರ್ಧರಿಸಲು ಇನ್ನೊಬ್ಬ ವ್ಯಕ್ತಿಯು ಧಿಕಾರವುಳ್ಳವನಾಗುವುದಿಲ್ಲ. ನಾನು ನನ್ನ ಇಂತಿಂತಹ ದಾಸನಿಗೆ ನನ್ನ ಸಂಪೂರ್ಣ ತ್ರಿಕಾಲ ಜ್ಞಾನವನ್ನು ದಯಪಾಲಿಸಿರುವೆನು ಎಂದು ತನ್ನ ಪವಿತ್ರ ಗ್ರಂಥದಲ್ಲಿ ಅಲ್ಲಾಹನು ಎಲ್ಲಿಯೂ ೇಳಿದ್ದರೆ ಅಥವಾ ಅಲ್ಲಾಹನ ಪ್ರವಾದಿಯ ಯಾವುದೇ ಪ್ರಾಮಾಣಿಕ ವಚನದಿಂದ ಅದು ್ಪಷ್ಟವಾಗುವುದಿದ್ದರೆ ಅದನ್ನು ಉಲ್ಲೇಖಿಸಿಬಿಟ್ಟರೆ ಸಾಕು. ಈ ಎಲ್ಲ ಚರ್ಚೆಯೂ ಮುಗಿದೇ ಹೋಗುತ್ತದೆ. ಆದರೆ ಅಂತಹ ಯಾವುದೇ ಆಯತ್ ಅಥವಾ ಹದೀಸ್ ಇಲ್ಲದಿರುವಾಗ ಅಲ್ಲಾಹನ ಈ ಕೊಡುಗೆಯ ಬಗ್ಗೆ ಜನರಿಗೆ ಯಾವ ಮೂಲದಿಂದ ತಿಳಿದು ಬಂತು ಎಂದು ಿಳಿಯಬೇಕಲ್ಲವೇ?

ಈ ವಿಷಯದಲ್ಲಿ ಒಂದು ಮಾತನ್ನು ಚೆನ್ನಾಗಿ ತಿಳಿದಿರಬೇಕು. ವಿಶ್ವಾಸದ, ಅದರಲ ಏಕದೇವವಿಶ್ವಾಸದ ವಿಷಯವು ಬಹಳ ಸೂಕ್ಷ್ಮವಾಗಿದೆ. ಇದು ಕುಫ್ರ್ (ಸತ್ಯನಿಷೇಧ) ಮ ಈಮಾನ್ (ಸತ್ಯವಿಶ್ವಾಸ) ಹಾಗೂ ಜಯ - ಅಪಜಯವನ್ನು ನಿರ್ಧರಿಸುವ ವಸ್ತುವಾಗಿ ಆದ್ದರಿಂದ ಈ ವಿಷಯದಲ್ಲಿ ವಿಭಿನ್ನ ವ್ಯಾಖ್ಯಾನಗಳಿರುವ ಆಯತ್ ಮತ್ತು ಹದೀಸ್‌ಗಳಿ ಒಂದು ಅರ್ಥವನ್ನು ಹಿಂಡಿ ತೆಗೆದು ಅದನ್ನು ವಿಶ್ವಾಸದ ಭಾಗವೆಂದು ಸಾರುವು ಸರಿಯಲ್ಲ. ವಿಶ್ವಾಸವು ಸ್ಪಷ್ಟ ಮತ್ತು ನಿಖರವಾದ 'ಮುಹ್ಕಮಾತ್' (ವಿಭಿನ್ನ ವ್ಯಾಖ್ಯಾನಗ ಆಸ್ಪದವಿಲ್ಲದ ಆಯತ್‌ಗಳು)ಗಳನ್ನಾಧರಿಸಿರಬೇಕು. ಅದರಲ್ಲಿ ಅಲ್ಲಾಹನು ಮತ್ತು ಆ ಪ್ರವಾದಿ ಒಂದು ವಿಷಯವನ್ನು ನಂಬುವ ಆಹ್ವಾನ ನೀಡಿರಬೇಕು. ಪ್ರವಾದಿ(ಸ) ಅದ ಪ್ರಚಾರ ಪಡಿಸಿರುವರು ಮತ್ತು ಸಹಾಬಿಗಳು, ತಾಬಿಉಗಳು, ತಬವುತ್ತಾಬಿಉಗಳು ಹಾ ಇಮಾಮ್‌ಗಳು ಅದನ್ನು ನಂಬುತ್ತಿದ್ದರು ಎಂದು ಸಾಬೀತಾಗಬೇಕು. ಪ್ರವಾದಿ(ಸಂಪೂರ್ಣ ಪರೋಕ್ಷ ಜ್ಞಾನವನ್ನು ಹೊಂದಿದ್ದರು ಎಂಬ ವಿಶ್ವಾಸವು ಸ್ವರೂಪದ್ದಾಗಿದೆಯೇ? ಇದನ್ನು ಸಾಬೀತು ಪಡಿಸುವುದು ಸಾಧ್ಯವಲ್ಲವೆಂದಾದರೆ ನವ ಈಮಾನನ್ನು ಏಕೆ ಅಪಾಯಕ್ಕೆ ಒಡ್ಡಿಕೊಳ್ಳಬೇಕು?

(ತರ್ಜುಮಾನುಲ್ ಕುರ್‌ಆನ್, ಮಾರ್ಚ್ 196

47

ಪರ್ದಾದ ಕುರಿತು ಕೆಲವು ಪ್ರಶ್ನೆಗಳು

ತಮ್ಮ 'ಪರ್ದಾ' ಎಂಬ ಗ್ರಂಥವನ್ನು ಓದಿದ ಬಳಿಕ ನಾನು ಮತ್ತು ನನ್ನ ಪತ್ನಿ ಕಳೆದ ಕೆಲವು ವಾರಗಳಿಂದ ನಮ್ಮ ಕೌಟುಂಬಿಕ ಜೀವನವನ್ನು ಅಲ್ಲಾಹನ ನಿಯಮಗಳಿಗೆ ಬದ್ಧಗೊಳಿಸಲಿಕ್ಕಾಗಿ ಪ್ರಯತ್ನಿಸುತ್ತಿದ್ದೇವೆ. ಆವರೆ ನಮ್ಮ ಈ ಹೊಸ ಉಪಕ್ರಮದಿಂದ ನಮ್ಮ ಕುಟುಂಬದವರು ಅದರಲ್ಲೂ ವಿಶೇಷವಾಗಿ ನಮ್ಮ ಹೆತ್ತವರು ಬಹಳ ಕುಪಿತರಾಗಿರುವರು. 'ಪರ್ದಾ'ವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವ ಬಗ್ಗೆ ಅವರು ರೋಷಾಕುಲರಾಗಿದ್ದಾರೆ. ನಾವೇ ಕೆಲವು ವಿಷಯಗಳಲ್ಲಿ ತಪ್ಪಿ ಬಿದ್ದಿದ್ದೇವೋ ಎಂಬ ಸಂಶಯವೂ ಉಂಟಾಗಿದೆ. ಆದ್ದರಿಂದ ನಮ್ಮ ಸಮಾಧಾನಕ್ಕಾಗಿ ಈ ಕೆಳಗಿನ ವಿಷಯಗಳಲ್ಲಿ ಸ್ಪಷ್ಟೀಕರಣವನ್ನು ಬಯಸುತ್ತೇವೆ.

(1) ಸೂರಃ ಅಹ್‌ಝಾಬ್‌ನ. "ಮಹಿಳೆಯರು ತಮ್ಮ ತಂದೆಯರ ಮುಂದೆ, ತಮ್ಮ ಪುತ್ರರ ಮುಂದೆ.... ಪರ್ದಾ ಮಾಡದಿದ್ದರೆ ಏನೂ ದೋಷವಿಲ್ಲ" ಎಂಬ ವಾಕ್ಯದಿಂದ ಸ್ಪಷ್ಟವಾಗುವಂತೆ ಅದರಲ್ಲಿ ಪ್ರಸ್ತಾಪಿಸಲಾಗಿರುವ ಸಂಬಂಧಿಕರ ಹೊರತು ಮಹಿಳೆಯರು ಇತರರ ಮುಂದೆ ಅನಿವಾರ್ಯ ಕಾರಣಗಳಿಲ್ಲದೆ ಬರುವುದು ಪಾಪವಾಗುತ್ತದೆ. ಈ ವಿಷಯದಲ್ಲಿ ವಿವಾಹ ನಿಷಿದ್ಧವಲ್ಲದ ಸಂಬಂಧಿಕರು ಮತ್ತು ವಿವಾಹ ನಿಷಿದ್ಧ ವಲ್ಲದ ಪರಕೀಯರ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲ. ನನ್ನ ಈ ಅಭಿಪ್ರಾಯ ಸರಿಯೆ?

(2) ವಿವಾಹ ನಿಷಿದ್ಧವಲ್ಲದ ಸಂಬಂಧಿಕರು, ಉದಾ: ಚಿಕ್ಕಪ್ಪನ ಮಗ ಅಥವಾ ಚಿಕ್ಕಮ್ಮನ ಪತಿಯ (ಚಿಕ್ಕಮ್ಮ ಜೀವಿಸಿರುವಾಗ) ಮುಂದೆ ಹೋಗುವುದು ಧರ್ಮ ಸಮ್ಮತವೇ? ಒಂದು ವೇಳೆ ಧರ್ಮಸಮ್ಮತವೆಂದಾದರೆ ಯಾವ ಸಂದರ್ಭಗಳಲ್ಲಿ ಮತ್ತು ಯಾವ ರೀತಿ?

(3) ಒಂದು ವೇಳೆ ಯಾರಾದರೂ ವಿವಾಹ ನಿಷಿದ್ಧವಲ್ಲದ ಸಂಬಂಧಿಕರ ಜತೆ ಒಂದೇ ಮನೆಯಲ್ಲಿ ವಾಸಿಸುವುದು ಅನಿವಾರ್ಯವಾದರೆ ಅಥವಾ ಅವರು ಮನೆಗೆ ಅತಿಥಿಯಾಗಿ ಬಂದರೆ ಅವರ ಮುಂದೆ ಪರ್ದಾ ಆಚರಿಸುವುದು ಹೇಗೆ? ಅದೇ ರೀತಿ ಯಾರಾದರೂ ನಿಕಟ ಸಂಬಂಧಿಕರ ಮನೆಗೆ ಹೋಗಿದ್ದಾಗ ಅಲ್ಲಿನ ಪುರುಷರು ಕರೆದರೆ ಏನು ಮಾಡಬೇಕು?

(4) ಮನೆಯಲ್ಲಿ ಯುವಕ ನೌಕರರಿದ್ದರೆ ಮುದುಕಿಯರ ಮುಂದೆ ಅವರು ಬರುವುದರಲ್ಲಿ

ಅಡ್ಡಿಯಿಲ್ಲವೆಂದು ನನಗೆ ತಿಳಿದಿದೆ. ಯುವತಿಯರು ಕೂಡಾ ನಮ್ಮ ಸಂಕಲ್ಪಶುದ್ಧವಿದೆಯೆಂದು ಹೇಳಿ ಅವರ ಮುಂದೆ ಪರ್ದಾ ಇಲ್ಲದೆ ಹೋಗಬಹುದೇ!

(5) ಅಲ್ಲಾಹ್ ಮತ್ತು ಪ್ರವಾದಿಯ ಆದೇಶದಂತೆ ಪರ್ದಾ ಆಚರಿಸುವುದನ್ನು ತಾಯಿ ತಡೆದರೆ ಏನು ಮಾಡಬೇಕು? ಅವರ ಪಾದದಡಿ ಸ್ವರ್ಗವಿದೆಯೆಂಬ ಪ್ರವಾದಿ ವಚನವಿದೆಯಲ್ಲವೇ?

(6) ಮಹಿಳೆಯರು ಸ್ತ್ರೀ-ಪುರುಷರ ಜಂಟಿ ಸಭೆಯಲ್ಲಿ ತಲೆಗೆ ಶಾಲು ಹೊದಿಸಿಕೊಂಡು ಭಾಷಣ ಮಾಡಬಹುದೇ/ ಹದೀಸ್‌ನ ಪ್ರಕಾರ ಸ್ತ್ರೀಯ ಸ್ವರ ಪುರುಷನಿಗೆ ಕೇಳಿಸುವುದು ಆಕ್ಷೇಪಾರ್ಹವಲ್ಲವೇ?

(7) ಮಹಿಳೆಯರು ಡಾಕ್ಟರ್, ನರ್ಸ್ ಅಥವಾ ಶಿಕ್ಷಕಿಯರಾಗ ಬಹುದೆ? ನಮ್ಮ ದೊಡ್ಡ ದೊಡ್ಡ ನಾಯಕರು ಕರೆ ನೀಡುತ್ತಿರುವಂತೆ ನಮ್ಮ ಮಹಿಳೆಯರು ಈ ಎಲ್ಲ ಕೆಲಸಗಳಲ್ಲಿ ಭಾಗವಹಿಸಿ ಹಿಂದಿನ ನಷ್ಟವನ್ನು ತುಂಬಿಸಿ ಹಿಂದುಳಿಯುವಿಕೆಯನ್ನು ದೂರ ಮಾಡಬೇಕೆ? ಈ ಕೆಲಸಗಳನ್ನು ಮಾಡುವಾಗ ಪರ್ದಾ ಆಚರಿಸಬೇಕೆ? ಅಥವಾ ಅಗತ್ಯ ಸಂದರ್ಭಗಳಲ್ಲಿ ಪರ್ದಾ ತೊರೆಯಬಹುದೆ?

(8) ಮಹಿಳೆಯರು ಮುಖ ತೆರೆದಿಟ್ಟು, ಅಥವಾ ಮುಸುಕಿನೊಂದಿಗೆ ಜಿಹಾದ್‌ನಲ್ಲಿ ಭಾಗವಹಿಸಬಹುದೆ?

○ (1) ನೀವು ಪವಿತ್ರ ಕುರ್‌ಆನ್‌ನ ಮೂಲ ಪದಗಳತ್ತ ಗಮನ ಹರಿಸಲಿಲ್ಲ. ನೀವು ಪ್ರಸ್ತಾಪಿಸಿದ ಆಯತ್ ಇರುವುದು ಸೂರಃ ಅಹ್‌ಝಾಬ್‌ನಲ್ಲಲ್ಲ ಸೂರಃ ನೂರ್‌ನಲ್ಲಾಗಿದೆ. ಆ ಆಯತ್‌ನ ಪದಗಳು ಹೀಗಿವೆ: "ಇವರ ಹೊರತು ಅನ್ಯರ ಮುಂದೆ ತಮ್ಮ ಅಲಂಕಾರವನ್ನು ಪ್ರದರ್ಶಿಸದಿರಲಿ..." ಅರ್ಥಾತ್ ಶೃಂಗಾರ-ಅಲಂಕಾರಗಳ ಸಹಿತ ಇತರರ ಮುಂದೆ ಬರಬಾರದು. ಇನ್ನೊಂದೆಡೆ ಮನೆಯಿಂದ ಹೊರಗೆ ಹೋಗುವಾಗ ಈ ರೀತಿ ಆದೇಶಿಸಲಾಗಿದೆ: "ನಿಮ್ಮ ಚದ್ದರವನ್ನು ನಿಮ್ಮ ಮೇಲೆ ಮುಸುಕಿನಂತೆ ನೇತಾಡಿಸಬೇಕು." ಇದರಿಂದ ತಿಳಿದು ಬರುವಂತೆ ತೀರಾ ಅಪರಿಚಿತರಾದವರ ಮುಂದೆ ಮುಖವನ್ನೂ ತೆರೆಯಬಾರದು. ಇನ್ನು ಸಂಬಂಧಿಕರ ವಿಷಯ, ಅದನ್ನು ಸೂರಃ ನೂರ್‌ನಲ್ಲಿ ವಿವರಿಸಲಾಗಿದೆ- "ಅವರ ಮುಂದೆ ಮಾತ್ರ ಮಹಿಳೆಯು ತನ್ನ ಪೂರ್ಣ ಶೃಂಗಾರ-ಅಲಂಕಾರಗಳೊಂದಿಗೆ ಬರಬಹುದಾಗಿದೆ. ಇನ್ನುಳಿದ ಸಂಬಂಧಿಕರ ಮುಂದೆ ಅಲಂಕಾರ ಮಾಡಿಕೊಂಡು ಹೋಗುವುದು ಧರ್ಮಸಮ್ಮತವಲ್ಲ."

(2) ಮುಂದೆ ಹೋಗುವ ಎರಡು ವಿಧಗಳಿವೆ.

(I) ತಂದೆ-ಸೋದರರ ಮುಂದೆ ಬರುವಂತೆ ಪೂರ್ಣ ಶೃಂಗಾರ ಅಲಂಕಾರಗಳೊಂದಿಗೆ ಬಂದು ನಿಸ್ಸಂಕೋಚವಾಗಿ ಕುಳಿತು ಮಾತಾಡುವುದು, ನಗುವುದು, ಏಕಾಂತದಲ್ಲಿ ಅವರ

ತೆಗಿರುವುದು ಇತ್ಯಾದಿ. ಇದು ಯಾವುದೇ ವಿಧದ ವಿವಾಹ ನಿಷಿದ್ಧವಲ್ಲದ ಪುರುಷರ ಬಂದೆ ಧರ್ಮಸಮ್ಮತವಲ್ಲ. ಅವರು ಸಂಬಂಧಿಕರಾದರೂ ಪರಕೀಯರಾದರೂ ಸರಿಯೆ.) ಮಹಿಳೆ ತನ್ನ ಸೌಂದರ್ಯವನ್ನು ಚದ್ದರ ಇತ್ಯಾದಿಯಿಂದ ಅಡಗಿಸಿ ಕೇವಲ ಮುಖ ತ್ತು ಕೈಗಳು ಕಾಣಿಸುವ ಸ್ಥಿತಿಯಲ್ಲಿ ಬರುವುದು. ಇದು ಕೂಡಾ ತನ್ನನ್ನು ತೋರಿಸುವ ದ್ದೇಶದಿಂದಾಗಿರದೆ ಸಂಯುಕ್ತ ಕುಟುಂಬ ವ್ಯವಸ್ಥೆಯ ಅನಿವಾರ್ಯ ಅಗತ್ಯಗಳನ್ನು ಡೇರಿಸುವ ಉದ್ದೇಶದಿಂದಾಗಿರಬೇಕು. ಆಗಲೂ ಮುಕ್ತವಾಗಿ ಬೆರೆಯಬಾರದು. ಏಕಾಂತದಲ್ಲಿ ತೆಗಿರಬಾರದು. ಕೇವಲ ಅವನ ಮುಂದಿನಿಂದ ದಾಟಿ ಹೋಗುವುದು, ಏನಾದರೂ ಗತ್ಯದ ವಿಷಯವಿದ್ದರೆ ವಿಚಾರಿಸುವುದು ಅಥವಾ ತಿಳಿಸುವುದು. ಇಷ್ಟರ ಮಟ್ಟಿಗೆ ಮಾತ್ರ ವಾಹ ನಿಷಿದ್ಧವಲ್ಲದ ಸಂಬಂಧಿಕರ ಮುಂದೆ ಬರುವ ಅನುಮತಿಯಿದೆ. ಇಂದು ಸ್ಲಿಮರ ಮನೆಗಳಲ್ಲಿ ಸಾಮಾನ್ಯವಾಗಿರುವಂತೆ ಸೋದರ ಸೋದರಿಯರ ಮಕ್ಕಳು ರಸ್ಪರ ನಿಸ್ಸಂಕೋಚವಾಗಿ ಕುಳಿತು ಹರಟೆ ಹೊಡೆಯುವ ಮತ್ತು ಮುಕ್ತವಾಗಿ ಬೆರೆಯುವ ವಕಾಶ ಖಂಡಿತ ಇಸ್ಲಾಮ್‌ನಲ್ಲಿಲ್ಲ. ಇಂದು ಮುಸ್ಲಿಮ್ ಯುವತಿಯರು ಇರುವಂತೆ ಂತಹ ಸಂಬಂಧಿಕರ ಮುಂದೆ ಶೃಂಗಾರ-ಅಲಂಕಾರಗಳೊಂದಿಗೆ ಇರುವುದನ್ನು ಇಸ್ಲಾಮ್ ಂಡಿತ ಅನುಮತಿಸುವುದಿಲ್ಲ.

(3) ಇಂತಹ ಪರಿಸ್ಥಿತಿಯಲ್ಲಿ ಎರಡೂ ಕಡೆ ಶರೀಅತ್ ನಿಯಮಗಳನ್ನು ಪಾಲಿಸುವ ಾದೆಯಿದ್ದರೆ ಅವರಿಗೆ ಸರಿಯಾದ ಕ್ರಮವಿದು. ವಿವಾಹ ನಿಷಿದ್ಧವಲ್ಲದ ಸಂಬಂಧಿಕರು ನೆಗೆ ಬಂದಾಗ, ಮನೆಗೆ ಕಾಲಿಡುವುದಕ್ಕಿಂತ ಮೊದಲು ಅನುಮತಿ ಪಡೆದುಕೊಳ್ಳಬೇಕು. ಂದು ಮುಸ್ಲಿಮರು ಕುರ್‌ಆನ್ ಮತ್ತು ಸುನ್ನತ್‌ನ ಪ್ರಕಾರ ಅನುಮತಿ ಪಡೆಯುವ ಮವನ್ನು ಸಂಪೂರ್ಣ ತೊರೆದಿರುವರು. ಅನುಮತಿಯಿಲ್ಲದೆ ಮನೆಗೆ ಪ್ರವೇಶಿಸುವುದನ್ನು ಪ್ರತೆಯ ಸಂಕೇತವೆಂದು ಪರಿಗಣಿಸಲಾಗುತ್ತದೆ. ವಾಸ್ತವದಲ್ಲಿ ತಂದೆ, ಮಗ, ಸೋದರನಂತಹ ನೆಯ ಪುರುಷರು ಕೂಡಾ ಯಾವುದೇ ಸೂಚನೆಯಿಲ್ಲದೆ ಮನೆಗೆ ಪ್ರವೇಶಿಸಲು ಶರೀಅತ್ ನುಮತಿಸುವುದಿಲ್ಲ. ಕನಿಷ್ಠಪಕ್ಷ ಅವರು ಮನೆಗೆ ಪ್ರವೇಶಿಸುವಾಗ ಮನೆಯವರಿಗೆ ಯಾರೋ ರುಷರು ಬರುತ್ತಿದ್ದಾರೆಂದು ತಿಳಿಯುವಂತಹ ಶಬ್ದವನ್ನಾದರೂ ಹೊರಡಿಸಬೇಕು. ಇಂತಹ ಬ್ದ ಕೇಳಿದಾಗ ಏನನ್ನಾದರೂ ಹೊದ್ದುಕೊಂಡು ತನ್ನ ಸೌಂದರ್ಯವನ್ನು ಮರೆಸಬೇಕು. ನ್ನ ಮುಖವನ್ನು ಬೇರೆಡೆಗೆ ತಿರುಗಿಸಿಕೊಳ್ಳಬೇಕು. ಅನಿವಾರ್ಯ ಪರಿಸ್ಥಿತಿಯಲ್ಲಿ ವಿವಾಹ ಷಿದ್ಧವಲ್ಲದ ಸಂಬಂಧಿಕರ ಮುಂದೆ ಮುಖ ಮತ್ತು ಕೈಗಳನ್ನು ತೋರಿಸುವುದು ಕ್ಷೇಪಾರ್ಹವಲ್ಲ. ಅಗತ್ಯ ಬಿದ್ದಾಗ ಮಾತಾಡುವುದಕ್ಕೂ ಅಡ್ಡಿಯಿಲ್ಲ. ಆದರೆ ಮುಕ್ತ ರೆಯುವಿಕೆ ಮತ್ತು ನಿಸ್ಸಂಕೋಚ ಮಾತುಕತೆ, ಹರಟೆಗಳು ನಿಷಿದ್ಧವಾಗಿವೆ.

(4) ನೌಕರರ ಕುರಿತು ನನ್ನ ಅಧ್ಯಯನದ ಪ್ರಕಾರ ಯಾವ ನೌಕರರ ಬಗ್ಗೆ ಅವರು ಮ್ಮ ಒಡೆಯನ ಮನೆಯ ಮಹಿಳೆಯರ ಕುರಿತು ಯಾವುದೇ ಕೆಟ್ಟ ಭಾವನೆಯನ್ನು

ಮನಸ್ಸಿನಲ್ಲಿ ಇಟ್ಟುಕೊಳ್ಳಲಾರದು ಎಂಬ ಭರವಸೆಯಿದೆಯೋ ಅವರಿಗೆ ಮನೆಯೊಳ ಬರುವ ಮತ್ತು ಕೆಲಸ ಮಾಡುವ ಅನುಮತಿ ನೀಡಬಹುದಾಗಿದೆ. ಆದರೆ ಮನೆ ಯಜಮಾನನಿಗೆ ಆ ಭರವಸೆಯಿಲ್ಲದಿದ್ದರೆ ಅಂತಹ ನೌಕರರು ಮನೆಯೊಳಗೆ ಮುಕ್ತವಾ ಬರುವಂತಿಲ್ಲ. ಈ ವಿಷಯದಲ್ಲಿ ಮನೆಯ ಯಜಮಾನನ ಅಭಿಪ್ರಾಯವನ್ನೆ ಪರಿಗಣಿಸಲಾಗುವುದು. ಆದರೆ ಆತ ಶರೀಅತ್ ನಿಯಮಗಳ ಬಗ್ಗೆ ಅಲಕ್ಷ್ಯ ಉಳ್ಳವನಾಗಿರ ಶರೀಅತ್ ನಿಯಮಗಳ ಪಾಲನೆಯ ಉದ್ದೇಶ ಉಳ್ಳವನಾಗಿರಬೇಕು.

(5) ತಾಯಿಯ ಪಾದದಡಿ ಸ್ವರ್ಗವಿದೆಯೆಂಬುದು ನಿಜ. ಆದರೆ ಸ್ವರ್ಗ ಅರ್ಹವಾಗುವಂತಹ ಕೆಲಸ ಮಾಡುವ ತಾಯಿಯ ಆದೇಶವನ್ನು ಮಾತ್ರ ಪಾಲಿಸಲಾಗುವುದು ಆಕೆ ಅಲ್ಲಾಹ್ ಮತ್ತು ಪ್ರವಾದಿಯ ಆಜ್ಞೆಯ ಮುಂದೆ ತಲೆಬಾಗುವವಳಾಗಿರಬೇಕು. ತ ಚಿತ್ತ ಅಥವಾ ಕುಟುಂಬದ ಆಚಾರ ಸಂಪ್ರದಾಯಗಳಿಗೆ ಶರೀಅತನ್ನು ಬ ನೀಡುವವಳಾಗಿರಬಾರದು. ಇದಕ್ಕೆ ವ್ಯತಿರಿಕ್ತವಾದ ತಾಯಿಯ ಸೇವೆ ಖಂಡಿತ ಮಾಡಬೇಕು ಆದರೆ ಆಕೆಯ ಅನುಸರಣೆಯನ್ನು ಮಾಡಲಾಗದು. ಶರೀಅತ್ ನಿಯಮಗಳ ಪಾಲನೆಯಿಂ ಮುಕ್ತವಾಗಿ ಸ್ವಚಿತ್ತ ಮತ್ತು ಕೌಟುಂಬಿಕ ಆಚಾರ ಸಂಪ್ರದಾಯಗಳಿಗೆ ಧರ್ಮಕ್ಕಿಂತ ಹೆಚ್ಚಿ ಮಹತ್ವ ನೀಡುವ ಮೂಲಕ ಆಕೆ ಸ್ವಯಂ ತನ್ನ ಪಾದಗಳನ್ನು ನರಕದ ದಾರಿಯಲ್ಲಿ ಹಾಕಿರುವಾಗ ಆಕೆಯ ಪಾದದಡಿ ಸ್ವರ್ಗವಿರುವುದಾದರೂ ಹೇಗೆ?

(6) ಕೆಲವು ಪರಿಸ್ಥಿತಿಗಳಲ್ಲಿ ಮಹಿಳೆ ಪರ್ದಾ ಧರಿಸಿಕೊಂಡು ಪುರುಷರನ್ನುದ್ದೇಶಿ ಭಾಷಣ ಮಾಡಬಹುದು. ಎಂತಹ ಪರಿಸ್ಥಿತಿಗಳಲ್ಲಿ ಇದು ಧರ್ಮ ಸಮ್ಮತ ಎಂಬುದನ್ ಸಂದರ್ಭ ಮತ್ತು ಪರಿಸ್ಥಿತಿಯ ಕುರಿತು ಇಸ್ಲಾಮೀ ದೃಷ್ಟಿಕೋನದಿಂದ ತಿಳಿಯು ಸಾಮರ್ಥ್ಯವಿರುವ ವ್ಯಕ್ತಿಗಳು ನಿರ್ಧರಿಸಬೇಕು. ಅವರಲ್ಲಿ ಶರೀಅತ್‌ಗೆ ಅನುಸಾರವಾ ಜೀವಿಸುವ ಸಂಕಲ್ಪವೂ ಇರಬೇಕು.

(7) ನಾಯಕರುಗಳನ್ನು ಉದ್ಧರಿಸಿ ನೀವು ಕೇಳಿದ ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಹೀಗಿದೆ ಇವರು ಮತ್ತು ಇವರ ಅನುಯಾಯಿಗಳಾದ ಮುಸ್ಲಿಮರು ಇಂದು ಅನುಸರಿಸುತ್ತಿರುವುದೆ ಇಸ್ಲಾಮೀ ಸಂಸ್ಕೃತಿಯಾಗಿದ್ದರೆ ಇಸ್ಲಾಮೀ ಸಂಸ್ಕೃತಿಗೂ ಪಾಶ್ಚಾತ್ಯ ಸಂಸ್ಕೃತಿಗೂ ಯಾವುದೆ ವ್ಯತ್ಯಾಸವಿಲ್ಲ. ಹಾಗಾದರೆ ಇಂದು ಯುರೋಪಿನಲ್ಲಿ ನಡೆಯುತ್ತಿರುವುದೆಲ್ಲವನ್ನೂ ಮುಸ್ಲಿಮರ ಮಾಡಬೇಕು. ಇಸ್ಲಾಮೀ ಸಂಸ್ಕೃತಿಯೆಂದರೆ ಪ್ರವಾದಿ ಮುಹಮ್ಮದ್(ಸ) ಅವರು ಕಲಿಸಿ ಸಂಸ್ಕೃತಿಯಾಗಿದ್ದರೆ ಇಂದಿನ ಮೆಡಿಕಲ್ ಕಾಲೇಜ್, ನರ್ಸಿಂಗ್ ತರಬೇತಿ ಕೇಂದ್ರ ಮತ್ತು ಆಸ್ಪತ್ರೆಗಳಿಗೆ ಮುಸ್ಲಿಮ್ ಯುವತಿಯರನ್ನು ಕಳುಹಿಸುವುದಕ್ಕಿಂತ ಅವರನ್ನು ಗೋರಿಗಳಲ್ಲಿ ದಫನ ಮಾಡಿ ಬಿಡುವುದು ಸಾವಿರ ಪಟ್ಟು ಉತ್ತಮವಾಗಿದೆ. ಈಗಿರುವ ಗರ್ಲ್ಸ್ ಕಾಲೇಜುಗಳಿಗೆ ಹೋಗಿ ಕಲಿಯುವ ಮತ್ತು ಶಿಕ್ಷಕಿಯರಾಗುವ ವಿಷಯವೂ ಇದಕ್ಕಿಂ ಹೆಚ್ಚು ಭಿನ್ನವಲ್ಲ. ಆದರೆ ಒಂದು ವೇಳೆ ಶಿಕ್ಷಣ-ತರಬೇತಿಯ ವ್ಯವಸ್ಥೆಯು ನಮ್ಮ

ೈಗಳಲ್ಲಿದ್ದರೆ ಮತ್ತು ನಾವು ನಮ್ಮ ಕ್ರಮದಂತೆ ಹುಡುಗಿಯರನ್ನು ತರಬೇತುಗೊಳಿಸಿ ಅವರನ್ನು ಅಗತ್ಯ ನಾಗರಿಕ ಸೇವೆಗೆ ಹಚ್ಚುವ ಸಾಮರ್ಥ್ಯ ನಮಗಿದ್ದರೆ ನಾವು ಖಂಡಿತ ಅದರ ವ್ಯವಸ್ಥೆ ಮಾಡುವೆವು. ಇಸ್ಲಾಮೀ ಮಿತಿ-ಮೇರೆಗಳನ್ನು ಪಾಲಿಸುತ್ತಾ ಹುಡುಗಿಯರಿಗೆ ವೈದ್ಯಕೀಯ, ಸರ್ಜರಿ, ನರ್ಸಿಂಗ್, ಮಕ್ಕಳ ತರಬೇತಿ ಇತ್ಯಾದಿಗಳ ಉನ್ನತ ಶಿಕ್ಷಣ ನೀಡುವೆವು. ಅವರನ್ನು ಇತರ ಉನ್ನತ ವಿದ್ಯಾಭ್ಯಾಸ ನೀಡಿ ತರಬೇತಿಗೊಳಿಸಿ ಶಿಕ್ಷಕಿಯರಾಗಿ ಮಾಡುವೆವು. ಇಸ್ಲಾಮೀ ಸಂಸ್ಕೃತಿಗೆ ಅನುಗುಣವಾಗಿ ಅವರಿಂದ ಇತರ ನಾಗರಿಕ ಸೇವೆಗಳನ್ನು ಮಾಡಿಸುವೆವು. ಈ ಬಗ್ಗೆ ಒಂದು ಉಪ ವಿಷಯವೂ ಸ್ಪಷ್ಟವಾಗಬೇಕು. ನರ್ಸಿಂಗ್‌ನ ಕೆಲಸವನ್ನು ಕೇವಲ ಮಹಿಳೆಯರೇ ಮಾಡಬಲ್ಲರೆಂಬ ಪಾಶ್ಚಾತ್ಯ ವಿಚಾರಧಾರೆಯನ್ನು ನಾವು ಒಪ್ಪುವುದಿಲ್ಲ. ಮಹಿಳೆಯರ ಮತ್ತು ಪುರುಷರ ಆಸ್ಪತ್ರೆಗಳಲ್ಲೆಲ್ಲಾ ಅವರೇ ನರ್ಸ್ ಆಗಬೇಕೆಂಬುದೂ ಸರಿಯಲ್ಲ. ಈ ವಿಚಾರಧಾರೆಗೆ ಯಾವುದೇ ವೈಜ್ಞಾನಿಕ ಮತ್ತು ವೈಚಾರಿಕ ಪುರಾವೆಯಿಲ್ಲ. ಪುರುಷ ಶುಶ್ರೂಶಕನೂ ಹೇಸುವಂತಹ ಪುರುಷ ರೋಗಿಗಳ ಶುಶ್ರೂಷೆಯ ಕೆಲವು ಕೆಲಸಗಳನ್ನು ಮಹಿಳಾ ನರ್ಸ್‌ಗಳಿಂದ ಮಾಡಿಸುವುದು ನೈತಿಕ ದೃಷ್ಟಿಯಿಂದ ಅತ್ಯಂತ ಹೇಯವಾಗಿದೆ. ಆದ್ದರಿಂದ ಮುಸ್ಲಿಮರಾದ ನಾವು ಮಹಿಳೆಯರನ್ನು ನರ್ಸ್ ಆಗಿ ಮಾಡಿದರೆ ಅವರಿಂದ ಮಹಿಳಾ ರೋಗಿಗಳ ಶುಶ್ರೂಷೆಯ ಕೆಲಸವನ್ನೇ ಮಾಡಿಸುವೆವು. ಪುರುಷ ರೋಗಿಗಳ ಶುಶ್ರೂಷೆಯ ಕೆಲಸವನ್ನು ಪುರುಷರೇ ಮಾಡಬೇಕು.

(8) ಯುದ್ಧದ ವೇಳೆಯಲ್ಲಿ ಯೋಧರ ಶುಶ್ರೂಷೆ, ಗಾಯಗಳಿಗೆ ಬ್ಯಾಂಡೇಜ್ ಮಾಡುವುದು. ಯೋಧರಿಗಾಗಿ ಊಟ ತಯಾರಿಸುವುದು, ಶಸ್ತ್ರ ಮತ್ತು ಆಹಾರ ಸರಬರಾಜು ಮಾಡುವುದು, ಸಂದೇಶ ಮುಟ್ಟಿಸುವುದು ಮುಂತಾದ ಕೆಲಸಗಳನ್ನು ಮಹಿಳೆಯರಿಗೆ ವಹಿಸುವುದು ಧರ್ಮಸಮ್ಮತವಾಗಿದೆ. ಪರ್ದಾದ ನಿಯಮ ಬರುವುದಕ್ಕಿಂತ ಮುಂಚೆಯೂ ಈ ಸೇವೆಗಳನ್ನು ಮಹಿಳೆಯರು ಮಾಡುತ್ತಿದ್ದರು. ಆ ನಿಯಮಗಳು ಬಂದ ಬಳಿಕವೂ ಮಾಡಿದ್ದರು. ಇಂದೂ ಮಾಡಬಹುದು. ಆದರೆ ಒಂದು ಇಸ್ಲಾಮೀ ಸೇನೆಗೆ ಮಾತ್ರ ಈ ಸೇವೆಯನ್ನು ಮಹಿಳೆಯರು ನಿರ್ವಹಿಸ ಬಹುದಾಗಿದೆ. ಅವರು ಅಲ್ಲಾಹನು ನಿಶ್ಚಯಿಸಿದ ಮಿತಿ-ಮೇರೆಗಳನ್ನು ಪಾಲಿಸುವವರಾಗಿರಬೇಕು. ಇಂದಿನ ಸೇನೆಗಳಲ್ಲಿರುವಂತಹ ಕುಖ್ಯಾತ ಕಿಡಿಗೇಡಿಗಳು ಅದರಲ್ಲಿ ಇರಬಾರದು. W.A.C. ಯ ಮುಗ್ಧ ಹೆಸರಲ್ಲಿ ಮಹಿಳೆಯರನ್ನು ಭರ್ತಿ ಮಾಡಿ ಭ್ರಷ್ಟ ಸಿಪಾಯಿಗಳಿಗೆ ಮತ್ತು ದಂಡ ನಾಯಕರುಗಳಿಗೆ ಅವರು ವೇಶ್ಯಾವೃತ್ತಿ ನಡೆಸುವುದು ಪೈಶಾಚಿಕ ಕೃತ್ಯವಾಗಿದೆ. ಅದಕ್ಕೆ ಇಸ್ಲಾಮೀ ಸಂಸ್ಕೃತಿಯಲ್ಲಿ ಖಂಡಿತ ಯಾವುದೇ ಅವಕಾಶವಿಲ್ಲ. *(ತರ್ಜುಮಾನುಲ್ ಕುರ್‌ಆನ್-ಆಗಸ್ಟ್ 1946)*

(48)

ವಸ್ತ್ರಧಾರಣೆ ಮತ್ತು ಶರೀಅತ್

- *ನೈಜ ಅರ್ಥದಲ್ಲಿ ಮುಸ್ಲಿಮ್ ಆಗಬೇಕಾದರೆ ವ್ಯಕ್ತಿಯು ಬಟ್ಟೆ ಬರೆ ಮತ್ತು ಗಡ್ಡ-ಮೀಸೆಗಳಲ್ಲಿ ಇಸ್ಲಾಮೀ ಶೈಲಿಯನ್ನು ಅನುಸರಿಸಬೇಕು ಎನ್ನಲಾಗುತ್ತದೆ. ಈ ಬಗ್ಗ ಇಸ್ಲಾಮ್ ಯಾವ ಆದೇಶಗಳನ್ನು ನೀಡಿದೆಯೆಂದು ದಯವಿಟ್ಟು ತಿಳಿಸುತ್ತೀರಾ?*

○ ಬಟ್ಟೆ ಬರೆ ಮತ್ತು ಮುಖ ಚಹರೆಯ ಕುರಿತು ನಿಮ್ಮ ಪ್ರಶ್ನೆಗೆ ಉತ್ತರಿಸುವ ಮೊದಲು ಒಂದು ವಿಷಯ ನೀವು ಚೆನ್ನಾಗಿ ತಿಳಿದುಕೊಳ್ಳಬೇಕು. ಬಾಹ್ಯದ ಸುಧಾರಣೆಗೆ ಅಂತರಂಗದ ಸುಧಾರಣೆಗಿಂತ ಹೆಚ್ಚಿನ ಮಹತ್ವ ಕೊಡಬಾರದು. ಮೊಟ್ಟಮೊದಲು ನೀವು ನಿಮ್ಮನ್ನು ಕುರ್‌ಆನ್‌ನ ಮಾನದಂಡದಂತೆ ನೈಜ ಮುಸ್ಲಿಮರಾಗಿ ಮಾರ್ಪಡಿಸಲು ಪ್ರಯತ್ನಿಸಿ. ಅನಂತರ ನಿಮ್ಮ ಅಂತರಂಗದಲ್ಲಿ ಆಗಿರುವ ಮಾರ್ಪಾಟಿಗೆ ಅನುಗುಣವಾಗಿ ನಿಮ್ಮ ಬಾಹ್ಯವನ್ನು ಪರಿವರ್ತಿಸಿರಿ. ಕೇವಲ ಹದೀಸ್ ಮತ್ತು ಫಿಕ್ಹ್ ಗ್ರಂಥಗಳಲ್ಲಿ ಓರ್ವ ಧರ್ಮನಿಷ್ಠ ವ್ಯಕ್ತಿಯ ಬಾಹ್ಯಯರೂಪದ ಚಿತ್ರಣದ ನಿಯಮ-ನಿಬಂಧನೆಗಳನ್ನು ಮಾತ್ರ ಮುಂದಿರಿಸಿಕೊಂಡು ನೀವು ನಿಮ್ಮ ಬಾಹ್ಯರೂಪವನ್ನು ಅದರಂತೆ ಮಾಡಿಕೊಂಡರೆ ಮತ್ತು ನಿಮ್ಮೊಳಗೆ ತಕ್ವಾ (ಧರ್ಮನಿಷ್ಠೆ) ಉಂಟಾಗದಿದ್ದರೆ ನಿಮ್ಮ ಅವಸ್ಥೆಯು ತಾಮ್ರದ ನಾಣ್ಯಕ್ಕೆ ಚಿನ್ನದ ಲೇಪ ಹಾಕಿದಂತಾಗುವುದು. ಚಿನ್ನದ ನಾಣ್ಯದ ಲೇಪ ಹಾಕುವುದು ದೊಡ್ಡ ಕಷ್ಟದ ಕೆಲಸವೇನಲ್ಲ. ಅತ್ಯಂತ ಅಗ್ಗದ ಲೋಹಕ್ಕೆ ಬೇಕಾದರೂ ಅದನ್ನು ಬಹಳ ಸುಲಭದಲ್ಲಿ ಹಾಕಬಹುದು. ಆದರೆ ಅಪ್ಪಟ ಚಿನ್ನ ದೊರಕಿಸುವುದು ಒಂದು ಕಷ್ಟದ ಕೆಲಸ. ದೀರ್ಘ ಸಮಯದ ಪ್ರಯತ್ನದ ಬಳಿಕವೇ ಅದು ಸಿಗುತ್ತದೆ. ದುರದೃಷ್ಟವಶಾತ್ ಕೆಲವು ಕಾಲದಿಂದ ಬಾಹ್ಯ ರೂಪಕ್ಕೆ ಅಸಾಮಾನ್ಯ ಮಹತ್ವ ನೀಡಲಾಗುತ್ತಿದೆ. ಆದ್ದರಿಂದ ಚಿನ್ನದ ಲೇಪದೊಂದಿಗೆ ಕಬ್ಬಿಣ, ಉಕ್ಕು, ತಾಮ್ರ ಇತ್ಯಾದಿ ಕೀಳ್ಮಟ್ಟದ ಲೋಹದ ನಾಣ್ಯಗಳೂ ನಡೆಯುತ್ತಿವೆ. ವ್ಯಾವಹಾರಿಕ ಲೋಕದ ಪೇಟೆಯು ಒಂದು ನಿಷ್ಠುರ ಅಕ್ಕಸಾಲಿಗ ಇದ್ದಂತೆ. ಅದು ಹೆಚ್ಚು ಸಮಯ ಈ ಡಂಭಾಚಾರದಿಂದ ಮೋಸ ಹೋಗಲಾರದು. ಕೆಲವು ಸಮಯದ ತನಕ ಈ ಖೋಟಾ ನಾಣ್ಯಗಳು ಚಲಾವಣೆ ಪಡೆದುವು. ಆದರೆ ಈಗ ಪೇಟೆಯಲ್ಲಿ ಅದಕ್ಕೆ ಚಿಕ್ಕಾಸಿನ ಬೆಲೆಯೂ ಇಲ್ಲ. ನಾವು ಇಸ್ಲಾಮೀ ಸಮಾಜದಲ್ಲಿ ನೈಜ ಧಾರ್ಮಿಕತೆಯನ್ನು ಬೆಳೆಸಬೇಕು. ಆದ್ದರಿಂದ ನಾವು ಚಿನ್ನದ ನಾಣ್ಯದ ಮೊಹರು ಹಾಕುವುದಕ್ಕಿಂತ ಮುಂಚೆ ಅಪ್ಪಟ ಚಿನ್ನವಾಗಲು ಪ್ರಯತ್ನಿಸಬೇಕು.

ವಸ್ತ್ರಧಾರಣೆ ಮತ್ತು ಮುಖ ಚಹರೆಯ ವಿನ್ಯಾಸದ ಕುರಿತು ಹಾಗೂ ಇಂತಹುದೇ ಬಾಹ್ಯ ಆಚಾರಗಳ ಕುರಿತು ಇರುವ ಪ್ರವಾದಿವರ್ಯರ(ಸ) ಆದೇಶಗಳೆಲ್ಲವೂ ಮದೀನಾ ಜೀವನದ ಕೊನೆಯ ಐದಾರು ವರ್ಷಗಳದ್ದಾಗಿವೆ. ಅದಕ್ಕಿಂತ ಮುಂಚಿನ ಹದಿನೈದು ಹದಿನಾರು ವರ್ಷಗಳಲ್ಲಿ ಪ್ರವಾದಿ(ಸ) ತಮ್ಮ ಅನುಯಾಯಿಗಳಲ್ಲಿ ತಕ್ವಾ ಮತ್ತು ಇಹ್ಸಾನ್‌ಗೆ ಸಂಬಂಧಿಸಿ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ವಿವರಿಸಲಾಗಿರುವ ಗುಣಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದರು. ಈ ಅನುಕ್ರಮವನ್ನು ಗಮನಿಸಿದಾಗ ತಿಳಿಯುವುದೇನೆಂದರೆ ಯಾರನ್ನು ಅಲ್ಲಾಹನು ಜನರ ಆತ್ಮ ಸಂಸ್ಕರಣೆಯ ಕಾರ್ಯಕ್ಕೆ ನೇಮಿಸಿದ್ದನೋ ಅವರು ಕೊಟ್ಟ ಮೊದಲು ತಮಗೆ ದೊರಕಿದ ಅನುಯಾಯಿಗಳನ್ನು ತಿದ್ದಿ ತೀಡಿ ಅಪ್ಪಟ ಚಿನ್ನವಾಗಿ ರೂಪ್ರಡಿಸಿವರು. ಅನಂತರ ಅದಕ್ಕೆ ಚಿನ್ನದ ನಾಣ್ಯದ ಮುದ್ರೆಯೊತ್ತಿದರು.

ಆದರೆ ಈ ಹಿಂದೆ-ಮುಂದೆ ಮಾಡುವಿಕೆಯಿಂದ ಧರ್ಮದ ಆ ವಿಧಿಗಳ ಪಾಲನೆಗೆ ಊನ - ಮೇಷ ಎಣಿಸಬೇಕೆಂದು ಖಂಡಿತ ಭಾವಿಸಬೇಕಾಗಿಲ್ಲ. ನಿಜವಾದ ತಕ್ವಾ ಮನಸ್ಸಿನಲ್ಲಿ ಬೇರೂರಿ ಧರ್ಮನಿಷ್ಠೆ ಮತ್ತು ಇಸ್ಲಾಮೀ ಗುಣ ನಡತೆಯು ಜೀವನದಲ್ಲಿ ಬಾರದೆ ಮುತ್ತಕೀಗಳ ವಸ್ತ್ರಧಾರಣೆಯನ್ನು ಮಾಡಬಾರದು ಎಂಬುದೇ ಇದರ ಇಂಗಿತ.

ವಸ್ತ್ರಧಾರಣೆಯಲ್ಲಿ ಇಸ್ಲಾಮಿನ ಧೋರಣೆಯೇನೆಂದರೆ ನಿಮ್ಮನ್ನು ಕಂಡಾಗ ನೀವು ಮುಸ್ಲಿಮರೆಂದು ಯಾರೂ ತಿಳಿಯುವಂತಹ ಬಟ್ಟೆ ಬರೆಗಳನ್ನು ಧರಿಸಬೇಕು. ಒಟ್ಟಿನಲ್ಲಿ ಸತ್ಯನಿಷೇಧಿಗಳಂತೆ ಕಾಣುವ ವಸ್ತ್ರಧಾರಣೆಯನ್ನು ಅಳವಡಿಸಬಾರದು.

ಗಡ್ಡಕ್ಕೆ ಪ್ರವಾದಿ(ಸ) ಯಾವುದೇ ಪ್ರಮಾಣವನ್ನು ನಿಗದಿಪಡಿಸಲಿಲ್ಲ. ಗಡ್ಡ ಬೆಳೆಸಬೇಕೆಂದು ಮಾತ್ರ ಆದೇಶಿಸಿರುವರು. ಧರ್ಮಭ್ರಷ್ಟ ಜನರಂತಹ ಗಡ್ಡಧಾರಣೆ ಮಾಡದಿದ್ದರೆ ಮತ್ತು ನೀವು ಗಡ್ಡ ಬೆಳೆಸುತ್ತಿದ್ದೀರಿ ಎಂದು ತಿಳಿಯುವಷ್ಟು ಗಡ್ಡ ಬಿಟ್ಟರೆ ಸಾಕಾಗುವುದು. ನಿಮ್ಮನ್ನು ನೋಡಿ ಕೆಲವು ದಿನಗಳಿಂದ 'ಶೇವ್' ಮಾಡಿಲ್ಲ ಎಂದು ಭಾವಿಸುವಂತಾಗ ಬಾರದು. ಇಷ್ಟು ಮಾಡಿದರೆ ಪ್ರವಾದಿ(ಸ) ಅವರ ಇಂಗಿತ ಪೂರ್ತಿಯಾದೀತು. ಇದು ಕರ್ಮಶಾಸ್ತ್ರದ ಸಂಶೋಧನಾತ್ಮಕ ವಿಧಿಗಳಿಗೆ ಬದ್ಧವಾಗಿದ್ದರೂ ಇಲ್ಲದಿದ್ದರೂ ಸರಿಯೆ.

ತಲೆಯ ಕೂದಲನ್ನು ಸ್ವಲ್ಪ ಬೋಳಿಸಿ ಸ್ವಲ್ಪ ಇಡುವುದು ನಿಷಿದ್ಧ. ಈಗ ಸಾಮಾನ್ಯವಾಗಿ ಕ್ರಾಪ್' ಎನ್ನುವ ತಲೆಕೂದಲ ವಿನ್ಯಾಸವು ನಿಷಿದ್ಧವೆನ್ನಲು ಯಾವುದೇ ಪುರಾವೆ ನನಗೆ ಸಿಕ್ಕಿಲ್ಲ. ಆದರೆ ಅದು ಒಂದು ಮುಸ್ಲಿಮೇತರ ಜನಾಂಗವು ಕಂಡು ಹಿಡಿದ ವಿನ್ಯಾಸವೆಂಬ ಅರೋಚಕತೆಯ ಅಂಶ ಅದರಲ್ಲಿದೆ. ಆದ್ದರಿಂದಲೇ ನಾನು ಆ ವಿನ್ಯಾಸವನ್ನು ಬದಲಿಸಿದ್ದೇನೆ.

(ತರ್ಜುಮಾನುಲ್ ಕುರ್‌ಆನ್, ಸೆಪ್ಟೆಂಬರ್-ಅಕ್ಟೋಬರ್ 1943)

49

ನಮ್ಮಿಂದ ಸಾಧ್ಯವೇ?

- *ಸಂಶಯವೇನೆಂದರೆ ಸಹಾಬಿಗಳ ಜೀವನವನ್ನು ನೋಡುವಾಗ ಆಶ್ಚರ್ಯವಾಗುತ್ತದ ಸಣ್ಣವರು-ದೊಡ್ಡವರು ಮೇಲ್ವರ್ಗದವರು-ಕೆಳವರ್ಗದವರು, ಬಡವರು-ಸಿರಿವಂತರ ಎಲ್ಲರೂ ಸಂಕಷ್ಟಗಳನ್ನು ಎದುರಿಸುವಲ್ಲಿ ಒಂದು ವಿಶಾಲ ಕುಟುಂಬ ಸಂಬಂಧದಲ್ಲಿ ಪೋಣಿಸಲ್ಪಟ್ಟಿದ್ದರು. ಅಲ್ಲಿ ಒಬ್ಬನ ಕಷ್ಟ ಎಲ್ಲರ ಕಷ್ಟವಾಗಿತ್ತು. ಒಬ್ಬನ ಹಸಿವ ಎಲ್ಲರ ಹಸಿವಾಗಿತ್ತು. ಒಬ್ಬನ ಹೊರೆಯನ್ನು ಹೊರಲು ಅನೇಕ ಬಾಹುಗಳು ಮುಂ ಬರುತ್ತಿದ್ದುವು. ಆದರೆ ನಮ್ಮ ಸ್ಥಿತಿಯೇನು? ನಮ್ಮ ಮಕ್ಕಳು ಹಸಿದಿರುವಾಗ ಮತ್ತು ನಾವು ಉಪಜೀವನದ ಚಿಂತೆಯಲ್ಲಿರುವಾಗ ಈ ಸಂಕಷ್ಟಗಳನ್ನೇ ಅರಿಯದ ನಮ್ಮ ಸಹಕಾರ್ಯಕರ್ತರೊಂದಿಗೆ ನಾವು ಹೇಗೆ ನಡೆಯಬಲ್ಲೆವು. ಪ್ರವಾದಿ(ಸ) ಅವ ಕಾಲದಲ್ಲಿ ಸಹಾಬಿಗಳಲ್ಲಿ ಉಂಟಾಗಿದ್ದಂತಹ ಚೈತನ್ಯವು ಆ ಕಾಲಕ್ಕೆ ಮಾತ್ರ ಸೀಮಿತವಾಗಿರಲಿಲ್ಲವೆಂದು ಕೆಲವೊಮ್ಮೆ ತೋಚಿದರೆ, ಇನ್ನು ಕೆಲವೊಮ್ಮೆ ಆ ಚೈತನ್ಯ ಸ್ವಭಾವವೇ ಅದು ಸಾರ್ವತ್ರಿಕವಾಗತಕ್ಕದ್ದಲ್ಲವೆಂದು ಭಾಸವಾಗುತ್ತದೆ. ನಾವು ನಮ್ಮ ಪರಸ್ಪರ ಆತ್ಮೀಯತೆಯನ್ನು ಎಷ್ಟು ಪ್ರಬಲ ಗೊಳಿಸಬೇಕೆಂದರೆ ಸಂಘಟನೆಯು ಒಂದು ಕುಟುಂಬದಂತೆ ಭಾಸವಾಗಬೇಕು ಎಂದು ಆಲೋಚಿಸುತ್ತೇನೆ. ನಮ್ಮ ಸಂಘಟನೆಯ ಭದ್ರತೆಗೆ ಇದೊಂದು ಅನಿವಾರ್ಯ ವಿಷಯವಾಗಿದೆ.*

○ ಸಹಾಬಿಗಳ ಕುರಿತು ಚರಿತ್ರೆ ಪುಸ್ತಕಗಳಲ್ಲಿ ಬಂದಿರುವ ವಿಷಯಗಳು ಒಂದು ಹಂತದವರೆಗೆ ಉತ್ಪ್ರೇಕ್ಷಿತವಾಗಿದ್ದರೆ ಇನ್ನೊಂದು ಹಂತದವರೆಗೆ ವಾಸ್ತವಿಕತೆಯೂ ಆಗಿದೆ. ವಾಸ್ತವಿಕ ವಿಷಯವು ಕೂಡಾ ಒಮ್ಮೆಲೇ ಉಂಟಾದುದಲ್ಲ. ಬದಲಾಗಿ ಒಂದು ದೀರ್ಘ ಅವಧಿಯ ಪರಿಶ್ರಮದ ಫಲವಾಗಿ ಅವರಲ್ಲಿ ಪರಸ್ಪರ ಉಂಟಾಗಿರುವ ಸ್ನೇಹ ಸಂಬಂಧದ ಫಲವಾಗಿದೆ. ಆದರೆ ವಿಚಿತ್ರವೇನೆಂದರೆ ಪ್ರವಾದಿ ಮುಹಮ್ಮದ್(ಸ) ಅವರಂತಹ ಬಲಿಷ್ಠ ನಾಯಕನ ನೇತೃತ್ವದಲ್ಲಿ 14-15 ವರ್ಷಗಳ ನಿರಂತರ ತರಬೇತಿಯಿಂದ ಯಾವ ಗುಣಗಳು ಅವರಲ್ಲುಂಟಾಗಿತ್ತೋ ಅದನ್ನು ನಾವು ಮೊದಲ ಹಂತದಲ್ಲೇ ಗಳಿಸಲು ನೋಡುತ್ತೇವೆ. ಮದೀನಾದಲ್ಲಿ ಸಹಾಬಿಗಳಲ್ಲಿ ಪರಸ್ಪರ ಗಾಢ ಸಂಬಂಧ ಬೆಳೆಯಲು ಅವರೆಲ್ಲರೂ ಒಂದೆಡ

ಸೇರಿದ್ದೇ ಕಾರಣವಾಗಿತ್ತು. ಅರೇಬಿಯಾದ ವಿವಿಧ ಪ್ರದೇಶಗಳಲ್ಲಿ ಚದರಿ ಹೋಗಿದ್ದ ಜನರಲ್ಲಿ ಇಂತಹ ಸಂಬಂಧ ಸಾಧ್ಯವಿರಲಿಲ್ಲ. ಆದರೆ ನಮ್ಮಲ್ಲಿ ಸಂಘಟಿತ ಜೀವನ ಇನ್ನೂ ಸ್ಥಾಪಿತವಾಗಿಲ್ಲ. ದೇಶದ ಎಲ್ಲೆಡೆ ಚದರಿರುವ ವ್ಯಕ್ತಿಗಳು ಇನ್ನೂ ಪರಸ್ಪರರನ್ನು ಅರಿತಿಲ್ಲ. ಕೇವಲ ಸಂಘಟಿತ ಜೀವನದಲ್ಲಿ ಕಾಣಬಹುದಾದ ಗಾಢ ಸಂಬಂಧವು ಅವರಲ್ಲಿ ಹೇಗೆ ಉಂಟಾದೀತು?

ನಮ್ಮೊಂದಿಗೆ ಸಹಮತವಿರುವವರು ಸಹಾಬಿಗಳ ಕಾಲಘಟ್ಟವನ್ನು ಕೇವಲ ಪವಾಡಗಳ ಸ್ಫೂರ್ತಿಯೊಂದಿಗೆ ನೋಡುವ ಬದಲು ಸ್ವಾಭಾವಿಕ ಉಪಾಧಿಗಳ ಬೆಳಕಿನಲ್ಲಿ ಗ್ರಹಿಸಲು ಪ್ರಯತ್ನಿಸಬೇಕು. ಅನ್ಯಥಾ ಅಂದು ಉಂಟಾಗಿದ್ದಂತಹ ಪ್ರತಿಯೊಂದು ಗುಣವೂ ಪವಾಡಸದೃಶವಾಗಿ ಹಠಾತ್ತನೆ ಉಂಟಾಗಬೇಕೆಂದು ನಾವು ನಿರೀಕ್ಷಿಸಬಹುದು. ಹಾಗೆ ಅದು ಪ್ರಕಟವಾಗದಿದ್ದರೆ ನಾವು ಹತಾಶರಾಗಿ ಬಿಡಬಹುದು. ಈ ಮನೋಭಾವದೊಂದಿಗೆ ನಾವೆಂದೂ ಕನಿಷ್ಠ ಅಂತಹ ಗುಣಗಳನ್ನು ಬೆಳೆಸಬಲ್ಲಂತಹ ಸಹಜ ಕಾರಣಗಳನ್ನು ಒದಗಿಸಲು ಪ್ರಯತ್ನಿಸಲಾರೆವು. ಆದುದರಿಂದ ಒಗ್ಗಟ್ಟಾಗಿರಿ ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡಿರಿ. ಈ ಮಾರ್ಗದ ಸಂಕಷ್ಟಗಳನ್ನು ಒಗ್ಗಟ್ಟಿನಿಂದ ಎದುರಿಸಿರಿ. ಈ ರೀತಿ ನಿಮ್ಮಲ್ಲಿ ಪರಸ್ಪರ ಗಾಢ ಸಂಬಂಧ ಬೆಳೆಯದಿದ್ದರೆ ಮತ್ತೆ ನೀವು ದೇವನಿಂದ ಪವಾಡಗಳನ್ನು ನಿರೀಕ್ಷಿಸುವುದಾದರೂ ಹೇಗೆ?

ಈ ವಿಷಯದಲ್ಲಿ ಯೋಚಿಸುವವರು ಮಾಡುವ ಅತಿ ದೊಡ್ಡ ತಪ್ಪೇನೆಂದರೆ ಈ ಕಾರ್ಯದಲ್ಲಿ ಯಾವ ಯಾವ ವಿಷಯಗಳಲ್ಲಿ ಅವರು ಲೋಪವಿದೆಯೆಂದು ಭಾವಿಸುತ್ತಾರೋ ಅವುಗಳನ್ನು ಸರಿಪಡಿಸುವುದು ಮತ್ತು ಅಗತ್ಯದ ವಸ್ತುಗಳನ್ನು ಪೂರೈಸುವುದು ಬೇರೆ ಯಾರದೋ ಕೆಲಸವೆಂದು ಭಾವಿಸುತ್ತಾರೆ. ತಮ್ಮ ಮೇಲೆ ಏನೂ ಹೊಣೆಯಿಲ್ಲವೆಂದು ಭಾವಿಸುತ್ತಾರೆ. ವಸ್ತುತಃ ಇದು ಯಾರಾದರೂ ಒಬ್ಬರು ವೈಯಕ್ತಿವಾಗಿ ಮಾಡುವ ಕೆಲಸವಲ್ಲ. ಇದು ನಮ್ಮೆಲ್ಲರ ಸಾರ್ವತ್ರಿಕ ಕೆಲಸ. ಇದರಿಂದ ಯಾರೂ ಕೇವಲ ಕೆಲವು ಲೋಪಗಳನ್ನು ಬೆಟ್ಟು ಮಾಡುವ ಮತ್ತು ಕೆಲವು ವಿಷಯಗಳು ಅಗತ್ಯವಿದೆಯೆಂದು ಸೂಚಿಸುವ ಮೂಲಕ ಹೊಣೆ ಮುಕ್ತನಾಗುವುದಿಲ್ಲ. ಇರುವ ಲೋಪಗಳನ್ನು ನಾವೇ ದೂರೀಕರಿಸದೆ ಮತ್ತು ನಾವು ಹೇಳುವ ಅಗತ್ಯದ ವಸ್ತುಗಳನ್ನು ನಾವೇ ಪೂರೈಸುವ ಕೆಲಸ ಮಾಡದೆ ಇದು ಸಾಧ್ಯವಿಲ್ಲ.

(ತರ್ಜುಮಾನುಲ್ ಖುರ್ಆನ್, ಮೇ-ಜೂನ್ 1944)

50

ಹಂದಿ ಮತ್ತು ಕ್ರೂರಮೃಗಗಳು ನಿಷಿದ್ಧವೇಕೆ?

- *ಕುರ್‌ಆನ್ ಕೆಲವು ವಸ್ತುಗಳನ್ನು ನಿಷೇಧಿಸಿರುವುದೇಕೆ? ಇದು ವೈದ್ಯಕೀಯ ದೃಷ್ಟಿಯಿಂದಲೇ ಅಥವಾ ಬೇರಾವುದೇ ಕಾರಣದಿಂದಲೇ? ಅದರಲ್ಲಿರುವ ಹಾನಿಗಳೇನು? ಹಂದಿಯನ್ನು ವಿಶೇಷವಾಗಿ ಹೆಸರೆತ್ತಿ ಉಗ್ರವಾಗಿ ನಿಷೇಧಿಸಲು ಕಾರಣವೇನು? ಇದು ಅತ್ಯಧಿಕ ಹಾನಿಕಾರಕ ಪ್ರಾಣಿಯಾಗಿದೆಯೇ? ಹರಿದು ತಿನ್ನುವ ಪ್ರಾಣಿ ಮತ್ತು ರಕ್ತವನ್ನು ಏಕೆ ನಿಷೇಧಿಸಲಾಗಿದೆ?*

○ ಕುರ್‌ಆನಿನಲ್ಲಿ ಕೆಲವು ವಸ್ತುಗಳ ಸೇವನೆಯನ್ನು ನಿಷೇಧಿಸಲಾಗಿದೆ. ಅವುಗಳನ್ನು ನಿಷೇಧಿಸಲು ಅಂಶಿಕವಾಗಿ ಅವುಗಳ ವೈದ್ಯಕೀಯ ಹಾನಿಯೂ ಕಾರಣವಾಗಿರಬಹುದು. ಆದರೆ ನಿಷೇಧಕ್ಕೆ ಮೂಲ ಕಾರಣ ವೈದ್ಯಕೀಯವಲ್ಲ. ಬದಲಾಗಿ ನೈತಿಕ ಮತ್ತು ವಿಶ್ವಾಸಕ್ಕೆ ಸಂಬಂಧಿಸಿದುದಾಗಿದೆ. ಕೆಲವು ವಸ್ತುಗಳನ್ನು ನಂಬಿಕೆಯ ಬುನಾದಿಯಲ್ಲೇ ನಿಷೇಧಿಸಲಾಗಿದೆ. ಉದಾ: ಅಲ್ಲಾಹನ ಹೊರತು ಇತರರ ಹೆಸರಲ್ಲಿ ಕೊಯ್ಯಲ್ಪಟ್ಟ ಪ್ರಾಣಿ. ಇನ್ನು ಕೆಲವು ವಸ್ತುಗಳನ್ನು ನೈತಿಕ ಕಾರಣಕ್ಕಾಗಿ ನಿಷೇಧಿಸಲಾಗಿದೆ. ಉದಾ: ಹಂದಿ. ಅವುಗಳ ನೈತಿಕ ಹಾನಿಗಳ ಪೂರ್ಣ ತಿಳುವಳಿಕೆ ನಮಗಿಲ್ಲ. ಆದರೆ ಸ್ವಲ್ಪ ಮಟ್ಟಿಗೆ ನಮ್ಮ ಅನುಭವದ ಆಧಾರದಲ್ಲಿ ನಾವು ಅದನ್ನು ತಿಳಿಯ ಬಹುದಾಗಿದೆ. ಉದಾ: ಹಂದಿಯ ಕುರಿತು ಜಗತ್ತಿನ ಅನುಭವ ತಿಳಿಸುವುದೇನೆಂದರೆ ಅದರ ಮಾಂಸವು ಅತ್ಯಧಿಕ ನಿರ್ಲಜ್ಜೆ ಉಂಟುಮಾಡುತ್ತದೆ. ಯಾವ ಜನಾಂಗಗಳು ಅದನ್ನು ಹೆಚ್ಚಾಗಿ ಸೇವಿಸುತ್ತದೋ ಅವುಗಳ ನೈತಿಕ ಸ್ಥಿತಿಯು ಇದಕ್ಕೆ ಸಾಕ್ಷಿಯಾಗಿದೆ. ಪ್ರಾಯಶಃ ಲೋಕದ ಪ್ರಾಣಿಗಳಲ್ಲಿ ಹಂದಿಯೊಂದೇ ಒಂದು ಹೆಣ್ಣಿನ ಸುತ್ತಲೂ ಅನೇಕ ಗಂಡು ಸೇರಿಕೊಂಡು ಒಂದರ ನಂತರ ಒಂದರಂತೆ ಎಲ್ಲರ ಮುಂದೆ ಸಂಭೋಗ ನಡೆಸುತ್ತದೆ. ಈಗ ನೀವೇ ಯೋಚಿಸಿ. ನಿರ್ಲಜ್ಜೆಯ ಈ ವಿಶಿಷ್ಟ ರೂಪವು ಯಾವ ಜನಾಂಗದಲ್ಲಿ ಅತ್ಯಧಿಕವಾಗಿದೆ. ಸಭೆಯಲ್ಲಿ ಒಬ್ಬನ ಹೆಂಡತಿಯು ಇನ್ನೊಬ್ಬನ ಹತ್ತಿರವೇ ಕುಳಿತುಕೊಳ್ಳಬೇಕೆಂಬುದು ಯಾರ ಶಿಷ್ಟಾಚಾರವಾಗಿದೆ. ಬಾಲ್‌ರೂಂನಲ್ಲಿ ತನ್ನ ಪತ್ನಿಯೊಂದಿಗೆ ತಾನೇ ನೃತ್ಯ ಮಾಡುವುದು ಸಂಕುಚಿತತೆ ಮತ್ತು ಅಸೂಯೆಯೆಂದು ಪರಿಗಣಿಸಲ್ಪಟ್ಟು ಇತರರ ಜತೆ ಎದೆಗೆ ಎದೆ ತಾಗಿಸಿ ನೃತ್ಯ ಮಾಡಲು ಬಿಡುವುದು ಔದಾರ್ಯ

ಮತ್ತು ಹೃದಯ ವೈಶಾಲ್ಯವೆಂದು ಯಾವ ಜನಾಂಗದವರು ಭಾವಿಸುತ್ತಾರೆ? ಅವರ ಈ ನೈತಿಕ ವಿಚಾರಧಾರೆಯ ಮೂಲವೆಲ್ಲಿಯೆಂದು ಹುಡುಕಿದರೆ ಈ ಪ್ರಾಣಿಯ ಲಕ್ಷಣದಲ್ಲೇ ನಿಮಗೆ ಅದು ಸಿಗಬಹುದು. ಅದರ ಮಾಂಸವನ್ನು ಅತ್ಯಧಿಕ ಸೇವಿಸುವುದರಿಂದಲೇ ಈ ಅನೈತಿಕತೆ ಅವರಲ್ಲಿ ವ್ಯಾಪಿಸಿದೆ. ಇದೇ ರೀತಿ ಕ್ರೂರ ಪ್ರಾಣಿಗಳನ್ನು ತಿನ್ನುವುದರಿಂದ ಕ್ರೂರತೆ ಬೆಳೆಯುತ್ತದೆಂದು ಊಹಿಸಬಹುದು. ಹರಿಯುವ ರಕ್ತದ ಸೇವನೆಯಿಂದಲೂ ಕ್ರೌರ್ಯ ಮತ್ತು ಕಠಿಣ ಹೃದಯತೆಯುಂಟಾಗುತ್ತದೆಂದೇ ಊಹಿಸಬಹುದಾಗಿದೆ.

(ತರ್ಜುಮಾನುಲ್ ಕುರ್‌ಆನ್-ಸೆಪ್ಟೆಂಬರ್ 1951)

51

ಝಕಾತ್ ಮತ್ತು ತೆರಿಗೆಯ ವ್ಯತ್ಯಾಸ

- *ಪ್ರಸಕ್ತ ಸ್ವತಂತ್ರ ಮತ್ತು ನಾಗರಿಕ ಯುಗದಲ್ಲಿಯೂ ಬಡ-ಬಗ್ಗರಿಗೆ ನೀಡಲಿಕ್ಕಾಗಿ ಸಿರಿವಂತರಿಂದ ಝಕಾತನ್ನು ಕಡ್ಡಾಯವಾಗಿ ವಸೂಲಿ ಮಾಡುವುದು ಸರಿಯೇ? ಏಕೆಂದರೆ ಅನ್ಯ ಅನೇಕ ತೆರಿಗೆಗಳ ಸಹಿತ ಅವರು ಆದಾಯ ತೆರಿಗೆಯನ್ನೂ ಪಾವತಿ ಮಾಡುತ್ತಾರೆ.*

○ ಝಕಾತ್‌ನ ಬಗೆಗೆ ಮೊಟ್ಟ ಮೊದಲು ತಿಳಿದಿರಬೇಕಾದ ವಿಷಯವೇನೆಂದರೆ ಅದು ತೆರಿಗೆಯಲ್ಲ, ಒಂದು ಇಬಾದತ್ (ಆರಾಧನಾ ವಿಧಿ) ಆಗಿದೆ. ನಮಾಝ್, ಉಪವಾಸ ವ್ರತ ಮತ್ತು ಹಜ್ಜ್ ಇಸ್ಲಾಮ್‌ನ ಸ್ತಂಭಗಳಾಗಿರುವಂತೆಯೇ ಅದೂ ಇಸ್ಲಾಮ್‌ನ ಸ್ತಂಭವಾಗಿದೆ. ಯಾರು ಕುರ್‌ಆನನ್ನು ಸರಿಯಾಗಿ ಪಠಿಸಿರುವನೋ ಅವನು ನಮಾಝ್ ಮತ್ತು ಝಕಾತನ್ನು ಕುರ್‌ಆನ್‌ನಲ್ಲಿ ಸಾಮಾನ್ಯವಾಗಿ ಒಟ್ಟೊಟ್ಟಿಗೇ ಪ್ರಸ್ತಾಪಿಸಿರುವುದನ್ನು ಮತ್ತು ಅದನ್ನು ಎಲ್ಲ ಕಾಲಗಳ ಪ್ರವಾದಿಗಳ ಧರ್ಮದ ಒಂದು ಸ್ತಂಭವೆಂದು ಸಾರಿರುವುದನ್ನು ಕಾಣುವನು. ಆದ್ದರಿಂದ ಅದನ್ನು ತೆರಿಗೆಯೆಂದು ಪರಿಗಣಿಸುವುದು ಮತ್ತು ತೆರಿಗೆಯಂತೆ ಅದರೊಂದಿಗೆ ವ್ಯವಹರಿಸುವುದು ಮೊತ್ತಮೊದಲ ಮೂಲ ತಪ್ಪಾಗಿದೆ. ಒಂದು ಇಸ್ಲಾಮೀ ಸರಕಾರವು ಯಾವ ರೀತಿ ತನ್ನ ನೌಕರರಿಂದ ಕಚೇರಿ ಕೆಲಸ ಮತ್ತು ಇನ್ನಿತರ ಸೇವೆಗಳನ್ನು ಮಾಡಿಸಿ ಇನ್ನು ನಮಾಝ್‌ನ ಅಗತ್ಯವಿಲ್ಲ. ಏಕೆಂದರೆ ಅವರು ಸರಕಾರಿ ಕರ್ತವ್ಯವನ್ನು ನೆರವೇರಿಸಿದ್ದಾರೆಂದು ಹೇಳಲು ಸಾಧ್ಯವಿಲ್ಲವೋ ಅದೇ ರೀತಿ ಅದು ಜನರಿಂದ ತೆರಿಗೆ ವಸೂಲಿ ಮಾಡಿ ಇನ್ನು ಝಕಾತ್ ನೀಡುವ ಅಗತ್ಯವಿಲ್ಲ. ಏಕೆಂದರೆ ನಿಮ್ಮಿಂದ ತೆರಿಗೆ ವಸೂಲಿ ಮಾಡಲಾಗಿದೆ ಎಂದೂ ಹೇಳುವಂತಿಲ್ಲ. ಒಂದು ಇಸ್ಲಾಮೀ ಸರಕಾರವು ನೌಕರರಿಗೆ ಸಮಯಕ್ಕೆ ಸರಿಯಾಗಿ ನಮಾಝ್‌ಗೆ ಅನುವು ಆಗುವಂತೆ ತನ್ನ ಕೆಲಸದ ವೇಳೆಯನ್ನು ನಿರ್ಧರಿಸಬೇಕು. ಅದೇ ರೀತಿ ಅದರ ತೆರಿಗೆಯ ವ್ಯವಸ್ಥೆಯಲ್ಲೂ ಝಕಾತ್‌ಗೆ ಅನುವು ಮಾಡುವಂತೆ ಅಗತ್ಯ ಬದಲಾವಣೆಗಳನ್ನು ಮಾಡಲೇಬೇಕು.

ಝಕಾತನ್ನು ಕುರ್‌ಆನ್‌ನಲ್ಲಿ ಯಾವ ಉದ್ದೇಶಗಳಿಗಾಗಿ ಕಡ್ಡಾಯಗೊಳಿಸಲಾಗಿದೆಯೋ ಮತ್ತು ಯಾವ ರೀತಿ ಅದನ್ನು ವಿತರಿಸಬೇಕೆಂದು ಆಜ್ಞಾಪಿಸಿದೆಯೋ ಆ ಉದ್ದೇಶಕ್ಕಾಗಿ ಮತ್ತು ಆ ರೀತಿಯಲ್ಲಿ ಸರಕಾರದ ತೆರಿಗೆಗಳ ಪೈಕಿ ಯಾವ ತೆರಿಗೆಯೂ ಉಪಯೋಗವಾಗುವುದಿಲ್ಲ. *(ತರ್ಜುಮಾನುಲ್ ಕುರ್‌ಆನ್: ಡಿಸೆಂಬರ್ 1961)*

52

ಗೋರಿಯವರಲ್ಲಿ ಪ್ರಾರ್ಥಿಸಲಿಕ್ಕೆ ಕೋರುವುದು

● *ಯಾರಾದರೂ ಮಹಾತ್ಮನ ಗೋರಿಗೆ ಹೋಗಿ ಅವರಲ್ಲಿ "ಓ ವಲೀಯಲ್ಲಾಹ್! ತಾವು ನಮಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಿರಿ" ಎಂದು ಕೋರುವುದು ಸರಿಯೇ?*

○ ಯಾರಾದರೂ ಮಹಾತ್ಮರಲ್ಲಿ ತನಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಲು ವಿನಂತಿಸುವುದು ವಸ್ತುಶಃ ಆಕ್ಷೇಪಾರ್ಹವೇನೂ ಅಲ್ಲ. ಒಬ್ಬನು ಅಲ್ಲಾಹನಲ್ಲಿ ನೇರವಾಗಿ ಪ್ರಾರ್ಥಿಸುವಂತೆ ಇತರರಲ್ಲಿಯೂ ತನಗಾಗಿ ಪ್ರಾರ್ಥಿಸುವಂತೆ ವಿನಂತಿಸಬಹುದು. ಆದರೆ ತೀರಿ ಹೋದ ವ್ಯಕ್ತಿಗಳ ಗೋರಿಗಳಿಗೆ ಹೋಗಿ ಹೀಗೆ ವಿನಂತಿಸುವಾಗ ಪರಿಸ್ಥಿತಿಯು ಸಂಪೂರ್ಣ ಬದಲಾಗಿ ಬಿಡುತ್ತದೆ. ಗೋರಿಯಲ್ಲಿ ಈ ಮಾತು ಹೇಳುವ ಎರಡೇ ರೂಪಗಳಿವೆ. ಒಂದೋ ಮನದಲ್ಲೇ ಹೇಳುವುದು ಅಥವಾ ಮೆಲು ದನಿಯಲ್ಲಿ ಹೇಳುವುದು. ಇದರ ಅರ್ಥ ಏನಾಗುತ್ತದೆಂದರೆ ಎಲ್ಲವನ್ನು ಕೇಳುವಂತಹ ಯಾವ ಸಾಮರ್ಥ್ಯವನ್ನು ಅಲ್ಲಾಹನು ಹೊಂದಿರುತ್ತಾನೋ ಅದೇ ಸಾಮರ್ಥ್ಯವು ಆ ಮಹಾತ್ಮರಿಗೂ ಇದೆ ಎಂದು ನೀವು ಭಾವಿಸಿದಂತಾಗುವುದು.

"ನೀವು ನಿಮ್ಮ ಮಾತನ್ನು ಮೆಲು ದನಿಯಲ್ಲಿ ಹೇಳಿದರೂ ಜೋರಾಗಿ ಹೇಳಿದರೂ ಅಲ್ಲಾಹನಂತೂ ಹೃದಯಗಳಲ್ಲಿರುವುದನ್ನು ಬಲ್ಲವನಾಗಿದ್ದಾನೆ." ಎಂದು ಪವಿತ್ರ ಕುರ್‌ಆನ್ ಅಲ್ಲಾಹನ ಕುರಿತು ಹೇಳಿದೆ. ಇನ್ನೊಂದು ರೂಪ ಯಾವುದೆಂದರೆ ನೀವು ಆ 'ವಲೀ'ಯವರನ್ನು ಜೋರಾಗಿ ಕರೆದು ಹೇಳುವುದು ಇದರಲ್ಲಿ ನಿಮ್ಮ ವಿಶ್ವಾಸಕ್ಕೆ ಏನೂ ತೊಂದರೆ ಬರದಿದ್ದರೂ ಇದು ಕೇವಲ ಕತ್ತಲೆಯಲ್ಲಿ ಬಾಣ ಬಿಟ್ಟಂತಾಗುವುದು. ನೀವು ಯಾರನ್ನು ಕರೆಯುತ್ತಿರುವಿರೋ ಅವರು ಅದನ್ನು ಕೇಳದೆ ಇರಬಹುದು. ಏಕೆಂದರೆ ಮೃತರು ಆಲಿಸುತ್ತಾರೆಂಬುದು ಒಂದು ವಿವಾದಾಸ್ಪದ ವಿಷಯವಾಗಿದೆ. ಒಂದು ವೇಳೆ ಅವರಿಗೆ ಶ್ರವಣ ಶಕ್ತಿಯಿದ್ದರೂ ಅವರ ಆತ್ಮ ಅಲ್ಲಿ ಇಲ್ಲದಿರಬಹುದು. ಆಗ ನೀವು ಖಾಲಿ ಮನೆಯಲ್ಲಿ ಬೊಬ್ಬೆ ಹೊಡೆದಂತಾಗುವುದು. ಒಂದು ವೇಳೆ ಆತ್ಮ ಅಲ್ಲಿದ್ದರೂ ಅದು ತನ್ನ ಪ್ರಭುವಿನ ಕಡೆಗೆ ಧ್ಯಾನ ಹರಿಸಿಕೊಂಡಿರಬಹುದು. ಆಗ ನೀವು ನಿಮ್ಮ ಸ್ವಾರ್ಥಕ್ಕಾಗಿ ಅವರನ್ನು ಕರೆದು ಅವರಿಗೆ ಉಪದ್ರವ ಮಾಡಿದಂತಾಗುವುದು. ಇಹಲೋಕದಲ್ಲಿ ನೀವು ಯಾರ ಬಳಿಯಾದರೂ ನಿಮಗಾಗಿ ಪ್ರಾರ್ಥಿಸುವಂತೆ

ವಿನಂತಿಸುವುದಿದ್ದರೆ, ಮೊದಲು ನೀವು ಸಭ್ಯ ರೀತಿಯಲ್ಲಿ ಅವರನ್ನು ಭೇಟಿಯಾಗಿ ಅನಂತರ ನಿಮ್ಮ ಇಂಗಿತವನ್ನು ಅವರ ಮುಂದಿಡುತ್ತೀರಿ. ನೀವೆಂದೂ ಅವರ ಮನೆಯ ಹೊರಗೆ ನಿಂತು ಅವರನ್ನು ಬೊಬ್ಬಿಟ್ಟು ಕರೆದು ನನಗಾಗಿ ಪ್ರಾರ್ಥಿಸಿರಿ ಎಂದು ಹೇಳಲಾರಿರಿ. ಹಾಗೆ ಮಾಡಿದರೆ ಬಹುಶಃ ಅವರು ಮನೆಯಲ್ಲಿ ಇಲ್ಲದಿರಬಹುದು. ಇದ್ದರೂ ಬೇರೇನಾದರೂ ಕೆಲಸದಲ್ಲಿ ನಿರತರಾಗಿರಬಹುದು.

ಮೃತ ಮಹಾನ್ ವ್ಯಕ್ತಿಗಳ ಬಗ್ಗೆ ಅವರ ಸ್ಥಿತಿಯನ್ನು ತಿಳಿಯಲು ಅಥವಾ ಅವರನ್ನು ನೇರವಾಗಿ ಭೇಟಿಯಾಗಲು ನಮಗೆ ಅವಕಾಶವಿಲ್ಲ. ಹಾಗಿರುವಾಗ ಅವರ ಅಂತಿಮ ವಿಶ್ರಾಮದ ಮನೆಗೆ ಹೋಗಿ ಅವರನ್ನು ಬೊಬ್ಬಿಟ್ಟು ಕರೆಯುವುದು ವಿವೇಕ ಉಳ್ಳವನ ಕೆಲಸವೇ? ಒಂದು ವೇಳೆ ತನಗಾಗಿ ಪ್ರಾರ್ಥಿಸಲು ವಿನಂತಿಸುವ ಈ ಕ್ರಮವನ್ನು ಕುರ್‌ಆನ್ ಮತ್ತು ಹದೀಸ್‌ನಲ್ಲಿ ಕಲಿಸಲಾಗಿದ್ದರೆ ಅಥವಾ ಸಹಾಬಿಗಳ ಕಾಲದಲ್ಲಿ ಈ ಕ್ರಮ ಜಾರಿಯಲ್ಲಿತ್ತೆಂದು ಸಾಬೀತಾಗಿದ್ದರೆ ಪೂರ್ಣ ಭರವಸೆಯೊಂದಿಗೆ ಈ ಕ್ರಮವನ್ನು ಅನುಸರಿಸಬಹುದಾಗಿತ್ತು. ಆದರೆ ಅಲ್ಲಿ ಈ ಕ್ರಮದ ಸುಳಿವೇ ನಮಗೆ ಸಿಗುವುದಿಲ್ಲ. ಹಾಗಿರುವಾಗ ಇದನ್ನು ಯಾಕೆ ಅನುಸರಿಸಬೇಕು. ಇದರ ಒಂದು ರೂಪವು ಮನುಷ್ಯರಿಗೆ ಅಲ್ಲಾಹನ ಗುಣವನ್ನು ಆರೋಪಿಸಿದಂತಿದ್ದರೆ ಇನ್ನೊಂದು ರೂಪವು ಅತ್ಯಂತ ಅಸಭ್ಯ ಮತ್ತು ಅವೈಚಾರಿಕವಾಗಿದೆ. *(ತರ್ಜುಮಾನುಲ್ ಕುರ್‌ಆನ್: ಅಕ್ಟೋಬರ್-ನವೆಂಬರ್ -1957)*

(53)

ಸಂಕಷ್ಟಗಳ ಸುರಿಮಳೆಯ ವೇಳೆ ಸತ್ಯವಿಶ್ವಾಸಿಯ ದೃಷ್ಟಿಕೋನ

- *ನನ್ನ ಮೂರನೆಯ ಪುತ್ರ 4 ವರ್ಷ ಪ್ರಾಯದಲ್ಲಿ ತೀರಿಕೊಂಡ. ಅಲ್ಲಾಹನು ಅವನನ್ನು ತನ್ನ ಕರುಣೆಯ ಆಶ್ರಯದಲ್ಲಿರಿಸಲಿ. ಇಲ್ಲಿಗೆ ಬಂದ ನಂತರ ಮೊದಲ ಇಬ್ಬರು ಪುತ್ರರು ತೀರಿ ಹೋಗಿದ್ದರು. ಇವನು ಮೂರನೆಯವನು. ಮಾಟ ಮಾಡಲಾಗಿದೆ ಎಂದು ಯಾರೋ ಸಂಶಯ ಹುಟ್ಟಿಸಿರುವರು. ಈ ಮಗು ಹುಟ್ಟಿದಂದಿನಿಂದಲೇ ಪವಿತ್ರ ಕುರ್‌ಆನ್‌ನ ವಿವಿಧ ಭಾಗಗಳನ್ನು ಓದಿ ಊದುತ್ತಿದ್ದೆ. ವ್ಯತ್ಯಾಸವೆಂದರೆ ಮೊದಲೆರಡು ಮಕ್ಕಳು ಎರಡು ವರ್ಷ ಪ್ರಾಯದಲ್ಲಿ ತೀರಿಕೊಂಡರೆ ಈ ಮಗು 4 ವರ್ಷಗಳವರೆಗೆ ಬದುಕಿದ. ಮಾಟ-ಮಂತ್ರ ಕೂಡಾ ಕೆಲವು ಪದಗಳೇ ಆಗಿವೆಯಲ್ಲವೇ? ಅದರ ನಿವಾರಣೆಗೆ ಪವಿತ್ರ ಕುರ್‌ಆನ್‌ನ ವಚನಗಳನ್ನು ಬಳಸಿದೆ. ಪ್ರಾರ್ಥನೆಗಳನ್ನೂ ಧಾರಾಳವಾಗಿ ಮಾಡಿದೆ. ತಹಜ್ಜುದ್‌ನ ವೇಳೆ ಗಂಟೆಗಟ್ಟಲೆ ಸಾಷ್ಟಾಂಗ ಬಿದ್ದು ಪ್ರಾರ್ಥಿಸಿದೆ. ಆದರೂ ಸ್ವೀಕೃತವಾಗಲಿಲ್ಲ. ಅಲ್ಲಾಹನಂತೂ ಸರ್ವಶ್ರುತ, ಸರ್ವವೀಕ್ಷಕ, ಸರ್ವವ್ಯಾಪಿಯಾಗಿದ್ದಾನೆ. ಅಲ್ಲಾಹನು ಮಾಟ-ಮಂತ್ರದ ಮುಂದೆ ವಿವಶನಾಗಿ ಬಿಡುತ್ತಾನೆಯೇ? ಜನರು ಗೋರಿಯವರ ಹೆಸರಲ್ಲಿ ಹರಕೆಗಳನ್ನು ಹೊತ್ತು, ಕೈ ಕಾಲುಗಳಿಗೆ ತಾಯಿತಗಳನ್ನು ಕಟ್ಟಿಸಿ ತಮ್ಮ ಮಕ್ಕಳನ್ನು ಕಾಪಾಡುತ್ತಾರೆ. ಆದರೆ ನಾವು ಅದನ್ನು 'ಶಿರ್ಕ್' (ಬಹುದೇವ ವಿಶ್ವಾಸ) ಎಂದು ಬಗೆದು ಆ ಕಡೆ ಗಮನ ಹರಿಸಲಿಲ್ಲ. ಆದರೆ ನಮ್ಮ ಪಾಲಿಗೆ ನಿರಂತರ ದುಃಖವೇ ಬಂತು. ಒಂದರ ನಂತರ ಒಂದರಂತೆ ಮೂರು ಮಾಸದ ಗಾಯಗಳಾದುವು. ಈ ದುಃಖದಾಯಕ ಮತ್ತು ಚಿಂತಾಜನಕ ಸ್ಥಿತಿಯಲ್ಲಿ ದಯವಿಟ್ಟು ನನಗೆ ಮಾರ್ಗದರ್ಶನ ಮಾಡುವಿರಾ?*

○ ನಿಮ್ಮ ಪುತ್ರನ ನಿಧನದ ವಾರ್ತೆ ಕೇಳಿ ಬಹಳ ದುಃಖವಾಯಿತು. ಈ ಹಿಂದೆ ಇಬ್ಬರು ಪುತ್ರರ ವಿರಹ ವೇದನೆಯನ್ನು ನೀವು ಅನುಭವಿಸಿದ್ದೀರಿ ಎಂದು ತಿಳಿದು ಇನ್ನಷ್ಟು ದುಃಖವಾಯಿತು. ನಿರಂತರವಾಗಿ ಮಕ್ಕಳ ಈ ರೀತಿ ಅಗಲಿಕೆಯು ನಿಮ್ಮ ಮತ್ತು ನಿಮ್ಮ ಪತ್ನಿಯ ಪಾಲಿಗೆ ಎಷ್ಟು ಅಸಹನೀಯವಾಗಿರಬಹುದೆಂಬುದನ್ನು ನಾನು ಚೆನ್ನಾಗಿ ಊಹಿಸಬಲ್ಲೆ.

ಅಲ್ಲಾಹನು ನಿಮಗಿಬ್ಬರಿಗೂ ಸಹನೆಯನ್ನು ದಯಪಾಲಿಸಲಿ ಮತ್ತು ಮನಶ್ಶಾಂತಿಯನ್ನು ಕರುಣಿಸಲಿ.

ಮನಸ್ಸಿಗೆ ಆದ ನಿರಂತರ ಆಘಾತಗಳಿಂದಾಗಿ ನೀವು ಅಸಾಮಾನ್ಯವಾಗಿ ಪ್ರಭಾವಿತರಾಗಿದ್ದೀರಿ ಎಂದು ನಿಮ್ಮ ಪತ್ರದಿಂದ ತಿಳಿಯುತ್ತದೆ. ಈ ಸ್ಥಿತಿಯಲ್ಲಿ ಉಪದೇಶ ಮಾಡಿದರೆ ಗಾಯಗಳನ್ನು ಕೆದಕಿದಂತಾಗುವುದು. ದುಃಖದುಮ್ಮಾನದ ಈ ಬಿರುಗಾಳಿಯು ಶಮನವಾದಾಗ ಉಪದೇಶಿಸುವುದೇ ಸೂಕ್ತವಾಗಿದೆ. ಆದರೆ ಈ ಅವಧಿಯಲ್ಲಿ ನಿಮ್ಮ 'ಸತ್ಯ ವಿಶ್ವಾಸ'ಕ್ಕೆ ಎಲ್ಲಿಯಾದರೂ ಕುಂದು ಬಂದು ಬಿಟ್ಟೀತೋ ಎಂಬ ಭಯ ನನ್ನನ್ನು ಕಾಡುತ್ತಿದೆ. ಆದ್ದರಿಂದ ಅನಿವಾರ್ಯವಾಗಿ ಈ ಉಪದೇಶ ಮಾಡುತ್ತಿರುವೆನು. ಸಂಕಷ್ಟ, ವಿಪತ್ತು ಮತ್ತು ದುಃಖಗಳು ಎಷ್ಟು ಎರಗಿದರೂ ಸತ್ಯವಿಶ್ವಾಸಿಯೊಬ್ಬನು ತನ್ನ ಈಮಾನ್ ಮತ್ತು ಅಲ್ಲಾಹನೊಂದಿಗಿನ ಸಂಬಂಧಕ್ಕೆ ಚ್ಯುತಿ ಬಾರದಂತೆ ಜಾಗ್ರತೆ ವಹಿಸಬೇಕು. ಅಲ್ಲಾಹನು ಈ ಲೋಕದಲ್ಲಿ ನಮ್ಮನ್ನು ತರತರದ ಸ್ಥಿತಿಗಳಲ್ಲಿ ಹಾಕಿ ಪರೀಕ್ಷಿಸುತ್ತಾನೆ. ದುಃಖವೂ ಬರುತ್ತದೆ. ಸುಖವೂ ಬರುತ್ತದೆ. ಸಂಕಷ್ಟಗಳೂ ಎದುರಾಗುತ್ತವೆ. ಸಂತೋಷಗಳೂ ಲಭಿಸುತ್ತವೆ, ನಷ್ಟಗಳೂ ಉಂಟಾಗುತ್ತವೆ. ಲಾಭವೂ ಆಗುತ್ತದೆ. ಇವೆಲ್ಲವೂ ಪರೀಕ್ಷೆಗಳಾಗಿವೆ. ಇವುಗಳಿಂದೆಲ್ಲಾ ನಾವು ಸಸಕ್ಷೇಮ ದಾಟಬೇಕಾಗಿದೆ. ಸಂಕಷ್ಟಗಳ ಸತ್ವಪರೀಕ್ಷೆಯಲ್ಲಿ ಸಿಲುಕಿದಾಗ ನಮ್ಮ ವಿಶ್ವಾಸ ಮತ್ತು ನಂಬಿಕೆಯನ್ನೇ ಕೆಡಿಸಿಕೊಳ್ಳುವಷ್ಟು ಕಳವಳಗೊಂಡರೆ ಅದಕ್ಕಿಂತ ದೊಡ್ಡ ದೌರ್ಭಾಗ್ಯ ನಮ್ಮ ಪಾಲಿಗೆ ಬೇರೆ ಇರಲಾರದು. ಈ ರೀತಿ ನಾವು ಇಹ-ಪರಗಳೆರಡರಲ್ಲೂ ನಷ್ಟಕ್ಕೊಳಗಾಗುವೆವು. ನಿಮಗೆ ಎರಗಿದ ಸಂಕಷ್ಟಗಳು ನಿಜಕ್ಕೂ ಹೃದಯ ವಿದ್ರಾವಕವಾಗಿದೆ. ಆದರೆ ಈ ಪರಿಸ್ಥಿತಿಯಲ್ಲೂ ಸ್ಥಿರಚಿತ್ತರಾಗಿರಲು ಪ್ರಯತ್ನಿಸಿರಿ. ಯಾವುದೇ ಬಹುದೇವವಿಶ್ವಾಸಿ ಯೋಚನೆ, ಶಿರ್ಕ್‌ನ ಕಡೆಗೆ ಒಲವು ಅಥವಾ ಅಲ್ಲಾಹನ ಬಗ್ಗೆ ಯಾವುದೇ ಆಕ್ಷೇಪ ಮನಸ್ಸಿನಲ್ಲಿ ಬಾರದಂತೆ ಜಾಗ್ರತೆ ವಹಿಸಿರಿ. ನಾವು ಮತ್ತು ನಮ್ಮದೆಂದು ಹೇಳುವ ಎಲ್ಲವೂ ಅಲ್ಲಾಹನಿಗೆ ಸೇರಿದ್ದಾಗಿದೆ. ಒಡೆತನವೂ ಅವನದ್ದೇ. ಎಲ್ಲ ರೀತಿಯ ಅಧಿಕಾರಗಳೂ ಅವನಿಗೇ ಇವೆ. ನಮಗೆ ಅವುಗಳ ಮೇಲೆ ಯಾವುದೇ ಅಧಿಕಾರ ಅಥವಾ ಬಲ ಇಲ್ಲ. ಅವನು ಬಯಸಿದ್ದನ್ನು ಕೊಡಬಲ್ಲ. ಅವನು ಇಚ್ಛಿಸಿದ್ದನ್ನು ಕಸಿದುಕೊಳ್ಳಬಲ್ಲ. ಯಾವ ಸ್ಥಿತಿಯಲ್ಲಿ ಬೇಕಾದರೂ ಅವನು ನಮ್ಮನ್ನು ಇಡಬಲ್ಲ. ಅವನು ನಮ್ಮೆಲ್ಲ ಆಶೆ-ಆಕಾಂಕ್ಷೆಗಳನ್ನು ಪೂರೈಸಿಯೇ ತೀರಬೇಕು ಮತ್ತು ನಮ್ಮನ್ನು ಎಂದೂ ಯಾವುದೇ ಸಂಕಷ್ಟ ಮತ್ತು ದುಃಖಕ್ಕೆ ಸಿಲುಕಿಸಬಾರದು ಎಂಬ ಶರ್ತದೊಂದಿಗೆ ನಾವು ಅವನ ಮೇಲೆ ವಿಶ್ವಾಸವಿರಿಸಿಲ್ಲ. ಅಲ್ಲಾಹನಿಂದ ನಿರಾಶರಾಗಿ ನಾವು ಅವನ ಹೊರತು ಅನ್ಯರ ಆಸ್ಥಾನದ ಕಡೆಗೆ ತಿರುಗುವುದು ಖಂಡಿತ ಅಲ್ಲಾಹನ ನೈಜ ದಾಸರಿಗೆ ಭೂಷಣವಲ್ಲ. ಇತರ

ಯಾವುದೇ ಆಸ್ಥಾನದಲ್ಲಿ ಏನೂ ಇಲ್ಲ. ಬಾಹ್ಯ ನೋಟಕ್ಕೆ ಅಲ್ಲಿಂದ ಸಿಗುವಂತೆ ಕಾಣುವ ವಸ್ತುಗಳು ಕೂಡ ಅಲ್ಲಾಹನ ಕೊಡುಗೆಯೇ ಆಗಿದೆ. ಅಲ್ಲಿ ಪ್ರಾರ್ಥಿಸಿ ನಾವು ಏನನ್ನು ಗಳಿಸುವುದಿದ್ದರೂ ಈಮಾನ್ (ಸತ್ಯವಿಶ್ವಾಸ) ಕಳಕೊಂಡೇ ಗಳಿಸಬಲ್ಲೆವು.

ಅಲ್ಲಿ ಈಮಾನ್ ಕಳಕೊಂಡೂ ಏನನ್ನೂ ಗಳಿಸದ ಅದೆಷ್ಟೋ ನತದೃಷ್ಟರಿದ್ದಾರೆ. ಆದ್ದರಿಂದ ನೀವು ಇಂತಹ ಯಾವುದೇ ಯೋಚನೆ ಮನಸ್ಸಿಗೆ ಬಾರದಂತೆ ಜಾಗ್ರತೆ ವಹಿಸಿರಿ. ದುಃಖವಿರಲಿ ಸುಖವಿರಲಿ ಧೈರ್ಯ-ಸ್ಥೈರ್ಯದೊಂದಿಗೆ ಅಲ್ಲಾಹನ ಆಸರೆಯನ್ನೇ ಬಿಗಿಯಾಗಿ ಹಿಡಿಯಿರಿ.

ಜಾದೂ-ಮಾಟ-ಮಂತ್ರ ಇತ್ಯಾದಿಗಳಲ್ಲಿ ಏನೂ ಇಲ್ಲ. ಅಲ್ಲಾಹನ ಶಕ್ತಿ-ಸಾಮರ್ಥ್ಯಗಳು ಸರ್ವವ್ಯಾಪಿಯಾಗಿದೆ. ನೀವು ಅಲ್ಲಾಹನಲ್ಲೇ ಪ್ರಾರ್ಥಿಸುತ್ತಿರಿ. ಕಟ್ಟಕಡೆಗೆ ಅಲ್ಲಾಹನ ಅನುಗ್ರಹವು ನಿಮಗೆ ಸಿಕ್ಕಿಯೇ ತೀರುವುದು ಎಂದು ನಂಬುತ್ತೇನೆ. ನಿಮಗೂ ನಿಮ್ಮ ಸಂತಾನಕ್ಕೂ ಯಾವುದೇ ವಿಪತ್ತು ಇನ್ನು ಬರಲಾರದು (ಇನ್‌ಶಾ ಅಲ್ಲಾಹ್)

(ತರ್ಜುಮಾನುಲ್ ಕುರ್‌ಆನ್ ಜನವರಿ 1958)

54

ವಯಸ್ಕ ಮಹಿಳೆಗೆ ತನ್ನ ವಿವಾಹ ತಾನೇ ಮಾಡುವ ಅಧಿಕಾರವಿದೆಯೇ?

● *ಹನಫೀ ಮತ್ತು ಅಹ್ಲೆ ಹದೀಸ್ ಉಲೆಮಾಗಳ ಮಧ್ಯೆ ವಯಸ್ಕ ಮಹಿಳೆಯ ಸ್ವಯಂವರದ ಕುರಿತು ಸಾಮಾನ್ಯವಾಗಿ ಭಿನ್ನಾಭಿಪ್ರಾಯವಿದೆ. ಹನಫೀಗಳು ಅದನ್ನು ಸಮರ್ಥಿಸುತ್ತಾರೆ. ಅವರ ಪ್ರಕಾರ ವಯಸ್ಕ ಮಹಿಳೆಯು ತನ್ನ ರಕ್ಷಕರ ಅನುಮತಿಯಿಲ್ಲದೆ ಅಥವಾ ಅವರ ಇಚ್ಛೆಗೆ ವಿರುದ್ಧವಾಗಿ ಯಾರೊಂದಿಗೆ ಬೇಕಾದರೂ ವಿವಾಹ ಮಾಡಿಕೊಳ್ಳಬಹುದು. ಈ ವಿವಾದದ ಬಗ್ಗೆ ಆಕ್ಷೇಪವೆತ್ತುವ ಅಧಿಕಾರ ರಕ್ಷಕರಿಗೆ ಇಲ್ಲ. ಇದಕ್ಕೆ ತದ್ವಿರುದ್ಧವಾಗಿ ಅಹ್ಲೆ ಹದೀಸ್‌ನವರು ಇಂತಹ ವಿವಾಹವನ್ನು ಮಾನ್ಯ ಮಾಡುವುದಿಲ್ಲ. ಅದನ್ನು ಕಾನೂನುಬಾಹಿರವೆನ್ನುತ್ತಾರೆ. ಹೀಗೆ ರಕ್ಷಕರ ಅನುಮತಿಯಿಲ್ಲದೆ ಮಾಡಿದ ವಿವಾಹವು ಅಸಿಂಧುವಾಗಿರುವುದರಿಂದ ಆಕೆಗೆ ಬೇರೆ ವಿವಾಹ ಮಾಡಿಸಬಹುದೆನ್ನುತ್ತಾರೆ. ನನ್ನ ಮುಂದಿರುವ ಎರಡೂ ಕಡೆಯವರ ಪುರಾವೆಗಳನ್ನು ಪ್ರಸ್ತುತ ಪಡಿಸುತ್ತಿದ್ದೇನೆ. ಈ ಬಗ್ಗೆ ತಮ್ಮ ಸಂಶೋಧನೆಯನ್ನು ಸ್ಪಷ್ಟ ಪಡಿಸಬೇಕೆಂದು ವಿನಂತಿಸುತ್ತೇನೆ.*

○ ಈ ಪ್ರಶ್ನೆಯ ಜತೆಗೆ ಎರಡೂ ಕಡೆಯವರ ಪುರಾವೆಗಳನ್ನು ವಿವರವಾಗಿ ನಮೂದಿಸಲಾಗಿದೆ. ಆದ್ದರಿಂದ ಮೊದಲು ನಾವು ಆ ಪುರಾವೆಗಳನ್ನು ಉಲ್ಲೇಖಿಸುತ್ತೇವೆ:

1. ಹನಫೀಗಳ ಪುರಾವೆ ಈ ಕೆಳಗಿನ ಆಯತ್ ಮತ್ತು ಹದೀಸ್‌ಗಳಾಗಿವೆ: ನಿಮ್ಮಲ್ಲಿ ಯಾರಾದರೂ ಮೃತಪಟ್ಟರೆ ಮತ್ತು ಅವರ ಪತ್ನಿಯರು ಜೀವಂತರಾಗಿದ್ದರೆ, ಅವರು (ಪತ್ನಿಯರು) ನಾಲ್ಕು ತಿಂಗಳು ಹತ್ತು ದಿನಗಳ ತನಕ ತಮ್ಮನ್ನು ತಾವೇ ತಡೆದಿರಿಸಿಕೊಳ್ಳಬೇಕು. 'ಇದ್ದತ್' ಮುಗಿದ ಬಳಿಕ ಅವರು ತಮ್ಮ ವೈಯಕ್ತಿಕ ವಿಷಯದಲ್ಲಿ ನ್ಯಾಯೋಚಿತವಾದುದೇನನ್ನಾದರೂ ಮಾಡಿದರೆ (ಅರ್ಥಾತ್: ವಿವಾಹ) ಅದರ ಹೊಣೆ ನಿಮ್ಮ ಮೇಲಿಲ್ಲ." *(ಅಲ್‌ಬಕರಃ 234)*

"ಮತ್ತು (ಪತಿಯು ಎರಡು ಸಲ ತಲಾಕ್ ಕೊಟ್ಟ ಬಳಿಕ ಮೂರನೆಯ ಸಲವೂ) ತಲಾಕ್ ಕೊಟ್ಟು ಬಿಟ್ಟರೆ ಆ ಸ್ತ್ರೀಯ ನಿಕಾಹ್ ಇನ್ನೊಬ್ಬನೊಂದಿಗೆ ಆಗಿ ಅವನು ತಲಾಕ್ ಕೊಡುವ ಹೊರತು ಅವಳು ಪುನಃ ಅವನಿಗೆ (ಮೊದಲಿನ ಪತಿಗೆ) ಹಲಾಲ್ ಆಗಲಾರಳು." *(ಅಲ್ ಬಕರಃ 230)*

"ಅವರು ತಮಗಿಷ್ಟ ಬಂದ ಪತಿಯರೊಂದಿಗೆ ವಿವಾಹ ಮಾಡಿಕೊಳ್ಳಲು ನ್ಯಾಯೋಚಿತ ರೀತಿಯಲ್ಲಿ ಒಪ್ಪಿಕೊಂಡರೆ ಅವರು ಪರಸ್ಪರ ನಿಕಾಹ್ ಮಾಡಿಕೊಳ್ಳುವುದನ್ನು ಅಡ್ಡಿಪಡಿಸಬಾರದು." *(ಅಲ್ ಬಕರ- 232)*

ಪ್ರವಾದಿ(ಸ) ಈ ರೀತಿ ಹೇಳಿರುವರು:

"ವಿಧವೆಯು ತನ್ನ ರಕ್ಷಕರಿಗಿಂತ ಹೆಚ್ಚು ತನ್ನ ಬಗ್ಗೆ ತೀರ್ಮಾನ ಮಾಡಲು ಅರ್ಹಳಾಗಿದ್ದಾಳೆ. ಕುಮಾರಿಯ ಜತೆ ಸಮಾಲೋಚನೆ ನಡೆಸಬೇಕು. ಅವಳ ಮೌನವು ಅವಳ ಸಮ್ಮತಿಯಾಗಿದೆ. ಇನ್ನೊಂದು ವರದಿಯಲ್ಲಿ ಹೀಗಿದೆ: ಪತಿಯನ್ನು ಕಂಡ ಮಹಿಳೆಯು ತನ್ನ ರಕ್ಷಕರಿಗಿಂತ ತನ್ನ ವಿವಾಹ ವಿಷಯದಲ್ಲಿ ತೀರ್ಮಾನ ಮಾಡುವ ಹಕ್ಕುಳ್ಳವಳಾಗಿದ್ದಾಳೆ."

(ವರದಿ:ಹ. ಸಾಫಿಅ್ ಬಿನ್ ಜುಬೈರ್(ರ), ಹ. ಇಬ್ನು ಅಬ್ಬಾಸ್(ರ) ಅವರಿಂದ-ನಸಬುರ್ರಾಯಿ: ಭಾ. 3,ಪು. 182)

ಒಬ್ಬ ಮಹಿಳೆ ಪ್ರವಾದಿ(ಸ) ಅವರ ಬಳಿಗೆ ಬಂದು ಈ ರೀತಿ ಹೇಳಿದರು: "ನನ್ನ ತಂದೆ ನನ್ನ ವಿವಾಹವನ್ನು ಒಬ್ಬ ಪುರುಷನ ಜತೆ ಮಾಡಿದ್ದಾರೆ. ನಾನು ಅವನನ್ನು ಇಷ್ಟಪಡುವುದಿಲ್ಲ." ಪ್ರವಾದಿ(ಸ) ತಂದೆಗೆ ಹೇಳಿದರು: "ವಿವಾಹದ ಅಧಿಕಾರ ನಿಮಗಿಲ್ಲ." ಮಹಿಳೆಗೆ ಹೇಳಿದರು: "ಹೋಗಿ ನೀವು ಯಾರ ಜತೆ ಬೇಕಾದರೂ ವಿವಾಹವಾಗಿರಿ." (ವರದಿ: ಹ. ಅಬೀ ಸಲ್ಮಾ ಬಿನ್ ಅಬ್ದುರ್ರಹ್ಮಾನ್ (ರ) ನಸಬುರ್ರಾಯ: ಭಾಗ3, ಪು.182)

ಮಾಲಿಕ್(ರ) ಅವರು ಅಬ್ದುರ್ರಹ್ಮಾನ್(ರ) ಅವರಿಂದ ಅವರು ತಮ್ಮ ತಂದೆಯಿಂದ ಮತ್ತು ಹ. ಆಯಿಶಾ(ರ) ಅವರಿಂದ ವರದಿ ಮಾಡಿರುವರು. ಅವರು ಹಫ್ಸಾ ಬಿನ್ತಿ ಅಬ್ದುರ್ರಹ್ಮಾನ್ ಅವರನ್ನು ಮುಂದಿರ್ ಬಿನ್ ಝುಬೈರ್(ರ) ಸಿರಿಯಾದಲ್ಲಿದ್ದರು. ಅವರು ಮರಳಿ ಬಂದಾಗ ನನ್ನ ಅಭಿಪ್ರಾಯವನ್ನು ಕಡೆಗಣಿಸುವುದು ಸರಿಯೇ? ಎಂದು ಕೇಳಿದರು. ಆಗ ಹ. ಆಯಿಶಾ(ರ) ಅವರು ಮುಂದಿರ್ ಬಿನ್ ಝುಬೈರ್‌ರೊಂದಿಗೆ ಮಾತಾಡಿದರು. ಅವರು ಹೇಳಿದರು, ತೀರ್ಮಾನ ಅಬ್ದುರ್ರಹ್ಮಾನ್‌ರ ಕೈಯಲ್ಲಿದೆ. ಆಗ ಅಬ್ದುರ್ರಹ್ಮಾನ್(ರ) ಹೇಳಿದರು, ಯಾವ ವಿಷಯವನ್ನು ನೀವು ನಿರ್ಧರಿಸಿರುವಿರೋ ಅದನ್ನು ನಾನು ತಳ್ಳಿಗಳೆಯುವುದಿಲ್ಲ. ಆದ್ದರಿಂದ ಹಫ್ಸಾ ಮುಂದಿರ್ ಅವರ ಬಳಿಯೇ ಉಳಿದರು ಮತ್ತು ಇದು ತಲಾಕ್ ಆಗಿರಲಿಲ್ಲ. (ಅದೇ ಗ್ರಂಥ)

ಓರ್ವ ಯುವತಿ ಪ್ರವಾದಿ(ಸ) ಅವರ ಬಳಿಗೆ ಬಂದು ಹೇಳಿದಳು: "ಅಲ್ಲಾಹನ ಸಂದೇಶವಾಹಕರೇ(ಸ)! ನನ್ನ ತಂದೆಯವರು ನನ್ನನ್ನು ತಮ್ಮ ಸೋದರ ಪುತ್ರರಿಗೆ ವಿವಾಹ ಮಾಡಿಸಿರುವರು. ನನ್ನ ಮೂಲಕ ಅವರನ್ನು ನಿಂದ್ಯತೆಯಿಂದ ಹೊರತೆಗೆಯುವುದೇ ಅವರ ಉದ್ದೇಶವಾಗಿದೆ." ಪ್ರವಾದಿ(ಸ) ಆ ವಿವಾಹದ (ಅಳಿವು-ಉಳಿವು) ಅಧಿಕಾರವನ್ನು ಆ ಯುವತಿಗೆ ನೀಡಿದರು. ಆಗ ಆ ಯುವತಿ ಹೇಳಿದಳು: "ನನ್ನ ತಂದೆಯವರು ಮಾಡಿದ್ದನ್ನು

ನಾನು ಒಪ್ಪಿಕೊಳ್ಳುತ್ತೇನೆ. ತಂದೆಗೆ ಈ ಬಗ್ಗೆ ಯಾವುದೇ ಅಧಿಕಾರವಿಲ್ಲವೆಂಬುದನ್ನು ಮಹಿಳೆಯರಿಗೆ ತಿಳಿಸುವುದೇ ನನ್ನ ಉದ್ದೇಶವಾಗಿತ್ತು."

(ವರದಿ: ಹ. ಆಯಿಶಾ(ರ)-ನಸಾಈ ಅಹ್ಮದ್)

(2) ಅಹ್ಲೆ ಹದೀಸ್‌ನವರು ತಮ್ಮ ಬೆಂಬಲಕ್ಕೆ ಈ ಕೆಳಗಿನ ಹದೀಸ್‌ಗಳ ಪುರಾವೆಯನ್ನು ಮುಂದಿಡುತ್ತಾರೆ:

ಪ್ರವಾದಿ(ಸ) ಹೇಳಿದರು:

"ಯಾವ ಮಹಿಳೆ ತನ್ನ ರಕ್ಷಕರ ಅನುಮತಿಯಿಲ್ಲದೆ ವಿವಾಹವಾಗುತ್ತಾಳೋ ಆಕೆಯ ವಿವಾಹ ಅಸಿಂಧುವಾಗಿದೆ. ಒಂದು ವೇಳೆ ಜಗಳವಾದರೆ ಯಾವ ಮಹಿಳೆಗೆ ರಕ್ಷಕರಿಲ್ಲವೋ ಆಡಳಿತಾಧಿಕಾರಿಯೇ ಅವಳ ರಕ್ಷಕನಾಗಿದ್ದಾನೆ."

(ವರದಿ:ಹ. ಆಯಿಶಾ(ರ)-ಬುಲೂಗುಲ್ ಮರಾಮ್)

ಪ್ರವಾದಿ(ಸ) ಹೇಳಿದರು:

"ರಕ್ಷಕರಿಲ್ಲದೆ ಯಾವ ವಿವಾಹವೂ ಸಿಂಧುವಲ್ಲ."

(ವರದಿ: ಹ. ಅಬೂ ಮೂಸಾ(ರ) ಅವರು ತಮ್ಮ ತಂದೆಯಿಂದ-ಬುಲೂಗುಲ್ ಮರಾಮ್)

ಪ್ರವಾದಿ(ಸ) ಹೇಳಿದರು:

"ಒಬ್ಬ ಮಹಿಳೆ ಇನ್ನೊಬ್ಬ ಮಹಿಳೆಯ (ರಕ್ಷಕಳಾಗಿ) ವಿವಾಹ ಮಾಡಿಸಬಾರದು. ಯಾವ ಮಹಿಳೆಯೂ ತನ್ನ ವಿವಾಹವನ್ನು ತಾನೇ ಮಾಡಬಾರದು."

(ವರದಿ:ಹ. ಅಬೂ ಹುರೈರಾ(ರ)-ಬೈಹಖಿ)

ಹ. ಉಮರ್ ಬಿನ್ ಖತ್ತಾಬ್(ರ) ಹೇಳಿದರು:

"ಯಾವ ಮಹಿಳೆಯ ವಿವಾಹವನ್ನು ಆಕೆಯ ರಕ್ಷಕನು ಅಥವಾ ಆಡಳಿತಾಧಿಕಾರಿ ಮಾಡಿಸುವುದಿಲ್ಲವೋ ಅಂತಹವಳ ವಿವಾಹ ಅಸಿಂಧುವಾಗಿದೆ." *(ಬೈಹಖಿ)*

ಓರ್ವ ವಿಚ್ಛೇದಿತ ಮಹಿಳೆ ತನ್ನ ವಿಷಯವನ್ನು ತನ್ನ ರಕ್ಷಕನಲ್ಲದ ಒಬ್ಬನಿಗೆ ಒಪ್ಪಿಸಿದಳು. ಆ ವ್ಯಕ್ತಿ ಆಕೆಯ ವಿವಾಹ ಮಾಡಿಸಿದನು. ಹ. ಉಮರ್(ರ) ಅವರಿಗೆ ಈ ಸುದ್ದಿ ಸಿಕ್ಕಿತು. ಅವರು ನಿಕಾಹ್ ಮಾಡಿದವನಿಗೂ ಮಾಡಿಸಿದವನಿಗೂ ಛಡಿಯೇಟಿನ ಶಿಕ್ಷೆ ವಿಧಿಸಿದರು ಮತ್ತು ಆ ವಿವಾಹವನ್ನು ಅನೂರ್ಜಿತಗೊಳಿಸಿದರು."

(ವರದಿ:ಹ. ಇಕ್ರಿಮಾ ಬಿನ್ ಖಾಲಿದ್-ಬೈಹಖಿ)

ಹ. ಅಲೀ(ರ) ಹೇಳಿದರು:

"ಯಾವ ಮಹಿಳೆ ತನ್ನ ರಕ್ಷಕನ ಅನುಮತಿಯಿಲ್ಲದೆ ವಿವಾಹ ಮಾಡಿದಳೋ ಆಕೆಯ ವಿವಾಹ ಅಸಿಂಧುವಾಗಿದೆ. ರಕ್ಷಕನ ಅನುಮತಿಯಿಲ್ಲದೆ ಯಾವುದೇ ನಿಕಾಹ್ ಆಗುವುದಿಲ್ಲ."

(ಬೈಹಖಿ)

ಹ. ಅಲೀ, ಹ. ಉಮರ್, ಶುರೈಹ್, ಮಸ್ರೂಕ್ (ರ) ಅವರು ವಲೀ (ರಕ್ಷಕ) ಇಲ್ಲದೆ ಯಾವುದೇ ನಿಕಾಹ್ ಆಗುವುದಿಲ್ಲ ಎಂದು ಹೇಳಿರುವರು."

(ವರದಿ: ಇಮಾಮ್ ಶುಅಬೀ(ರ)-ಬೈಹಕೀ)

ಈ ಪುರಾವೆಗಳತ್ತ ಒಂದು ದೃಷ್ಟಿ ಹಾಯಿಸಿದಾಗ ಎರಡೂ ಕಡೆ ಬಲವಾದ ಆಧಾರಗಳಿವೆಯೆಂದೂ ಉಭಯತ್ರರ ಪೈಕಿ ಯಾವುದಾದರೂ ಒಂದು ಅಭಿಪ್ರಾಯವನ್ನು ತಪ್ಪೆಂದು ಹೇಳುವುದು ಸಾಧ್ಯವಿಲ್ಲವೆಂದೂ ತಿಳಿದು ಬರುತ್ತದೆ. ಹಾಗಿರುವಾಗ ಪ್ರವಾದಿ(ಸ) ಎರಡು ಪರಸ್ಪರ ವಿರುದ್ಧವಾದ ವಿಧಿಗಳನ್ನು ನೀಡಿರಬಹುದೇ? ಒಂದು ವಿಧಿಯು ಇನ್ನೊಂದು ವಿಧಿಯನ್ನು ಅನೂರ್ಜಿತಗೊಳಿಸುತ್ತದೆಯೇ? ಅಥವಾ ಎರಡೂ ವಿಧಿಗಳನ್ನು ಸೇರಿಸಿ ಪ್ರವಾದಿ(ಸ) ಅವರ ಇಂಗಿತವನ್ನು ತಿಳಿಯಬೇಕೇ? ಎಂಬ ಪ್ರಶ್ನೆಗಳು ಏಳುತ್ತವೆ. ಮೊದಲ ಪ್ರಶ್ನೆಯು ತೀರಾ ಅಸಂಬದ್ಧವಾಗಿದೆ. ಏಕೆಂದರೆ ಇಡೀ ಶರೀಅತ್ ಅದನ್ನು ನಿರ್ಮಿಸಿದವನ ವಿವೇಕಕ್ಕೆ ಪುರಾವೆಯಾಗಿದೆ. ಆದ್ದರಿಂದ ಅಂತಹ ಯುಕ್ತಿವಂತನಿಂದ ಎರಡು ಪರಸ್ಪರ ವಿರುದ್ಧ ವಿಧಿಗಳು ಬರಲು ಸಾಧ್ಯವೇ ಇಲ್ಲ. ಎರಡನೇ ಪ್ರಶ್ನೆಯೂ ಸರಿಯಲ್ಲ. ಏಕೆಂದರೆ ಯಾವುದಾದರೂ ಒಂದು ವಿಧಿಯನ್ನು ಅನೂರ್ಜಿತಗೊಳಿಸಿದುದಕ್ಕೆ ಯಾವುದೇ ಸಾಕ್ಷ್ಯಾಧಾರವಿಲ್ಲ. ಈಗ ಉಳಿದಿರುವುದು ಮೂರನೆಯ ಪ್ರಶ್ನೆ ಮಾತ್ರ. ನಾವು ಅದನ್ನೇ ಸಂಶೋಧಿಸಬೇಕಾಗಿದೆ. ನಾನು ಎರಡೂ ಕಡೆಯ ಪುರಾವೆಗಳನ್ನು ಮುಂದಿರಿಸಿಕೊಂಡು ಶರೀಅತ್‌ನ ಅಭಿಮತವೇನೆಂದು ತಿಳಿಯಲು ಪ್ರಯತ್ನಿಸಿದಾಗ ತಳೆದ ನಿರ್ಧಾರ ಈ ಕೆಳಗಿನಂತಿದೆ:

(1) ವಿವಾಹದ ವಿಷಯದಲ್ಲಿ ನಿಜವಾದ ಕಕ್ಷಿದಾರನು ಪುರುಷ ಮತ್ತು ಸ್ತ್ರೀಯಾಗಿದ್ದಾರೆ. ಪುರುಷ ಮತ್ತು ಸ್ತ್ರೀಯರ ರಕ್ಷಕ ಅಲ್ಲ. ಆದ್ದರಿಂದಲೇ ಈಜಾಬ್ (ಕೊಡುಗೆ) ಮತ್ತು ಕುಬೂಲ್ (ಸ್ವೀಕಾರ) ವಿವಾಹವಾಗುವವನ ಮತ್ತು ವಿವಾಹವಾಗುವವಳ ಮಧ್ಯೆ ನಡೆಯುತ್ತದೆ.

(2) ವಯಸ್ಕ ಮಹಿಳೆಯ (ಈ ಮುಂಚೆ ವಿವಾಹಿತಳಾಗಿದ್ದರೂ ಕುಮಾರಿಯಾಗಿದ್ದರೂ) ವಿವಾಹವು ಆಕೆಯ ಅನುಮತಿಯಿಲ್ಲದೆ ಅಥವಾ ಆಕೆಯ ಇಚ್ಛೆಗೆ ವಿರುದ್ಧವಾಗಿ ಏರ್ಪಡುವುದಿಲ್ಲ. ನಿಕಾಹ್ ಮಾಡಿಕೊಡುವವನು ಆಕೆಯ ತಂದೆಯಾಗಿದ್ದರೂ ಸರಿಯೇ. ಯಾವ ವಿವಾಹದಲ್ಲಿ ಮಹಿಳೆಯ ಕಡೆಯಿಂದ ಅನುಮೋದನೆಯಿಲ್ಲವೋ ಅಲ್ಲಿ ಈಜಾಬ್ (ಕೊಡುಗೆ) ಇಲ್ಲ. ಆದ್ದರಿಂದ ಅಂತಹ ವಿವಾಹ ಏರ್ಪಡುವುದಿಲ್ಲ.

(3) ಮಹಿಳೆಯರು ತಮ್ಮ ವಿವಾಹದ ವಿಷಯದಲ್ಲಿ ತೀರಾ ಸರ್ವಾಧಿಕಾರಿಗಳಾಗುವುದನ್ನು ಶರೀಅತ್ ಸರಿಯೆಂದು ಪರಿಗಣಿಸುವುದಿಲ್ಲ. ಅವರು ತಮಗಿಷ್ಟ ಬಂದವರನ್ನು ವರಿಸಿ ಮನೆಯ ಅಳಿಯನಾಗಿ ತರುವಂತಿಲ್ಲ. ಆದ್ದರಿಂದ ಮಹಿಳೆಯ ವಿವಾಹದಲ್ಲಿ ಆಕೆಯ ಜತೆ ಆಕೆಯ ರಕ್ಷಕನ ಅನುಮತಿಯೂ ಬೇಕೆಂದು ಶರೀಅತ್ ವಿಧಿಸುತ್ತದೆ. ಮಹಿಳೆಯು ರಕ್ಷಕನ

ಅನುಮತಿಯಿಲ್ಲದೆ ತನಗಿಷ್ಟ ಬಂದವನನ್ನು ತಾನೇ ವಿವಾಹವಾಗಬಾರದು. ಅದೇ ರೀ ರಕ್ಷಕನೂ ಮಹಿಳೆಯ ಅನುಮತಿಯಿಲ್ಲದೆ ಆಕೆಯನ್ನು ತನಗಿಷ್ಟ ಬಂದವನಿಗೆ ವಿವಾ ಮಾಡಿಕೊಡಬಾರದು.

(4) ಒಂದು ವೇಳೆ ಒಬ್ಬ ರಕ್ಷಕನು ಯಾವುದೇ ಮಹಿಳೆಯ ವಿವಾಹವನ್ನು ತಾನೆ ಮಾಡಿಸಿದರೆ ಆ ವಿವಾಹವು ಮಹಿಳೆಯ ಅನುಮೋದನೆಯನ್ನು ಹೊಂದಿಕೊಂಡಿರುವುದು ಆಕೆ ಅನುಮೋದಿಸಿದರೆ ವಿವಾಹ ಊರ್ಜಿತದಲ್ಲಿರುವುದು. ಅನುಮೋದಿಸದಿದ್ದ ನ್ಯಾಯಾಲಯಕ್ಕೆ ಹೋಗಬೇಕಾಗುವುದು. ಈ ವಿವಾಹವು ಮಹಿಳೆಗೆ ಇಷ್ಟವಿದ್ದೆಯೇ ಇಲ್ಲವೆ ಎಂಬುದನ್ನು ನ್ಯಾಯಾಲಯ ನಿರ್ಧರಿಸಬೇಕು. ಒಂದು ವೇಳೆ ಮಹಿಳೆಗೆ ಅದು ಇಷ್ಟವಿಲ್ಲವೆಂದ ಸಾಬೀತಾದರೆ ನ್ಯಾಯಾಲಯವು ಈ ವಿವಾಹವನ್ನು ಅಸಿಂಧುವೆಂದು ಘೋಷಿಸುವುದು.

(5) ಒಂದು ವೇಳೆ ಮಹಿಳೆಯೊಬ್ಬಳು ತನ್ನ ರಕ್ಷಕನ ಅನುಮತಿಯಿಲ್ಲದೆ ಸ್ವಯಂ ವಿವಾಹವಾದರೆ ಆ ವಿವಾಹವು ರಕ್ಷಕನ ಅನುಮತಿಯನ್ನು ಅವಲಂಬಿಸಿರುವುದು. ರಕ್ಷಕನ ಅನುಮೋದಿಸಿದರೆ ವಿವಾಹ ಊರ್ಜಿತದಲ್ಲಿರುವುದು. ಅನುಮೋದಿಸದಿದ್ದರೆ ಈ ವಿಷಯವ ನ್ಯಾಯಾಲಯಕ್ಕೆ ಹೋಗಬೇಕು. ರಕ್ಷಕನ ಆಕ್ಷೇಪ ಮತ್ತು ನಿರಾಕರಣೆಗೆ ಕಾರಣವೇನೆಂದು ನ್ಯಾಯಾಲಯ ನಿರ್ಧರಿಸುವುದು. ಒಂದು ವೇಳೆ ನ್ಯಾಯೋಚಿತ ಕಾರಣದಿಂದ ಆ ಪುರುಷನ ಜತೆ ತನ್ನ ಮನೆಯ ಹುಡುಗಿಯನ್ನು ವಿವಾಹ ಮಾಡಿಸಲು ಇಷ್ಟಪಡುವುದಿಲ್ಲವೆಂದಾದರ ಆ ವಿವಾಹವನ್ನು ಅಸಿಂಧುವೆಂದು ಘೋಷಿಸಲಾಗುವುದು. ಆದರೆ ಆ ಮಹಿಳೆಯ ವಿವಾಹ ಮಾಡಿಸುವ ವಿಷಯದಲ್ಲಿ ರಕ್ಷಕನು ಅಸಡ್ಡೆ ತೋರಿಸಿದ್ದರೆ ಅಥವಾ ಧರ್ಮಬದ್ಧವಲ್ಲದ ಕಾರಣಕ್ಕಾಗಿ ಅದನ್ನು ಮುಂದೂಡುತ್ತಿದ್ದರೆ ಹಾಗೂ ಇದರಿಂದ ಬೇಸತ್ತು ಮಹಿಳೆ ಸ್ವಯಂ ವಿವಾಹ ಮಾಡಿಕೊಂಡಿದ್ದರೆ ಅಂತಹ ರಕ್ಷಕನನ್ನು ಹೊಣೆಗೇಡಿ ಎಂದು ಸಾರಿ ನ್ಯಾಯಾಲಯವು ವಿವಾಹವನ್ನು ಊರ್ಜಿತಗೊಳಿಸುವುದು. *(ತರ್ಜುಮಾನುಲ್ ಕುರ್‌ಆನ್, ಸಪ್ಟೆಂಬರ್ 1952)*

55

ಸತ್ಯ-ಮಿಥ್ಯ ಸಂಘರ್ಷದ ವಾಸ್ತವಿಕತೆ

● *ಹಲವು ಕಾಲದಿಂದ ಒಂದು ಗೊಂದಲದಲ್ಲಿ ಸಿಲುಕಿದ್ದೇನೆ. ದಯವಿಟ್ಟು ಆ ಬಗ್ಗೆ ಮಾರ್ಗದರ್ಶನ ಮಾಡಿರಿ. ಪ್ರವಾದಿ(ಸ) ಅವರ ಜೀವನ ಕಾಲ ಮತ್ತು ಖಿಲಾಫಾಉರ್ರಾಶಿದೀನ್‌ಗಳ ಕಾಲವನ್ನು ಹೊರತುಪಡಿಸಿದರೆ ಇಂದಿನ ತನಕವೂ ಧರ್ಮ ಮತ್ತು ವಿಶ್ವಾಸದ ಬೇಡಿಕೆಗಳನ್ನು ಸರಿಯಾಗಿ ಪೂರೈಸಲು ಪ್ರಯತ್ನಿಸುತ್ತ ಬಂದಿರುವ ವಿಭಾಗದ ಸೋಲಿಗೆ ಕಾರಣವೇನು? ಇದಕ್ಕೆ ಹೆಚ್ಚಾಗಿ ನಮ್ಮ ಧರ್ಮದ ಬಂಧುಗಳೇ ಕಾರಣರಾಗುತ್ತಿದ್ದಾರೆಂಬುದರಿಂದ ಈ ಸೋಲಿಗೆ ಇನ್ನಷ್ಟು ಮಹತ್ವ ಬರುತ್ತದೆ. ಇಂದಿಗೂ ಅವರೇ ಇದಕ್ಕೆ ಕಾರಣರಾಗುತ್ತಿದ್ದಾರೆ. ಯಾವ ಧರ್ಮವು ಲೌಕಿಕ ಜೀವನದ ಸುಧಾರಣೆಗಾಗಿ ಅವತೀರ್ಣಗೊಂಡಿದೆಯೋ, ಯಾವ ಧರ್ಮದ ಎಲ್ಲ ನಿಯಮಗಳೂ ಲೌಕಿಕ ಜೀವನದಲ್ಲಿ ಆಚರಿಸಲಿಕ್ಕಾಗಿ ಇದೆಯೋ, ಯಾವ ಧರ್ಮದ ಉತ್ಥಾನಕ್ಕಾಗಿ ಅಲ್ಲಾಹನ ಅನೇಕ ದಾಸರು ಪ್ರಾಣ ತೆತ್ತಿರುವರೋ ಮತ್ತು ಅನೇಕರು ತಮ್ಮ ಜೀವನವನ್ನು ಅದಕ್ಕಾಗಿ ಮುಡಿಪಾಗಿಟ್ಟಿರುವರೋ ಅದು ಏಕೆ ಲೋಕದಲ್ಲಿ ವಿಜಯಿಯಾಗಲಿಲ್ಲ ಎಂಬುದೇ ಪ್ರಶ್ನೆ. ಇಂದಿಗೂ ಜಗತ್ತಿನ ದೊಡ್ಡ ಜನಸಂಖ್ಯೆ 'ಇಸ್ಲಾಮ್ ಧರ್ಮ'ದ ಅನುಗ್ರಹಗಳಿಂದ ಏಕೆ ವಂಚಿತವಾಗಿದೆ? ದೇವನ ದಾಸರ ಒಂದು ದೊಡ್ಡ ವಿಭಾಗವು ಏಕೆ ಇಂದಿಗೂ ಬೆರಳೆಣಿಕೆಯ ಶೋಷಕರ ದೌರ್ಜನ್ಯಗಳಿಗೆ ಬಲಿಯಾಗುತ್ತಿದೆ? ಆರ್ಥಿಕ ಅನ್ಯಾಯ, ಬಡತನ ಮತ್ತು ಶೋಷಣೆಯ ದಾರುಣ ಸ್ಥಿತಿಗೆ ಅದು ಏಕೆ ತಲುಪಿದೆ? ಜಗತ್ತಿನಲ್ಲಿ ಶಾಂತಿ ಸಮಾಧಾನವನ್ನು ಸ್ಥಾಪಿಸಬೇಕಾದ ಸತ್ಯ ಧರ್ಮ ಮತ್ತು ಅದರ ಅನುಯಾಯಿಗಳು ದುರ್ಬಲರ, ನಿರ್ಗತಿಕರ, ದೀನ-ದಲಿತರ ಮತ್ತು ಶೋಷಿತರ ಸಹಾಯಕರಾಗಿ ಮುಂದೆ ಬರುವುದರಲ್ಲಿ ಏಕೆ ಯಶಸ್ವಿಯಾಗಿಲ್ಲ?*

○ ಈ ಲೋಕದಲ್ಲಿ ಅಲ್ಲಾಹನು ಮನುಷ್ಯನಿಗೆ ಆಯ್ಕೆ ಮತ್ತು ನಿರ್ಧಾರದ ಸ್ವಾತಂತ್ರ್ಯವನ್ನು ನೀಡಿರುವನು. ಈ ಸ್ವಾತಂತ್ರ್ಯದ ಬಳಕೆಯಲ್ಲೇ ಅವನ ಪರೀಕ್ಷೆಯಿದೆ ಎಂಬುದನ್ನು ನೀವು ತಿಳಿದು ಕೊಂಡರೆ ನಿಮ್ಮ ಗೊಂದಲ ಸುಲಭವಾಗಿ ನಿವಾರಣೆಯಾಗಬಹುದು. ಈ ವಾಸ್ತವಿಕತೆಯನ್ನು ನೀವು ಗ್ರಹಿಸಿದಾಗ ಯಾವುದಾದರೂ ದೇಶ, ಜನಾಂಗ ಅಥವಾ ಕಾಲದ ಜನರಲ್ಲಿ ಮಿಥ್ಯ ಸಿದ್ಧಾಂತವೊಂದು ಅಭಿವೃದ್ಧಿ

ಹೊಂದಿದರೆ ಅಥವಾ ಮಿಥ್ಯ ವ್ಯವಸ್ಥೆಯು ವಿಜಯಿಯಾದರೆ ಅದು ಆ ಸಿದ್ಧಾಂತ ಅಥವ ವ್ಯವಸ್ಥೆಯ ವಿಜಯವಾಗಿರದೆ ಯಾವ ಜನರಲ್ಲಿ ಆ ಸಿದ್ಧಾಂತ ಅಥವಾ ವ್ಯವಸ್ಥೆ ಉನ್ನತಿಯನ್ನು ಹೊಂದಿದೆಯೋ ಆ ಜನರ ಸೋಲಾಗಿದೆ ಎಂದು ಗ್ರಹಿಸಲು ನಿಮಗ ಕಷ್ಟವಾಗದು. ಅದೇ ರೀತಿ ಸತ್ಯ ಧರ್ಮ ಮತ್ತು ಅದಕ್ಕಾಗಿ ಕೆಲಸ ಮಾಡುವವರು ತಮ್ಮ ಮಟ್ಟಿಗೆ ಸರಿಯಾದ ರೀತಿಯಿಂದ ಸುಧಾರಣೆಯ ಪ್ರಯತ್ನ ಮಾಡುತ್ತಿದ್ದಾಗಲೂ ಸತ ವ್ಯವಸ್ಥೆಯು ಸ್ಥಾಪನೆಗೊಳ್ಳದಿದ್ದರೆ ಅದು ಸತ್ಯ ವ್ಯವಸ್ಥೆ ಮತ್ತು ಅದಕ್ಕಾಗಿ ಕೆಲ ಮಾಡುವವರ ಸೋಲಾಗಿರದೆ ಯಾವ ಜನರ ಮಧ್ಯೆ ಸತ್ಯವು ಮೇಲುಗೈ ಸಾಧಿಸಲಿಲ್ಲವೊ ಮತ್ತು ಕೆಡುಕು ವ್ಯಾಪಕವಾಗುತ್ತಲೇ ಸಾಗಿತೋ ಆ ಜನರ ಸೋಲಾಗಿದೆ. ಲೋಕದಲ್ಲಿ ಸತ್ಯ ಮಿಥ್ಯಗಳ ಈ ಸಂಘರ್ಷವು ಒಂದು ಸತ್ವಪರೀಕ್ಷೆಯಾಗಿದೆ. ಈ ಪರೀಕ್ಷೆಯ ಅಂತಿಮ ಫಲಿತಾಂಶವು ಇಹ ಲೋಕದಲ್ಲಿ ಆಗುವುದಿಲ್ಲ. ಅದು ಪರಲೋಕದಲ್ಲಿ ಪ್ರಕಟವಾಗಲಿದೆ ಒಂದು ವೇಳೆ ಜಗತ್ತಿನ ಜನರ ಒಂದು ದೊಡ್ಡ ವಿಭಾಗ ಅಥವಾ ಇಡೀ ಜಗತ್ತೇ ಸತ್ಯವನ್ನು ನಿರಾಕರಿಸಿ ಮಿಥ್ಯವನ್ನೇ ಒಪ್ಪಿಕೊಂಡರೆ ಅದರರ್ಥ ಸತ್ಯಕ್ಕೆ ಸೋಲಾಯಿತು ಮತ್ತು ಮಿಥ್ಯ ವಿಜಯಿಯಾಯಿತು ಎಂದು ಖಂಡಿತ ಅಲ್ಲ. ನಿಜವಾಗಿ ಅದರ ಅರ್ಥವು ಮನುಷ್ಯರ ಒಂದು ದೊಡ್ಡ ವಿಭಾಗವು ತನ್ನ ಪ್ರಭುವಿನ ಪರೀಕ್ಷೆಯಲ್ಲಿ ವಿಫಲವಾಯಿತು ಮತ್ತು ಅದರ ಅತ್ಯಂತ ಕೆಟ್ಟ ಪರಿಣಾಮವನ್ನು ಅದು ಪರಲೋಕದಲ್ಲಿ ಅನುಭವಿಸಲಿಕ್ಕಿದೆ ಎಂದಾಗಿದೆ. ಇದಕ್ಕೆ ತದ್ವಿರುದ್ಧವಾಗಿ ಮಿಥ್ಯದ ಎದುರು ಸತ್ಯದ ಮೇಲೆ ಸ್ಥಿರವಾಗಿ ನಿಂತಂತಹ ಅಲ್ಪಸಂಖ್ಯಾತ ವಿಭಾಗವು ಸತ್ಯವನ್ನು ಗೆಲ್ಲಿಸಲಿಕ್ಕಾಗಿ ಪ್ರಾಣ - ಸೊತ್ತುಗಳನ್ನು ಪಣಕ್ಕೊಡ್ಡಿದ್ದರೆ ಅದು ಈ ಪರೀಕ್ಷೆಯಲ್ಲಿ ವಿಜಯಿಯಾಯಿತು. ಮತ್ತು ಪರಲೋಕದಲ್ಲಿ ಅದು ತನ್ನ ಯಶಸ್ಸಿನ ಅತ್ಯುತ್ತಮ ಪರಿಣಾಮವನ್ನು ಅನುಭವಿಸಲಿಕ್ಕಿದೆ. ಇದನ್ನೇ ಮಾನವಕುಲವನ್ನು ಭೂಮಿಗೆ ಇಳಿಸುವಾಗ ಅಲ್ಲಾಹನು ಸ್ಪಷ್ಟವಾಗಿ ಸಾರಿ ಹೇಳಿರುವನು:

ಮುಂದೆ ನನ್ನ ಕಡೆಯಿಂದ ಮಾರ್ಗದರ್ಶನವು ನಿಮ್ಮ ಬಳಿಗೆ ಬಂದಾಗ, ಯಾರು ಆ ಮಾರ್ಗದರ್ಶನದಂತೆ ನಡೆಯುವರೋ ಅವರಿಗೆ ಯಾವುದೇ ಭಯ ಮತ್ತು ಚಿಂತೆ ಇರಲಾರದು. ಅದನ್ನು ನಿರಾಕರಿಸುವವರೂ ನಮ್ಮ ದೃಷ್ಟಾಂತಗಳನ್ನು ಸುಳ್ಳಾಗಿಸುವವರೂ ನರಕಾಗ್ನಿಯಲ್ಲಿ ಬೀಳುವವರಾಗಿದ್ದು ಅಲ್ಲಿ ಅವರು ಸದಾ ಕಾಲವೂ ಇರುವರು.

(ಅಲ್ ಬಕರಃ 38-39)

ಈ ವಾಸ್ತವಿಕತೆಯನ್ನು ನೀವು ಮನಗಂಡಾಗ ಸತ್ಯದ ವಾಹಕರ ನೈಜ ಹೊಣೆಯು ಮಿಥ್ಯವನ್ನು ಅಳಿಸಿ ಅದರ ಸ್ಥಾನದಲ್ಲಿ ಸತ್ಯವನ್ನು ಸಂಸ್ಥಾಪಿಸುವುದು ಅಲ್ಲ. ಬದಲಾಗಿ ಅವರ ನೈಜ ಹೊಣೆಯು ಮಿಥ್ಯವನ್ನು ಅಳಿಸಿ ಸತ್ಯವನ್ನು ಸಂಸ್ಥಾಪಿಸಲಿಕ್ಕಾಗಿ ಸೂಕ್ತವೂ, ಸರಿಯೂ, ಪರಿಣಾಮಕಾರಿಯೂ ಆದ ರೀತಿಯಲ್ಲಿ ಪ್ರಯತ್ನ ಮಾಡುವುದರಲ್ಲಿ ಯಾವುದೇ ಲೋಪ ಮಾಡದಿರುವುದೇ ಆಗಿದೆ ಎಂದು ನಿಮಗೆ ಸರಿಯಾಗಿ ಮನವರಿಕೆಯಾಗುವುದು. ಈ

ಪ್ರಯತ್ನವೇ ಅಲ್ಲಾಹನ ದೃಷ್ಟಿಯಲ್ಲಿ ಅವರ ವಿಜಯ ಅಥವಾ ಸೋಲಿನ ನೈಜ ಮಾನದಂಡವಾಗಿದೆ. ಇದರಲ್ಲಿ ಅವರು ಬೇಕು ಬೇಕೆಂದೇ ಯಾವುದೇ ಲೋಪ ಮಾಡದಿದ್ದರೆ ಅವರು ಅಲ್ಲಾಹನ ಬಳಿ ವಿಜಯಿಯಾಗಿದ್ದಾರೆ. ಲೋಕದಲ್ಲಿ ಮಿಥ್ಯದ ಮೆರೆದಾಟವನ್ನು ಅವರಿಂದ ನೀಗಿಸಲು ಸಾಧ್ಯವಾಗದಿದ್ದರೂ ಶೈತಾನನ ಪಕ್ಷದ ಬಲವನ್ನು ಅವರಿಂದ ಮುರಿಯಲು ಸಾಧ್ಯವಾಗದಿದ್ದರೂ ಸರಿಯೆ.

ಈ ಧರ್ಮವು ಅಲ್ಲಾಹನ ವತಿಯಿಂದ ಬಂದುದಾಗಿದೆ. ಇದಕ್ಕಾಗಿ ಕೆಲಸ ಮಾಡುವವರು ಅಲ್ಲಾಹನಿಗಾಗಿ ಪ್ರಯತ್ನಿಸುವವರಾಗಿದ್ದಾರೆ. ಅದಕ್ಕೆ ವಿರುದ್ಧವಾಗಿ ಕೆಲಸ ಮಾಡುವವರು ಅಲ್ಲಾಹನ ವಿದ್ರೋಹಿಗಳಾಗಿದ್ದಾರೆ. ಹಾಗಿರುವಾಗ ವಿದ್ರೋಹಿಗಳಿಗೆ ಗೆಲುವು ಮತ್ತು ನಿಷ್ಠಾವಂತರಿಗೆ ಸೋಲು ಉಂಟಾಗುವುದಾದರೂ ಹೇಗೆ? ಎಂಬ ಅನುಮಾನವು ಸಾಮಾನ್ಯವಾಗಿ ಜನರ ಮನಸ್ಸನ್ನು ಕಾಡುತ್ತಿರುತ್ತದೆ. ಆದರೆ ಮೇಲೆ ವಿವರಿಸಿರುವ ವಿಷಯಗಳನ್ನು ಗಮನಿಸಿದಾಗ ನಿಮಗೆ ಈ ಪ್ರಶ್ನೆಯ ಉತ್ತರವು ತಾನಾಗಿಯೇ ಲಭಿಸುತ್ತದೆ. ವಾಸ್ತವದಲ್ಲಿ ಇದು ಪರೀಕ್ಷಾರ್ಥವಾಗಿ ಮನುಷ್ಯರಿಗೆ ನೀಡಲ್ಪಟ್ಟ ಸ್ವಾತಂತ್ರ್ಯದ ಅನಿವಾರ್ಯ ಪರಿಣಾಮವಾಗಿದೆ. ಭೂಮಿಯ ಮೇಲೆ ಅಲ್ಲಾಹನ ವಿಧೇಯತೆಯೇ ಆಗಬೇಕೆಂದಿದ್ದರೆ ಯಾರೂ ಯಾವುದೇ ಕೆಲಸವನ್ನು ಅವನ ಇಚ್ಛೆಗೆ ವಿರುದ್ಧವಾಗಿ ಮಾಡಲು ಸಾಧ್ಯವೇ ಆಗಬಾರದು ಎಂದಿದ್ದರೆ ಅವನು ಎಲ್ಲ ಮನುಷ್ಯರನ್ನೂ ಗಿಡ-ಮರಗಳಂತೆ, ಪ್ರಾಣಿ-ಪಕ್ಷಿಗಳಂತೆ, ಪರ್ವತಗಳಂತೆ ತನ್ನ ಆಜ್ಞಾನುವರ್ತಿಗಳಾಗಿಯೇ ಸೃಷ್ಟಿಸುತ್ತಿದ್ದ. ಆದರೆ ಆಗ ಈ ಪರೀಕ್ಷೆಯ ಅವಕಾಶವೇ ಉಳಿಯುತ್ತಿರಲಿಲ್ಲ. ಅದರಲ್ಲಿ ವಿಜಯಿಯಾದರೆ ಸ್ವರ್ಗವನ್ನು ದಯಪಾಲಿಸುವ ಮತ್ತು ಸೋತರೆ ನರಕಕ್ಕೆ ಹಾಕುವ ಪ್ರಮೇಯವೇ ಬರುತ್ತಿರಲಿಲ್ಲ. ಇದನ್ನು ಬಿಟ್ಟು ಅಲ್ಲಾಹನು ಮಾನವಕುಲದ ಮತ್ತು ಅದರ ಪ್ರತಿಯೊಬ್ಬ ಸದಸ್ಯನ ಪರೀಕ್ಷೆ ಮಾಡಲು ನಿರ್ಧರಿಸಿರುವಾಗ ಅವರಿಗೆ ಅಗತ್ಯಾನುಸಾರ ಆಯ್ಕೆ ಮತ್ತು ಇಚ್ಛೆಯ ಸ್ವಾತಂತ್ರ್ಯವನ್ನು ದಯಪಾಲಿಸುವುದು ಅನಿವಾರ್ಯವಾಗಿತ್ತು. ಅಲ್ಲಾಹನು ಅವರಿಗೆ ಈ ಸ್ವಾತಂತ್ರ್ಯವನ್ನು ದಯಪಾಲಿಸಿದ ಬಳಿಕ ಅವನು ಮೇಲಿಂದ ಹಸ್ತಕ್ಷೇಪ ನಡೆಸಿ ವಿದ್ರೋಹಿಗಳನ್ನು ಸೋಲಿಸುವ ಮತ್ತು ನಿಷ್ಠಾವಂತರನ್ನು ಗೆಲ್ಲಿಸುವ ಕಾರ್ಯವನ್ನು ಬಲ ಪ್ರಯೋಗದಿಂದ ಮಾಡುವುದು ಸಾಧ್ಯವಲ್ಲ. ಈ ಸ್ವತಂತ್ರ ವಾತಾವರಣದಲ್ಲಿ ಸತ್ಯ-ಮಿಥ್ಯಗಳ ಮಧ್ಯೆ ಏರ್ಪಟ್ಟಿರುವ ಸಂಘರ್ಷದಲ್ಲಿ ಮಿಥ್ಯದ ಧ್ವಜವಾಹಕರು, ಸತ್ಯದ ಬೆಂಬಲಿಗರು ಮತ್ತು ಜನ ಸಾಮಾನ್ಯರು (ಇವರಲ್ಲಿ ಸಾಮಾನ್ಯ ಮುಸ್ಲಿಮರೂ ಸೇರಿದ್ದಾರೆ) ಎಲ್ಲರೂ ಈ ಪರೀಕ್ಷಾ ಕೊಠಡಿಯಲ್ಲಿ ತಂತಮ್ಮ ಪರೀಕ್ಷೆಯನ್ನು ನೀಡುತ್ತಿರುವವರು. ಅಲ್ಲಾಹನ ಕಡೆಯಿಂದ ನಿಷ್ಠಾವಂತರಿಗೆ ಪ್ರೋತ್ಸಾಹ ಮತ್ತು ವಿದ್ರೋಹಿಗಳಿಗೆ ನಿರುತ್ತೇಜನ ಖಂಡಿತ ಸಿಗುತ್ತದೆ. ಆದರೆ ಪರೀಕ್ಷೆಯ ಉದ್ದೇಶವೇ ವಿಫಲವಾಗಿ ಬಿಡುವ ರೀತಿಯಲ್ಲಿ ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ಸತ್ಯವನ್ನು ಉತ್ಥಾನಗೊಳಿಸಲಿಕ್ಕಾಗಿ ಎಷ್ಟರ ಮಟ್ಟಿಗೆ ಸತ್ಯದ ಬೆಂಬಲಿಗರು ಶ್ರಮಪಡುತ್ತಾರೆಂದು ಪರೀಕ್ಷಿಸಲಾಗುತ್ತದೆ.

ಜನಸಾಮಾನ್ಯರು ಸತ್ಯದ ಧ್ವಜವಾಹಕರ ಬೆಂಬಲಕ್ಕೆ ನಿಲ್ಲುತ್ತಾರೋ ಅಥವಾ ಮಿಥ್ಯಾ ಹರಿಕಾರರಿಗೆ ನೆರವಾಗುತ್ತಾರೋ ಎಂಬುದು ಅವರ ಪರೀಕ್ಷೆಯಾಗಿದೆ. ಮಿಥ್ಯವಾದಿಗಳ ಸತ್ಯದಿಂದ ವಿಮುಖರಾಗಿ ಮಿಥ್ಯದ ಬೆಂಬಲದಲ್ಲಿ ಎಷ್ಟು ಹಠಮಾರಿತನವನ್ನು ಪ್ರದರ್ಶಿಸುತ್ತಾ ಮತ್ತು ಸತ್ಯದ ವಿರೋಧದಲ್ಲಿ ನೀಚತೆಯ ಯಾವ ಮಟ್ಟಕ್ಕೆ ತಲುಪುತ್ತಾರೆಂಬುದೇ ಅವ ಪರೀಕ್ಷೆಯಾಗಿದೆ. ಇದೊಂದು ಬಹಿರಂಗ ಸ್ಪರ್ಧೆ. ಇದರಲ್ಲಿ ಸತ್ಯಕ್ಕಾಗಿ ಹೋರಾಡುವವರ ಪೆಟ್ಟು ತಿಂದರೆ ಅದು ಸತ್ಯದ ಸೋಲಿನ ದ್ಯೋತಕವಲ್ಲ. ಅಲ್ಲಾಹನು ತನ್ನ ಧರ್ಮದ ಪತನವನ್ನು ಮೌನವಾಗಿ ವೀಕ್ಷಿಸುತ್ತಿರುವನೆಂಬುದೂ ಇದರ ಅರ್ಥವಲ್ಲ. ನಿಜವಾಗಿ ಇದ ಅರ್ಥ ಸತ್ಯಕ್ಕಾಗಿ ಹೋರಾಡುವವರು ಅಲ್ಲಾಹನ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆಯುತ್ತಾರೆ ಮತ್ತು ಅವರ ಮೇಲೆ ಅನ್ಯಾಯವೆಸಗುವವರು ತಮ್ಮ ಪರಲೋಕವನ್ನು ಅತ್ಯಧಿಕ ಕೆಡಿಸುತ್ತಾರೆ ಹಾಗೂ ಈ ಸಂಘರ್ಷದ ಮೂಕ ಪ್ರೇಕ್ಷಕರಾಗುವವರು, ಸತ್ಯದ ಬೆಂಬಲಿಗರಾಗುವುದರಿಂದ ನುಣುಚಿ ಕೊಳ್ಳುವವರು ಅಥವಾ ಮಿಥ್ಯವನ್ನು ಗೆಲ್ಲುವುದನ್ನು ಕಂಡು ಅದರ ಜೊತೆ ಸೇರಿಕೊಳ್ಳುವವರು ತಮ್ಮನ್ನು ದೊಡ್ಡ ಅಪಾಯಕ್ಕೆ ಸಿಲುಕಿಸಿಕೊಳ್ಳುತ್ತಿದ್ದಾರೆ ಎಂದಾಗಿದೆ.

ಮುಸ್ಲಿಮ್ ಎನಿಸಿಕೊಂಡವರು ಈ ಪರೀಕ್ಷೆಯಿಂದ ಮುಕ್ತರಾಗಿರುವರು ಎಂದು ಭಾವಿಸುವುದು ತಪ್ಪು. ಕೇವಲ ಮುಸ್ಲಿಮ್ ಎನಿಸಿಕೊಳ್ಳುವುದೇ ಈ ಪರೀಕ್ಷೆಯಲ್ಲಿ ತೇರ್ಗಡೆಯ ಖಚಿತ ಮಾರ್ಗವೆನ್ನುವುದು ಕೂಡಾ ಸರಿಯಲ್ಲ. ಮುಸ್ಲಿಮ್ ಸಮುದಾಯದಲ್ಲಿ ಧರ್ಮದ ಬಗ್ಗೆ ಅಸಡ್ಡೆ ವ್ಯಾಪಕವಾಗಿ ಅದರಲ್ಲಿ ಧರ್ಮಬಾಹಿರ ಜೀವನ ವ್ಯವಸ್ಥೆಯು ಯಶಸ್ಸು ಸಾಧಿಸಿದರೆ ಅದೇನೂ ಬಿಡಿಸಲಾಗದ ಒಗಟಲ್ಲ. ಅದರಿಂದ ಚಿಂತಾಕ್ರಾಂತರಾಗುವ ಅಗತ್ಯವೂ ಇಲ್ಲ. ಅಲ್ಲಾಹನ ಈ ಬಹಿರಂಗ ಪರೀಕ್ಷಾ ಕೊಠಡಿಯಲ್ಲಿ ಸತ್ಯನಿಷೇಧಿ, ಸತ್ಯವಿಶ್ವಾಸಿ, ಕಪಟವಿಶ್ವಾಸಿ, ದುರಾಚಾರಿ ಮತ್ತು ಸದಾಚಾರಿಗಳೆಲ್ಲರೂ ಸದಾ ಪರೀಕ್ಷೆಗೆ ಒಳಗಾಗಿರುವರು. ಇದರಲ್ಲಿ ನಿರ್ಣಾಯಕ ವಿಷಯ ಬಾಯಿ ಮಾತಲ್ಲ, ಚಾರಿತ್ರ್ಯವಾಗಿದೆ. ಇದರ ಪರಿಣಾಮವನ್ನು ಜನಗಣತಿಯ ದಾಖಲೆಗಳನ್ನು ನೋಡಿ ತೀರ್ಮಾನಿಸುವುದಲ್ಲ. ಪ್ರತಿಯೊಬ್ಬ ವ್ಯಕ್ತಿ, ವರ್ಗ ಮತ್ತು ಜನಾಂಗದ ಜೀವನ ವೃತ್ತಾಂತವನ್ನು ನೋಡಿಯೇ ಅದನ್ನು ತೀರ್ಮಾನಿಸಲಾಗುವುದು. *(ತರ್ಜುಮಾನುಲ್ ಕುರ್‌ಆನ್, ಏಪ್ರಿಲ್ 1967)*

56

ಶಫಾಅತ್‌ನ ಸರಿಯಾದ ಕಲ್ಪನೆ

ಮೌಲವಿ ಸಾಹೇಬರೊಬ್ಬರು ಒಂದು ಜಾಹೀರಾತು ಪ್ರಕಟಿಸಿರುವರು. ಅದರಲ್ಲಿ ನೀವು 'ಮುಲ್‌ತಝಿಲಿ' ಮತ್ತು 'ಖಾರಿಜಿ' ಆಗಿರುವಿರೆಂದು ಫತ್ವಾ (ಧರ್ಮವಿಧಿ) ಹೊರಡಿಸಿರುವರು. ಈ ಫತ್ವಾಕ್ಕೆ ಕಾರಣವೇನೆಂದರೆ ಪ್ರವಾದಿವರ್ಯರು(ಸ) ಕಿಯಾಮತ್‌ನ ದಿನ ಸಮುದಾಯದ ಪರವಾಗಿ ಶಫಾಅತ್ ಮಾಡುವರೆಂಬುದನ್ನು ನೀವು ನಿರಾಕರಿಸುತ್ತೀರಂತೆ. ಅದನ್ನು ಅವರು ತರ್ಜುಮಾನುಲ್ ಕುರ್‌ಆನ್ ಸಂಪುಟ: 26, ಸಂಚಿಕೆ: 1-2 ಪುಟ: 30 ರಿಂದ ಉದ್ಧರಿಸುತ್ತಾ "ಗ್ರಂಥದವರ ಪೈಕಿ ಅಲ್ಲಾಹ್ ಮತ್ತು ಪುನರುತ್ಥಾನ ದಿನದ ಮೇಲೆ ವಿಶ್ವಾಸವಿಡದವರ ವಿರುದ್ಧ ಯುದ್ಧ ಹೂಡಿರಿ: 'ಎಂಬ ಆಯತ್‌ನ ಟಿಪ್ಪಣಿಯಿಂದ ಉದ್ಧರಿಸುತ್ತಾರೆ. ಆ ಟಿಪ್ಪಣಿ ಹೀಗಿದೆ: 'ಅಲ್ಲಿ ಯಾವುದೇ ಶಿಫಾರಸ್ಸು, ಯಾವುದೇ ಪರಿಹಾರ ಮತ್ತು ಯಾವ ಮಹಾನುಭಾವರೊಂದಿಗಿನ ಸಂಬಂಧವೂ ಕೆಲಸಕ್ಕೆ ಬಾರದು" ಇದೇ ರೀತಿ ತಫ್ಹೀಮಾತ್‌ನಿಂದಲೂ ಇಂತಹುದೇ ಉದ್ಧರಣೆಯನ್ನು ಉಲ್ಲೇಖಿಸಲಾಗಿದೆ.

ದಯವಿಟ್ಟು, ಶಫಾಅತ್‌ನ ಬಗ್ಗೆ ಅಹ್ಲುಸ್ಸುನ್ನತ್‌ನ ವಿಶ್ವಾಸವೇನೆಂದು ತಿಳಿಸಿ. ಪ್ರವಾದಿ(ಸ) ತಮ್ಮ ಸಮುದಾಯದ ಶಿಫಾರಸ್ಸು ಯಾವ ನೆಲೆಯಲ್ಲಿ ಮಾಡುವರು? ಅವರು ಇಡೀ ಸಮುದಾಯದ ವತಿಯಿಂದ ಶಿಫಾರಸ್ಸುದಾರರಾಗಿರುವರೇ?

○ ಇತರರ ಕಡೆಗೆ ತಪ್ಪು ಮಾತನ್ನು ಆಪಾದಿಸಿ ಅದನ್ನು ಪ್ರಚಾರ ಪಡಿಸುವ ಮತ್ತು ಇವರ ಮಾತುಗಳಿಗೆ, ಅವರ ಇಂಗಿತಕ್ಕೆ ವಿರುದ್ಧವಾದ ಅರ್ಥ ಕಲ್ಪಿಸುವ ಈ ಜನರಿಗೆ ಅಲ್ಲಾಹನು ಸರಿಯಾದ ಮಾರ್ಗದರ್ಶನ ನೀಡಲಿ. ನನ್ನ ಮೇಲೆ ಆರೋಪ ಹೊರಿಸಿರುವ ಮಹಾನುಭಾವರಿಗೆ ಸ್ವಲ್ಪವಾದರೂ ದೇವ ಭಯವಿರುತ್ತಿದ್ದರೆ ಅವರು ಆ ಜಾಹೀರಾತಿನ ಪ್ರಕಟನೆಗಿಂತ ಮುಂಚೆ ಪತ್ರ ಬರೆದು 'ಈ ಮಾತಿನ ಅರ್ಥವೇನು? 'ಶಫಾಅತ್'ನ ಕುರಿತು ನನ್ನ ವಿಶ್ವಾಸವೇನು? ಎಂದು ನನ್ನಲ್ಲಿ ವಿಚಾರಿಸಬಹುದಾಗಿತ್ತು. ನನ್ನ ಯಾವ ಮಾತುಗಳನ್ನು ಅವರು ಉದ್ಧರಿಸಿರುವರೋ ಅವುಗಳ ಪೈಕಿ ಒಂದು ಯಹೂದಿ ಮತ್ತು ಕ್ರೈಸ್ತರ ಶಿಫಾರಸ್ಸಿನ

ಬಗೆಗಿನ ತಪ್ಪು ವಿಶ್ವಾಸವನ್ನು ಅಲ್ಲಗಳೆಯುವಂತಹದಾಗಿದೆ. ಅದರ ನೈಜ ಉದ್ದೇಶ ತಪ್ಪು ವಿಶ್ವಾಸದಿಂದಾಗಿ ಯಾವ ರೀತಿ ಗ್ರಂಥದವರ ಪರಲೋಕ ವಿಶ್ವಾಸವು ಅಸಿಂಧುವಾಗುತ್ತ ಎಂಬುದನ್ನು ತಿಳಿಸುವುದಾಗಿದೆ. ಆ ಕಾರಣದಿಂದಲೇ ಅವರು ಪರಲೋಕವನ ನಂಬುವುದಿಲ್ಲವೆಂದು ಪವಿತ್ರ ಕುರ್‌ಆನ್‌ನಲ್ಲಿ ಆರೋಪಿಸಲಾಗಿದೆ. ದ್ವಿತೀಯ ಮಾತಿನ ಪ್ರವಾದಿ(ಸ) ತಮ್ಮ ಸಂದೇಶ ಪ್ರಚಾರದ ಆರಂಭದಲ್ಲಿ ಬಹುದೇವ ವಿಶ್ವಾಸಿಗಳನ್ನುದ್ದೇಶಿ ನೀಡಿದ ಬೋಧನೆಗಳ ಸಾರಾಂಶವನ್ನು ನೀಡಲಾಗಿದೆ. ಎರಡರಲ್ಲೂ ಯಾವುದೇ ಸ್ಥಳದಲ್ಲಿ ಶಿಫಾರಸ್ಸಿನ ಕುರಿತು ಇಸ್ಲಾಮ್‌ನ ವಿಶ್ವಾಸವನ್ನು ವಿವರಿಸುವ ಸಂದರ್ಭವಿರಲಿಲ್ಲ ಸತ್ಯನಿಷೇಧಿಗಳು ಮತ್ತು ಬಹುದೇವವಿಶ್ವಾಸಿಗಳ ಬಗ್ಗೆ ವಿವರಿಸುವಲ್ಲಿ ಕೇವ ಸತ್ಯವಿಶ್ವಾಸಿಗಳಿಗಾಗಿರುವ ಶಫಾಅತ್‌ನ ಕುರಿತು ಏಕೆ ಪ್ರಸ್ತಾಪಿಸಬೇಕು? ಕಾಫಿರ್ ಮತ್ತು ಮುಶ್ರಿಕ್‌ಗಳ ಕುರಿತು ನಾನು ಕುರ್‌ಆನ್‌ನಲ್ಲಿ ಬಂದಿರುವುದನ್ನೇ ಬರೆದಿರುವೆನು. "ಯಾರು ಯಾರಿಗೂ ಕಿಂಚಿತ್ತೂ ಉಪಕಾರಕ್ಕೆ ಬಾರದ, ಯಾರಿಂದಲೂ ಪರಿಹಾರಧನ ಸ್ವೀಕರಿಸಲಾಗದ ಯಾವ ಶಿಫಾರಸ್ಸೂ ಫಲಕಾರಿಯಾಗದ ಮತ್ತು ಅಪರಾಧಿಗಳಿಗೆ ಎಲ್ಲಿಂದಲೂ ಯಾ ಸಹಾಯವೂ ಒದಗದ ಆ ದಿನವನ್ನು ಭಯಪಡಿರಿ" *(2: 123*

ಇನ್ನು ಶಫಾಅತ್‌ನ ಕುರಿತು ಇಸ್ಲಾಮ್‌ನ ನಂಬಿಕೆಯ ವಿಷಯ. ಅದು ಕುರ್‌ಆನ ಮತ್ತು ಹದೀಸ್‌ನ ಪ್ರಕಾರ ಹೀಗಿದೆ. ಕಿಯಾಮತ್‌ನ ದಿನ ಅಲ್ಲಾಹನ ನ್ಯಾಯಾಲಯದಲ್ಲಿ ಅಲ್ಲಾಹನು ಅನುಮತಿ ನೀಡಿದವನು ಮಾತ್ರ ಶಿಫಾರಸ್ಸು ಮಾಡಬಲ್ಲನು. ಯಾರ ಪರವಾ ಅಲ್ಲಾಹನು ಅನುಮತಿ ನೀಡುತ್ತಾನೋ ಅವನ ಪರವಾಗಿ ಮಾತ್ರ ಶಿಫಾರಸ್ಸು ಮಾಡಬಲ್ಲನು ಈ ಕೆಳಗಿನ ಆಯತ್‌ಗಳನ್ನು ನೋಡಿರಿ:

ಅಂದು ರಹ್ಮಾನನು ಯಾರಿಗೆ ಅನುಮತಿ ನೀಡುವನೋ ಮತ್ತು ಯಾರ ಮಾತನ್ನು ಕೇಳಲು ಇಚ್ಛಿಸುವನೋ ಅವರ ಹೊರತು ಯಾರ ಶಿಫಾರಸ್ಸೂ ಫಲಕಾರಿಯಾಗದು.

(20: 109,

ಅಲ್ಲಾಹನ ಅನುಮತಿಯಿಲ್ಲದೆ ಯಾರ ಶಿಫಾರಸ್ಸೂ ಫಲಕಾರಿಯಾಗದು. ಅವನ ಸನ್ನಿಧಿಯಲ್ಲಿ ಅವನ ಅನುಮತಿಯಿಲ್ಲದೆ ಶಿಫಾರಸ್ಸು ಮಾಡುವವರು ಯಾರಿದ್ದಾರೆ?

(2: 255,

ಈ ನಿಯಮದ ಪ್ರಕಾರ ಖಂಡಿತವಾಗಿಯೂ ಪ್ರವಾದಿ(ಸ) ನಿರ್ಣಾಯಕ ದಿನದಂದು ಶಿಫಾರಸ್ಸು ಮಾಡುವರು. ಆದರೆ ಈ ಶಿಫಾರಸ್ಸು ಅಲ್ಲಾಹನ ಅಪ್ಪಣೆಯಂತೆ ಆಗಿರುವುದು ಮತ್ತು ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ಸತ್ಕರ್ಮಗಳನ್ನು ಮಾಡುವ ಪ್ರಯತ್ನ

ಮಾಡಿಯೂ ಕೆಲವು ಪಾಪಗಳಲ್ಲಿ ಸಿಲುಕಿ ಹೋದಂತಹ ಸತ್ಯವಿಶ್ವಾಸಿಗಳ ಪರವಾಗಿರುವುದು. ಉದ್ದೇಶ ಪೂರ್ವಕವಾಗಿ ವಂಚನೆಗಳನ್ನೂ ವ್ಯಭಿಚಾರಗಳನ್ನೂ ಎಸಗುತ್ತಾ ಅಲ್ಲಾಹನನ್ನು ಭಯಪಡದಂತಹ ಜನರು ಪ್ರವಾದಿವರ್ಯರ(ಸ) ಶಿಫಾರಸ್ಸಿಗೆ ಅರ್ಹರಲ್ಲ. ಹದೀಸ್‌ನಲ್ಲಿ ಪ್ರವಾದಿ(ಸ) ಅವರ ಒಂದು ದೀರ್ಘ ಪ್ರವಚನವು ವರದಿಯಾಗಿದೆ. ಅದರಲ್ಲಿ ವಂಚನೆಯ ಅಪರಾಧದ ಭೀಕರತೆಯನ್ನು ಕುರಿತು ಪ್ರಸ್ತಾಪಿಸುತ್ತಾ ಪ್ರವಾದಿ(ಸ) ಹೇಳುತ್ತಾರೆ. "ಕಿಯಾಮತ್ ದಿನದಂದು ಈ ವಂಚಕರು ತಮ್ಮ ಕೊರಳಲ್ಲಿ ತಾವು ವಂಚನೆಯಿಂದ ಗಳಿಸಿದ ಸೊತ್ತನ್ನು ಹೊತ್ತುಕೊಂಡ ಸ್ಥಿತಿಯಲ್ಲಿ ಬರುವರು. ಅವರು 'ಯಾ ರಸೂಲಲ್ಲಾಹ್! ನನಗೆ ಸಹಾಯ ಮಾಡಿರಿ" ಎಂದು ನನ್ನನ್ನು ಕೂಗಿ ಕರೆಯುವರು. ಆದರೆ ನಾನು ಈ ರೀತಿ ಉತ್ತರಿಸುವೆನು "ನಾನು ನಿನಗಾಗಿ ಏನನ್ನೂ ಮಾಡಲಾರೆ. ನಾನು ನಿನಗೆ ಅಲ್ಲಾಹನ ಸಂದೇಶವನ್ನು ಮುಟ್ಟಿಸಿದ್ದೆ" *(ಮಿಷ್ಕಾತ್)* *(ತರ್ಜುಮಾನುಲ್ ಕುರ್‌ಆನ್, ನವೆಂಬರ್, 1950)*

57

ಗಡ್ಡದ ಕುರಿತು ಒಂದು ಪ್ರಶ್ನೆ

● *ನಾನು ಗಡ್ಡ ಬಿಟ್ಟಿದ್ದೇನೆ. ನನ್ನ ಕೆಲವು ಬಂಧುಗಳಿದ್ದಾರೆ. ಅವರಿಗೆ ಧಾರ್ಮಿಕ ಜ್ಞಾ ಹೆಚ್ಚಿದೆ. ಅವರು ಗಡ್ಡ ಬಿಡುವುದು ಕಡ್ಡಾಯವಲ್ಲವೆನ್ನುತ್ತಾರೆ. ಕುರ್‌ಆನ್‌ನಲ್ಲಿ ಬಗ್ಗೆ ಯಾವುದೇ ಆಜ್ಞೆಯಿಲ್ಲ. ಗಡ್ಡ ಬೆಳೆಸುವುದು ಪ್ರವಾದಿ(ಸ) ಅವರ ಅಗ್ಗ ಪ್ರೀತಿಯಾಗಿದೆ. ಗಡ್ಡ ಬೆಳೆಸದಿರುವುದು ಯಾವ ಮಹಾ ಪಾಪ? ಎಂದು ಮುಂತಾ ಅವರು ಹೇಳುತ್ತಾರೆ. ನಾನು ಅವರಿಗೆ ಹೇಗೆ ಉತ್ತರಿಸಬೇಕೆಂದು ತಿಳಿಸುವಿರಾ?*

○ ಗಡ್ಡದ ಕುರಿತು ನೀವು ಕೇಳಿದ ಪ್ರಶ್ನೆಯಿಂದ ನನಗೆ ಓರ್ವ ಆಂಗ್ಲ ನ ಮುಸ್ಲಿಮನ ಘಟನೆ ನೆನಪಾಯಿತು. ಆತ ಇಸ್ಲಾಮನ್ನು ಸರಿಯಾಗಿ ಕಲಿತು ಅದನ್ನ ಸ್ವೀಕರಿಸಿದನು. ಇಸ್ಲಾಮ್ ಸ್ವೀಕಾರದ ನಂತರವೇ ಆತ ಗಡ್ಡ ಬೋಳಿಸುವುದನ್ನು ಬಿಟ್ಟು ಬಿಟ್ಟ. ನಿಮ್ಮ ಸಂಬಂಧಿಕರಂತೆಯೇ ಧಾರ್ಮಿಕ ಜ್ಞಾನ ಹೆಚ್ಚಿರುವವರು "ಗಡ್ಡ ಬೆಳೆಸುವುದು ಇಸ್ಲಾಮ್‌ನಲ್ಲಿ ಏನೂ ಅಗತ್ಯ ಕೆಲಸವಲ್ಲ. ಹಾಗಿರುವಾಗ ನೀವೇಕೆ ಗಡ್ಡ ಬೋಳಿಸುವುದನ್ನು ಬಿಟ್ಟು ಬಿಟ್ಟಿರಿ? "ಎಂದು ಪ್ರಶ್ನಿಸಿದರು. "ನನಗೆ ಅಗತ್ಯ ಅನಗತ್ಯಗಳ ವಿಂಗಡನೆ ತಿಳಿದಿಲ್ಲ. ಪ್ರವಾದಿ(ಸ) ಅವರು ಇದನ್ನು ಆಜ್ಞಾಪಿಸಿದ್ದಾರೆಂದು ಮಾತ್ರ ನಾನು ತಿಳಿದಿದ್ದೇನೆ. ನಾನು ಪ್ರವಾದಿವರ್ಯರ(ಸ) ಅನುಸರಣೆಯನ್ನು ಸ್ವೀಕರಿಸಿರುವಾಗ ಅವರ ಆಜ್ಞೆಯನ್ನು ಪಾಲಿಸುವುದು ನನ್ನ ಕರ್ತವ್ಯವಾಗಿದೆ. ತನ್ನ ಉನ್ನತಾಧಿಕಾರಿಯ ಆಜ್ಞೆಗಳಲ್ಲಿ ಅಗತ್ಯ ಅನಗತ್ಯವೆಂಬ ವಿಂಗಡನೆ ಮಾಡುವುದು ಓರ್ವ ವಿಧೇಯ ಸೇವಕನ ಕೆಲಸವಲ್ಲ." ಎಂದು ಆತ ಉತ್ತರಿಸಿದ್ದ. ನೀವು ನಿಮ್ಮ ಬಂಧುಗಳಿಗೆ ಈ ಘಟನೆಯನ್ನು ತಿಳಿಸಿಬಿಡಿರಿ. "ಇದಂತೂ ಪ್ರವಾದಿ(ಸ) ಅವರ ಅಗ್ಗದ ಪ್ರೀತಿ, ನೀವು ಯಾವುದಾದರೂ ತುಟ್ಟಿ ಪ್ರೀತಿಯನ್ನು ತೋರಿದ್ದರೆ ದಯವಿಟ್ಟು ತಿಳಿಸಿ" ಎಂದೂ ಅವರೊಡನೆ ಹೇಳಿರಿ. ಒಬ್ಬ ನೌಕರನು ತನ್ನ ಯಜಮಾನನ ಸುಲಭದ ಆದೇಶಗಳನ್ನೂ ಪಾಲಿಸದಿದ್ದರೆ ಆತ ಕಷ್ಟದ ವಿಷಯಗಳನ್ನು ಪಾಲಿಸುವುದು ಹೇಗೆ? ನಮಗೆ ಅಗ್ಗದ ಮತ್ತು ತುಟ್ಟಿಯ ಪ್ರೀತಿಯ ವ್ಯತ್ಯಾಸ ಗೊತ್ತಿಲ್ಲ. ನಮಗಂತೂ ಪ್ರವಾದಿ(ಸ) ಅವರು ನಡೆದ ಮಾರ್ಗದಲ್ಲಿ ಪೂರ್ಣವಾಗಿ ನಡೆಯಬೇಕಾಗಿದೆ. ಅವರು ನೀಡಿದ ಆದೇಶಗಳನ್ನು ಪಾಲಿಸಬೇಕಾಗಿದೆ.

ಈ ಕುರಿತು ಇನ್ನೊಂದು ವಿಷಯವನ್ನು ತಿಳಿದಿರಬೇಕು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಲ್ಲಿರುವ- ವರ್ಗಗಳಲ್ಲಿರುವ ಓರ್ವ ವ್ಯಕ್ತಿ ಗಡ್ಡ ಬಿಡುವುದು ಕೇವಲ ಪ್ರವಾದಿ(ಸ)ಅವರ ಆದೇಶದ ಪಾಲನೆ ಮಾತ್ರವಲ್ಲ, ಅದೊಂದು ಜಿಹಾದ್ (ಹೋರಾಟ) ಕೂಡಾ ಆಗಿದೆ. ಇದರಲ್ಲಿ ಹಿಜ್ರತ್‌ನ ಪುಣ್ಯದ ಒಂದಂಶವೂ ಸಿಗಬಹುದು. ಮೊಟ್ಟಮೊದಲು ಅವರಿಗೆ ತಮ್ಮ ಅಭಿರುಚಿ ಮತ್ತು ಒಲವಿಗೆ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ. ಅದು ಬಹಳ ಕಾಲದ ಶಿಕ್ಷಣ ತರಬೇತಿಯ ಮೂಲಕ ಹಾಗೂ ಪರಿಸರದ ಪ್ರಭಾವದ ಮೂಲಕ ಅವರಲ್ಲಿ ಬೇರೂರಿರುತ್ತದೆ. ಅನಂತರ ಆ ಹಳೆಯ ಅಭಿರುಚಿಯನ್ನು ಬೇರು ಸಹಿತ ಕಿತ್ತೊಗೆದು ಅದರ ಸ್ಥಾನದಲ್ಲಿ ಇಸ್ಲಾಮಿ ಒಲವನ್ನು ಬೆಳೆಸುವಲ್ಲಿ ಯಶಸ್ವಿಯಾಗಿ ಅವನ ಮುಖದಲ್ಲಿ ಗಡ್ಡ ಬೆಳೆದರೆ ಹೊರಗೆ ಒಂದು ಹೊಸ ಸಂಘರ್ಷ ಆರಂಭವಾಗುತ್ತದೆ. ಅವನ ಪರಿಸರವೇ ಅವನ ವಿರುದ್ಧ ಸಂಘರ್ಷಕ್ಕೆ ಇಳಿಯುತ್ತದೆ. ಅವನ ಬಂಧು-ಬಳಗ, ಮಿತ್ರ ವೃಂದ, ಪರಿಚಯಸ್ಥರು ಎಲ್ಲರೂ ಅವನನ್ನು ಗೇಲಿ ಮಾಡತೊಡಗುತ್ತಾರೆ. ಅವನಿಗೆ ತಮಾಷೆ ಮಾಡುತ್ತಾರೆ. ಅಣಕದ ಮಾತುಗಳನ್ನಾಡಲಾಗುತ್ತದೆ. ಮದುವೆಯ ಮಾರುಕಟ್ಟೆಯಲ್ಲಿ ಅವನ ಬೆಲೆ ಇಳಿಮುಖವಾಗುತ್ತದೆ. ನಮ್ಮ ನಿಮ್ಮ ಮಧ್ಯೆ ಇರುವ ಈ ಗೋಡೆಯನ್ನು ಕೆಡವಿ ಹಾಕಿ ಎಂಬ ಬೇಡಿಕೆಯು ಎಲ್ಲ ಕಡೆಯಿಂದ ಬರುತ್ತದೆ. ಚಾರಿತ್ರ್ಯದಲ್ಲಿ ಪಕ್ವತೆಯಿಲ್ಲದ ಯಾವನೂ ಈ ನಿರಂತರ ಆಕ್ರಮಣವನ್ನು ಸಹಿಸಲು ಸಾಧ್ಯವಿಲ್ಲ. ಅಂತರಂಗದಲ್ಲಿ ಬದಲಾವಣೆಯಾಗದೆ ಕೇವಲ ಕ್ಷಣಿಕ ಪ್ರೇರಣೆ, ಪ್ರಭಾವ ಅಥವಾ ಬಾಹ್ಯ ಒತ್ತಡದಿಂದ ಬಹಿರಂಗದ ಬದಲಾವಣೆ ಆರಂಭವಾಗಿದ್ದರೆ ಒಂದಿಷ್ಟು ಹೋರಾಟ ಮಾಡಿದ ನಂತರ ಅವನು ಸೋಲೊಪ್ಪಿಕೊಳ್ಳುತ್ತಾನೆ. ಛದ್ಮ ವೇಷಧಾರಿಯಂತೆ ಅವನು ಯಾವ ರೂಪವಿನ್ಯಾಸವನ್ನು ತೊರೆದಿದ್ದನೋ ಅದನ್ನೇ ಮತ್ತೆ ಅಳವಡಿಸಿಕೊಳ್ಳುತ್ತಾನೆ. ಆದರೆ ಬಲಿಷ್ಠ ಚಾರಿತ್ರ್ಯದವನು, ಅಂತರಂಗದಲ್ಲಿ ಸುಭದ್ರ ಬುನಾದಿಗಳ ಮೇಲೆ ಕ್ರಾಂತಿಯುಂಟಾದವನು ಸ್ಥೈರ್ಯದಿಂದ ಆ ಎಲ್ಲ ವಿರೋಧಗಳನ್ನೂ ಎದುರಿಸುತ್ತಾನೆ. ಅವನ ಸ್ಥೈರ್ಯದಿಂದ ಎರಡು ಮುಖ್ಯ ಪ್ರಯೋಜನಗಳಾಗುತ್ತವೆ. ಪ್ರಸಕ್ತ ಸತ್ಯಧಿಕ್ಕಾಗಿ ವಾತಾವರಣದ ವಿರುದ್ಧ ಇತರ ರಂಗಗಳಲ್ಲಿ ಹೋರಾಟ ಮಾಡುವ ಸಾಮರ್ಥ್ಯ ಅವನಲ್ಲಿ ಉಂಟಾಗುತ್ತದೆ. ಯಾವ ದೃಢ ಚಾರಿತ್ರ್ಯವನ್ನು ಅವನು ಪ್ರದರ್ಶಿಸಿರುವನೋ ಅದರ ಪ್ರಭಾವ ಅವನ ಪರಿಸರದ ಮೇಲೆ ಆಗುತ್ತದೆ. ಅವನ ಪ್ರಚಾರ ಕಾರ್ಯದಲ್ಲಿ ಘನತೆ ಉಂಟಾಗುತ್ತದೆ. ಅದರಿಂದಾಗಿ ಅವನು ತನ್ನ ಸಮಾಜದ ಇತರ ಸುಧಾರಣಾ ಪಥದಲ್ಲಿರುವ ವ್ಯಕ್ತಿಗಳ ಮೇಲೆಯೂ ಪ್ರಭಾವ ಬೀರುತ್ತಾನೆ.

ಈ ಕಾಲದಲ್ಲಿ ಗಡ್ಡ ಬೋಳಿಸುವುದು ಒಂದು ಫ್ಯಾಶನ್ ಮಾತ್ರವಲ್ಲ ಎಂಬುದು ಅನೇಕ ಜನರಿಗೆ ತಿಳಿದಿಲ್ಲ. ಅದು ಒಂದು ಸಂಸ್ಕೃತಿ ಮತ್ತು ಒಂದು ಧರ್ಮದ ಸ್ಪಷ್ಟ

ಸಂಕೇತವಾಗಿದೆ. ಆ ಸಂಕೇತವನ್ನು ತೊರೆಯುವುದು ಆ ಸಂಸ್ಕೃತಿ ಮತ್ತು ಧರ್ಮವನ ತೊರೆಯುವುದರ ಘೋಷಣೆಯಾಗಿದೆ. ಗಡ್ಡ ಬೆಳೆಸುವುದು ಪ್ರಸಕ್ತ ಪರಿಸ್ಥಿತಿಯಲ್ಲಿ ಇಸ್ಲಾಮನ ಒಂದು ಸಂಸ್ಕೃತಿ ಮತ್ತು ಧರ್ಮದ ನೆಲೆಯಲ್ಲಿ ಸ್ವೀಕರಿಸಿರುವುದರ ಸಂಕೇತವಾಗಿದೆ. ಈ ತೊರೆಯುವಿಕೆ ಮತ್ತು ಸ್ವೀಕಾರವು ನೈಜವೂ ಸುಭದ್ರವೂ ಆಗಬೇಕಾದರೆ ಮನುಷ್ಯ ಮನಸ್ಸಿನಿಂದ ಪಾಶ್ಚಾತ್ಯ ಸಂಸ್ಕೃತಿ ಮತ್ತು ಪಾಶ್ಚಾತ್ಯ ಧರ್ಮವು ಬೇರು ಸಹಿತ ಕಿತ್ತೆಸೆಯಲ್ಪಟ ಆ ಸ್ಥಾನದಲ್ಲಿ ಇಸ್ಲಾಮೀ ಸಂಸ್ಕೃತಿ ಮತ್ತು ಧರ್ಮವು ಚೆನ್ನಾಗಿ ಬೇರೂರಬೇಕು. ಯಾ ನೈತಿಕ ಒತ್ತಡ ಹೇರಿ ಆಧುನಿಕತೆಯ ಸೋಂಕು ತಾಗಿದ ಯುವಕರನ್ನು ಗಡ್ಡ ಬೆಳೆಸುವಂ ಮಾಡುತ್ತಾರೋ ಅವರು ಅಂತರಂಗದಲ್ಲಿ ಕ್ರಾಂತಿಯಾಗದಿದ್ದರೂ ಬಾಹ್ಯ ಕ್ರಾಂತಿಯಿಂ ಕ್ಷಿಪ್ರ ಮಾರ್ಪಾಟು ಮಾಡಬಯಸುತ್ತಾರೆ. ಅವರು ತಮ್ಮ ತಿಳಿಗೇಡಿತನವನ್ನಷ್ಟೆ ಪ್ರದರ್ಶಿಸುತ್ತಾರೆ. ಈ ಮಾರ್ಪಾಟು ನಿಜವಾಗಿ ಗಾಢವಾದ ಆಂತರಿಕ ಕ್ರಾಂತಿಯ ಪರಿಣಾಮವಾಗಿದ್ದರೆ, ಅದರ ಜತೆಗೆ ಧರ್ಮನಿಷ್ಠೆಯ ಗುಣನಡತೆಯ ಇತರ ಕುರುಹುಗಳು ಕಾಣಿಸತೊಡಗಿದರೆ ಮತ್ತು ವಾತಾವರಣದ ಮೇಲೆ ಆಗುವ ಇಸ್ಲಾಮೇತರ ಪ್ರಭಾವ ವಿರುದ್ಧ ದಿಟ್ಟವಾಗಿ ಹೋರಾಡಿದರೆ ಅದನ್ನು ಒಂದು ಸಾಮಾನ್ಯ ವಿಷಯ ಮತ್ತು ಪ್ರವಾದಿಯ ಅಗ್ಗದ ಪ್ರೀತಿ ಎನ್ನುವುದು ಖಂಡಿತ ಸಮಂಜಸವಲ್ಲ.

(ತರ್ಜುಮಾನುಲ್ ಕುರ್‌ಆನ್, ಸಪ್ಟಂಬರ್-ಅಕ್ಟೋಬರ್ 1943

58

ಹದೀಸ್‌ನ ಕೆಲವು ವಿಧಿಗಳು ಕುರ್‌ಆನ್‌ಗೆ ವಿರುದ್ಧವೆಂಬ ತಪ್ಪು ಕಲ್ಪನೆ

• *ನಾವು ನಮಾಝ್‌ನ ಸಿದ್ಧತೆ ಮಾಡುವಾಗ ವುಝೂ ಮಾಡಿ ಕೊಳ್ಳಬೇಕೆಂದು ಪವಿತ್ರ ಕುರ್‌ಆನ್‌ನಿಂದ ತಿಳಿದು ಬರುತ್ತದೆ. ಪ್ರತಿಯೊಂದು ನಮಾಝ್‌ಗೂ ಹೊಸ ವುಝೂ ಮಾಡಿಕೊಳ್ಳಬೇಕೆಂಬುದೇ ಇದರ ತಾತ್ಪರ್ಯವಾಗಿದೆ. ನಮಾಝ್ ಮಾಡಿ ಮುಗಿಸಿದ ಕೂಡಲೇ ವುಝೂವಿನ ಅವಧಿ ಕೊನೆಗೊಳ್ಳುತ್ತದೆ. ಇನ್ನೊಂದು ನಮಾಝ್‌ಗೆ ಹೊಸ ವುಝೂ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಆದರೆ ಜನರು ಒಂದೇ ವುಝೂವಿನಿಂದ ಅನೇಕ ನಮಾಝ್‌ಗಳನ್ನು ಏಕೆ ನಿರ್ವಹಿಸುತ್ತಾರೆಂದು ತಿಳಿಯದಾಗಿದೆ. ಅದೇ ರೀತಿ ಪವಿತ್ರ ಕುರ್‌ಆನ್‌ನಲ್ಲಿ ಪ್ರಸ್ತಾಪಿಸಲಾಗಿರುವ ವುಝೂವಿನ ವಿಧಿಗಳಲ್ಲಿ ಬಾಯಿ ಮುಕ್ಕಳಿಸುವುದು ಮತ್ತು ಮೂಗಿಗೆ ನೀರು ಹಾಕುವುದರ ಪ್ರಸ್ತಾಪವಿಲ್ಲ. ಅದೇ ರೀತಿ ವುಝೂ ಭಂಗವಾಗುವ ವಿಷಯಗಳ ಪಟ್ಟಿಯನ್ನೂ ಅದರಲ್ಲಿ ನೀಡಲಾಗಿಲ್ಲ. ಹೀಗಿರುವಾಗ ಬಾಯಿ ಮುಕ್ಕಳಿಸುವುದು ಇತ್ಯಾದಿ ಹಾಗೂ ಕೆಲವು ವಿಷಯಗಳನ್ನು ವುಝೂಗೆ ಭಂಗ ತರುವಂತಹದೆಂದು ಸಾರುವುದು ಕುರ್‌ಆನ್‌ನ ಬೋಧನೆಗಳಿಗೆ ವಿರುದ್ಧವಲ್ಲವೇ?*

ಕಸ್ರ್ ನಮಾಝ್‌ನ ಕುರಿತು ಕುರ್‌ಆನ್ ವಿವರಿಸುತ್ತದೆ. ಅದರಂತೆ ಕೇವಲ ಅಪಾಯಕಾರಿ ಯುದ್ಧ ಯಾತ್ರೆಗಳಲ್ಲಿ ಮಾತ್ರ ನಮಾಝ್ ಕಸ್ರ್ ಮಾಡಬಹುದಾಗಿದೆ. ಹಾಗಾದರೆ ಸಾಮಾನ್ಯ ಶಾಂತಿಯುತ ಪ್ರಯಾಣದ ವೇಳೆ ಕಸ್ರ್ ಮಾಡುವುದು ಕುರ್‌ಆನ್‌ಗೆ ವಿರುದ್ಧವಲ್ಲವೇ?

○ ವುಝೂವಿನ ಕುರಿತು ಕುರ್‌ಆನ್‌ನಲ್ಲಿ ಬಂದಿರುವ ಆಜ್ಞೆ ನಮಾಝ್‌ಗಾಗಿ ಎದ್ದಾಗ ವುಝೂ ಮಾಡಿರೆಂದೇ ಆಗಿದೆ. ಆದರೆ ಪ್ರವಾದಿ(ಸ) ಅವರು ಈ ಆಜ್ಞೆಯ ಇಂಗಿತವೇನೆಂಬುದನ್ನು ನಮಗೆ ತಿಳಿಸಿದ್ದಾರೆ. ಅದೇ ರೀತಿ ಕುರ್‌ಆನ್‌ನಲ್ಲಿ ಬರೇ ಮುಖ ತೊಳೆಯುವ ಪ್ರಸ್ತಾಪವಿದೆ. ಆದರೆ ಪ್ರವಾದಿ(ಸ) ಅವರು ಮುಖ ತೊಳೆಯುವ ಸರಿಯಾದ ಕ್ರಮ ಮತ್ತು ಅದರ ತಾತ್ಪರ್ಯವನ್ನು ಕಲಿಸಿದರು. ಅದರಲ್ಲಿ ಬಾಯಿ ಮುಕ್ಕಳಿಸುವುದು ಮತ್ತು ಮೂಗಿಗೆ ನೀರು ಹಾಕುವುದು ಕೂಡಾ ಸೇರಿದೆ ಎಂದು ಅವರು ನಮಗೆ ತಿಳಿಸಿದರು.

ಪವಿತ್ರ ಕುರ್‌ಆನ್‌ನಲ್ಲಿ ಕೇವಲ ತಲೆಸವರುವ ಆಜ್ಞೆಯಿದೆ. ಆದರೆ ತಲೆ ಸವರುವುದರಲ್ಲಿ ಕಿವಿಸವರುವುದು ಕೂಡಾ ಸೇರಿದೆಯೆಂದು ಪ್ರವಾದಿ(ಸ) ನಮಗೆ ಕಲಿಸಿಕೊಟ್ಟರು. ವುಝೂ ಆರಂಭಿಸುವಾಗ ನೀವು ವುಝೂ ಮಾಡುವ ಕೈಗಳನ್ನು ಮೊದಲು ತೊಳೆದು ಕೊಳ್ಳಿರಿ ಎಂದೂ ಪ್ರವಾದಿ(ಸ) ಕಲಿಸಿ ಕೊಟ್ಟರು. ಈ ವಿಷಯಗಳನ್ನು ಪವಿತ್ರ ಕುರ್‌ಆನ್‌ನಲ್ಲಿ ತಿಳಿಸಲಾಗಿಲ್ಲ. ಪವಿತ್ರ ಕುರ್‌ಆನ್‌ನ ಆಜ್ಞೆಯನ್ನು ವ್ಯಾಖ್ಯಾನಿಸುತ್ತಾ ಪ್ರವಾದಿ(ಸ) ಅವರು ನಮಗೆ ಇದನ್ನು ಕಲಿಸಿರುವರು. ಗ್ರಂಥದ ಜತೆಗೆ ಪ್ರವಾದಿಯನ್ನು ಕಳುಹಿಸುವ ಉದ್ದೇಶವು ಗ್ರಂಥದ ಉದ್ದೇಶವನ್ನು ನಮಗೆ ಸ್ಪಷ್ಟವಾಗಿ ತಿಳಿಸಿ ಅದನ್ನು ಕಾರ್ಯರೂಪಕ್ಕೆ ತಂದು ತೋರಿಸುವುದಾಗಿದೆ.

"ಈ ಕುರ್‌ಆನ್‌ನನ್ನು ನಿಮ್ಮ ಮೇಲೆ ನಾವು ಅವತೀರ್ಣಗೊಳಿಸಿರುವುದು ನಿಮ್ಮ ಮೇಲೆ ಅವತೀರ್ಣಗೊಂಡುದನ್ನು ನೀವು ಜನರಿಗೆ ವಿವರಿಸಿಕೊಡಲಿಕ್ಕಾಗಿದೆ."

ಎಂಬ ಕುರ್‌ಆನ್ ವಾಕ್ಯದಲ್ಲಿ ಇದೇ ವಾಸ್ತವಿಕತೆಯನ್ನು ವಿವರಿಸಲಾಗಿದೆ. ಅರ್ಥಾತ್: ನಾವು ಈ ಬೋಧನೆಯನ್ನು ಜನರಿಗೆ ನೇರವಾಗಿ ಕಳುಹಿಸಿ ಕೊಡುವ ಬದಲು ನಿಮ್ಮ ಕಡೆಗೆ ಅವತೀರ್ಣಗೊಳಿಸಿರುವುದೇಕೆಂದರೆ ಅದರಲ್ಲಿ ಜನರಿಗೆ ಇರುವ ಆಜ್ಞೆಗಳನ್ನು ನೀವು ಅವರ ಮುಂದೆ ಸ್ಪಷ್ಟಪಡಿಸುವುದಕ್ಕಾಗಿ.

ಈ ವಿಷಯವನ್ನು ನೀವು ಚೆನ್ನಾಗಿ ಅರಿತರೆ ನಿಮಗೆ ಒಂದೇ ವುಝೂವಿನಿಂದ ಅನೇಕ ನಮಾಝ್‌ಗಳನ್ನು ಮಾಡುವುದು ಹೇಗೆ ಸಿಂಧುವಾಗುತ್ತದೆಂಬ ಪ್ರಶ್ನೆಯ ಉತ್ತರವನ್ನು ಗ್ರಹಿಸುವಲ್ಲಿ ತೊಂದರೆ ಉಂಟಾಗದು. ನಿಜವಾಗಿ ಒಂದು ವುಝೂವಿನ ಸಿಂಧುತ್ವದ ಕಾಲಾವಧಿ ಎಷ್ಟೆಂಬುದನ್ನೂ ಮತ್ತು ಯಾವುದರಿಂದೆಲ್ಲಾ ಈ ಅವಧಿ ಕೊನೆಗೊಳ್ಳುತ್ತದೆಂಬುದನ್ನೂ ಪ್ರವಾದಿ(ಸ) ಅವರು ನಮಗೆ ಕಲಿಸಿ ಕೊಟ್ಟರು. ಪ್ರವಾದಿ(ಸ) ಅದನ್ನು ನಮಗೆ ತಿಳಿಸದಿರುತ್ತಿದ್ದರೆ ಒಬ್ಬ ವ್ಯಕ್ತಿ ವುಝೂ ಮಾಡಿದನಂತರ ಮೂತ್ರ ಶಂಕೆ ಮಾಡಿ ಅಥವಾ ವುಝೂ ಭಂಗವಾಗುವ ಇನ್ನಾವುದೇ ಕ್ರಿಯೆ ಅವನಿಂದ ಆದ ಬಳಿಕವೂ ಅವನು ನಮಾಝ್‌ಗಾಗಿ ನಿಂತು ಬಿಡುತ್ತಿದ್ದನು. ಅಥವಾ ನಮಾಝ್‌ನ ಮಧ್ಯೆ ಅಧೋವಾಯು ವಿಸರ್ಜನೆಯಾಗಿಯೂ ಅವನು ನಮಾಝ್ ಮುಂದುವರಿಸುತ್ತಿದ್ದನು. ನಮಾಝ್‌ಗೆ ವುಝೂ ಮಾಡಿಕೊಳ್ಳಬೇಕೆಂದು ಮಾತ್ರ ಪವಿತ್ರ ಕುರ್‌ಆನ್‌ನಲ್ಲಿ ತಿಳಿಸಲಾಗಿದೆ. ಆದರೆ ಆ ವುಝೂ ಎಲ್ಲಿಯ ತನಕ ಉಳಿದಿರುತ್ತದೆ ಅಥವಾ ಯಾವ ವಿಷಯಗಳಿಂದ ಭಂಗವಾಗುತ್ತದೆಂದು ಅದರಲ್ಲಿ ತಿಳಿಸಲಾಗಿಲ್ಲ. ಈಗ ತಾನೆ ವುಝೂ ಮಾಡಿಕೊಂಡು ಬಂದ ಒಬ್ಬ ವ್ಯಕ್ತಿಯು ಅಧೋವಾಯು ಹೊರಡುವುದರಿಂದ ವುಝೂ ಭಂಗವಾಗುವುದು ಹೇಗೆಂಬುದನ್ನು ಯಾವ ವ್ಯಕ್ತಿಯೂ ಸ್ವಯಂ ತಿಳಿದುಕೊಳ್ಳುವುದು ಅಸಾಧ್ಯವಾಗಿತ್ತು. ವುಝೂ ಭಂಗವಾಗುವ ಕಾರಣಗಳಾವುವು ಎಂದು ಪ್ರವಾದಿ(ಸ) ಅವರು ಸ್ಪಷ್ಟವಾಗಿ ತಿಳಿಸಿರುವಾಗ ಆ ಕಾರಣಗಳಾವುವೂ ಸಂಭವಿಸದೆ ಇರುವ ತನಕ ವುಝೂ ಉಳಿದಿರುತ್ತದೆ-ಅದಕ್ಕೆ ಎಷ್ಟು ಗಂಟೆಗಳು ಕಳೆದಿದ್ದರೂ ಸರಿಯೆ. ಅವುಗಳ ಪೈಕಿ ಯಾವುದಾದರೂ ಕಾರಣ ಸಂಭವಿಸಿದರೆ ವುಝೂ ಭಂಗವಾಗುವುದು.

ವ್ಯಕ್ತಿಯು ಈಗ ತಾನೆ ವುಝೂ ಮಾಡಿದ್ದು ಅವನ ಅಂಗಗಳು ಇನ್ನೂ ಒದ್ದೆಯಾಗಿಯೇ ಇದ್ದರೂ ಸರಿಯೆ.

ಕುರ್‌ಆನ್‌ನಲ್ಲಿ ಈ ಆಜ್ಞೆಯು 'ನೀವು ನಮಾಝ್‌ಗಾಗಿ ನಿಂತಾಗ ವುಝೂ ಮಾಡಿಕೊಳ್ಳಿರಿ' ಎಂಬ ಪದಗಳಲ್ಲಿ ಬಂದಿರುವುದರಿಂದ ಪ್ರತಿಯೊಂದು ನಮಾಝ್‌ಗೆ ಹೊಸ ವುಝೂ ಅಗತ್ಯವೆಂಬ ನಿಮ್ಮ ವಾದವನ್ನು ಒಪ್ಪಿಕೊಂಡರೆ ಅಂತಹುದೇ ವಾದದಿಂದ ಪ್ರತಿಯೊಬ್ಬ ಸ್ಥಿತಿವಂತ ಮುಸ್ಲಿಮನು ಪ್ರತಿವರ್ಷ ಹಜ್ಜ್ ಮಾಡುವುದು ಕುರ್‌ಆನ್‌ನ ಪ್ರಕಾರ ಕಡ್ಡಾಯವಾಗುತ್ತದೆ ಮತ್ತು ಝಕಾತ್ ಜೀವನದಲ್ಲಿ ಒಮ್ಮೆ ನೀಡಿದರೆ ಸಾಕು ಎಂದು ಕೂಡಾ ಸಮರ್ಥಿಸಬಹುದು. ಪ್ರವಾದಿ(ಸ) ಅವರ ವಿವರಣೆಯ ಹೊರತು ಕುರ್‌ಆನ್‌ಗೆ ಪ್ರತಿಯೊಬ್ಬನೂ ಮನಬಂದಂತೆ ಅರ್ಥ ಕಲ್ಪಿಸಿಕೊಳ್ಳಬಹುದು. ಯಾರ ಅಭಿಪ್ರಾಯವೂ ಇನ್ನೊಬ್ಬ ವ್ಯಕ್ತಿಯ ಪಾಲಿಗೆ ಪ್ರಮಾಣವೆನಿಸಲಾರದು.

ವುಝೂವಿನ ವಿಷಯದಲ್ಲಿ ನೀವು ಮಾಡಿದ ತಪ್ಪನ್ನೇ ಕಸ್ರ್‌ನ ಕುರಿತು ಪ್ರಶ್ನಿಸುವಲ್ಲಿಯೂ ಮಾಡಿರುವಿರಿ. ಪವಿತ್ರ ಕುರ್‌ಆನ್‌ನ ತಾತ್ಪರ್ಯವನ್ನು ನಿರ್ಣಯಿಸುವಲ್ಲಿ ಪ್ರವಾದಿವರ್ಯರ(ಸ) ವಿವರಣೆ-ವ್ಯಾಖ್ಯಾನಗಳನ್ನು ಕಡೆಗಣಿಸುವುದು ಒಂದು ದೊಡ್ಡ ಮೂಲಭೂತ ತಪ್ಪಾಗಿದೆ. ಅವುಗಳಲ್ಲಿರುವ ಅನೇಕ ಕೇಡುಗಳ ಪೈಕಿ ಕೆಲವನ್ನು ಉದಾಹರಣೆಗಾಗಿ ಮೇಲೆ ಪ್ರಸ್ತಾಪಿಸಿರುವೆನು. ಕುರ್‌ಆನ್‌ನಲ್ಲಿ ಕೇವಲ ಭಯದ ವಾತಾವರಣದಲ್ಲಿ ಕಸ್ರ್‌ನ ಪ್ರಸ್ತಾಪವಿದೆ. ಅಂತಹ ಪರಿಸ್ಥಿತಿಯಲ್ಲಿ ಇಮಾಮ್‌ನ ಹೊರತು ಇತರರಿಗೆ ಕೇವಲ ಒಂದು ರಕಅತ್ ನಮಾಝ್ ಮಾಡಿದರೆ ಸಾಕಾಗುತ್ತದೆ. ಆದರೆ ಈ ಆದೇಶದಲ್ಲಿ ಶಾಂತಿ ಕಾಲದ ಕಸ್ರ್ ನಮಾಝ್‌ನ ನಿರಾಕರಣೆಯಿಲ್ಲ. ಈ ಎರಡನೆಯ ವಿಧಿಯು ನಮಗೆ ಪ್ರವಾದಿ(ಸ) ಮೂಲಕ ದೊರೆಯುತ್ತದೆ. ಪ್ರಯಾಣದ ವೇಳೆ ಫಜ್ರ್ ಮತ್ತು ಮಗ್ರಿಬ್‌ನ ನಮಾಝ್ ಪೂರ್ಣವಾಗಿ ನಿರ್ವಹಿಸಬೇಕು. ಆದರೆ ಝುಹರ್, ಅಸರ್ ಮತ್ತು ಇಶಾಗಳ ಕಡ್ಡಾಯ ನಮಾಝನ್ನು ಕೇವಲ ಎರಡೆರಡು ರಕಅತ್ ನಿರ್ವಹಿಸಬೇಕು. ಈ ಕಸ್ರ್ ಕ್ರಮವನ್ನು ಕುರ್‌ಆನ್‌ಗೆ ವಿರುದ್ಧವೆಂದು ವಾದಿಸುವವನು ಎರಡು ದೊಡ್ಡ ತಪ್ಪುಗಳನ್ನು ಮಾಡುತ್ತಾನೆ. ಒಂದು ಆದೇಶವು ಕುರ್‌ಆನ್‌ನಲ್ಲಿ ಇಲ್ಲದಿರುವುದು ಮತ್ತು ಅದು ಖುರ್‌ಆನ್‌ಗೆ ವಿರುದ್ಧವಾಗಿರುವುದು ಸಮಾನವಾಗಿವೆ ಎಂದು ಅವನು ತಿಳಿಯುತ್ತಾನೆ. ವಾಸ್ತವದಲ್ಲಿ ಇವೆರಡರ ಮಧ್ಯೆ ದೊಡ್ಡ ಅಂತರವಿದೆ. ಎರಡನೆಯದಾಗಿ ಅವನು ಪ್ರವಾದಿ(ಸ) ಅವರ ಮಾಧ್ಯಮವನ್ನು ಬದಿಗಿರಿಸಿ ನೇರವಾಗಿ ಕುರ್‌ಆನನ್ನು ತೆಗೆದು ಕೊಳ್ಳಬಯಸುತ್ತಾನೆ. ನಿಜವಾಗಿ ಕುರ್‌ಆನ್ ನೇರವಾಗಿ ಬಂದುದಲ್ಲ. ಅದು ಪ್ರವಾದಿ(ಸ) ಅವರ ಮೂಲಕವೇ ಬಂದಿದೆ. ಪ್ರವಾದಿ(ಸ) ಕುರ್‌ಆನ್‌ನ ಉದ್ದೇಶವನ್ನು ಸ್ಪಷ್ಟವಾಗಿ ಜನರಿಗೆ ತಿಳಿಸುವಂತಾಗಲು ಅಲ್ಲಾಹನು ಅವರ ಮಾಧ್ಯಮವನ್ನೂ ನಿಶ್ಚಯಿಸಿ ಕೊಂಡನು. ಅಲ್ಲಾಹನು ಈ ಮಾಧ್ಯಮವನ್ನು ಕೈಗೊಂಡಿರುವುದು ವ್ಯರ್ಥವೆಂದು ಆವ್ಯಕ್ತಿ ಹೇಳುತ್ತಾನೆಯೇ? *(ತರ್ಜುಮಾನುಲ್ ಕುರ್‌ಆನ್ ಫೆಬ್ರವರಿ 1953)*

59

ಪಾಲುದಾರಿಕೆಯ ವ್ಯಾಪಾರದ ಝಕಾತ್

- ಇಬ್ಬರು ಪಾಲುದಾರಿಕೆಯಲ್ಲಿ ವ್ಯಾಪಾರ ಆರಂಭಿಸುತ್ತಾರೆ. ಒಬ್ಬನು ಬಂಡವಾಳ ಹೂಡುತ್ತಾನೆ ಮತ್ತು ಶ್ರಮವನ್ನೂ ವಹಿಸುತ್ತಾನೆ. ಇನ್ನೊಬ್ಬನು ಕೇವಲ ಶ್ರಮದಲ್ಲಿ ಪಾಲುದಾರನಾಗುತ್ತಾನೆ. ಲಾಭದ ವಿತರಣೆ ಹೇಗೆ ಆಗುತ್ತದೆಂದರೆ ಒಟ್ಟು ಲಾಭದ ಮೂರು ಪಾಲು ಮಾಡಿ ಒಂದು ಪಾಲು ಬಂಡವಾಳಕ್ಕೆ ಕೊಡುತ್ತಾರೆ. ಮತ್ತೆರಡು ಪಾಲನ್ನು ಇಬ್ಬರು ಸಮನಾಗಿ ಹಂಚಿಕೊಳ್ಳುತ್ತಾರೆ. ಈ ವ್ಯಾಪಾರದ ಝಕಾತ್‌ನ ಕುರಿತು ಎರಡು ಪ್ರಶ್ನೆಗಳೇಳುತ್ತವೆ. ಅವುಗಳಿಗೆ ಉತ್ತರಿಸಿ:

  (1) ಒಂದು ವೇಳೆ ಒಟ್ಟು ಬಂಡವಾಳದ ಝಕಾತ್ ತೆಗೆಯುವುದಾದರೆ ಎರಡನೆಯ ಪಾಲುದಾರ "ವ್ಯಾಪಾರದ ಬಂಡವಾಳವು ಕೇವಲ ಮೊದಲನೆಯ ಪಾಲುದಾರನದ್ದಾಗಿದ್ದು ಅದು ಅವನ ಒಡೆತನಕ್ಕೆ ಸೇರಿದೆ. ಅದಕ್ಕೆ ಅವನಿಗೆ ಪ್ರತ್ಯೇಕವಾಗಿ ಲಾಭವೂ ಸಿಗುತ್ತಿದೆ. ಆದುದರಿಂದ ಬಂಡವಾಳದ ಝಕಾತನ್ನು ಬಂಡವಾಳ ಹೂಡಿದವನೇ ನೀಡಬೇಕು" ಎಂದು ಆಕ್ಷೇಪವೆತ್ತಬಹುದು. ಎರಡನೆಯ ಪಾಲುದಾರನ ಈ ಆಕ್ಷೇಪ ಸರಿಯೇ?

  (2) ವ್ಯಾಪಾರದಲ್ಲಿ ಲಾಭ-ನಷ್ಟಗಳೆರಡೂ ಆಗಬಹುದು. ಝಕಾತ್‌ಗೆ ಸಂಬಂಧವಿರುವುದು ಲಾಭ-ನಷ್ಟದೊಂದಿಗಲ್ಲ ಬದಲಾಗಿ ಬಂಡವಾಳದೊಂದಿಗೆ. ವ್ಯಾಪಾರದಲ್ಲಿ ನಷ್ಟವಾದರೂ ಉಳಿದಿರುವ ಬಂಡವಾಳದ ಮೇಲೆ ಝಕಾತ್ ನೀಡಲಾಗುತ್ತದೆ. ಒಂದು ವೇಳೆ ನಷ್ಟವಾದ ವರ್ಷದಲ್ಲಿ ಝಕಾತ್ ತೆಗೆಯುವುದಾದರೆ ಎರಡನೆಯ ಪಾಲುದಾರನ ಪಾಲಿನ ಮೂರನೆಯ ಒಂದಂಶ ಮೊತ್ತವನ್ನು ಅವನ ಮುಂದಿನ ವರ್ಷದ ಲಾಭದಿಂದ ತೆಗೆಯಬೇಕಾಗುವುದು. ಮುಂದಿನ ವರ್ಷದ ಝಕಾತ್‌ನ ಮೂರನೆಯ ಒಂದಂಶವನ್ನೂ ಅವನು ಕೊಡಬೇಕಾಗುವುದು. ಇಂತಹ ಪರಿಸ್ಥಿತಿಯಲ್ಲಿ ಎರಡನೆಯ ಪಾಲುದಾರನಿಗೆ ಇದು ಝಕಾತ್ ಆಗಿರದೆ ಬಂಡವಾಳ ಹೂಡಿದವನ ಬಂಡವಾಳದ ಝಕಾತ್‌ನ ಒಂದಂಶವನ್ನೂ ಕೊಡುವ ತೆರಿಗೆ (Tax) ಆಗುತ್ತದೆ. ಈ ಪರಿಸ್ಥಿತಿಯು ಝಕಾತ್‌ನ ನೈಜ ಉದ್ದೇಶಕ್ಕೆ ವಿರುದ್ಧವಲ್ಲವೇ?

○ ನಿಮ್ಮ ಎರಡೂ ಪ್ರಶ್ನೆಗಳ ಉತ್ತರ ಈ ಕೆಳಗಿನಂತಿದೆ.

(1) ಎರಡನೆಯ ಪಾಲುದಾರನ ಆಕ್ಷೇಪವು ಸರಿಯಲ್ಲ. ವ್ಯಾಪಾರ ಆರಂಭಿಸಿದಾಗ ಡಿದ ಬಂಡವಾಳಕ್ಕೆ ಮಾತ್ರ ಝಕಾತ್ ಅನ್ವಯವಾಗುವುದಲ್ಲ. ವ್ಯಾಪಾರದ ಒಟ್ಟು ಲ್ಯದ ಮೇಲೆ ಝಕಾತ್ ಅನ್ವಯವಾಗುತ್ತದೆ. ಇಡೀ ವ್ಯಾಪಾರದಿಂದ ಮೊದಲು ಕಾತ್ ತೆಗೆಯುವುದೇ ಸರಿಯಾದ ಕ್ರಮ. ಅನಂತರ ನಿಶ್ಚಿತ ಅನುಪಾತಕ್ಕೆ ಅನುಗುಣವಾಗಿ ನವು ಇಬ್ಬರೊಳಗೆ ವಿತರಣೆಯಾಗಬೇಕು.

(2) ಯಾವುದಾದರೂ ವ್ಯಾಪಾರದ ಸರಕಿನ ಮೌಲ್ಯವು ಝಕಾತ್ ಅನ್ವಯವಾಗುವ ಷ್ಠ ಪ್ರಮಾಣಕ್ಕಿಂತ ಹೆಚ್ಚಾಗಿದ್ದರೆ ಅದರಿಂದ ಝಕಾತ್ ತೆಗೆಯಬೇಕು. ಇದುವೇ ಪಾರದ ಸರಕಿನ ಝಕಾತ್‌ನ ನಿಯಮ. ಯಾರು ಅದರಲ್ಲಿ ಕೇವಲ ಶ್ರಮದ ಲುದಾರನಾಗಿರುವನೋ ಅವನ ಶ್ರಮವು ಆ ವ್ಯಾಪಾರದ ಮೌಲ್ಯ ವೃದ್ಧಿಯಲ್ಲಿ ತನ್ನದೇ ಪಾತ್ರ ವಹಿಸಿರುತ್ತದೆ. ಆ ಮೌಲ್ಯ ವೃದ್ಧಿಯು ಕೇವಲ ಆರಂಭದಲ್ಲಿ ಹೂಡಿದ ಮೂಲ ಡವಾಳದ ಪರಿಣಾಮವಲ್ಲ. ಆದ್ದರಿಂದ ಆ ಝಕಾತ್‌ನ ಎರಡು ಪಾಲು ಬಂಡವಾಳ ಡಿದವನು ಸಂದಾಯ ಮಾಡಬೇಕು ಮತ್ತು ಒಂದು ಪಾಲು ಶ್ರಮದ ಪಾಲುದಾರನು ತಬೇಕು. *(ತರ್ಜುಮಾನುಲ್ ಕುರ್‌ಆನ್ ಜನವರಿ1953)*

60

ಮೊಮ್ಮಗನು ವಾರಸು ಹಕ್ಕಿನಿಂದ ವಂಚಿತನಾಗುವುದು

● *ತಾತನ ಜೀವಮಾನದಲ್ಲೇ ಯಾರದಾದರೂ ತಂದೆ ತೀರಿ ಕೊಂಡರೆ ಮೊಮ್ಮ ವಾರೀಸು ಹಕ್ಕಿನಲ್ಲಿ ಯಾವುದೇ ಪಾಲು ದೊರೆಯುವುದಿಲ್ಲ. ಇದು ಪ್ರ ಧಾರ್ಮಿಕ ವಿಧಿ. ಇದರ ಪ್ರಕಾರವೇ ಈಗಿನ ಸರಕಾರದಲ್ಲಿ ತೀರ್ಪು ವಿಧಿಸಲ್ಪಡುತ್ತ ಈ ಬಗ್ಗೆ ಇರುವ ವಿಭಿನ್ನ ವಿಚಾರಕೋನಗಳು ಯಾವುವು? ಆ ಪೈಕಿ ನಿ ಅಭಿಪ್ರಾಯದಲ್ಲಿ ಯಾವುದು ಇಸ್ಲಾಮಿ ಸ್ಫೂರ್ತಿಗೆ ಹತ್ತಿರವಾಗಿದೆ? ನಿಮ್ಮ ವಿ ಕೋನವು ನಾನು ಪ್ರಸ್ತಾಪಿಸಿದ್ದೇ ಆಗಿದ್ದರೆ ಅನಾಥರ ಸಂರಕ್ಷಣೆಯ ಕುರಿತು ಅತ್ಯ ಕಾಳಜಿ ವಹಿಸುವ ಇಸ್ಲಾಮಿ ವ್ಯವಸ್ಥೆಯು ಓರ್ವ ಅನಾಥನು, ಆತನ ತಂದೆಯ ತಾತನ ಉಪಸ್ಥಿತಿಯಲ್ಲಿ ಕಳಕೊಂಡ ಕಾರಣಕ್ಕಾಗಿ ತಾತನ ಸೊತ್ತಿನಲ್ಲಿರುವ ವಾ ಹಕ್ಕಿನಿಂದ ವಂಚಿತಗೊಳಿಸುತ್ತದೆ ಎಂಬ ಆರೋಪದಿಂದ ಪಾರಾಗುವುದು ಹೇ*

○ ತಾತನ ಉಪಸ್ಥಿತಿಯಲ್ಲಿ ಯಾವ ಮೊಮ್ಮಗನ ತಂದೆ ತೀರಿಕೊಂಡನೋ ಅ ತಾತನ ಆಸ್ತಿಯ ವಾರಸುದಾರನಾಗುವುದಿಲ್ಲ. ಅವನ ಪಿತೃ ಸೋದರರೇ ಆ ವಾರಸುದಾರರಾಗುತ್ತಾರೆ ಎಂಬುದು ಇಸ್ಲಾಮಿ ಕರ್ಮಶಾಸ್ತ್ರ ಪಂಡಿತರ ಒಮ್ಮ ಅಭಿಪ್ರಾಯ. ನನಗೆ ಈ ಒಮ್ಮತಾಭಿಪ್ರಾಯಕ್ಕೆ ಬೆಂಬಲವಾಗಿ ಕುರ್‌ಆನ್ ಅಥ ಹದೀಸ್‌ನಿಂದ ಯಾವುದೇ ಪುರಾವೆ ದೊರೆತಿಲ್ಲವಾದರೂ ಹಿಂದಿನಿಂದ ಇಂದಿನ ತ ಸಮುದಾಯದಲ್ಲಿ ಈ ವಿಷಯದ ಬಗೆಗೆ ಒಮ್ಮತವಿದೆ ಎಂಬುದೇ ಒಂದು ಬಲವ ಪುರಾವೆಯಾಗಿದೆ. ಆದ್ದರಿಂದ ಅದರ ವಿರುದ್ಧ ಅಭಿಪ್ರಾಯ ಪ್ರಕಟಿಸುವುದು ಕಷ್ಟ. ವಿಷಯವು ಬುದ್ಧಿಗೆ ನಿಲುಕುವಂತಹದೂ ಆಗಿದೆ. ಏಕೆಂದರೆ ಮೊಮ್ಮಗನು ತನ್ನ ತಂದೆ ಮೂಲಕ ಮಾತ್ರ ತನ್ನ ತಾತನ ಸೊತ್ತಿನಲ್ಲಿ ಹಕ್ಕುದಾರನಾಗುತ್ತಾನೆಯೇ ವಿನಾ ತನ್ನ ಸ್ವ ನೆಲೆಯಲ್ಲಲ್ಲ. ಅದೇ ರೀತಿ ಸೊಸೆಯು ತನ್ನ ಪತಿಯ ಮೂಲಕವೇ ಮಾವನ ಆಸ್ತಿಯ ಪಾಲು ಪಡೆಯುತ್ತಾಳೆಯೇ ಹೊರತು ತನ್ನ ಸ್ವಂತ ನೆಲೆಯಲ್ಲಲ್ಲ. ಒಬ್ಬನ ಪುತ್ರನು ಅ

ನಮಾನದಲ್ಲೇ ತೀರಿಕೊಂಡರೆ ಮತ್ತು ಅವನು ಮದುವೆಯೂ ಆಗಿರದಿದ್ದರೆ ಅವನ ು ಅನೂರ್ಜಿತಗೊಳ್ಳುತ್ತದೆಂಬುದನ್ನು ನೀವೇ ಒಪ್ಪಿಕೊಳ್ಳುವಿರಿ. ತಂದೆ ಸತ್ತಾಗ ಅವನ ಯಲ್ಲಿ ಅವನ ತೀರಿ ಕೊಂಡ ಮಗನ ಪಾಲನ್ನು ಪ್ರತ್ಯೇಕಿಸಿ ತೆಗೆದು ಅವನ ರಸುದಾರರಾದ ತಾಯಿ ಮತ್ತು ಸೋದರರಿಗೆ ಹಂಚಬೇಕೆಂದೂ ಯಾರೂ ಹೇಳುವುದಿಲ್ಲ. ನ ವಾರಸು ಹಕ್ಕು ಅವನು ಸತ್ತ ಕೂಡಲೇ ಅನೂರ್ಜಿತಗೊಳ್ಳುವುದೆಂಬುದನ್ನು ಎಲ್ಲರೂ ಳ್ಳುತ್ತಾರೆ. ಅದೇ ರೀತಿ ಆ ತೀರಿಕೊಂಡ ಮಗನಿಗೆ ಪತ್ನಿಯಿದ್ದರೆ ಆಕೆ ಕೂಡಾ ತನ್ನ ವನಿಂದ ವಾರಸು ಹಕ್ಕಿಗೆ ಅರ್ಹಳಲ್ಲ ಎಂದು ನೀವೇ ಒಪ್ಪಿಕೊಳ್ಳುವಿರಿ-ಆಕೆಗೆ ಮರು ದುವೆಯಾಗಿದ್ದರೂ ಆಗದಿದ್ದರೂ ಸರಿಯೆ. ಹಾಗಿರುವಾಗ ಅವನ ಮಗನು ಇದ್ದಾಗ ತ್ರ ಅವನ ಪಾಲು ಅನೂರ್ಜಿತಗೊಳ್ಳದಿರಲು ಕಾರಣವಾದರೂ ಏನಿದೆ?

ಇನ್ನು ಅನಾಥರ ಸಂರಕ್ಷಣೆಯ ಪ್ರಶ್ನೆ. ಶರೀಅತ್‌ನ ಪ್ರಕಾರ ಅವನ ತಂದೆಯ ೋದರರು ಅವನ ವಲೀ ಆಗಿರುವರು. ಅವನ ಪಾಲನೆ ಪೋಷಣೆಯ ಹೊಣೆ ಅವರ ಲಿದೆ. ಅಲ್ಲದೆ ಶರೀಅತ್‌ನಲ್ಲಿ ವಸೀಯತ್ ಅರ್ಥಾತ್: ಉಯಿಲಿನ ಆದೇಶವನ್ನೂ ತಲಾಗಿದೆ. ಏಕೆಂದರೆ ಸಾಯುವವನೊಬ್ಬನು ಸೊತ್ತು ಬಿಟ್ಟು ಹೋಗುವುದಾದರೆ ಮತ್ತು ನ ಕುಟುಂಬದಲ್ಲಿ ಅದರಲ್ಲಿ ಪಾಲಿಗೆ ಅರ್ಹರಾದವರು ಯಾರಾದರೂ ಉಳಿದಿದ್ದರೆ ರ ಹೆಸರಿಗೆ ಉಯಿಲು ಮಾಡಬಹುದಾಗಿದೆ. ಅವನು ತನ್ನ ಪೂರ್ಣ ಸೊತ್ತಿನ ೂರನೆಯ ಒಂದಂಶದ ತನಕ ಉಯಿಲು ಮಾಡಬಹುದಾಗಿದೆ. ಒಂದು ವೇಳೆ ಅವನಿಗೆ ಾಥ ಮೊಮ್ಮಗನಿದ್ದರೆ ವಿಧವೆ ಸೊಸೆಯಿದ್ದು ಅವರು ಆಶ್ರಯವಿಲ್ಲದವರಾಗಿದ್ದರೆ, ವಿಧವೆ ಗೆಯಿದ್ದರೆ ಅಥವಾ ಬಡವರಾದ ಸೋದರ ಸೋದರಿಯರಿದ್ದರೆ ಅವರ ಪರವಾಗಿ ಯಿಲು ಮಾಡುವ ಅವಕಾಶ ಕಲ್ಪಿಸಲಾಗಿದೆ. ಈ ಅವಕಾಶವನ್ನು ಇರಿಸಿರುವುದು ಕಾನೂನು ಕಾರ ವಾರಸು ಹಕ್ಕು ಪಡೆಯದೆ ಇರುವ ಕುಟುಂಬದ ಬಡವರ್ಗದ ಜನರಿಗೆ ನೆರವಾಗುವ ವಸ್ಥೆ ಮಾಡಲಿಕ್ಕಾಗಿಯೇ ಆಗಿದೆ. *(ತರ್ಜುಮಾನುಲ್ ಖುರ್‌ಆನ್: ಮಾರ್ಚ್ 1952)*

61

ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತ

● *ಕೂರುವ, ಏಳುವ ಶಿಷ್ಟಾಚಾರಗಳಿಂದ ಹಿಡಿದು ಜೀವನದ ದೊಡ್ಡ ದೊಡ್ಡ ಸಮಸ್ಯೆ ತನಕ ಎಲ್ಲ ವಿಷಯಗಳಲ್ಲಿ ಶರೀಅತ್ ನಿಯಮಗಳನ್ನು ಪಾಲಿಸುವಂತಹ ಒಂ ವಾತಾವರಣದಲ್ಲಿ ನಾನು ಬೆಳೆದಿದ್ದೇನೆ. ಈಗ ನಾನು ಕಾಲೇಜಿನಲ್ಲಿ ಶಿಕ್ಷ ಪಡೆಯುತ್ತಿದ್ದೇನೆ. ವಾತಾವರಣದ ಈ ಹಠಾತ್ ಬದಲಾವಣೆಯಿಂದಾಗಿ ಒಂ ವಿಚಿತ್ರ ಸಂಘರ್ಷದಲ್ಲಿ ಸಿಲುಕಿರುವೆನು. ಕೆಲವು ಇಸ್ಲಾಮ್ ವಿರೋಧಿ ಕ್ರಿಯೆಗ ನನ್ನಿಂದ ಸಂಭವಿಸಿವೆ. ಇಂತಹ ಯಾವುದಾದರೂ ಕಾರ್ಯ ಆದಾಗ ನನ್ನ ಆ ಸಾಕ್ಷಿಯು ನನ್ನನ್ನು ಹಳಿಯುತ್ತದೆ. ನಾನು ಪಶ್ಚಾತ್ತಾಪ ಪಟ್ಟು ಅಲ್ಲಾಹನ ಕ ಮರಳುತ್ತೇನೆ. ಆದರೆ ಕೆಟ್ಟ ಸಹವಾಸ ಮತ್ತು ಶೈತಾನನ ಪ್ರಲೋಭನೆಯಿಂದ ಅದೇ ಕ್ರಿಯೆ ನನ್ನಿಂದ ಪುನಃ ಪುನಃ ಆಗುತ್ತಿರುತ್ತದೆ. ಈ ರೀತಿ ಪದೇ ಪ ಪಶ್ಚಾತ್ತಾಪ ಪಟ್ಟು ಅದನ್ನು ಮುರಿದಿದ್ದೇನೆ. ಈಗ ನಾನು ನನ್ನನ್ನು ಸುಧಾ ಕೊಂಡಿರುವೆನು. ಇನ್ನು ಆ ಪಾಪಕಾರ್ಯದಲ್ಲಿ ಸಿಲುಕುವ ಅಪಾಯ ಪ್ರತ್ಯಕ್ಷ ಇಲ್ಲವೆಂದೇ ಕಾಣುತ್ತದೆ. ಆದರೆ ಪುನಃ ಪುನಃ ಪಶ್ಚಾತ್ತಾಪ ಮುರಿದು ಮಾಡಿದ ನ ಪಾಪಗಳು ಕ್ಷಮಿಸಲ್ಪಡುವವೇ ಎಂಬ ಅನುಮಾನ ನನ್ನನ್ನು ಕಾಡುತ್ತಿರುತ್ತದೆ. ರೀತಿ ಪಶ್ಚಾತ್ತಾಪವನ್ನು ಮುರಿಯುವುದಕ್ಕೆ ಏನಾದರೂ ಪ್ರಾಯಶ್ಚಿತ್ತವಿದೆಯೆ ಇಂತಹ ಪಶ್ಚಾತ್ತಾಪ ಮುರಿಯುವಿಕೆಗೆ ಪರಿಹಾರವೇನು?*

○ ಪಾಪಕ್ಕೆ ಪರಿಹಾರ ಪಶ್ಚಾತ್ತಾಪ ಮತ್ತು ಸುಧಾರಣೆಯಾಗಿದೆ. ಒಬ್ಬ ವ್ಯಕ್ತಿಯ ಪಶ್ಚಾತ್ತಾಪ ಪಟ್ಟು ಅದನ್ನು ಎಷ್ಟೇ ಸಲ ಮುರಿದಿದ್ದರೂ ಪುನಃ ಪಶ್ಚಾತ್ತಾಪ ಪಡಬೇಕ ಸುಧಾರಣೆಯ ಹೊಸ ಪ್ರಯತ್ನವನ್ನೂ ಮಾಡಬೇಕು. ಇದರ ಉದಾಹರಣೆ ಬೆಟ್ಟವನ ಏರಲು ಪ್ರಯತ್ನಿಸುವ ವ್ಯಕ್ತಿಯಂತಿದೆ. ಅವನು ಪದೇ ಪದೇ ಜಾರಿ ಬೀಳುತ್ತಾನೆ. ಆದ ಅವನು ಎಷ್ಟು ಸಲ ಜಾರಿಬಿದ್ದರೂ ಪುನಃ ಪುನಃ ಏರುವ ಪ್ರಯತ್ನ ಮಾಡುತ್ತಿರುವು ಅವನು ಉದ್ದಿಷ್ಟ ಗುರಿಯನ್ನು ತಲುಪುವ ವಿಧಾನವಾಗಿದೆ. ಯಾವ ವ್ಯಕ್ತಿ ಜಾರಿಬಿದ್ದ ಮೇ ಮತ್ತೆ ಎದ್ದು ಏರುವ ಪ್ರಯತ್ನ ಮಾಡುವುದಿಲ್ಲವೋ ಅವನೆಂದೂ ತನ್ನ ಗುರಿಯನ

ತಲುಪಲಾರನು. ಇದೇ ರೀತಿ ನೈತಿಕ ಉನ್ನತಿಗೆ ಏರಬಯಸುವವನು ಪ್ರತಿಯೊಂದು ತಪ್ಪಿನ ನಂತರ ಪಶ್ಚಾತ್ತಾಪ ಪಟ್ಟು, ತನ್ನನ್ನು ಸುಧಾರಿಸಿಕೊಂಡು ಸನ್ಮಾರ್ಗದಲ್ಲಿ ಸ್ಥಿರವಾಗಿರಲು ಪ್ರಯತ್ನ ಮಾಡುತ್ತಿರಬೇಕು. ಆಗ ಅಲ್ಲಾಹನು ಅವನ ಪಾಪಗಳಿಗಾಗಿ ಅವನನ್ನು ಹಿಡಿಯಲಾರನು. ಅವನು ಚಾರಿತ್ರದ ಉನ್ನತಿಗೆ ಏರುವುದರಿಂದ ಅವನನ್ನು ವಂಚಿಸಲಾರನು. ಆದರೆ ಪಾಪ ಕೃತ್ಯವೆಸಗಿ ಅದರಲ್ಲೇ ಬಿದ್ದು ಕೊಂಡಿರುವವರು ಅದರ ಕೆಟ್ಟ ಪರಿಣಾಮದಿಂದ ಸುರಕ್ಷಿತರಾಗಲಾರರು.

ನಿಮ್ಮ ತಪ್ಪುಗಳ ಬಗ್ಗೆ ನಿಮ್ಮ ಮನದಲ್ಲಿ ಖೇದ ಮತ್ತು ಪಶ್ಚಾತ್ತಾಪದ ಭಾವನೆ ಇರಲೇಬೇಕು. ಜೀವನ ಪರ್ಯಂತ ಪಾಪ ವಿಮೋಚನೆಗಾಗಿ ಪ್ರಾರ್ಥಿಸುತ್ತಲೂ ಇರಬೇಕು. ಆದರೆ ಈ ಖೇದ ಮತ್ತು ಪಶ್ಚಾತ್ತಾಪವು ನಿಮ್ಮನ್ನೆಂದೂ ನಿಮ್ಮ ಪ್ರಭುವಿನ ಕೃಪೆಯಿಂದ ನಿರಾಶನಾಗಿ ಮಾಡಬಾರದು. ಏಕೆಂದರೆ ಇಂತಹ ನಿರಾಶೆಯು ಅಲ್ಲಾಹನ ಬಗೆಗೆ ಅಶುಭ ನಿರೀಕ್ಷೆಯಾಗಿದೆ. ಅಲ್ಲದೆ ಶಿಕ್ಷೆಯಿಂದ ರಕ್ಷಣೆ ಹೊಂದುವ ಆಶೆ ಉಳಿಯದಿರುವಾಗ ಮನುಷ್ಯನನ್ನು ಶೈತಾನ್ ವಂಚಿಸಿ ಪಾಪಗಳ ಸುಳಿಯಲ್ಲಿ ಶಾಶ್ವತವಾಗಿ ಇರಿಸುವ ಭಯವೂ ಇದೆ.

ಪಶ್ಚಾತ್ತಾಪವನ್ನು ದೃಢಪಡಿಸಲು ಮತ್ತು ಪಶ್ಚಾತ್ತಾಪ ಮುರಿಯುವುದರಿಂದ ತಡೆಯಲು ಒಂದು ಪರಿಣಾಮಕಾರಿ ಉಪಾಯವೆಂದರೆ ಐಚ್ಛಿಕ ನಮಾಝ್, ಐಚ್ಛಿಕ ಉಪವಾಸ ಮತ್ತು ಐಚ್ಛಿಕ ದಾನ ಧರ್ಮಗಳನ್ನು ಹೆಚ್ಚೆಚ್ಚು ಮಾಡುತ್ತಿರಬೇಕು. ಇವು ಪಾಪಗಳ ಪ್ರಾಯಶ್ಚಿತ್ತವೂ ಆಗುತ್ತವೆ. ಅಲ್ಲಾಹನ ಕರುಣೆಯನ್ನು ತನ್ನೆಡೆಗೆ ಒಲಿಸಿಕೊಳ್ಳುವ ವಿಧಾನವೂ ಆಗಿದೆ. ಅಲ್ಲದೆ ಅದು ಪಾಪದ ಒಲವಿನಿಂದ ಮನಸ್ಸನ್ನು ತಡೆ ಹಿಡಿಯಲು ಬೇಕಾಗುವಷ್ಟು ಅವನನ್ನು ಬಲಶಾಲಿಯಾಗಿಯೂ ಮಾಡುತ್ತದೆ.

ಪಶ್ಚಾತ್ತಾಪದ ಜತೆಗೆ ಒಬ್ಬ ವ್ಯಕ್ತಿ ಆಣೆಯನ್ನೂ ಹಾಕಿದ್ದರೆ ಮತ್ತು ಅದನ್ನು ಮುರಿದರೆ ಅದಕ್ಕೆ ಪ್ರಾಯಶ್ಚಿತ್ತ (ಕಫ್ಫಾರ) ಮಾಡುವುದು ಕಡ್ಡಾಯವಾಗಿದೆ. ಆಣೆಯನ್ನು ಮುರಿಯುವುದರ ಪ್ರಾಯಶ್ಚಿತ್ತ ಹತ್ತು ಮಂದಿ ದರಿದ್ರರಿಗೆ ಉಣ ಬಡಿಸುವುದು ಅಥವಾ ಮೂರು ದಿನಗಳ ಉಪವಾಸವ್ರತ ಆಚರಿಸುವುದಾಗಿದೆ.

(ತರ್ಜುಮಾನುಲ್ ಕುರ್‌ಆನ್: ಜೂನ್-ಜುಲೈ 1952)

62

ನೈಜ ಪಶ್ಚಾತ್ತಾಪ

- *ಈ ಹಿಂದೆ ಮಹಾ ಪಾಪಗಳಲ್ಲಿ ಸಿಲುಕಿದ್ದೆ. ಅನಂತರ ಪಶ್ಚಾತ್ತಾಪ ಪಟ್ಟು ಮರಳಿದೆ. ಇಸ್ಲಾಮೀ ಆಂದೋಲನದಿಂದ ಪ್ರಭಾವಿತನಾಗಿ ಓರ್ವ ಪ್ರಜ್ಞಾವಂತ ಮುಸ್ಲಿಮ್ ಆಗಿರುವೆನು. (ಅಲ್ಲಾಹನಿಗೆ ವಂದನೆ) ಆದರೆ ರಾತ್ರಿ ಹಗಲೆನ್ನದೆ ನನ್ನ ಪಾರತ್ರಿಕ ಗತಿಯ ಬಗ್ಗೆ ಚಿಂತಿತನಾಗಿರುವೆನು. ಪರಲೋಕದ ಬದಲು ಈ ಲೋಕದಲ್ಲೇ ನನ್ನ ಕರ್ಮಗಳ ಫಲವನ್ನು ಅನುಭವಿಸ ಬಯಸುತ್ತೇನೆ. ಆದರೆ ಇಲ್ಲಿ ಇಸ್ಲಾಮೀ ಶಿಕ್ಷಾ ಪದ್ಧತಿ ಜಾರಿಯಲ್ಲಿಲ್ಲವೆಂಬುದು ವಿಷಾದನೀಯ. ಈಗ ತಾವು ನನಗೆ ನೇರವಾಗಿ ನನಗೊಂದು ಸೂಕ್ತ ಮಾರ್ಗೋಪಾಯವನ್ನು ತೋರಿಸಿ.*

○ ಒಬ್ಬ ಸತ್ಯವಿಶ್ವಾಸಿ ಮನಃ ಪೂರ್ವಕವಾಗಿ ಪಶ್ಚಾತ್ತಾಪ ಪಟ್ಟು ಒಂದು ಪಾಪ ಕೃತ್ಯದಿಂದ ಮರಳಿದರೆ ಹಾಗೂ ಮತ್ತೆಂದೂ ಆ ಪಾಪ ಕಾರ್ಯವನ್ನು ಪುನರಾವರ್ತಿಸದಿದ್ದರೆ ಅಲ್ಲಾಹನು ಅಂತಹ ಪಾಪವನ್ನು ಖಂಡಿತ ಮನ್ನಿಸುತ್ತಾನೆ. ಪಶ್ಚಾತ್ತಾಪದ ಜತೆಗೆ ವ್ಯಕ್ತಿಯು ಅಲ್ಲಾಹನ ಮಾರ್ಗದಲ್ಲಿ ಏನಾದರೂ ವೆಚ್ಚ ಮಾಡಿದರೆ ಅಥವಾ ಅಲ್ಲಾಹನು ತನ್ನ ಕರುಣೆಯಿಂದ ನನ್ನ ಪಾಪವನ್ನು ಮನ್ನಿಸಿಯಾನು ಎಂಬ ನಿರೀಕ್ಷೆಯಿಂದ ಏನಾದರೂ ತ್ಯಾಗ ಮಾಡಿದರೆ ಇದು ಪಶ್ಚಾತ್ತಾಪ ಸ್ವೀಕಾರದಲ್ಲಿ ಹೆಚ್ಚು ಸಹಾಯಕವಾಗುವುದು. ಅಲ್ಲಾಹನು ನಿಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸಿ ನಿಮಗೆ ಸ್ಥಿರ ಚಿತ್ತತೆಯನ್ನು ದಯಪಾಲಿಸಲಿ.

(ತರ್ಜುಮಾನುಲ್ ಖುರ್‌ಆನ್, ಸೆಪ್ಟಂಬರ್- 1962)

63

ಕನಸಿನಲ್ಲಿ ಪ್ರವಾದಿ ದರ್ಶನ

"ಯಾರು ನನ್ನನ್ನು ಕನಸಿನಲ್ಲಿ ನೋಡಿದನೋ ಅವನು ನನ್ನನ್ನೇ ನೋಡಿದಂತೆ. ಏಕೆಂದರೆ ಶೈತಾನನು ನನ್ನ ವೇಷದಲ್ಲಿ ಪ್ರತ್ಯಕ್ಷನಾಗಲಾರ" ಎಂದು ಪ್ರವಾದಿ(ಸ) ಹೇಳಿರುವರು.

ಈ ಹದೀಸ್‌ನ ಸರಿಯಾದ ತಾತ್ಪರ್ಯವೇನು? ಪ್ರವಾದಿ(ಸ) ಅವರನ್ನು ಯಾವ ರೂಪದಲ್ಲಿ ಕನಸಿನಲ್ಲಿ ಕಂಡರೂ ಅದು ಅವರನ್ನೇ ಕಂಡದ್ದೆಂದು ಪರಿಗಣಿಸಲಾಗುವುದೇ? ಪ್ರವಾದಿವರ್ಯರನ್ನು(ಸ) ಐರೋಪ್ಯ ಉಡುಗೆಯಲ್ಲಿ ಕಂಡರೂ ಅವರನ್ನು ಕಂಡಂತೆಯೇ ಎಂದು ಪರಿಗಣಿಸಲಾಗುವುದೇ? ಇಂತಹ ಕನಸು ಮನುಷ್ಯನ ಜೀವಮಾನದ ಮೇಲೆ ಏನಾದರೂ ಪ್ರಭಾವ ಬೀರುತ್ತದೆಯೇ?

○ ಈ ಹದೀಸ್‌ನ ಸರಿಯಾದ ತಾತ್ಪರ್ಯವೇನೆಂದರೆ ಪ್ರವಾದಿ(ಸ) ಅವರನ್ನು ಸಿನಲ್ಲಿ ಅವರ ಮೂಲ ರೂಪದಲ್ಲಿ ನೋಡಿದವನು ವಾಸ್ತವದಲ್ಲಿ ಅವರನ್ನು ೀಡಿದಂತೆಯೇ ಆಗಿದೆ. ಏಕೆಂದರೆ ಶೈತಾನನು ಅವರ ರೂಪ ಧರಿಸಿ ಬಂದು ಯಾರನ್ನೂ ಚಿಸಲು ಸಾಧ್ಯವಿಲ್ಲ. ಈ ವ್ಯಾಖ್ಯಾನವನ್ನು ಹ. ಮುಹಮ್ಮದ್ ಬಿನ್ ಸೀರೀನ್(ರ) ರು ನೀಡಿರುವರು. ಇಮಾಮ್ ಬುಖಾರಿ(ರ) ಅವರು ತಮ್ಮ 'ಕಿತಾಬುತ್ತಾಬೀರ್'ನಲ್ಲಿ ರ ಈ ಮಾತನ್ನು ಉದ್ಧರಿಸಿರುವರು" "ನೋಡುವವನು ಅವರನ್ನು ಅವರ ರೂಪದಲ್ಲಿಯೇ ೀಡಿದರೆ." ಅಲ್ಲಾಮಾ ಇಬ್ನು ಹಜರ್(ರ) ಅವರು ಈ ರೀತಿ ವರದಿ ಮಾಡಿರುವರು ಯಾರಾದರೂ ನಾನು ಕನಸಿನಲ್ಲಿ ಪ್ರವಾದಿ(ಸ) ಅವರನ್ನು ಕಂಡಿರುವೆನು ಎಂದು ಹೇಳಿದರೆ, ಾವ ರೂಪದಲ್ಲಿ ಕಂಡಿದ್ದೀರಿ ಎಂದು ಅವರು ವಿಚಾರಿಸುತ್ತಿದ್ದರು. ಆತ ಅವರ ರೂಪಕ್ಕೆ ುಗುಣವಲ್ಲದ ಯಾವುದಾದರೊಂದು ರೂಪವನ್ನು ಹೇಳಿದರೆ "ನೀನು ವಾದಿವರ್ಯರನ್ನು(ಸ) ಕಂಡಿಲ್ಲ" ಎಂದು ಹೇಳುತ್ತಿದ್ದರು. ಹಾಕಿಮ್ ಅವರು ವರದಿ ಡಿರುವಂತೆ ಹ.ಇಬ್ನ್ ಅಬ್ಬಾಸ್(ರ) ಅವರೂ ಹೀಗೆಯೇ ಮಾಡುತ್ತಿದ್ದರು. ನಿಜವಾಗಿ ದೀಸ್‌ನ ಪದಗಳೂ ಈ ತಾತ್ಪರ್ಯವನ್ನೇ ಅನುಮೋದಿಸುತ್ತವೆ. ಈ ಹದೀಸ್ ಹಲವು

ವರದಿಗಾರರಿಂದ ವಿಭಿನ್ನ ಪದಗಳಲ್ಲಿ ವರದಿಯಾಗಿವೆ. ಅವುಗಳ ತಾತ್ಪರ್ಯ "ಶೈತಾ ಪ್ರವಾದಿವರ್ಯರ(ಸ)" ವೇಷದಲ್ಲಿ ಬರಲಾರ" ಎಂದೇ ಆಗಿದೆ. "ಶೈತಾನನು ಯ ರೀತಿಯಲ್ಲೂ ಪ್ರವಾದಿ(ಸ) ಅವರನ್ನು ನೋಡುತ್ತಿರುವಂತೆ ಜನರನ್ನು ವಂಚನೆಗೆ ಪಡಿಸಲಾರನೆಂಬುದು ಇದರ ತಾತ್ಪರ್ಯವಲ್ಲ.

ಇವರ ಜತೆಗೆ ಇನ್ನೊಂದು ವಿಷಯವನ್ನೂ ತಿಳಿದಿರಬೇಕು. ಒಬ್ಬನು ಪ್ರವಾದಿ ಅವರನ್ನು ಕನಸಿನಲ್ಲಿ ಕಂಡು ಅವರಿಂದ ಏನಾದರೂ ಆಜ್ಞೆ ಅಥವಾ ನಿಷೇಧವನ್ನು ಕೇಳಿ ಅಥವಾ ಧರ್ಮಕ್ಕೆ ಸಂಬಂಧಿಸಿ ಏನಾದರೂ ವಿಧಿಯನ್ನು ಅವರಿಂದ ಪಡೆದರೆ ಆತನು ಕುರ್‌ಆನ್ ಮತ್ತು ಸುನ್ನತ್‌ಗೆ ಅನುಗುಣವಾಗಿದೆಯೇ ಎಂಬುದನ್ನು ಖಚಿತ ಪಡಿಸಿಕೊ ತನಕ ಅದನ್ನು ಅನುಸರಿಸುವಂತಿಲ್ಲ. ಅಲ್ಲಾಹನು ಮತ್ತು ಪ್ರವಾದಿ(ಸ) ನಿಮಗೆ ಧಮ ವಿಷಯವನ್ನು ಕನಸು, ದಿವ್ಯ ಪ್ರೇರಣೆ ಮತ್ತು ಅಂತರ್ಜ್ಞಾನಗಳ ವಶಕ್ಕೆ ಒಪ್ಪಿಸಿಲ್ಲ. ಸ ಮಿಥ್ಯ ಹಾಗೂ ಸರಿ-ತಪ್ಪುಗಳನ್ನು ಒಂದು ಸ್ಪಷ್ಟ ಗ್ರಂಥ ಮತ್ತು ಪ್ರಾಮಾಣಿಕ ಸುನ್ನತ್ ಇರಿಸಲಾಗಿದೆ. ಅವುಗಳನ್ನು ಎಚ್ಚರಿಕೆಯ ಅವಸ್ಥೆಯಲ್ಲೇ ಪೂರ್ಣ ಪ್ರಜ್ಞೆಯೊಂದಿಗೆ ನೋ ಸನ್ಮಾರ್ಗವನ್ನು ಕಂಡು ಕೊಳ್ಳಬಹುದಾಗಿದೆ. ಒಂದು ವೇಳೆ ಯಾವುದಾದರೂ ಕನಸು, ದಿ ಪ್ರೇರಣೆ ಅಥವಾ ಅಂತರ್ಜ್ಞಾನವು ಕುರ್‌ಆನ್ ಮತ್ತು ಸುನ್ನತ್‌ಗೆ ಅನುಗುಣವಾಗಿ ಪ್ರವಾದಿ(ಸ) ಅವರ ದರ್ಶನವನ್ನು ಕನಸಿನಲ್ಲಿ ಮಾಡಿಸಿದುದಕ್ಕೆ ಅಲ್ಲಾಹನಿಗೆ ಕೃತ ಸಲ್ಲಿಸಿರಿ. ಒಂದು ವೇಳೆ ಅದು ಕುರ್‌ಆನ್, ಸುನ್ನತ್‌ಗೆ ವಿರುದ್ಧವಾಗಿದ್ದರೆ ಅದ ತಿರಸ್ಕರಿಸಿರಿ ಮತ್ತು ಇಂತಹ ವೈಚಾರಿಕ ಗೊಂದಲಗಳಲ್ಲಿ ಬೀಳುವುದರಿಂದ ಅಲ್ಲಾ ಅಭಯ ಯಾಚಿಸಿರಿ.

ಈ ಎರಡು ವಿಷಯಗಳನ್ನು ತಿಳಿಯದೆ ಅನೇಕ ಜನರು ಪಥಭ್ರಷ್ಟರಾಗಿದ್ದಾ ಈಗಲೂ ಆಗುತ್ತಿದ್ದಾರೆ. ಕನಸಿನಲ್ಲಿ ಪ್ರವಾದಿ(ಸ) ಒಬ್ಬ ವ್ಯಕ್ತಿಯನ್ನು ಅಥವಾ ಅ ಕಟ್ಟಿಕೊಂಡ ಪಂಥವನ್ನು ಅನುಮೋದಿಸಿದುದಾಗಿ ಕಂಡ ಕಾರಣ ಒಂದು ದುಷ್ಟ ಪಂ ಅನುಯಾಯಿಗಳಾಗಿ ಬಿಟ್ಟ ಅನೇಕ ಜನರನ್ನು ನಾನು ಬಲ್ಲೆ. ಕನಸಿನಲ್ಲಿ ಯಾವುದೇ ರೂ ವ್ಯಕ್ತಿಯನ್ನು ಪ್ರವಾದಿ(ಸ) ಅವರ ಹೆಸರಲ್ಲಿ ಕಂಡರೆ ಅದು ಪ್ರವಾದಿಯ ದರ್ಶ ಮಾಡಿದಂತಲ್ಲ ಎಂಬ ವಾಸ್ತವಿಕತೆಯು ಅವರಿಗೆ ತಿಳಿದಿದ್ದರೆ ಅವರು ಈ ರಿ ಪಥಭ್ರಷ್ಟರಾಗುತ್ತಿರಲಿಲ್ಲ. ಒಂದು ವೇಳೆ ಪ್ರವಾದಿವರ್ಯರ(ಸ) ದರ್ಶನವೇ ಕನಸಿನ ಆದರೂ ಯಾವುದೇ ಧಾರ್ಮಿಕ ವಿಧಿಯನ್ನು ಅಂತಹ ಕನಸಿನಿಂದ ಪಡೆಯುವಂತಿ ಎಂಬುದೂ ಅವರಿಗೆ ತಿಳಿಯದೆ ಹೋಗಿದೆ.

ಕೆಲವರು ಒಂದು ಸಂಶಯವನ್ನು ಮುಂದಿರಿಸುತ್ತಾರೆ. ಶೈತಾನನ ವಂಚನೆಯಿಂದ ಸುರಕ್ಷಿತವಾಗಿರಲು ವ್ಯಕ್ತಿಯೊಬ್ಬನು ಪ್ರವಾದಿ(ಸ) ಅವರನ್ನು ಕನಸಿನಲ್ಲಿ ಅವರ ನೈಜ ರೂಪದಲ್ಲಿ ಕಂಡಿರಬೇಕೆಂಬ ಶರ್ತವಿದ್ದರೆ ಇದರಿಂದ ಕೇವಲ ಪ್ರವಾದಿವರ್ಯರನ್ನು(ಸ) ಅವರ ಜೀವಮಾನದಲ್ಲಿ ಕಂಡವರಿಗೆ ಮಾತ್ರ ಪ್ರಯೋಜನವಾದೀತು. ಅವರ ನಂತರದ ಕಾಲದವರು. ತಾವು ಕನಸಿನಲ್ಲಿ ಕಂಡಿರುವುದು ಪ್ರವಾದಿವರ್ಯರನ್ನೇ(ಸ) ಎಂಬುದನ್ನು ಖಚಿತ ಪಡಿಸಿಕೊಳ್ಳುವ ವಿಧಾನವಾದರೂ ಏನು? ಅವರಿಗೆ ಈ ಹದೀಸ್‌ನಿಂದ ಯಾವ ರೀತಿಯ ಆಶ್ವಾಸನೆ ದೊರೆಯುತ್ತದೆ? ಇದಕ್ಕೆ ಉತ್ತರವೇನೆಂದರೆ ಪ್ರವಾದಿಯ ನಂತರದ ಕಾಲದವರು ತಾವು ಕನಸಿನಲ್ಲಿ ಕಂಡದ್ದು ಪ್ರವಾದಿವರ್ಯರನ್ನೇ(ಸ) ಎಂಬುದನ್ನು ಖಚಿತ ಪಡಿಸಿ ಕೊಳ್ಳುವುದು ಅಸಾಧ್ಯ. ಆದರೆ ಸ್ವಪ್ನದಲ್ಲಿ ಕಂಡದ್ದು ಕುರ್‌ಆನ್ ಮತ್ತು ಹದೀಸ್‌ಗೆ ಅನುಗುಣವಾಗಿದೆಯೇ ಇಲ್ಲವೇ ಎಂಬುದನ್ನು ಖಚಿತ ಪಡಿಸಿಕೊಳ್ಳಬಹುದು. ಅದು ಕುರ್‌ಆನ್ ಸುನ್ನತ್‌ಗೆ ಅನುಗುಣವಾಗಿದ್ದರೆ ಕನಸಿನಲ್ಲಿ ಪ್ರವಾದಿ ದರ್ಶನವಾಗಿರುವ ಸಾಧ್ಯತೆಯೇ ಹೆಚ್ಚು. ಏಕೆಂದರೆ ಶೈತಾನನು ಜನರಿಗೆ ಸನ್ಮಾರ್ಗದರ್ಶನ ಮಾಡಿಸಲಿಕ್ಕಾಗಿ ವೇಷ ಪಲ್ಲಟ ಮಾಡಲಾರನೆಂಬುದು ಖಚಿತ. *(ತರ್ಜುಮಾನುಲ್ ಕುರ್‌ಆನ್ ಜುಲೈ 1956)*

64

ಪತ್ನಿ ಮತ್ತು ಹೆತ್ತವರ ಹಕ್ಕುಗಳು

- *ನಾನು ನಿಮ್ಮ ಪುಸ್ತಕಗಳನ್ನು ಓದಿದ್ದೇನೆ. ಅದರಿಂದ ಮನಸ್ಸಿನಲ್ಲಿದ್ದ ಅನೇಕ ಸಿಕ್ಕುಗಳು ನಿವಾರಣೆಯಾಗಿವೆ. ಆದರೆ ಒಂದು ವಿಷಯ ಮೊದಲಿನಿಂದಲೇ ನನ್ನ ಮನಸ್ಸನ್ನು ಚುಚ್ಚುತ್ತಿದೆ. ಒಂದೆಡೆ ಇಸ್ಲಾಮ್‌ನಲ್ಲಿ ಮಹಿಳೆಯ ಸ್ಥಾನ ಮಾನವನ್ನು ಉನ್ನತಗೊಳಿಸಲಾಗಿದೆ. ಇನ್ನೊಂದೆಡೆ ಪತ್ನಿಯೆಂಬ ನೆಲೆಯಲ್ಲಿ ಕೆಲವು ವಿಷಯಗಳಲ್ಲಿ ಅವಳನ್ನು ಕೀಳಾಗಿ ಕಾಣಲಾಗಿದೆ. ಉದಾ: ಆಕೆಗೆ ಮೂರು ಸವತಿಯರನ್ನು ಸಹಿಸುವಂತಹ ಪರಿಸ್ಥಿತಿಯನ್ನು ನಿರ್ಮಿಸಲಾಗಿದೆ. ಪ್ರಕೃತಿ ದತ್ತವಾಗಿಯೇ ಮಹಿಳೆಯರಲ್ಲಿ ಅಸೂಯೆಯ ಗುಣವಿದೆ. ಒಂದೆಡೆ ಪತ್ನಿಯನ್ನು ಪತಿಯ ಅಧಿಕಾರ ವ್ಯಾಪ್ತಿಯಲ್ಲಿರಿಸಲಾಗಿದೆ. ಇನ್ನೊಂದೆಡೆ ಮಗನು ಹೆತ್ತವರನ್ನು ಅನುಸರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ರೀತಿ ಪತಿಯು ತನ್ನ ಹೆತ್ತವರ ಪ್ರೇರಣೆಯಿಂದ ಪತ್ನಿಯ ಒಂದು ಧರ್ಮಸಮ್ಮತ ಬಯಕೆಯನ್ನೂ ಹತ್ತಿಕ್ಕಬಹುದು. ಈ ವಿಷಯಗಳಲ್ಲಿ ಪತ್ನಿಗೆ ಮೂರು ಕಾಸಿನ ಗೊಂಬೆಯಷ್ಟು ಬೆಲೆಯೂ ಇಲ್ಲದಂತಾಗಿದೆ. ನಾನು ಓರ್ವ ಮಹಿಳೆಯಾಗಿ ಸಹಜವಾಗಿಯೇ ಸ್ತ್ರೀಯರ ಭಾವನೆಯನ್ನು ಪ್ರತಿನಿಧಿಸುತ್ತಿರುವೆನು. ದಯವಿಟ್ಟು ಈ ಬಗ್ಗೆ ನನಗೆ ತೃಪ್ತಿಕರ ಉತ್ತರ ನೀಡಿರಿ.*

○ ನೀವು ಎರಡು ಕಾರಣಗಳ ಮೇಲೆ ಕುಟುಂಬ ಜೀವನದಲ್ಲಿ ಸ್ತ್ರೀಯ ಸ್ಥಾನವನ್ನು ಕೆಳಗಿರಿಸಲಾಗಿದೆ ಎಂದು ಭಾವಿಸಿರುವಿರಿ.

1. ಪುರುಷನಿಗೆ ನಾಲ್ಕು ಮಂದಿ ಸ್ತ್ರೀಯರನ್ನು ವಿವಾಹ ಮಾಡಿಕೊಳ್ಳುವ ಅನುಮತಿ.

2. ಪತಿಯನ್ನು ಆತನ ಹೆತ್ತವರಿಗೆ ಅಧೀನಗೊಳಿಸಿರುವುದು. ಇದರಿಂದಾಗಿ ಅನೇಕಸಲ ಆತನು ತನ್ನ ಪತ್ನಿಯ ಆಶೆ-ಆಕಾಂಕ್ಷೆಗಳನ್ನು ತಂದೆ-ತಾಯಿಗಳ ಸಂತೃಪ್ತಿಗಾಗಿ ಹೊಸಕಿ ಹಾಕುತ್ತಾನೆ.

ಈ ಪೈಕಿ ಮೊದಲ ಕಾರಣದ ಕುರಿತು ನೀವು ವಿಚಾರ ಮಾಡಿದರೆ ಒಂದು ವಿಷಯ ನಿಮಗೆ ಸುಲಭವಾಗಿ ಮನವರಿಕೆಯಾದೀತು. ಮೂವರು ಸವತಿಯರನ್ನು ಸಹಿಸಿಕೊಳ್ಳುವುದು ಓರ್ವಸ್ತ್ರೀಗೆ ಎಷ್ಟು ಕಷ್ಟಕರವೋ ಅದಕ್ಕಿಂತಲೂ ಎಷ್ಟೋ ಪಟ್ಟು ಹೆಚ್ಚು ಕಷ್ಟಕರ ಆಕೆಯ ಪತಿಗೆ ಅನೇಕ ಪ್ರೇಯಸಿಯರು ಮತ್ತು ಅನೈತಿಕ ಸಂಬಂಧ ಹೊಂದಿದವರು ಇರುವುದಾಗಿದೆ.

ಇದನ್ನು ತಡೆಯಲಿಕ್ಕಾಗಿಯೇ ಇಸ್ಲಾಮ್ ಪುರುಷರಿಗೆ ಬಹುಪತ್ನಿತ್ವದ ಅನುಮತಿ ನೀಡಿದೆ. ಅನೈತಿಕ ಸಂಬಂಧದ ಬಗ್ಗೆ ಓರ್ವ ಪುರುಷ ಎಷ್ಟು ಧೈರ್ಯವಂತನಾಗಿರುತ್ತಾನೋ ಮದುವೆಯ ವಿಷಯದಲ್ಲಿ ಅವನು ಅಷ್ಟು ಧೈರ್ಯ ಹೊಂದಿರುವುದು ಸಾಧ್ಯವೇ ಇಲ್ಲ. ಏಕೆಂದರೆ ಮದುವೆಯಿಂದ ಅವನ ಮೇಲಿನ ಹೊಣೆಗಾರಿಕೆಗಳು ಹೆಚ್ಚುತ್ತವೆ. ತರತರದ ಸಮಸ್ಯೆಗಳು ಅದರಿಂದ ಉಂಟಾಗುತ್ತವೆ. ಇದು ನಿಜವಾಗಿ ಸ್ತ್ರೀಯರ ಲಾಭಕ್ಕಾಗಿಯೇ ಇರಿಸಲಾದ ಒಂದು ವ್ಯವಸ್ಥೆಯಾಗಿದೆ. ಇದು ಪುರುಷರಿಗೆ ನೀಡಿರುವ ಅನುಚಿತ ರಿಯಾಯಿತಿಯಲ್ಲ. ಇನ್ನೊಂದು ವಿಧಾನವನ್ನು ಇಂದು ಪಶ್ಚಿಮದ ಸಮಾಜವು ಪ್ರಯೋಗಿಸುತ್ತಿದೆ. ಅಲ್ಲಿ ಒಂದೆಡೆ ಧರ್ಮ ಸಮ್ಮತ ಸವತಿಯರನ್ನು ನಿವಾರಿಸಲಾಗಿದೆ. ಇನ್ನೊಂದೆಡೆ ಧರ್ಮಬಾಹಿರ ಸವತಿಯರಿಂದ ಅವರನ್ನು ರಕ್ಷಿಸಲು ಯಾವ ವ್ಯವಸ್ಥೆಯೂ ಇಲ್ಲ. ಅವರನ್ನು ಸಹಿಸಲು ಸಾಧ್ಯವಿಲ್ಲದಿದ್ದರೆ ಪತಿಯಿಂದ ವಿಚ್ಛೇದನ ಪಡೆಯಲಿಕ್ಕಾಗಿ ನ್ಯಾಯಾಲಯದಲ್ಲಿ ದಾವೆ ಹೂಡಬೇಕು. ಇದರಿಂದ ಸ್ತ್ರೀಯ ಸಂಕಷ್ಟ ಕಡಿಮೆಯಾಗಿದೆಯೆಂದು ನೀವು ಭಾವಿಸುತ್ತೀರಾ? ಒಂಟಿ ಸ್ತ್ರೀಯಾದರೆ ಒಂದು ವೇಳೆ ಈ ಅನೈತಿಕ ಸವತಿಯರಿಂದ ರಕ್ಷಣೆ ಹೊಂದಲಿಕ್ಕಾಗಿ ಪತಿಯಿಂದ ವಿಚ್ಛೇದನ ಪಡೆಯಬಹುದು. ಆದರೆ ಇದು ಮಕ್ಕಳಿರುವ ಸ್ತ್ರೀಗೆ ಸುಲಭಸಾಧ್ಯವೇ?

ನೀವು ಪ್ರಸ್ತಾಪಿಸಿರುವ ಎರಡನೆಯ ಆಕ್ಷೇಪದ ಕುರಿತು ಹೇಳುವುದಾದರೆ ಪ್ರಾಯಶಃ ನಿಮಗಿನ್ನೂ ಮಕ್ಕಳಾಗಿಲ್ಲ. ಒಂದು ವೇಳೆ ಮಕ್ಕಳಿದ್ದರೂ ನಿಮ್ಮ ಮಗನಿಗೆ ಇನ್ನೂ ಮದುವೆಯಾಗಿರಲಿಕ್ಕಿಲ್ಲ. ಈ ವಿಷಯವನ್ನು ನೀವು ಕೇವಲ ಸೊಸೆಯ ದೃಷ್ಟಿಕೋನದಿಂದ ನೋಡುತ್ತಿರುವಿರಿ. ನಿಮ್ಮ ಮನೆಗೆ ಒಬ್ಬ ಸೊಸೆ ಬಂದಾಗ ಮತ್ತು ನೀವು ಈ ವಿಷಯದ ಬಗ್ಗೆ ತಾಯಿಯೆಂಬ ನೆಲೆಯಲ್ಲಿ ಯೋಚಿಸಿದಾಗ ಈ ಸಮಸ್ಯೆಯು ನಿಮಗೆ ಚೆನ್ನಾಗಿ ಮನವರಿಕೆಯಾದೀತು. ಆಗ ಪತ್ನಿಯ ಹಕ್ಕುಗಳೆಷ್ಟು ಮತ್ತು ತಂದೆ-ತಾಯಿಗಳ ಹಕ್ಕುಗಳೆಷ್ಟು ಎಂಬುದು ನಿಮಗೆ ತಿಳಿದೀತು. ಪ್ರಾಯಶಃ ಈಗ ನೀವು ಯಾವ ಹಕ್ಕುಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವಿರೋ ಅವುಗಳನ್ನೇ ನೀವೂ ಬೇಡಬಹುದು.

(ತರ್ಜುಮಾನುಲ್ ಕುರ್‌ಆನ್ ನವೆಂಬರ್- 1956)

65

ಶೈತಾನನ ವಾಸ್ತವಿಕತೆ

- *ಪವಿತ್ರ ಕುರ್‌ಆನ್‌ನಲ್ಲಿ ಅನೇಕ ಕಡೆ ಉಲ್ಲೇಖಗೊಂಡಿರುವ ಮತ್ತು ಸಾಮಾನ್ಯ ಭಾಷೆಯಲ್ಲಿ ಬಳಕೆಯಲ್ಲಿರುವ 'ಶೈತಾನ್' ಎಂಬ ಪದದ ವ್ಯಾಖ್ಯೆ ಏನು? ಶೈತಾನ್ ಎಂದರೆ ಮಾನವರಾದ ನಮ್ಮಂತಹ ಸೃಷ್ಟಿಯೇ? ಅದಕ್ಕೂ ನಮ್ಮಂತೆಯೇ ಜೀವನ, ಮರಣ, ವಂಶಾಭಿವೃದ್ಧಿಗಳಿವೆಯೇ? ನಾವು ದುಡಿಯುವ, ತಿನ್ನುವ ಕುಡಿಯುವ ಕೆಲಸದಲ್ಲಿ ನಿರತರಾಗಿರುವಂತೆ ಅದೂ ನಿರತವಾಗಿರುತ್ತದೆಯೇ? ಅದಕ್ಕೆ ಮನುಷ್ಯನನ್ನು ವಂಚಿಸುವ ಯಾವ ರೀತಿಯ ಸಾಮರ್ಥ್ಯವಿದೆ? ಅದು ಮನುಷ್ಯ ಶರೀರದೊಳಗೆ ಪ್ರವೇಶಿಸುವ ಸಾಮರ್ಥ್ಯ ಹೊಂದಿದೆಯೇ? ಈ ರೀತಿ ಅದು ಮನುಷ್ಯನ ನರನಾಡಿಗಳ ಮತ್ತು ಭಾವ-ವಿಕಾರಗಳ ಮೇಲೆ ನಿಯಂತ್ರಣ ಸಾಧಿಸಿ ಬಲವಂತವಾಗಿ ಅವನನ್ನು ತಪ್ಪು ದಾರಿಯಲ್ಲಿ ಹಚ್ಚಿ ಬಿಡುತ್ತದೆಯೇ? ಹಾಗಲ್ಲದಿದ್ದರೆ ಅದು ವಂಚಿಸುವುದು ಹೇಗೆ? ಅಥವಾ ಇದು ವಿನಾಶಕಾರಿ ಪ್ರವೃತ್ತಿಯುಳ್ಳ ಪ್ರತಿಯೊಬ್ಬ ವ್ಯಕ್ತಿಗೆ ಪ್ರಯೋಗವಾಗುವ ಅರಬಿಯ ಒಂದು ಪಾರಿಭಾಷಿಕ ಪದವೇ? ಅಥವಾ ಮನುಷ್ಯನ ಆಂತರಿಕ ಒಲವನ್ನು ಸೂಚಿಸುವ, ಕುರ್‌ಆನ್ 'ನಫ್ಸ್ ಅಮ್ಮಾರಃ' ಅಥವಾ 'ನಫ್ಸ್ ಲವ್ವಾಮಃ' ಎಂಬ ಪದಗಳಿಂದ ಸೂಚಿಸಿದ ಕೆಡುಕಿನತ್ತ ಪ್ರೇರೇಪಿಸುವ ಚಿತ್ತವೇ? ಶೈತಾನನ ಆಕ್ರಮಣವು ಬಹಳ ಅಪಾಯಕಾರಿಯಾಗಿರುವುದರಿಂದ ಅದರಿಂದ ರಕ್ಷಣೆ ಹೊಂದಲಿಕ್ಕಾಗಿ ಈ ಪ್ರಶ್ನೆ ಕೇಳಲಾಗುತ್ತಿದೆ.*

○ ಕುರ್‌ಆನ್ ಮತ್ತು ಹದೀಸ್‌ನ ಹೊರತು ಶೈತಾನ್‌ನ ಕುರಿತು ತಿಳಿಯುವ ಯಾವ ಜ್ಞಾನ ಮೂಲವೂ ನಮ್ಮ ಬಳಿ ಇಲ್ಲ. ಕುರ್‌ಆನ್ ಮತ್ತು ಹದೀಸ್‌ಗಳಿಂದ ತಿಳಿದು ಬರುವಂತೆ ಶೈತಾನ್ ಕೇವಲ ಒಂದು ಶಕ್ತಿ ಅಥವಾ ಮನುಷ್ಯನ ಯಾವುದೇ ಒಲವಿನ ಹೆಸರಲ್ಲ. ಶೈತಾನ್ ಎಂಬುದು ಜಿನ್ನ್ ವರ್ಗಕ್ಕೆ ಸೇರಿದೆ. ಅದು ಮನುಷ್ಯ ವರ್ಗದಂತೆಯೇ ಒಂದು ಪ್ರತ್ಯೇಕ ಸೃಷ್ಟಿಯಾಗಿದೆ. ಅದರ ಪ್ರತಿಯೊಬ್ಬ ವ್ಯಕ್ತಿಯೂ ಮಾನವನಂತೆ ಒಂದು ವ್ಯಕ್ತಿತ್ವವನ್ನು (Persnality) ಹೊಂದಿದ್ದಾನೆ. ಅದರ ದುಡಿಮೆ, ಕಸುಬು ಮತ್ತು ವಂಶಾಭಿವೃದ್ಧಿಯ ಕುರಿತು ನಮಗೆ ಹೆಚ್ಚೇನೂ ತಿಳಿದಿಲ್ಲ. ನಮ್ಮ ಶರೀರದ ಮೇಲೆ

ಯಂತ್ರಣ ಸಾಧಿಸಿ ನಮ್ಮಿಂದ ಬಲವಂತವಾಗಿ ಯಾವುದೇ ಕೆಲಸ ಮಾಡಿಸುವ ಅಧಿಕಾರವನ್ನು ನಕ್ಕೆ ನೀಡಲಾಗಿಲ್ಲ. ಅದು ನಮ್ಮನ್ನು ಪ್ರೇರೇಪಿಸುವ, ಕೆಟ್ಟ ಕೆಲಸಗಳತ್ತ ಒಲಿಸುವ, ಶಯ ಮತ್ತು ವೈಚಾರಿಕ ಗೊಂದಲಗಳಲ್ಲಿ ಸಿಲುಕಿಸುವ ಕಾರ್ಯವನ್ನಷ್ಟೇ ಮಾಡಬಲ್ಲುದು. ವು ಬೇಕಿದ್ದರೆ ಅದರ ಪ್ರೇರೇಪಣೆ ಮತ್ತು ಉತ್ತೇಜನವನ್ನು ತಿರಸ್ಕರಿಸಿ ನಮ್ಮಿಷ್ಟದ ರ್ಗದಲ್ಲಿ ಸಾಗಬಹುದು. *(ತರ್ಜುಮಾನುಲ್ ಕುರ್‌ಆನ್ ಆಗಸ್ಟ್ 1959)*

ನನ್ನಿಂದ ಯಾವುದಾದರೂ ಕೆಡುಕು ಸಂಭವಿಸಿದ ನಂತರ ನಾನು ಆತ್ಮ ವಿಮರ್ಶೆ ನಡೆಸಿದಾಗಲೆಲ್ಲಾ ಹೊರಗಿನಿಂದ ಯಾವುದೇ ಶಕ್ತಿ ನನ್ನನ್ನು ಕೆಟ್ಟ ಹೆಜ್ಜೆ ಇಡುವಂತೆ ಮಾಡಿರಲಿಲ್ಲ, ನನ್ನ ಸ್ವ ಅಸ್ತಿತ್ವವೇ ಅದಕ್ಕೆ ಹೊಣೆಯಾಗಿದೆ ಎಂಬುದು ನನಗೆ ಮನವರಿಕೆಯಾಯಿತು. ನನ್ನ ಕಾಮನೆಗಳು ನನ್ನ ವಿಚಾರದ ಮೇಲೆ ಪ್ರಬಲಗೊಂಡಾಗ ಮತ್ತು ನನ್ನ ಆತ್ಮದ ಮೇಲೆ ನನ್ನ ಸ್ವೇಚ್ಛೆಯು ನಿಯಂತ್ರಣ ಸಾಧಿಸಿದಾಗ ನಾನು ಪಾಪ ಕಾರ್ಯವನ್ನು ಎಸಗುತ್ತೇನೆ. ಹೊರಗಿನಿಂದ ಯಾವುದೇ ಶಕ್ತಿ ನನ್ನೊಳಗೆ ಪ್ರವೇಶ ಮಾಡಿ ನನ್ನನ್ನು ತಪ್ಪು ದಾರಿಗೆ ಒಯ್ಯುವುದಿಲ್ಲ. ಆದರೆ ನಾವು ಕುರ್‌ಆನ್‌ನ ಅಧ್ಯಯನ ಮಾಡುವಾಗ ನಮಗೆ ತಿಳಿದು ಬರುವುದೇನೆಂದರೆ ನಮ್ಮ ಈ ವೈಚಾರಿಕ ಮತ್ತು ಕ್ರಿಯಾತ್ಮಕ ಪಥಭ್ರಷ್ಟತೆಗಳಿಗೆ ಶೈತಾನ್ ಪ್ರೇರಣೆ ನೀಡುತ್ತಾನೆ. ಆತನಿಗೆ ಅವನದೇ ಆದ ಒಂದು ವ್ಯಕ್ತಿತ್ವವಿದೆ. ಮಾನವನ ಈ ಶತ್ರು ಒಮ್ಮೆ ಹೊರಗಿನಿಂದ ಮತ್ತೊಮ್ಮೆ ಮಾನವನೊಳಗೆ ಪ್ರವೇಶಿಸಿ ಅವನನ್ನು ಕೆಟ್ಟ ದಾರಿಗೆ ಒಯ್ಯುತ್ತಾನೆ. ಈಗ ನಾನು ವಿಚಾರಿಸ ಬಯಸುವುದೇನೆಂದರೆ ನೀವು ಕೂಡಾ ಶೈತಾನನ್ನು ಒಂದು ಪ್ರತ್ಯೇಕ ಅಸ್ತಿತ್ವವೆಂದೂ ಅದು ಮನುಷ್ಯರನ್ನು ಪುಸಲಾಯಿಸಿ ದಾರಿ ಗೆಡಿಸುತ್ತದೆಂದೂ ನಂಬುತ್ತೀರಾ?

● ಶೈತಾನ್‌ನ ಕುರಿತು ಕುರ್‌ಆನ್ ಹೇಳುವುದೇನೆಂದರೆ ಅದು ಜಿನ್ನ್ ವರ್ಗಕ್ಕೆ ರಿದ ಒಂದು ವ್ಯಕ್ತಿಯಾಗಿದೆ. ಈ ವರ್ಗಕ್ಕೆ ಸೇರಿದವರಲ್ಲಿ ಕೂಡಾ ಮನುಷ್ಯರಂತೆ ಮೊಮಿನ್ (ಸತ್ಯವಿಶ್ವಾಸಿ) ಮತ್ತು ಕಾಫಿರ್ (ಸತ್ಯನಿಷೇಧಿ)ಗಳಿದ್ದಾರೆ. ಜಿನ್ನ್ ಶೈತಾನ್‌ಗಳು ಸತ್ಯನಿಷೇಧಿಗಳ ಪೈಕಿಯೇ ಇದ್ದಾರೆ. ಜಿನ್ನ್‌ಗಳನ್ನು ಅಗ್ನಿಯಿಂದ ಸೃಷ್ಟಿಸಲಾಗಿದೆಯೆಂದೂ ರ್‌ಆನ್ ತಿಳಿಸುತ್ತದೆ. ಮೂಲವಸ್ತು ಮತ್ತು ಶಕ್ತಿ (Energy)ಯ ಕುರಿತು ನಮ್ಮ ತಿವಳಿಕೆಯನ್ನೂ ಪ್ರಾಥಮಿಕವಾಗಿವೆ. ಶಕ್ತಿಯು ವಸ್ತುವಿನ ರೂಪ ತಾಳಿದ ನಂತರದ ತಿಯ ಕುರಿತು ನಾವು ಸ್ವಲ್ಪ ಹೆಚ್ಚು ತಿಳಿದಿದ್ದೇವೆ. ಆದರೆ ಭೌತಿಕ ವಸ್ತುವಿನ ರೂಪ ಳದೆ ಇರುವ ಕೇವಲ ಶಕ್ತಿಯಾಗಿಯೇ ಇರುವಾಗ ಅದು ಏನೆಲ್ಲ ಮಾಡಬಲ್ಲುದು ಎಂಬುದು ನಿಮಗಿನ್ನೂ ತಿಳಿದಿಲ್ಲ. ಅನೇಕ ವಿಧದ ಅಸ್ತಿತ್ವಗಳು ಈ ವಿಶ್ವದಲ್ಲಿ ಕೇವಲ ಕ್ತಿಯ ರೂಪದಲ್ಲೇ ಇರಲು ಏಕೆ ಸಾಧ್ಯವಿಲ್ಲ? ಇವುಗಳಲ್ಲಿ ಕೆಲವು ವಿಧದ ಅಸ್ತಿತ್ವಗಳಲ್ಲಿರುವ

ವ್ಯಕ್ತಿಗಳು ಪ್ರಜ್ಞೆ, ಇಚ್ಛೆ, ಚಲನೆ ಮತ್ತು ಕ್ರಿಯೆಯ ಸಾಮರ್ಥ್ಯದೊಂದಿಗೆ ತಮ್ಮದೇ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿರಬಾರದೇಕೆ? ಶೈತಾನ್ ಇಂತಹುದೇ ಒಂದು ಸೃಷ್ಟಿಯಾಗಿ ನಮ್ಮಂತೆ ಈ ಭೂಮಿಯಲ್ಲಿ ವಾಸಿಸುತ್ತವೆಯೆಂಬುದು ನನ್ನ ನಂಬಿಕೆ.

ಇನ್ನು ನಮ್ಮ ಚಿತ್ತದೊಂದಿಗೆ ಅದರ ಸಂಪರ್ಕ (Contact) ಮತ್ತು ಅದು ನಮ್ಮ ಪ್ರವೇಶಿಸಿ ಒಳಿತು-ಕೆಡುಕಿನ ಸಂಘರ್ಷದಲ್ಲಿ ಕೆಡುಕಿನ ಒಲವುಗಳನ್ನು ಬೆಂಬಲಿಸ ಪ್ರಕ್ರಿಯೆಯ ವಿಷಯ. ಇದು ಕೂಡಾ ನಂಬಲಸಾಧ್ಯವಾದ ಅಥವಾ ಅಸಂಬದ್ಧವ ವಿಷಯವೇನಲ್ಲ. ನಮ್ಮ ಆತ್ಮದ ಕುರಿತು ಕೂಡಾ ನಮ್ಮ ತಿಳುವಳಿಕೆಯು ಬ ಕಡಿಮೆಯಾಗಿದೆ. ಅದರ ರಚನೆಯ ಕುರಿತು ನಮಗಿರುವ ಸಂಶಯಗಳು ಇನ ಪರಿಹಾರವಾಗಿಲ್ಲ.ನಾವು ನಮ್ಮೊಳಗೆ ಒಂದು ಸಂಘರ್ಷದಲ್ಲಿ ಏರ್ಪಟ್ಟಾಗ ಹಾಗೂ ಒಳಿ ಮತ್ತು ಕೆಡುಕುಗಳ ಪೈಕಿ ಯಾವುದನ್ನು ಆರಿಸಬೇಕೆಂಬ ತೀರ್ಮಾನ ಇನ್ನೂ ಮಾಡಿರದ ಒಂದು ಅದೃಶ್ಯ ಬಾಹ್ಯ ಪ್ರೇರಕವು ನಮ್ಮ ಕೆಡುಕಿನ ಒಲವನ್ನು ಬಲಪಡಿಸುವುದು ಮ ಅದೇ ರೀತಿ ಇನ್ನೊಂದು ಅಗೋಚರ ಬಾಹ್ಯ ಪ್ರೇರಕವು (ದೇವಚರ) ನಮ್ಮ ಒಳಿ ಒಲವನ್ನು ಬಲಪಡಿಸುವುದು ಸಾಧ್ಯವಿದೆ. ಆದರೆ ಅದರ ಕೆಲಸ ಮತ್ತು ಕಾರ್ಯವಿಧಾನವ ಅರಿಯುವುದು ನಮಗೆ ಸಾಧ್ಯವಿಲ್ಲ. ಇಂತಹ ಸಂಘರ್ಷದ ಸಂದರ್ಭಗಳಲ್ಲಿ ನ ಅಂತರ್ಯವನ್ನು ಗಮನವಿಟ್ಟು ಅವಲೋಕಿಸಿದರೆ ಒಂದು ಬಾಹ್ಯ ವಸ್ತುವೂ ನ ಆಂತರಿಕ ಕ್ರಿಯೆಗಳೊಂದಿಗೆ ಸೇರಿಕೊಂಡು ಕೆಲಸ ಮಾಡುತ್ತದೆಂದು ಭಾಸವಾಗುತ್ತ ಒಟ್ಟಿನಲ್ಲಿ ಯಾವುದಾದರೂ ಅಭೌತಿಕ ಅಸ್ತಿತ್ವವು ನಮ್ಮ ದೇಹೇಚ್ಛೆಗಳೊಂದಿಗೆ ಸಂಪ ಬೆಳಸಿ ಅವುಗಳನ್ನು ಪ್ರಾಭಾವಿತಗೊಳಿಸುವುದೇನೂ ಅಸಾಧ್ಯ ಅಥವಾ ಕಲ್ಪನಾತೀತ ವಿಷಯವ ಈ ವಿಶ್ವದಲ್ಲಿ ನಾವು ಕಾಣುತ್ತಿರುವ ವಸ್ತುಗಳ ಹೊರತು ಬೇರಾವ ಅಸ್ತಿತ್ವಗಳೂ ಇಲ್ಲ ಇಲ್ಲ. ಎಂದು ನಾವು ಮೊದಲೇ ತೀರ್ಮಾನಿಸಿಕೊಂಡಿದ್ದರೆ ಅದು ಬೇರೆ ಮಾತು.

(ತರ್ಜುಮಾನುಲ್ ಕುರ್‌ಆನ್ ನವೆಂಬರ್ 19